ಶುಕ್ರವಾರ, ಏಪ್ರಿಲ್ 26, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನಸುನಗು
ಕೋಲ್ಕತ್ತಾದಲ್ಲಿ ಗುರುವಾರ ನಡೆದ ಪ್ರಚಾರ ಕಾರ್ಯಕ್ರಮವೊಂದರಲ್ಲಿ ಬಾಲಿವುಡ್ ನಟಿ ಸೋಹಾ ಅಲಿ ಖಾನ್ ಭಾಗವಹಿಸಿದ್ದರು

ಪಶ್ಚಿಮ ಬಂಗಾಳ: ಉದ್ಯೋಗ ಕಳೆದುಕೊಂಡವರಲ್ಲಿ 5,300 ಶಿಕ್ಷಕರ ನೇಮಕಾತಿ ಅನುಮಾನಾಸ್ಪದ

‘19,000 ಶಿಕ್ಷಕರು ಅರ್ಹರಾಗಬಹುದು’

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ 2016ರಲ್ಲಿ ಆಯ್ಕೆಯಾಗಿರುವ ಸುಮಾರು 5,300 ಶಿಕ್ಷಕರ ನೇಮಕಾತಿಗಳು ಅನುಮಾನಾಸ್ಪದವಾಗಿರುವುದರ ಕುರಿತ ಪಟ್ಟಿಯನ್ನು ಕಲ್ಕತ್ತ ಹೈಕೋರ್ಟ್‌ಗೆ ಸಲ್ಲಿಸಿರುವುದಾಗಿ ಪಶ್ಚಿಮ ಬಂಗಾಳ ಶಾಲಾ ಸೇವಾ ಆಯೋಗ (ಎಸ್‌ಎಸ್‌ಸಿ) ತಿಳಿಸಿದೆ.

ಉಳಿದ ಸುಮಾರು 19,000 ಶಿಕ್ಷಕರು ಅರ್ಹರಾಗುವ ಸಾಧ್ಯತೆಯಿದೆ ಎಂದೂ ಅದು ಹೇಳಿದೆ.

ಹೈಕೋರ್ಟ್ ತೀರ್ಪಿನ ಕಾರಣದಿಂದ ಈ 19,000 ಶಿಕ್ಷಕರ ನೇಮಕಾತಿಗಳು ರದ್ದಾಗಿವೆ. ಆದರೆ, ಈ ಶಿಕ್ಷಕರು ಅರ್ಹ ಮಾನದಂಡಗಳನ್ನು ಪೂರೈಸಿ ನೇಮಕಗೊಂಡಿದ್ದಾರೆ ಎಂಬುದನ್ನು ಆಯೋಗ ನಂಬಿದೆ ಎಂದು ತಿಳಿಸಿದೆ.

‘ನೇಮಕಾತಿ ಕುರಿತು ಸಂಶಯ ಮೂಡಿದ ಅಭ್ಯರ್ಥಿಗಳ ಪಟ್ಟಿಯನ್ನು ನಾವು ನ್ಯಾಯಾಲಯಕ್ಕೆ ಸಲ್ಲಿಸಿದ್ದೇವೆ. ಒಎಂಆರ್ ಶೀಟ್‌ನಲ್ಲಿ ಅಕ್ರಮ ಎಸಗಿರುವ ಮತ್ತು ರ‍್ಯಾಂಕ್‌ನಲ್ಲಿ ಜಿಗಿತ ಆಗಿರುವವರನ್ನು ಗುರುತಿಸಿ ಪಟ್ಟಿ ಸಿದ್ಧಪಡಿಸಲಾಗಿದೆ. 9–10 ಹಾಗೂ 11– 12ನೇ ತರಗತಿಗಳಿಗೆ ಶಿಕ್ಷಕರಾಗಿ ನೇಮಕವಾಗಿರುವ ಸುಮಾರು 5,300 ಅಭ್ಯರ್ಥಿಗಳು ಇದರಲ್ಲಿದ್ದಾರೆ’ ಎಂದು ಎಸ್‌ಎಸ್‌ಸಿ ಅಧ್ಯಕ್ಷ ಸಿದ್ಧಾರ್ಥ ಮಜುಂದಾರ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ರಾಜ್ಯಮಟ್ಟದ ಆಯ್ಕೆ ಪರೀಕ್ಷೆ ಮೂಲಕ 2016ರಲ್ಲಿ ನಡೆಸಿದ್ದ 25,753 ಶಿಕ್ಷಕರ ನೇಮಕಾತಿಯನ್ನು ಕಲ್ಕತ್ತ ಹೈಕೋರ್ಟ್ ಇತ್ತೀಚೆಗೆ ರದ್ದುಪಡಿಸಿತ್ತು. ಅಲ್ಲದೆ ನೇಮಕವಾಗಿದ್ದವರು ಇಲ್ಲಿಯವರೆಗೆ ಪಡೆದಿರುವ ವೇತನದ ಮೊತ್ತವನ್ನು ವಾರ್ಷಿಕ ಶೇ 12ರ ಬಡ್ಡಿಯೊಂದಿಗೆ ಹಿಂದಿರುಗಿಸಬೇಕು ಎಂದು ಕೋರ್ಟ್ ನಿರ್ದೇಶಿಸಿತ್ತು.

ಶಿಕ್ಷಕರ ನೇಮಕ ರದ್ದು: ಘೋರ ಅನ್ಯಾಯ– ಮಮತಾ

ಕೇಶಿಯಾರಿ (ಪಶ್ಚಿಮ ಬಂಗಾಳ, ಪಿಟಿಐ): ಸುಮಾರು 25,000 ಶಾಲಾ ಶಿಕ್ಷಕರ ಉದ್ಯೋಗಗಳನ್ನು ರದ್ದುಪಡಿಸಿರುವುದನ್ನು ಘೋರ ಅನ್ಯಾಯ ಎಂದು ಹೇಳಿರುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಈ ಶಿಕ್ಷಕರನ್ನು ಚುನಾವಣಾ ಕರ್ತವ್ಯಕ್ಕೆ ನಿಯೋಜಿಸದಂತೆ ಮಾಡಲು ಬಿಜೆಪಿ ಈ ತಂತ್ರ ಮಾಡಿದೆ ಎಂದು ಗುರುವಾರ ಆರೋಪಿಸಿದರು.

ಮೇದಿನಿಪುರ ಲೋಕಸಭಾ ಕ್ಷೇತ್ರದಲ್ಲಿ ಚುನಾವಣಾ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಇಷ್ಟೊಂದು ಶಿಕ್ಷಕರು ಕೆಲಸ ಕಳೆದುಕೊಂಡ ಬಳಿಕ ಆ ಶಾಲೆಗಳನ್ನು ನಡೆಸುವುದಾದರೂ ಹೇಗೆ’ ಎಂದು ಪ್ರಶ್ನಿಸಿದರು.

‘ನೇಮಕಾತಿ ಪ್ರಕ್ರಿಯೆಯಲ್ಲಿ ಯಾರಾದರೂ ತಪ್ಪು ಮಾಡಿದ್ದರೆ ಅದನ್ನು ಸರಿಪಡಿಸಬಹುದಿತ್ತು. ಅದು ಬಿಟ್ಟು ಉದ್ಯೋಗ ಕಸಿದುಕೊಳ್ಳುವುದು ಘೋರ ಅನ್ಯಾಯ’ ಎಂದು ಅವರು ಬೇಸರ ವ್ಯಕ್ತಪಡಿಸಿದರು.

‘ಇದು ಬಿಜೆಪಿಯ ಕುತಂತ್ರವಾಗಿದ್ದು, ನನಗೆ ನ್ಯಾಯಾಂಗದ ಮೇಲೆ ಗೌರವವಿದೆ’ ಎಂದು ಬ್ಯಾನರ್ಜಿ ತಿಳಿಸಿದರು.

‘ಉದ್ಯೋಗ ಕಳೆದುಕೊಂಡ ಈ ಶಿಕ್ಷಕರನ್ನು ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಲು ಆಗುವುದಿಲ್ಲ. ಈ ಕಾರ್ಯಕ್ಕೆ ಕೇಂದ್ರ ಸರ್ಕಾರಿ ನೌಕರರನ್ನು ತೊಡಗಿಸಿಕೊಳ್ಳಬಹುದು. ಅವರು ಕೇಸರಿ ಪಾಳಯದವರ ಆದೇಶದಂತೆ ಕೆಲಸ ಮಾಡುತ್ತಾರೆ’ ಎಂದು ಅನುಮಾನ ವ್ಯಕ್ತಪಡಿಸಿದರು.

ಕ್ರಮ ಕೈಗೊಳ್ಳುವಂತೆ ವಕೀಲರ ಮೊರೆ: ಮಮತಾ ಬ್ಯಾನರ್ಜಿ ಅವರು ಸತತವಾಗಿ ಈ ವಿಷಯದಲ್ಲಿ ಆರೋಪ ಮಾಡುತ್ತಿರುವುದನ್ನು ಕೆಲವು ವಕೀಲರು ಖಂಡಿಸಿದ್ದು, ಅವರ ವಿರುದ್ಧ ನ್ಯಾಯಾಲಯ ಪ್ರಕರಣ ದಾಖಲಿಸಿಕೊಂಡು ಕ್ರಮ ಜರುಗಿಸಬೇಕೆಂದು ಹೈಕೋರ್ಟ್ ನ್ಯಾಯಮೂರ್ತಿ ಅವರಿಗೆ ಅಫಿಡವಿಟ್ ಸಲ್ಲಿಸಿದ್ದಾರೆ. ವಕೀಲ ಬಿಕಾಸ್ ರಂಜನ್ ಭಟ್ಟಾಚಾರ್ಯ ಅವರು ಮಮತಾ ಹೇಳಿಕೆಗಳು ಪ್ರಕಟವಾಗಿರುವ ಪತ್ರಿಕೆಗಳ ತುಣುಕುಗಳನ್ನು ಅಡಕ ಮಾಡಿದ ಅಫಿಡವಿಟ್ ಸಲ್ಲಿಸಿದರು.

‘ಕೆಲಸ ಕಳೆದುಕೊಂಡವರಿಗೆ ಏಪ್ರಿಲ್ ವೇತನ’

ಕೋಲ್ಕತ್ತ (ಪಿಟಿಐ): ಕಲ್ಕತ್ತ ಹೈಕೋರ್ಟ್ ತೀರ್ಪಿನಿಂದ ನೇಮಕಾತಿ ರದ್ದುಗೊಂಡಿರುವ 25,753 ಶಿಕ್ಷಕರು ಮತ್ತು ಬೋಧಕೇತರ ಸಿಬ್ಬಂದಿಗೆ ಏಪ್ರಿಲ್ ತಿಂಗಳ ವೇತನ ಪಾವತಿಸುವುದಾಗಿ ಪಶ್ಚಿಮ ಬಂಗಾಳ ಸರ್ಕಾರ ಗುರುವಾರ ತಿಳಿಸಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಹೈಕೋರ್ಟ್ ತೀರ್ಪನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದ್ದು, ಆ ಕುರಿತು ತೀರ್ಪು ಬರುವವರೆಗೆ ಶಿಕ್ಷಕರು ಮತ್ತು ಬೋಧಕೇತರ ಸಿಬ್ಬಂದಿಗೆ ವೇತನ ನೀಡಲು ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಅವರು ಸುದ್ದಿ ಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

ಈ ಸಿಬ್ಬಂದಿ ಏಪ್ರಿಲ್‌ನಲ್ಲಿ ಬಹುತೇಕ ಕೆಲಸ ಮಾಡಿದ್ದಾರೆ. ಹೀಗಾಗಿ ಅವರ ವೇತನವನ್ನು ಪಾವತಿಸಲು ನಿರ್ಧರಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಶಿಕ್ಷಣ ಸಚಿವರ ನಿಕಟವರ್ತಿಯ ವಿಚಾರಣೆ

ಕೋಲ್ಕತ್ತ (ಪಿಟಿಐ): ಶಿಕ್ಷಕರ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಬಂಧಿತರಾಗಿರುವ ಪಶ್ಚಿಮ ಬಂಗಾಳದ ಮಾಜಿ ಶಿಕ್ಷಣ ಸಚಿವ ಪಾರ್ಥ ಚಟರ್ಜಿ ಅವರ ನಿಕಟವರ್ತಿ ಸಂತು ಗಂಗೂಲಿ ಅವರನ್ನು ಸಿಬಿಐ ಗುರುವಾರ ವಿಚಾರಣೆಗೆ ಒಳಪಡಿಸಿತು ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸಂತು ಗಂಗೂಲಿ ಅವರು ಚಟರ್ಜಿ ಅವರ ಆಪ್ತ ಸಹಾಯಕರಾಗಿದ್ದು, ನೇಮಕಾತಿಗೆ ಸಂಬಂಧಿಸಿದಂತೆ ಜನರೊಂದಿಗೆ ಏಜೆಂಟರಂತೆ ಕಾರ್ಯ ನಿರ್ವಹಿಸುತ್ತಿದ್ದರು ಎಂಬ ಆರೋಪ ಎದುರಿಸುತ್ತಿದ್ದಾರೆ.

ಸುದ್ದಿ 2 ನಿಮಿಷ

ಸಲ್ಮಾನ್ ಮನೆ ಬಳಿ ಗುಂಡಿನ ದಾಳಿ: ಇಬ್ಬರ ಬಂಧನ

ಮುಂಬೈ (ಪಿಟಿಐ): ಬಾಲಿವುಡ್ ನಟ ಸಲ್ಮಾನ್ ಖಾನ್ ಅವರ ಮುಂಬೈ ಮನೆಯ ಹೊರಗೆ ಇತ್ತೀಚೆಗೆ ಗುಂಡಿನ ದಾಳಿ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂಬೈ ಪೊಲೀಸರು ಗುರುವಾರ ಪಂಜಾಬ್‌ನಲ್ಲಿ ಇನ್ನೂ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಸುಭಾಷ್ ಚಂದರ್ (37) ಮತ್ತು ಅನುಜ್ ಥಾಪನ್ (32) ಎಂಬುವರೇ ಬಂಧಿತರು. ಇವರು ಮಾ.15ರಂದು ಶೂಟರ್‌ಗಳಿಗೆ ಬಂದೂಕು ಮತ್ತಿತರ ಶಸ್ತ್ರಾಸ್ತ್ರಗಳನ್ನು ಒದಗಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಇಬ್ಬರನ್ನೂ ಅಪರಾಧ ದಳ ತಂಡವು ಬಂಧಿಸಿದೆ. ಈ ನಡುವೆ ಗುಂಡಿನ ದಾಳಿ ನಡೆಸಿದ ಆರೋಪದ ಮೇಲೆ ಬಂಧಿತರಾಗಿರುವ ಬಿಹಾರದ ನಿವಾಸಿಗಳಾದ ವಿಕ್ಕಿ ಗುಪ್ತಾ (24) ಮತ್ತು ಸಾಗರ್ ಪಾಲ್ (21) ನ್ಯಾಯಾಂಗ ಬಂಧನದ ಅವಧಿಯನ್ನು ಮುಂಬೈ ನ್ಯಾಯಾಲಯ ಏ.29ರವರೆಗೆ ವಿಸ್ತರಿಸಿದೆ.

ವಿಕ್ಕಿ ಮತ್ತು ಸಾಗರ್ ಇಬ್ಬರೂ ಮಾ.14ರಂದು ಮುಂಬೈನ ಬಾಂದ್ರಾದ ಗ್ಯಾಲಕ್ಸಿ ಅಪಾರ್ಟ್‌ಮೆಂಟ್‌ನಲ್ಲಿರುವ ನಟ ಸಲ್ಮಾನ್ ಮನೆ ಎದುರು ಗುಂಡು ಹಾರಿಸಿ, ಬೈಕ್‌ನಲ್ಲಿ ಪರಾರಿಯಾಗಿದ್ದರು. ಜೈಲಿನಲ್ಲಿರುವ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ ಹಾಗೂ ಆತನ ಸಹೋದರ ಅನ್ಮೋಲ್ ಬಿಷ್ಣೋಯ್ ಈ ಪ್ರಕರಣದ ಆರೋಪಿಗಳು ಎಂದು ಮುಂಬೈ ಪೊಲೀಸರು ತಿಳಿಸಿದ್ದಾರೆ.

ಒಡಿಶಾ: ಭದ್ರತಾ ಪಡೆಗಳಿಂದ ಇಬ್ಬರು ನಕ್ಸಲರು ಹತ್ಯೆ

ಭವನೇಶ್ವರ (ಪಿಟಿಐ): ಒಡಿಶಾದ ಬೌಧ್ ಜಿಲ್ಲೆಯಲ್ಲಿ ನಕ್ಸಲರು ಮತ್ತು ಭದ್ರತಾ ಪಡೆ ನಡುವೆ ಗುರುವಾರ ಬೆಳಿಗ್ಗೆ ನಡೆದ ಗುಂಡಿನ ಕಾಳಗದಲ್ಲಿ ಇಬ್ಬರು ನಕ್ಸಲರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪರ್ಹೆಲ್ ಮೀಸಲು ಅರಣ್ಯದಲ್ಲಿ ಒಡಿಶಾದ ವಿಶೇಷ ಕಾರ್ಯಪಡೆಯು (ಎಸ್‌ಒಜಿ) ಕಾರ್ಯಾಚರಣೆ ನಡೆಸುವ ವೇಳೆ ಗುಂಡಿನ ಚಕಮಕಿ ನಡೆದಿದೆ. ಸ್ಥಳದಿಂದ ಎರಡು ಮೃತದೇಹಗಳ ಜೊತೆ ಸಶಸ್ತ್ರಗಳು, ಗ್ರನೇಡ್‌ಗಳು ಮತ್ತು ಇತರ ಶಸ್ತ್ರಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿರುವ ಜಾರಿ ನಿರ್ದೇಶನಾಲಯ

‘ಅಬಕಾರಿ ನೀತಿ: ಎಎಪಿ ಪ್ರಮುಖ ಫಲಾನುಭವಿ’

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಎಎಪಿ ಪ್ರಮುಖ ಫಲಾನುಭವಿ ಆಗಿದ್ದು, ಅದರ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಮೂಲಕ ಹಣ ಅಕ್ರಮ ವರ್ಗಾವಣೆ ಅಪರಾಧ ಎಸಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಎಎಪಿ 2022ರ ಗೋವಾ ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ಸುಮಾರು ₹45 ಕೋಟಿ ನಗದು ಬಳಸಿದ್ದು, ಅದು ಈ ಹಗರಣದ ಒಂದು ಭಾಗವಾಗಿದೆ ಎಂಬುದು ಇದುವರೆಗಿನ ತನಿಖೆಯಿಂದ ಗೊತ್ತಾಗಿದೆ. ಈ ನಗದನ್ನು ಸಮೀಕ್ಷಾ ಕೆಲಸಗಾರರು, ಪ್ರದೇಶಗಳ ವ್ಯವಸ್ಥಾಪಕರು ಮತ್ತು ವಿಧಾನಸಭಾ ಕ್ಷೇತ್ರಗಳ ವ್ಯವಸ್ಥಾಪಕರು ಸೇರಿದಂತೆ ಹಲವರಿಗೆ ಪಾವತಿಸಲಾಗಿದೆ ಎಂದು ಹೇಳಿದೆ. ಈ ಸಂಬಂಧ ಇ.ಡಿ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದೆ.

‘ಈ ರೀತಿ ಎಎಪಿಯು ಕೇಜ್ರಿವಾಲ್ ಅವರ ಮೂಲಕ ಹಣ ವರ್ಗಾವಣೆಯ ಅಪರಾಧ ಮಾಡಿದೆ. ಈ ಅಪರಾಧಗಳು ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) 2002ರ ಸೆಕ್ಷನ್ 70ರ ವ್ಯಾಪ್ತಿಗೆ ಬರುತ್ತವೆ’ ಎಂದು ಇ.ಡಿ ಹೇಳಿದೆ.

ಎಎಪಿಯ ರಾಷ್ಟ್ರೀಯ ಸಂಚಾಲಕರು ಮತ್ತು ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರೂ ಆಗಿರುವ ಕೇಜ್ರಿವಾಲ್ ಅವರು ಚುನಾವಣೆಯಲ್ಲಿ ಬಳಸಲಾದ ಹಣಕ್ಕೆ ಅಂತಿಮವಾಗಿ ಜವಾಬ್ದಾರರಾಗಿದ್ದಾರೆ. ಕೇಜ್ರಿವಾಲ್ ಅವರು ಎಎಪಿಯ ಹಿಂದಿನ ಮಿದುಳು ಮಾತ್ರವಲ್ಲದೇ, ಅದರ ಪ್ರಮುಖ ಚಟುವಟಿಕೆಗಳ ನಿಯಂತ್ರಕರೂ ಆಗಿದ್ದಾರೆ. ದೆಹಲಿ ಅಬಕಾರಿ ನೀತಿ ನಿರ್ಧರಿಸುವಲ್ಲಿ ಅವರು ಭಾಗಿಯಾಗಿದ್ದರು ಎಂಬುದು ಸಾಕ್ಷಿಗಳ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ ಎಂದು ಅದು ತಿಳಿಸಿದೆ.

‘ಇ.ಡಿ– ಸುಳ್ಳು ಹೇಳುವ ಯಂತ್ರ’: ಇ.ಡಿ ಸಲ್ಲಿಸಿರುವ ಅಫಿಡವಿಟ್‌ಗೆ ಪ್ರತಿಕ್ರಿಯಿಸಿರುವ ಎಎಪಿ, ‘ತನಿಖಾ ಸಂಸ್ಥೆಯು ಸುಳ್ಳು ಹೇಳುವ ಯಂತ್ರವಾಗಿದೆ’ ಎಂದು ಆರೋಪ ಮಾಡಿದೆ.

‘ಲಂಚ ಬೇಡಿಕೆಯಲ್ಲೂ ಸಿ.ಎಂ ಭಾಗಿ’

‘ಕೇಜ್ರಿವಾಲ್ ಅವರು ಲಂಚ ಬೇಡಿಕೆಯಲ್ಲೂ ತೊಡಗಿಸಿಕೊಂಡಿದ್ದಾರೆ. ಹೀಗಾಗಿ ಎಎಪಿ ಮಾತ್ರವಲ್ಲದೇ ಕೇಜ್ರಿವಾಲ್ ಅವರೂ ಪಿಎಂಎಲ್‌ಎ ಸೆಕ್ಷನ್ 4ರ ಅಡಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆ. ಅಲ್ಲದೆ ಅವರು ಪಿಎಂಎಲ್‌ಎ ಸೆಕ್ಷನ್ 70ರ ಅಡಿಯಲ್ಲೂ ಕಾನೂನು ಕ್ರಮ ಮತ್ತು ಶಿಕ್ಷೆಗೆ ಗುರಿಯಾಗುತ್ತಾರೆ’ ಎಂದು ಜಾರಿ ನಿರ್ದೇಶನಾಲಯ ಹೇಳಿದೆ.

‘ದೆಹಲಿಯ ಮುಖ್ಯಮಂತ್ರಿ ಸ್ಥಾನವನ್ನು ಬಳಸಿಕೊಂಡು ಅವರು, ಹಣ ಅಕ್ರಮ ವರ್ಗಾವಣೆಯನ್ನು ಸುಲಭಗೊಳಿಸಿದರು’ ಎಂದು ಹೇಳಿರುವ ಜಾರಿ ನಿರ್ದೇಶನಾಲಯ, ತನ್ನ ಬಂಧನವನ್ನು ಪ್ರಶ್ನಿಸಿ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಯಲ್ಲಿ ಅರ್ಹತೆಯ ಅಂಶಗಳಿಲ್ಲವಾಗಿದ್ದು, ವಜಾಗೊಳಿಸಲು ಸೂಕ್ತವಾಗಿದೆ ಎಂದು ಹೇಳಿದೆ.

ಬಂಧನಕ್ಕೆ ಒತ್ತು ನೀಡಿಯೇ ಎಎಪಿ ಪ್ರಚಾರ

ದೆಹಲಿಯಲ್ಲಿ ಗುರುವಾರ ಎಎಪಿ ಚುನಾವಣಾ ಪ್ರಚಾರ ಗೀತೆಗೆ ಚಾಲನೆ ನೀಡಿದ ಕಾರ್ಯಕ್ರಮದಲ್ಲಿ ಪಕ್ಷದ ನಾಯಕರಾದ ಸಂಜಯ್ ಸಿಂಗ್ ಮತ್ತು ಗೋಪಾಲ್ ರೈ ಇತರರು ಭಾಗವಹಿಸಿದ್ದರು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಬಂಧನಕ್ಕೆ ಹೆಚ್ಚಿನ ಒತ್ತು ನೀಡಿ ಚುನಾವಣಾ ಪ್ರಚಾರ ನಡೆಸಲು ಆಮ್ ಆದ್ಮಿ ಪಕ್ಷ(ಎಎಪಿ) ನಿರ್ಧರಿಸಿದ್ದು, ಪ್ರಚಾರ ಗೀತೆಯೊಂದನ್ನು ರೂಪಿಸಿದೆ.

‘ಜೇಲ್ ಕೆ ಜವಾಬ್ ಮೇ, ಹಮ್ ವೋಟ್ ದೇಂಗೆ’ ಎಂಬುದು ಎಎಪಿ ಪ್ರಚಾರದ ಘೋಷವಾಕ್ಯವಾಗಿದ್ದು, ಇದೇ ಶೀರ್ಷಿಕೆಯಡಿ ಪ್ರಚಾರ ಗೀತೆಯನ್ನೂ ರೂಪಿಸಿದೆ.

ಎಎಪಿ ಶಾಸಕ ದಿಲೀಪ್ ಪಾಂಡೆ ಅವರು ಈ ಪ್ರಚಾರ ಗೀತೆಯನ್ನು ರಚಿಸಿ, ಹಾಡಿದ್ದಾರೆ. ಪಕ್ಷದ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಗೀತೆಯ ಪ್ರಚಾರಕ್ಕೆ ಚಾಲನೆ ನೀಡಲಾಯಿತು.

ಪ್ರಚಾರಕ್ಕೆ ಸುನೀತಾ: ಅರವಿಂದ ಕೇಜ್ರಿವಾಲ್ ಅವರ ಪತ್ನಿ ಸುನೀತಾ ಅವರೂ ದೆಹಲಿಯಲ್ಲಿ ಎಎಪಿ ಪರ ನಡೆಯಲಿರುವ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳಲಿದ್ದು, ಈ ವಾರಾಂತ್ಯದಲ್ಲಿ ರೋಡ್ ಶೋ ನಡೆಸಲಿದ್ದಾರೆ.

ಸುನೀತಾ ಅವರು ನಿಧಾನಕ್ಕೆ ಪತಿಯ ಬಂಧನದ ನೋವಿನಿಂದ ಹೊರಬರುತ್ತಿದ್ದಾರೆ. ಚುನಾವಣಾ ಪ್ರಚಾರ ಕಾರ್ಯದಲ್ಲಿ ಅವರು ಮಹತ್ವದ ಪಾತ್ರ ವಹಿಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಇ.ಡಿ ವಿಚಾರಣೆಗೆ ಹಾಜರಾದ ಜಿಲ್ಲಾಧಿಕಾರಿಗಳು

ಚೆನ್ನೈ (ಪಿಟಿಐ): ಅಕ್ರಮ ಮರಳುಗಾರಿಕೆ ಹಗರಣದಲ್ಲಿನ ಹಣ ಅಕ್ರಮ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿದಂತೆ ತಮಿಳುನಾಡಿನ ಐವರು ಜಿಲ್ಲಾಧಿಕಾರಿಗಳು ಗುರುವಾರ ಜಾರಿ ನಿರ್ದೇಶನಾಲಯದ (ಇ.ಡಿ) ಎದುರು ವಿಚಾರಣೆಗೆ ಹಾಜರಾದರು. ಸುಪ್ರಿಂ ಕೋರ್ಟ್ ಈ ಕುರಿತು ಏ. 2ರಂದು ನಿರ್ದೇಶನ ನೀಡಿತ್ತು.

ಜಿಲ್ಲಾಧಿಕಾರಿಗಳಾದ ವಿ.ಆರ್. ಸುಬ್ಬುಲಕ್ಷ್ಮಿ (ವೆಲ್ಲೂರು), ಎಂ.ತಂಗವೇಲ್ (ಕರೂರ್), ಆ್ಯನೆ ಮೇರಿ ಸ್ವರ್ಣಾ (ಅರಿಯಲೂರು), ಎಂ.ಪ್ರದೀಪ್ ಕುಮಾರ್ (ತಿರುಚಿನಾಪಳ್ಳಿ) ಮತ್ತು ದೀಪಕ್ ಜೇಕಬ್ (ತಂಜಾವೂರು) ಅವರು ಇ.ಡಿ ಎದುರು ಹಾಜರಾದವರು.

ವಿಚಾರಣೆಗೆ ಹಾಜರಾಗದ ಅಧಿಕಾರಿಗಳ ಧೋರಣೆಗೆ ಬೇಸರ ವ್ಯಕ್ತಪಡಿಸಿದ್ದ ಸುಪ್ರೀಂ ಕೋರ್ಟ್, ಏ. 25 ರೊಳಗೆ ಹಾಜರಾಗಬೇಕು. ಇಲ್ಲದಿದ್ದರೆ ಗಂಭೀರ ಪರಿಣಾಮ ಎದುರಿಸಬೇಕಾದಿತು ಎಂದು ಎಚ್ಚರಿಸಿತ್ತು.

ಆಕಸ್ಮಿಕವಾಗಿ ಗುಂಡು ಹಾರಿ ಪೊಲೀಸ್ ಸಾವು

ರಾಯಪುರ (ಪಿಟಿಐ): ಬಂದೂಕಿನಿಂದ ಆಕಸ್ಮಿಕವಾಗಿ ಗುಂಡು ಹಾರಿದ ಪರಿಣಾಮ ಜಿಲ್ಲಾ ಮೀಸಲು ಪಡೆಯ (ಡಿಆರ್‌ಜಿ) ಕಾನ್‌ಸ್ಟೆಬಲ್ ಒಬ್ಬರು ಮೃತಪಟ್ಟಿದ್ದು, ಮತ್ತೊಬ್ಬ ಪೊಲೀಸ್ ಗಾಯಗೊಂಡಿರುವ ಘಟನೆ ಛತ್ತೀಸಗಢದ ದಾಂತೇವಾಡ ಜಿಲ್ಲೆಯಲ್ಲಿ ನಡೆದಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಬಾರ್ಸೂರ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಡಿಆರ್‌ಜಿ ಮತ್ತು ಬಸ್ತಾರ್ ಫೈಟರ್ ಜಂಟಿ ತಂಡವು ನಕ್ಸಲ್ ವಿರೋಧಿ ಕಾರ್ಯಾಚರಣೆಯಲ್ಲಿ ತೊಡಗಿದ್ದಾಗ, ಬುಧವಾರ ರಾತ್ರಿ 11 ಗಂಟೆ ಸುಮಾರಿಗೆ ಈ ಘಟನೆ ನಡೆದಿದೆ ಎಂದು ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಾರಿ ಮಳೆಗೆ ಕುಸಿದ ಹೆದ್ದಾರಿ

ಇಟಾನಗರ (ಪಿಟಿಐ): ಅರುಣಾಚಲ ಪ್ರದೇಶದಲ್ಲಿ ಕಳೆದ ಕೆಲ ದಿನಗಳಿಂದ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಭೂಕುಸಿತ ಸಂಭವಿಸಿದೆ. ರಾಷ್ಟ್ರೀಯ ಹೆದ್ದಾರಿ–313ರ ಭಾಗವು ಕುಸಿದು, ಸಂಚಾರ ಅಸ್ತವ್ಯಸ್ತಗೊಂಡಿದೆ.

ಬುಧವಾರ ರಾತ್ರಿ ಭೂಕುಸಿತದಿಂದಾಗಿ ದಿಬಾಂಗ್ ಜಿಲ್ಲಾ ಕೇಂದ್ರವಾದ ಹುನ್ಲಿ ಮತ್ತು ಅನಿನಿ ನಡುವಿನ ರಸ್ತೆ ಕುಸಿದಿದೆ. ಇದು ಗಡಿ ಜಿಲ್ಲೆ ದಿಬಾಂಗ್ ಅನ್ನು ಮುಖ್ಯಭೂಮಿಯಿಂದ ಬೇರ್ಪಡಿಸಿದಂತಾಗಿದೆ.

ಭಾರತ– ಚೀನಾ ಗಡಿಯಿಂದ 83 ಕಿ.ಮೀ. ದೂರದಲ್ಲಿರುವ ಅನಿನಿ ಹಾಗೂ ದಿಬಾಂಗ್ ಕಣಿವೆಯಲ್ಲಿರುವ ರೋಯಿಂಗ್ ಅನ್ನು ಸಂಪರ್ಕಿಸುವ ಪ್ರಮುಖ ಹೆದ್ದಾರಿ ಇದಾಗಿದೆ.

ರಸ್ತೆಯನ್ನು ಶೀಘ್ರವೇ ದುರಸ್ತಿಗೊಳಿಸಲು ಜಿಲ್ಲಾಡಳಿತವು ಸ್ಥಳದಲ್ಲಿ ಹೆಚ್ಚಿನ ಕಾರ್ಮಿಕರು ಮತ್ತು ಯಂತ್ರೋಪಕರಣ ನಿಯೋಜಿಸಿದೆ. ರಸ್ತೆಯನ್ನು ಸಂಪೂರ್ಣವಾಗಿ ಸರಿಪಡಿಸಲು ಒಂದೆರಡು ದಿನಗಳ ಕಾಲಾವಕಾಶ ಬೇಕಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರಿ ಮಳೆಗೆ ಅರುಣಾಚಲ ಪ್ರದೇಶದ ದಿಬಾಂಗ್ ಜಿಲ್ಲೆಯ ಹುನ್ಲಿ ಮತ್ತು ಅನಿನಿ ನಡುವಿನ ರಾಷ್ಟ್ರೀಯ ಹೆದ್ದಾರಿ ಕುಸಿದಿರುವ ದೃಶ್ಯ

‘ಹುನ್ಲಿ ಮತ್ತು ಅನಿನಿ ನಡುವಿನ ಹೆದ್ದಾರಿ ಹಾನಿಗೊಂಡು, ಪ್ರಯಾಣಿಕರಿಗೆ ತೊಂದರೆಯಾಗುತ್ತಿದೆ. ಈ ರಸ್ತೆಯು ರೋಯಿಂಗ್–ಅನಿನಿ ಹೆದ್ದಾರಿಯು ದಿಬಾಂಗ್ ಕಣಿವೆ ಜಿಲ್ಲೆಯ ಜೀವನಾಡಿಯಾಗಿದೆ. ದಿಬಾಂಗ್ ಕಣಿವೆಯನ್ನು ದೇಶದ ಇತರ ಭಾಗಗಳೊಂದಿಗೆ ಸಂಪರ್ಕಿಸುವ ಕಾರಣ ಶೀಘ್ರವೇ ರಸ್ತೆ ದುರಸ್ತಿಗೆ ಸೂಚಿಸಲಾಗಿದೆ’ ಎಂದು ಮುಖ್ಯಮಂತ್ರಿ ಪೇಮಾ ಖಾಂಡು ಅವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ.

ಸೇನೆ– ವೈದ್ಯಕೀಯ ಪದವೀಧರರ ನಿಯೋಜನೆ

ನವದೆಹಲಿ (ಪಿಟಿಐ): ‘ಪುಣೆಯ ಸಶಸ್ತ್ರ ಪಡೆಗಳ ವೈದ್ಯಕೀಯ ಕಾಲೇಜಿನಲ್ಲಿ (ಎಎಫ್‌ಎಂಸಿ) ತೇರ್ಗಡೆ ಹೊಂದಿದ 58ನೇ ಬ್ಯಾಚ್‌ನ ಒಟ್ಟು 112 ಪದವೀಧರರನ್ನು ಸೇನೆಗೆ ನಿಯೋಜಿಸಲಾಗಿದೆ’ ಎಂದು ರಕ್ಷಣಾ ಸಚಿವಾಲಯದ ಪ್ರಕಟಣೆ ಗುರುವಾರ ತಿಳಿಸಿದೆ.

‘ಸಶಸ್ತ್ರ ಪಡೆಗಳ ವೈದ್ಯಕೀಯ ಸೇವೆಗೆ (ಎಎಫ್‌ಎಂಎಸ್) ನಿಯೋಜನೆಗೊಂಡ 112 ಪದವೀಧರರ ಪೈಕಿ 87 ಮಂದಿ ಪುರುಷ ಕೆಡೆಟ್‌ಗಳಿದ್ದರೆ, 25 ಮಂದಿ ಮಹಿಳಾ ಕೆಡೆಟ್‌ಗಳಿದ್ದಾರೆ. ಎಎಫ್‌ಎಂಸಿಯ ಕೀರ್ತಿ ಚಕ್ರ ಪುರಸ್ಕೃತ ಕ್ಯಾಪ್ಟನ್ ದೇವಶೀಶ್ ಶರ್ಮಾ ಪರೇಡ್ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ 81 ವೈದ್ಯರನ್ನು ಭೂಸೇನೆಗೆ, 10 ವೈದ್ಯರನ್ನು ನೌಕಾಸೇನೆಗೆ ಹಾಗೂ 14 ವೈದ್ಯರನ್ನು ವಾಯುಸೇನೆಗೆ ನೇಮಕ ಮಾಡಲಾಗಿದೆ’ ಎಂದು ಅದು ಹೇಳಿದೆ.

ಎಎಫ್‌ಎಂಎಸ್ ಮಹಾನಿರ್ದೇಶಕ ಲೆಫ್ಟಿನೆಂಟ್ ಜನರಲ್ ದಲ್ಜಿತ್ ಸಿಂಗ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಸಂಕ್ಷಿಪ್ತ ಸುದ್ದಿ

ಲಂಡನ್ ಹೈಕಮಿಷನ್ ದಾಳಿ ಆರೋಪಿ ಬಂಧನ

ನವದೆಹಲಿ (ಪಿಟಿಐ): ಲಂಡನ್‌ನಲ್ಲಿರುವ ಭಾರತೀಯ ಹೈಕಮಿಷನ್ ಮೇಲೆ ಕಳೆದ ವರ್ಷದ ಮಾರ್ಚ್‌ನಲ್ಲಿ ನಡೆದ ದಾಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ಪ್ರಮುಖ ಆರೋಪಿಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಗುರುವಾರ ಬಂಧಿಸಿದೆ.

ಲಂಡನ್‌ನಲ್ಲಿ 2023ರ ಮಾರ್ಚ್ 22ರಂದು ನಡೆದ ಪ್ರತಿಭಟನೆಯ ಸಮಯದಲ್ಲಿ ಕಾನೂನುಬಾಹಿರ ಚಟುವಟಿಕೆ ನಡೆಸಿದ್ದಕ್ಕಾಗಿ ಬ್ರಿಟನ್‌ನ ಹೌನ್‌ಸ್ಲೋ ನಿವಾಸಿ ಇಂದರಪಾಲ್ ಸಿಂಗ್ ಗಾಬಾ ಅವರನ್ನು ಬಂಧಿಸಲಾಗಿದೆ ಎಂದು ಎನ್‌ಐಎ ಪ್ರಕಟಣೆಯಲ್ಲಿ ತಿಳಿಸಿದೆ.

ಕಳೆದ ವರ್ಷದ ಮಾರ್ಚ್ 19, 22ರಂದು ಲಂಡನ್‌ನಲ್ಲಿ ನಡೆದ ಘಟನೆಗಳು ಭಾರತೀಯ ರಾಯಭಾರ ಕಚೇರಿ ಹಾಗೂ ಅಧಿಕಾರಿಗಳ ಮೇಲೆ ದಾಳಿ ನಡೆಸುವ ಪಿತೂರಿಯ ಭಾಗವಾಗಿದ್ದವು ಎಂಬುದು ಎನ್‌ಐಎ ತನಿಖೆಯಿಂದ ತಿಳಿದುಬಂದಿದೆ.

ರಿಮೋಟ್ ನಿಯಂತ್ರಿತ ಐಎಎಫ್ ವಿಮಾನ ಪತನ

ಜೈಸಲ್ಮೇರ್ (ಪಿಟಿಐ): ವಾಯುಪಡೆಗೆ ಸೇರಿದ, ರಿಮೋಟ್ ಮೂಲಕ ನಿಯಂತ್ರಿಸಲಾಗುತ್ತಿದ್ದ ವಿಮಾನವೊಂದು ಜಿಲ್ಲೆಯ ಪಿತಾಲಾ ಗ್ರಾಮದಲ್ಲಿ ಪತನಗೊಂಡಿದೆ.

ತರಬೇತಿ ಹಂತದಲ್ಲಿದ್ದಾಗ ಈ ಅವಘಡ ಸಂಭವಿಸಿದೆ. ಯಾರಿಗೂ ಯಾವುದೇ ಹಾನಿಯಾಗಿಲ್ಲ ಎಂದು ವಾಯುಪಡೆಯು ‘ಎಕ್ಸ್’ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದೆ.

ಚೀನಾ– ಟಿಬೆಟ್ ನಡುವೆ ಅನೌಪಚಾರಿಕ ಮಾತುಕತೆ

ಧರ್ಮಶಾಲಾ (ಪಿಟಿಐ): ಟಿಬೆಟ್‌ನಲ್ಲಿ ಚೀನಾ ವಿರೋಧಿ ಪ್ರತಿಭಟನೆ ಮತ್ತು ಬೌದ್ಧರ ನಾಡಿನ ಕಡೆಗೆ ಬೀಜಿಂಗ್‌ನ ಕಠಿಣ ಧೋರಣೆಯಿಂದಾಗಿ ಔಪಚಾರಿಕ ಮಾತುಕತೆಗಳು ಸ್ಥಗಿತಗೊಂಡಿದ್ದ ದಶಕದ ನಂತರ ಟಿಬೆಟ್‌ನ ದೇಶಾಂತರ ಸರ್ಕಾರ ಮತ್ತು ಚೀನಾ ನಡುವೆ ಮತ್ತೆ ಔಪಚಾರಿಕ ಮಾತುಕತೆಯನ್ನು ಪುನರಾರಂಭಿಸುವ ಇಚ್ಛೆ ಎರಡೂ ಕಡೆಗಳಿಂದಲೂ ವ್ಯಕ್ತವಾಗಿದೆ.

ದಿ ಸಿಕಿಯೊಂಗ್ ಅಥವಾ ಟಿಬೆಟ್‌ನ ದೇಶಾಂತರ ಸರ್ಕಾರದ ರಾಜಕೀಯ ಮುಖ್ಯಸ್ಥ ಪೆನ್ಪಾ ಸೆರಿಂಗ್ ಅವರು ಅನೌಪಚಾರಿಕ ಮಾತುಕತೆಗಳು ನಡೆಯುತ್ತಿರುವುದನ್ನು ದೃಢಪಡಿಸಿದರು. ಚೀನಾ ರಾಜಧಾನಿ ಬೀಜಿಂಗ್‌ನಲ್ಲಿ ಸಂಧಾನಕಾರರು ಮಾತುಕತೆಯಲ್ಲಿ ತೊಡಗಿದ್ದಾರೆ. ಆದರೆ, ಇದು ತಕ್ಷಣಕ್ಕೆ ಫಲಿತಾಂಶ ನೀಡುತ್ತದೆ ಎನ್ನುವ ನಿರೀಕ್ಷೆ ಇಲ್ಲ ಎಂದು ಹೇಳಿದ್ದಾರೆ.

‘ನಾವು ಕಳೆದ ವರ್ಷದಿಂದ ಅನೌಪಚಾರಿಕ ಮಾತುಕತೆಯಲ್ಲಿ ನಿರತವಾಗಿದ್ದೇವೆ. ಆದರೆ, ಇದರ ಮೇಲೆ ನಮಗೆ ಯಾವುದೇ ತಕ್ಷಣದ ನಿರೀಕ್ಷೆಗಳಿಲ್ಲ. ಈ ಪ್ರಯತ್ನ ದೀರ್ಘಾವಧಿಯಲ್ಲಿ ಫಲಿಸಬಹುದು. ಅನೌಪಚಾರಿಕ ಮಾತುಕತೆ ಇನ್ನಷ್ಟು ನಡೆಯಬೇಕಿದೆ’ ಎಂದು ಪತ್ರಕರ್ತರಿಗೆ ತಿಳಿಸಿದರು.

‘ಬೀಜಿಂಗ್‌ನಲ್ಲಿ ಆ ದೇಶದ ನಾಯಕರೊಂದಿಗೆ ಮಾತುಕತೆ ನಡೆಸಲು ನಾನು ಸಂಧಾನಕಾರರನ್ನು ನೇಮಿಸಿದ್ದೇನೆ. ಬೇರೆಯವರೂ ಈ ನಿಟ್ಟಿನಲ್ಲೂ ಪ್ರಯತ್ನಿಸುತ್ತಿದ್ದಾರೆ’ ಎಂದು ಕೇಂದ್ರ ಟಿಬೆಟ್ ಆಡಳಿತದ ಮುಖ್ಯಸ್ಥ ಸೆರಿಂಗ್ ಅವರು ಹೇಳಿದ್ದಾರೆ.

ಅಮೆರಿಕದ ವರದಿ ಪಕ್ಷಪಾತಿ: ಕೇಂದ್ರ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ಜನಾಂಗೀಯ ಸಂಘರ್ಷ ಶುರುವಾದ ನಂತರದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ನಡೆದಿದೆ ಎಂದು ಅಮೆರಿಕ ಸರ್ಕಾರದ ವರದಿಯೊಂದು ಹೇಳಿರುವುದು ‘ತೀರಾ ಪಕ್ಷಪಾತದಿಂದ ಕೂಡಿದೆ’ ಎಂದು ಕೇಂದ್ರ ಸರ್ಕಾರ ಗುರುವಾರ ಪ್ರತಿಕ್ರಿಯಿಸಿದೆ.

ಭಾರತದ ಬಗ್ಗೆ ಸರಿಯಾಗಿ ಅರಿಯದೆ ಸಿದ್ಧಪಡಿಸಿರುವ ವರದಿ ಇದು. ಇದಕ್ಕೆ ಬೆಲೆ ಇಲ್ಲ ಎಂದು ಕೂಡ ಕೇಂದ್ರವು ಖಾರವಾಗಿ ಹೇಳಿದೆ. ಅಮೆರಿಕದ ವಿದೇಶಾಂಗ ಇಲಾಖೆಯು ಈ ವರದಿಯನ್ನು ಸಿದ್ಧಪಡಿಸಿದೆ.

ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ (ಬಿಬಿಸಿ) ಕಚೇರಿಯ ಮೇಲೆ ಕೇಂದ್ರ ತೆರಿಗೆ ಅಧಿಕಾರಿಗಳು ನಡೆಸಿದ ದಾಳಿಯ ಕುರಿತೂ ಈ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಸಂದೇಶ್‌ಖಾಲಿ: ಮೊದಲ ಎಫ್‌ಐಆರ್ ದಾಖಲು

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಯಲ್ಲಿ ಐವರು ಪ್ರಭಾವಿ ವ್ಯಕ್ತಿಗಳ ವಿರುದ್ಧ ಭೂಕಬಳಿಕೆ ಮತ್ತು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಆರೋಪಕ್ಕೆ ಸಂಬಂಧಿಸಿದಂತೆ ಸಿಬಿಐ ಮೊದಲ ಎಫ್‌ಐಆರ್ ದಾಖಲಿಸಿದೆ.

ತನಿಖೆ ನಡೆಸುತ್ತಿರುವ ಕೇಂದ್ರೀಯ ತನಿಖಾ ದಳ (ಸಿಬಿಐ) ಇದೇ ಮೊದಲ ಬಾರಿಗೆ ಈ ಪ್ರಕರಣದಲ್ಲಿ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಐವರೂ ಆರೋಪಿಗಳ ಗುರುತನ್ನು ಸಿಬಿಐ ಬಹಿರಂಗಪಡಿಸಿಲ್ಲ.

ಸ್ಥಳೀಯ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಲಾಗುತ್ತಿದೆ ಹಾಗೂ ಬಲವಂತವಾಗಿ ಭೂಮಿಯನ್ನು ಕಬಳಿಸಲಾಗುತ್ತಿದೆ ಎಂದು ಆರೋಪಿಸಿ ಸಂದೇಶ್‌ಖಾಲಿ ಜನರು ತೀವ್ರ ಪ್ರತಿಭಟನೆ ನಡೆಸಿದ್ದರು. ಬಳಿಕ ಘಟನೆ ಕುರಿತು ತನಿಖೆ ನಡೆಸುವಂತೆ ಏ.10ರಂದು ಕಲ್ಕತ್ತಾ ಹೈಕೋರ್ಟ್ ಸಿಬಿಐಗೆ ಆದೇಶ ನೀಡಿತ್ತು. ಅಲ್ಲದೇ ಪ್ರಕರಣದ ಕುರಿತು ಸಂಪೂರ್ಣ ವರದಿಯನ್ನು ಮೇ 2ರಂದು ಸಲ್ಲಿಸುವಂತೆ ನಿರ್ದೇಶಿಸಿತ್ತು.

ಉತ್ತರ ಪತ್ರಿಕೆಯಲ್ಲಿ ‘ಜೈ ಶ್ರೀರಾಮ್’ ಬರೆದವರಿಗೆ ಶೇ 50 ಅಂಕ

ಪ್ರಜಾವಾಣಿ ವಾರ್ತೆ

ಲಖನೌ: ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಬರೆದ ಉತ್ತರದ ಗುಣಮಟ್ಟದ ಆಧಾರದ ಮೇಲೆ ಅವರಿಗೆ ಅಂಕಗಳನ್ನು ನೀಡಲಾಗುತ್ತದೆ. ಆದರೆ ಇಲ್ಲೊಂದು ವಿಶ್ವವಿದ್ಯಾಲಯದಲ್ಲಿ ಉತ್ತರ ಪತ್ರಿಕೆಯಲ್ಲಿ ‘ಜೈ ಶ್ರೀರಾಮ್’ ಎಂದು ಮತ್ತು ಕ್ರಿಕೆಟ್ ಆಟಗಾರರ ಹೆಸರುಗಳನ್ನು ಬರೆದಿರುವ ಹಲವಾರು ವಿದ್ಯಾರ್ಥಿಗಳಿಗೆ ಮೌಲ್ಯಮಾಪಕರು ಅಂಕಗಳನ್ನು ನೀಡಿದ್ದಾರೆ. ಇಂಥದ್ದೊಂದು ಘಟನೆ ನಡೆದಿರುವುದು ಉತ್ತರ ಪ್ರದೇಶದ ಜಾನ್‌ಪುರದಲ್ಲಿರುವ ವೀರ್ ಬಹದ್ದೂರ್ ಸಿಂಗ್ ಪೂರ್ವಾಂಚಲ ವಿಶ್ವವಿದ್ಯಾಲಯದಲ್ಲಿ.

ಉತ್ತರ ಪತ್ರಿಕೆಗಳಲ್ಲಿ ‘ಜೈ ಶ್ರೀರಾಮ್’ ಮತ್ತು ಕ್ರಿಕೆಟಿಗರ ಹೆಸರುಗಳನ್ನು ಬರೆದ ವಿದ್ಯಾರ್ಥಿಗಳಿಗೆ ಅಂಕಗಳನ್ನು ನೀಡಿರುವ ಇಬ್ಬರು ಶಿಕ್ಷಕರನ್ನು ವಜಾಗೊಳಿಸಲು ವಿಶ್ವವಿದ್ಯಾಲಯ ಆದೇಶಿಸಿದೆ ಎಂದು ಮೂಲಗಳು ತಿಳಿಸಿವೆ.

ವಿಶ್ವವಿದ್ಯಾಲಯದ ಮಾಜಿ ವಿದ್ಯಾರ್ಥಿ ದಿವ್ಯಾಂಶು ಸಿಂಗ್ ಅವರು ಸಲ್ಲಿಸಿದ ಆರ್‌ಟಿಐ ಅರ್ಜಿ ಆಧಾರದ ಮೇರೆಗೆ ಫಾರ್ಮಸಿ ಕೋರ್ಸ್‌ನ ನಾಲ್ವರು ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಮರುಪರಿಶೀಲಿಸಿದಾಗ ಈ ವಿಷಯ ಬೆಳಕಿಗೆ ಬಂದಿದೆ.

ವಿದ್ಯಾರ್ಥಿಗಳು ಉತ್ತರ ಪತ್ರಿಕೆಯಲ್ಲಿ ಅಲ್ಲಲ್ಲಿ ‘ಜೈ ಶ್ರೀರಾಮ್’ ಘೋಷಣೆ ಮತ್ತು ಭಾರತೀಯ ಹಾಗೂ ಅಂತರರಾಷ್ಟ್ರೀಯ ಕ್ರಿಕೆಟಿಗರ ಹೆಸರನ್ನು ಬರೆದಿದ್ದು, ಇವರಿಗೆ ಮೌಲ್ಯಮಾಪಕರು ಶೇ 50ಕ್ಕಿಂತ ಹೆಚ್ಚು ಅಂಕಗಳನ್ನು ನೀಡಿದ್ದಾರೆ. ಪರಿಶೀಲನೆ ಬಳಿಕ ವಿದ್ಯಾರ್ಥಿಗಳಿಗೆ ಶೂನ್ಯ ಅಂಕಗಳನ್ನು ನೀಡಲಾಗಿದೆ. ಪ್ರಕರಣದ ಕುರಿತು ರಾಜಭವನ ತನಿಖೆಗೆ ಆದೇಶಿಸಿದೆ.

ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ಸೈಬರ್ ವಂಚನೆ

₹25 ಕೋಟಿ ಕಳೆದುಕೊಂಡ ಎಂಎನ್‌ಸಿ ಉದ್ಯೋಗಿ

ಮುಂಬೈ (ಪಿಟಿಐ): ಮುಂಬೈನಲ್ಲಿ ನೆಲೆಸಿರುವ ಬಹುರಾಷ್ಟ್ರೀಯ ಕಂಪನಿಯ (ಎಮ್‌ಎನ್‌ಸಿ) ನಿವೃತ್ತ ನಿರ್ದೇಶಕಿರೊಬ್ಬರು ಸೈಬರ್ ವಂಚಕರಿಂದ ₹25 ಕೋಟಿ ಕಳೆದುಕೊಂಡಿದ್ದಾರೆ. ತಾವು ಸಿಬಿಐ (ಕೇಂದ್ರೀಯ ತನಿಖಾ ದಳ) ಅಧಿಕಾರಿಗಳು ಎಂದು ಪರಿಚಯಿಸಿಕೊಂಡ ಸೈಬರ್ ವಂಚಕರು ತನಿಖೆ ನಡೆಸುತ್ತಿರುವುದಾಗಿ ಹೇಳಿಕೊಂಡು ವಂಚನೆ ಎಸಗಿದ್ದಾರೆ ಎಂದು ಗುರುವಾರ ಅಧಿಕಾರಿಗಳು ತಿಳಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ವ್ಯಕ್ತಿಯೊಬ್ಬರನ್ನು ಗುರಿಯಾಗಿಸಿಕೊಂಡು ನಡೆದಿರುವ ಅತಿ ದೊಡ್ಡ ಸೈಬರ್ ವಂಚನೆ ಪ್ರಕರಣಗಳಲ್ಲಿ ಇದೂ ಒಂದಾಗಿದೆ. ವಂಚಕರಿಗೆ ಹಣ ನೀಡಲು ಸಂತ್ರಸ್ತ ನಿವೃತ್ತ ನಿರ್ದೇಶಕಿಯು, ತಮ್ಮ ಹಾಗೂ ತಮ್ಮ ತಾಯಿಯ ಮ್ಯೂಚುವಲ್ ಫಂಡ್‌ನ ಹೂಡಿಕೆಯ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಅಲ್ಲದೇ ಚಿನ್ನದ ಮೇಲೆ ಸಾಲ ಕೂಡ ಮಾಡಿ ಹಣ ನೀಡಿದ್ದಾರೆ. ಫೆ.6ರಿಂದ ಈವರೆಗೆ ಒಟ್ಟು 2 ತಿಂಗಳ ಅವಧಿಯಲ್ಲಿ ಈ ವಂಚನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಂಚನೆ ನಡೆದಿದ್ದು ಹೇಗೆ?: ಟೆಲಿಕಾಂ ಅಧಿಕಾರಿಯಂತೆ ನಟಿಸಿ ವ್ಯಕ್ತಿಯೊಬ್ಬ ಸಂತ್ರಸ್ತೆಗೆ ವಾಟ್ಸ್‌ಆ್ಯಪ್ ಕರೆ ಮಾಡಿ, ತಮ್ಮ ಮೂರು ಮೊಬೈಲ್ ಸಂಖ್ಯೆಗಳನ್ನು ನಿಷ್ಕ್ರಿಯಗೊಳಿಸಲಾಗುತ್ತದೆ ಎಂದು ಹೇಳಿದ್ದಾನೆ. ಬಳಿಕ ಇದಕ್ಕೆ ಕಾರಣ ತಿಳಿಯಲು ತಾನು ಪೊಲೀಸ್ ಅಧಿಕಾರಿಯೊಬ್ಬರಿಗೆ ಕರೆ ವರ್ಗಾಯಿಸುತ್ತೇನೆಂದು ಹೇಳಿದ್ದಾನೆ. ಪೊಲೀಸ್ ಅಧಿಕಾರಿಯ ಸೋಗಿನಲ್ಲಿ ಮಾತನಾಡಿದ ವ್ಯಕ್ತಿಯು, ‘ನಿಮ್ಮ ವಿರುದ್ಧ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ದೂರು ಸ್ವೀಕರಿಸಲಾಗಿದೆ. ನಿಮ್ಮ ಮೊಬೈಲ್ ಸಂಖ್ಯೆ ಹಾಗೂ ಆಧಾರ್ ಕಾರ್ಡ್ ಸಂಖ್ಯೆಯನ್ನು ಪ್ರಕರಣದಲ್ಲಿ ಲಿಂಕ್ ಮಾಡಲಾಗಿದೆ’ ಎಂದು ತಿಳಿಸಿದ್ದಾನೆ.

ಬಳಿಕ ಆತ ಇನ್ನೊಬ್ಬ ವ್ಯಕ್ತಿಗೆ ಕರೆಯನ್ನು ವರ್ಗಾಯಿಸಿದ್ದಾನೆ. ತಾನು ಸಿಬಿಐ ಅಧಿಕಾರಿ ಎಂಬ ಸೋಗಿನಲ್ಲಿ ಆ ವ್ಯಕ್ತಿ ಮಾತನಾಡಿ, ಹಣ ಅಕ್ರಮ ವರ್ಗಾವಣೆ ಪ್ರಕರಣದ ಬೆದರಿಕೆ ಹಾಕಿದ್ದಾನೆ. ಪ್ರಕರಣದಿಂದ ಹೊರಬರಬೇಕಾದರೆ ತಾನು ನೀಡುವ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡಬೇಕು ಎಂದು ಸೂಚಿಸಿದ್ದಾನೆ.

ವಂಚಕರು ಸಂತ್ರಸ್ತೆ ಹೆಸರಿನಲ್ಲಿ ಚಾಲ್ತಿ ಖಾತೆ ತೆರೆದು, ಅದಕ್ಕೆ ಹಣ ಜಮೆ ಮಾಡುವಂತೆ ಹೇಳಿ, ಆ ಹಣ ಭಾರತೀಯ ರಿಸರ್ವ್ ಬ್ಯಾಂಕ್‌ಗೆ ತಲುಪುತ್ತದೆ ಎಂದು ನಂಬಿಸಿದ್ದಾರೆ. ಅಲ್ಲದೇ ರಶೀದಿಗಾಗಿ ಸ್ಥಳೀಯ ಪೊಲೀಸ್ ಠಾಣೆಯನ್ನು ಸಂಪರ್ಕಿಸಲು ಹೇಳಿದ್ದಾರೆ.

ಇಷ್ಟಾದ ನಂತರ ಸಂತ್ರಸ್ತೆಗೆ ತಾವು ಮೋಸ ಹೋಗಿರುವುದು ತಿಳಿದು, ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರು, ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗೆ ಒಟ್ಟು 31 ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿದ್ದಾರೆ.

ಮುಖ್ಯಾಂಶಗಳು

- ಈಚಿನ ದಿನಗಳಲ್ಲಿ ನಡೆದಿರುವ ದೊಡ್ಡ ಸೈಬರ್ ವಂಚನೆ ಪ್ರಕರಣಗಳಲ್ಲೊಂದು
- ಚಿನ್ನದ ಮೇಲೆ ಸಾಲ ಕೂಡ ಮಾಡಿ ಹಣ ನೀಡಿದ ಸಂತ್ರಸ್ತೆ
- ಮೊಬೈಲ್ ಸಂಖ್ಯೆಗಳನ್ನು ನಿಷ್ಕ್ರಿಯಗೊಳಿಸುವ ಬೆದರಿಕೆಯೊಡ್ಡಿ ವಂಚನೆ

ಅಪರಿಚಿತ ಸಂಖ್ಯೆಯಿಂದ ಕರೆ ನ್ಯಾಯಾಧೀಶರಿಂದ ಪತ್ರ

ಬರೇಲಿ (ಪಿಟಿಐ): ಉತ್ತರ ಪ್ರದೇಶದ ವಾರಾಣಸಿಯ ಗ್ಯಾನವಾಪಿ ಮಸೀದಿ ಸಂಕೀರ್ಣದಲ್ಲಿ ವಿಡಿಯೊ ಸಮೀಕ್ಷೆ ನಡೆಸಲು 2022ರಲ್ಲಿ ಅನುಮತಿಸಿದ್ದ ಹೆಚ್ಚುವರಿ ಸೆಷನ್ಸ್ ನ್ಯಾಯಮೂರ್ತಿ (ತ್ವರಿತ ಗತಿ ನ್ಯಾಯಾಲಯ– 1) ರವಿ ಕುಮಾರ್ ದಿವಾಕರ್ ಅವರು ತಮಗೆ ಅಪರಿಚಿತ ವಿದೇಶ ಸಂಖ್ಯೆಗಳಿಂದ ಕರೆ ಬರುತ್ತಿವೆ ಎಂದು ದೂರಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

‘ನ್ಯಾಯಾಧೀಶ ದಿವಾಕರ್ ಅವರು ಪತ್ರ ಬರೆದಿದ್ದಾರೆ. ಅಂತರರಾಷ್ಟ್ರೀಯ ದೂರವಾಣಿ ಸಂಖ್ಯೆಗಳಿಂದ ಕರೆ ಬರುತ್ತಿರುವುದು ತಮ್ಮನ್ನು ಆತಂಕಕ್ಕೆ ದೂಡಿದೆ ಎಂದು ಅವರು ಬರೆದಿದ್ದಾರೆ’ ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಘುಲೆ ಸುಶೀಲ್ ಚಂದ್ರಭಾನ್ ಅವರು ಹೇಳಿದ್ದಾರೆ.

‘ಏಪ್ರಿಲ್ 15ರಂದು ಮೊದಲ ಬಾರಿಗೆ ಅಂತರರಾಷ್ಟ್ರೀಯ ಸಂಖ್ಯೆಯಿಂದ ಕರೆ ಬಂದಿತು. ಕರೆಗೆ ಉತ್ತರಿಸಲಿಲ್ಲ. ಇಲ್ಲಿಯವರೆಗೂ ಕರೆ ಬರುತ್ತಲೇ ಇದೆ ಎಂದು ದಿವಾಕರ್ ಹೇಳಿದ್ದಾರೆ. ದೂರಿಗೆ ಸಂಬಂಧಿಸಿದಂತೆ ತನಿಖೆ ನಡೆಸಲು ಸೈಬರ್ ಘಟಕ ಮತ್ತು ಕೋತವಾಲಿ ಪೊಲೀಸರಿಗೆ ಸೂಚಿಸಲಾಗಿದೆ’ ಎಂದು ಘುಲೆ ಹೇಳಿದ್ದಾರೆ.

ಗಂಭೀರ ಪ್ರಕರಣಗಳಲ್ಲಿ ಕಠಿಣ ಸಜೆ ವಿಧಿಸುವುದಕ್ಕೆ ದಿವಾರರ್ ಅವರು ಹೆಸರಾಗಿದ್ದರು. ಬರೇಲಿಯಲ್ಲಿ ಎಂಟು ಮಂದಿಗೆ ಮರಣದಂಡನೆ ವಿಧಿಸಿದ್ದರು. ಬರೇಲಿ ಗಲಭೆ ಪ್ರಕರಣದಲ್ಲಿ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿದ್ದ ಅವರು, ಸಂಚುಕೋರ ಧಾರ್ಮಿಕ ಮುಖಂಡ ತೌಖೀರ್ ರಾಜಾಗೆ ಸಮನ್ಸ್ ನೀಡಿದ್ದರು.

ಶುಕ್ರವಾರ, ಏಪ್ರಿಲ್ 26, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಿಸಿಲ ತಾಪ

ಅಮೃತಸರದಲ್ಲಿ ಬಿಸಿಲಿನ ತಾಪ ತಾಳಲಾರದೆ ಮಗುವೊಂದು ಐಸ್‌ಕ್ರೀಂ ಸವಿಯುತ್ತ ದಣಿವಾರಿಸಿಕೊಂಡಿದ್ದು ಹೀಗೆ

20 ವರ್ಷಗಳಿಂದ ಶೇ 4ರಷ್ಟು ಮೀಸಲಾತಿ ಮುಂದುವರಿದಿದೆ: ಮುಖ್ಯಮಂತ್ರಿ ಸಿದ್ದರಾಮಯ್ಯ

‘ಬಿಜೆಪಿಯವರಿಂದಲೇ ಮುಸ್ಲಿಂ ಮೀಸಲಾತಿ’

ಪ್ರಜಾವಾಣಿ ವಾರ್ತೆ

ಬೀದರ್/ಹುಬ್ಬಳ್ಳಿ: ‘ಮುಸ್ಲಿಮರಿಗೆ ನೀಡಲಾಗಿರುವ ಶೇ 4ರಷ್ಟು ಮೀಸಲಾತಿಯನ್ನು ಮುಂದುವರೆಸುತ್ತೇವೆ ಎಂದು ಹಿಂದಿನ ಬಿಜೆಪಿ ಸರ್ಕಾರವೇ ಸುಪ್ರೀಂಕೋರ್ಟ್‌ನಲ್ಲಿ ಹೇಳಿದೆ. ಹೀಗಾಗಿ ಈಗಲೂ ಮುಸ್ಲಿಮರ ಮೀಸಲಾತಿ ಹಿಂದಿನಂತೆ ಮುಂದುವರೆದಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

ಕಾಂಗ್ರೆಸ್ ಪಕ್ಷವು ಎಸ್ಸಿ/ಎಸ್ಟಿಗಳ ಮೀಸಲಾತಿಯನ್ನು ಮುಸ್ಲಿಮರಿಗೆ ಕೊಡಲು ಪ್ರಯತ್ನಿಸುತ್ತಿದೆ ಎಂದು ಬಿಜೆಪಿಯವರು ಆರೋಪಿಸಿರುವ ಕುರಿತು ನಗರದಲ್ಲಿ ಗುರುವಾರ ಪತ್ರಕರ್ತರು ಕೇಳಿದ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು.

‘ಹಿಂದೆ ಚಿನ್ನಪ್ಪ ರೆಡ್ಡಿ ಆಯೋಗವು ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ಕೊಡಬೇಕು ಎಂದು ಹೇಳಿತ್ತು. ಅದರಂತೆ ಸುಮಾರು 20 ವರ್ಷಗಳಿಂದ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ಮುಂದುವರಿದಿದೆ. ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವೇ ಮುಸ್ಲಿಮರ ಮೀಸಲಾತಿ ಮುಂದುವರಿಸುತ್ತೇವೆ ಎಂದು ಸುಪ್ರೀಂ-ಕೋರ್ಟ್‌ನಲ್ಲಿ ಹೇಳಿದೆ’ ಎಂದರು.

‘ದೇವೇಗೌಡರು, ನಾನು ಮುಸ್ಲಿಂ ಮೀಸಲಾತಿ ಜಾರಿಗೆ ತಂದಿದ್ದು’: ‘ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಹಾಗೂ ನಾನು ಹಣಕಾಸು ಸಚಿವನಾಗಿದ್ದಾಗ ಚಿನ್ನಪ್ಪ ರೆಡ್ಡಿ ಆಯೋಗದ ಶಿಫಾರಸ್ಸನ್ನು ಜಾರಿಗೆ ತಂದಿದ್ದೇವೆ. ಹೊರತು, ಹಿಂದುಳಿದ ವರ್ಗಗಳ ಮೀಸಲಾತಿ ಕಸಿದು ಕೊಟ್ಟಿಲ್ಲ’ ಎಂದು ಸಿದ್ದರಾಮಯ್ಯ ಹೇಳಿದರು.

ಹುಬ್ಬಳ್ಳಿಯಲ್ಲಿ ಕಾಂಗ್ರೆಸ್ ಆಯೋಜಿಸಿದ್ದ ಪ್ರಜಾಧ್ವನಿ-2 ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, ‘ನಾವು ನೀಡಿದ್ದ ಮೀಸಲಾತಿಯನ್ನು ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವು ರದ್ದುಗೊಳಿಸಿತ್ತು. ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿದಾಗ, ಮೀಸಲಾತಿಯನ್ನು ಮುಂದುವರಿಸುವು-ದಾಗಿ ಬೊಮ್ಮಾಯಿ ಸರ್ಕಾರ ಅಫಿಡವಿಟ್ ಸಲ್ಲಿಸಿತು ’ ಎಂದರು.

‘ಹಿಂದುಳಿದ ವರ್ಗಗಳ ಮೀಸಲಾತಿ ಕಿತ್ತು ಮುಸ್ಲಿಮರಿಗೆ ಕೊಟ್ಟಿದ್ದೇವೆ ಎಂದು ಪ್ರಧಾನಿ ಸುಳ್ಳು ಹೇಳುತ್ತಿದ್ದಾರೆ. ಅವರಿಗೆ ಮಾಹಿತಿ ಇಲ್ಲ. ಅವರು ಆರ್‌ಎಸ್‌ಎಸ್ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಅವರು ಪ್ರಧಾನಿ ಹುದ್ದೆಯ ಘನತೆಗೆ ತಕ್ಕಂತೆ ಮಾತನಾಡುತ್ತಿಲ್ಲ. ಆ ಹುದ್ದೆಯ ಘನತೆಯನ್ನು ಕುಂದಿಸಿದ್ದಾರೆ’ ಎಂದರು.

‘ಮೋದಿ ಅವರು ದೇಶದ ಜನರ ದಾರಿ ತಪ್ಪಿಸುವ ಹೇಳಿಕೆ ಕೊಡುತ್ತಿದ್ದಾರೆ. ಸಂವಿಧಾನದ ವಿರುದ್ಧ ಮಾತನಾಡಬೇಡಿ. ಸಂವಿಧಾನಕ್ಕೆ ವಿರುದ್ಧವಾಗಿ ಕೆಲಸ ಮಾಡಿದರೆ ಸಂವಿಧಾನಕ್ಕೆ ಧಕ್ಕೆ ತಂದಂತೆ’ ಎಂದರು.

ಹನ್ಸರಾಜ್ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹ

ಬೆಂಗಳೂರು: ಬಿಜೆಪಿಗೆ ಮತಗಳನ್ನು ತರುವುದಕ್ಕಾಗಿ ಮುಸ್ಲಿಂ ಸಮುದಾಯದ ಮೀಸಲಾತಿ ಬಗ್ಗೆ ಸುಳ್ಳು ಹೇಳಿಕೆ ನೀಡಿ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿರುವ ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಹನ್ಸರಾಜ್ ಗಂಗಾರಾಮ್ ಅಹೀರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಹಿರಿಯ ವಕೀಲ ಪ್ರೊ. ರವಿವರ್ಮ ಕುಮಾರ್ ಆಗ್ರಹಿಸಿದರು.

‘ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ’ ಗುರುವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಮಾದರಿ ನೀತಿ ಸಂಹಿತೆ ಜಾರಿಯಾದ ಮೇಲೆ ಯಾವುದೇ ಆಯೋಗದ ಅಧ್ಯಕ್ಷರು ಪಕ್ಷಗಳ ಪರವಾಗಿ ಮತದಾರರ ಮೇಲೆ ಪ್ರಭಾವ ಅಥವಾ ಪರಿಣಾಮ ಬೀರುವ ಕೆಲಸವನ್ನು ಮಾಡಬಾರದು. ಕರ್ನಾಟಕದ ಮುಸ್ಲಿಂ ಮೀಸಲಾತಿ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯಲ್ಲಿದ್ದರೂ ಈ ಬಗ್ಗೆ ಬಿಜೆಪಿ ಬಾಲಬಡುಕರಾದ ಹನ್ಸರಾಜ್ ಗಂಗಾರಾಮ್ ಅಹೀರ ಮಾತನಾಡಿ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿದರು.

ರಾಜ್ಯದಲ್ಲಿ ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದಾಗ ಅವರು ಹಾವನೂರು ಆಯೋಗದ ವರದಿಯನ್ನು ಅಂಗೀಕರಿಸುವ ಮೂಲಕ ಮುಸ್ಲಿಮರ ಪರವಾಗಿ ಮೀಸಲಾತಿಯನ್ನು ಒದಗಿಸಿದ್ದರು. ಅದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು. ಮುಸ್ಲಿಮರಿಗೆ ಮೀಸಲಾತಿ ಕೊಡಬೇಕು ಎಂದು ಆಗ ಹೈಕೋರ್ಟ್ ತೀರ್ಪು ನೀಡಿತು. ಸುಪ್ರೀಂ ಕೋರ್ಟ್ ಈ ತೀರ್ಪನ್ನು ಎತ್ತಿ ಹಿಡಿದಿತ್ತು ಎಂದು ವಿವರಿಸಿದರು.

‘ಜನಸಂಖ್ಯೆ ಆಧಾರಿತ ಮೀಸಲು ಘೋಷಿಸಿ’

ಬೆಂಗಳೂರು: ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ನಿಗದಿಪಡಿಸುವುದೊಂದೇ ಮೀಸಲಾತಿ ಕುರಿತ ವಿವಾದ ಬಗೆಹರಿಸಲು ಇರುವ ಶಾಶ್ವತ ಪರಿಹಾರವಾಗಿದೆ. ಈ ಸವಾಲು ಸ್ವೀಕರಿಸಲು ಪ್ರಧಾನಿ ನರೇಂದ್ರ ಮೋದಿ ಸಿದ್ಧವಿದ್ದರೆ ಅದನ್ನು ಚುನಾವಣಾ ಭರವಸೆಯಾಗಿ ಘೋಷಿಸಬೇಕು. ಇಲ್ಲದಿದ್ದರೆ ಬಾಯಿ ಬಡಾಯಿಯನ್ನು ನಿಲ್ಲಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ‘ಪ್ರಧಾನಿ ಮೋದಿ ಅವರು ಮೀಸಲಾತಿ ಕುರಿತು ಸುಳ್ಳು ವಿವಾದ ಸೃಷ್ಟಿಸಿ ರಾಜಕೀಯ ಲಾಭ ಪಡೆಯುವ ಹುನ್ನಾರದಲ್ಲಿ ತೊಡಗಿದ್ದಾರೆ. ಮೀಸಲಾತಿಗೆ ಈಗ ಇರುವ ಶೇ 50ರ ಮಿತಿಯನ್ನು ಶೇ 75ಕ್ಕೆ ಹೆಚ್ಚಿಸುವ ಭರವಸೆಯನ್ನು ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ನಾವು ಪ್ರಣಾಳಿಕೆಯಲ್ಲಿಯೇ ಘೋಷಿಸಿದ್ದೆವು. ಅದಕ್ಕೆ ಈಗಲೂ ಬದ್ಧ’ ಎಂದಿದ್ದಾರೆ.

ಆರೆಸ್ಸೆಸ್ ಮತ್ತು ಬಿಜೆಪಿಯು ಮೀಸಲಾತಿಯನ್ನು ವಿರೋಧಿಸುತ್ತಲೇ ಬಂದಿರುವುದನ್ನು ದೇಶದ ಜನ ಗಮನಿಸಿದ್ದಾರೆ. ಮಂಡಲ್ ವರದಿ, ಉನ್ನತ ಶಿಕ್ಷಣದಲ್ಲಿ ಮೀಸಲಾತಿಯನ್ನು ಕಾಂಗ್ರೆಸ್ ಸರ್ಕಾರ ಘೋಷಿಸಿದಾಗಲೂ ಬಿಜೆಪಿ ವಿರೋಧಿಸಿತ್ತು. ಕರ್ನಾಟಕದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ಜಾತಿಗಳಿಗೆ ಮೀಸಲಾತಿ ನೀಡಿದಾಗ ಬಿಜೆಪಿ ನಾಯಕರಾಗಿದ್ದ ರಾಮಾ ಜೋಯಿಸ್ ಅವರು ಅದನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು ಎಂದು ಅವರು ಹೇಳಿದ್ದಾರೆ.

ದಲಿತರ ಬಗ್ಗೆ ಬಾಯಿ ಮಾತಿನಲ್ಲಿ ಇನ್ನಿಲ್ಲದ ಕಾಳಜಿ ತೋರಿಸುತ್ತಿರುವ ಮೋದಿ ಅವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಹೆಚ್ಚಿಸಿರುವ ರಾಜ್ಯ ಸರ್ಕಾರ ಕಳಿಸಿರುವ ಪ್ರಸ್ತಾವವನ್ನು ಕೇಂದ್ರ ಸರ್ಕಾರ ತಿರಸ್ಕರಿಸಿರುವುದು ಏಕೆ ಎನ್ನುವುದನ್ನು ರಾಜ್ಯದ ಜನರಿಗೆ ತಿಳಿಸಬೇಕು ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಸುದ್ದಿ 2 ನಿಮಿಷ

ಕೃಷ್ಣಾ ನದಿಯ ಹನಿ ನೀರು ಕೊಡುವುದಿಲ್ಲ: ಎಂ.ಬಿ.ಪಾಟೀಲ

ವಿಜಯಪುರ: ‘ಕೃಷ್ಣಾ ನದಿ ನೀರನ್ನು ಕೋಲಾರ, ಚಿಕ್ಕಬಳ್ಳಾಪುರಕ್ಕೆ ಕೊಂಡೊಯ್ಯಲಾಗುವುದು’ ಎಂಬ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಹೇಳಿಕೆ ಜನರನ್ನು ದಾರಿ ತಪ್ಪಿಸುವಂತಿದೆ’ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಆಕ್ಷೇಪ ವ್ಯಕ್ತಪಡಿಸಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕೃಷ್ಣಾ ನದಿ ನೀರಿನ ವಿಷಯವಾಗಿ ದೇವೇಗೌಡರ ಹೇಳಿಕೆ ಸರಿಯಿಲ್ಲ, ಕೃಷ್ಣಾ ನದಿಯಿಂದ ಒಂದು ಹನಿ ನೀರು ತೆಗೆದುಕೊಂಡು ಹೋಗಲು ನಾವು ಬಿಡುವುದಿಲ್ಲ’ ಎಂದು ಹೇಳಿದರು.

ಕೃಷ್ಣಾ ನದಿ ನೀರು ಹಂಚಿಕೆ ಕುರಿತಂತೆ 2010ರಲ್ಲಿ ಪ್ರಕಟವಾಗಿರುವ ಬ್ರಿಜೇಶ್ ಕುಮಾರ್ ಅಂತಿಮ ತೀರ್ಪಿನ ಪ್ರಕಾರ ಕರ್ನಾಟಕ ಪಾಲಿನ 173 ಟಿಎಂಸಿ ಅಡಿ ನೀರಲ್ಲಿ ಯಾವೆಲ್ಲ ಯೋಜನೆಗಳಿಗೆ ಎಷ್ಟೆಷ್ಟು ಟಿಎಂಸಿ ಅಡಿ ನೀರು ಎಂಬುದು ಖಚಿತವಾಗಿ ತಿಳಿಸಲಾಗಿದೆ. ಇದರಲ್ಲಿ ಒಂದು ಟಿಎಂಸಿ ಅಡಿ ನೀರನ್ನು ಕೂಡ ಬೇರೆ ಉದ್ದೇಶಕ್ಕೆ ಬಳಸಲು ತೀರ್ಪಿನಲ್ಲೇ ಅವಕಾಶವಿಲ್ಲ’ ಎಂದರು.

‘ಹಿರಿಯರಾದ ದೇವೇಗೌಡರಿಗೆ ಈ ಎಲ್ಲ ವಿಷಯ ಗೊತ್ತಿದ್ದೂ ರಾಜಕೀಯ ಲಾಭಕ್ಕಾಗಿ ಮಾತನಾಡುತ್ತಿರುವುದು ತಪ್ಪು. ಒಂದು ವೇಳೆ ಅವರಿಗೆ ಗೊತ್ತಿಲ್ಲದಿದ್ದರೆ, ಮಾಹಿತಿ ತರಿಸಿ ತಿಳಿಸಲು ಬಯಸುತ್ತೇನೆ. ಅನಗತ್ಯ ಗೊಂದಲ ಸೃಷ್ಟಿ ಮಾಡಿ, ದಕ್ಷಿಣ ಕರ್ನಾಟಕ-ಉತ್ತರ ಕರ್ನಾಟಕದ ನಡುವೆ ಕಿಡಿ ಹಚ್ಚಲು ಮುಂದಾಗಬಾರದು’ ಎಂದು ಎಚ್ಚರಿಕೆ ನೀಡಿದರು.

ಸಂಸದ ಉಮೇಶ ಜಾಧವ ವಿರುದ್ಧ ಎಫ್‌ಐಆರ್ ದಾಖಲು

ಚಿತ್ತಾಪುರ (ಕಲಬುರಗಿ ಜಿಲ್ಲೆ): ಮಾದರಿ ನೀತಿ ಸಂಹಿತೆ, ಪ್ರಚಾರ ಸಭೆಯ ನಿಯಮ ಉಲ್ಲಂಘಿಸಿ ಕಲಬುರಗಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಉಮೇಶ ಜಾಧವ ಸನಾತನ ಧರ್ಮದ ಹೆಸರಿನಲ್ಲಿ ಮತಯಾಚನೆ ಮಾಡಿದ ಆರೋಪದಡಿ ವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತಕ್ಷೇತ್ರದ ಹಲಕಟ್ಟಾ ಗ್ರಾಮದ ವೀರಭದ್ರೇಶ್ವರ ಕಲ್ಯಾಣ ಮಂಟಪದಲ್ಲಿ ಏ.18ರಂದು ನಡೆದ ಪ್ರಚಾರ ಸಭೆಯಲ್ಲಿ ‘ಸನಾತನ ಧರ್ಮ ಕ್ಯಾನ್ಸರ್, ಏಡ್ಸ್, ಡೆಂಗಿ ಇದ್ದ ಹಾಗೆ. ಸನಾತನ ಧರ್ಮವನ್ನು ಬೀಜ ಸಮೇತ ಕಿತ್ತು ಹಾಕಬೇಕು’ ಎಂದು ಈ ಕ್ಷೇತ್ರದ ಮಂತ್ರಿ ಹೇಳಿಕೆ ನೀಡಿರುವುದಾಗಿ ಉಮೇಶ ಜಾಧವ ಹೇಳಿದ್ದಾರೆ’ ಎಂದು ಚುನಾವಣಾ ಎಫ್‌ಎಸ್‌ಟಿ ತಂಡದ ಅಧಿಕಾರಿ ಡಾ.ಶಂಕರ ಕಣ್ಣಿ ದೂರು ನೀಡಿದ್ದರು.

‘ಸನಾತನ ಧರ್ಮದ ಉಳಿವಿಗೆ, ನಮ್ಮ ಭವಿಷ್ಯಕ್ಕಾಗಿ, ದೇಶದ ಏಕತೆಗಾಗಿ, ನಮ್ಮ ಮುಂದಿನ ಪೀಳಿಗೆ, ಸುರಕ್ಷತೆ, ಮೋದಿಗಾಗಿ ಈ ಸಲ ಕಮಲದ ಹೂವಿಗೆ ಮತ ಹಾಕಿ ಗೆಲ್ಲಿಸಬೇಕು’ ಎಂದು ಜಾಧವ ಭಾಷಣದಲ್ಲಿ ಹೇಳಿರುವುದಾಗಿ ದೂರಿನಲ್ಲಿ ತಿಳಿಸಲಾಗಿದೆ.

ವಾಡಿ ಪೊಲೀಸ್ ಠಾಣೆಯಲ್ಲಿ ಕಲಂ 125, 123(3), ಆರ್‌ಪಿ ಕಾಯ್ದೆ ಕಲಂ 505(2) ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಕುಗ್ಗಿದ ಆತ್ಮವಿಶ್ವಾಸ, ಕಾಂಗ್ರೆಸ್‌ನಿಂದ ಹೆಚ್ಚು ಜಾಹೀರಾತು: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಪ್ರಧಾನಿ ನರೇಂದ್ರ ಮೋದಿ ರಾಜ್ಯದಲ್ಲಿ ಹೆಚ್ಚುಹೆಚ್ಚು ಪ್ರವಾಸ ಮಾಡು-ತ್ತಿದ್ದಂತೆಯೇ ಕಾಂಗ್ರೆಸ್‌ನವರಿಗೆ ಗೆಲುವಿನ ಆತ್ಮವಿಶ್ವಾಸ ಕುಗ್ಗುತ್ತಿದೆ. ಇದರಿಂದಾಗಿಯೇ ಹೆಚ್ಚಾಗಿ ಜಾಹೀರಾತುಗಳನ್ನು ಕೊಡುತ್ತಿದ್ದಾರೆ. ಪ್ರಧಾನಿ ಜನಪ್ರಿಯತೆ ಎದುರು ರಾಜ್ಯದಲ್ಲಿ ಕಾಂಗ್ರೆಸ್ ಮಂಕಾಗಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

‘ಪಿತ್ರಾರ್ಜಿತ ಆಸ್ತಿ ತೆರಿಗೆ ಕುರಿತು ಭಾರತೀಯ ಸಾಗರೋತ್ತರ ಕಾಂಗ್ರೆಸ್ ಅಧ್ಯಕ್ಷ ಸ್ಯಾಮ್ ಪಿತ್ರೋಡಾ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ವಿಜಯೇಂದ್ರ, ‘ಅಲ್ಪಸಂಖ್ಯಾತರನ್ನು ಓಲೈಸುವ ರಾಜಕಾರಣದ ಮುಂದಿನ ಹಂತವಾಗಿ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಆಸ್ತಿಯ ಸಮಾನ ಹಂಚಿಕೆಯ ಉದ್ದೇಶ ಇತ್ತು. ಅಲ್ಪಸಂಖ್ಯಾತರನ್ನು ಖುಷಿ ಪಡಿಸಲು ರಾಹುಲ್‌ಗಾಂಧಿ, ಕಾಂಗ್ರೆಸ್ ಮುಖಂಡರ ಮನಸ್ಸಿನಲ್ಲಿ ಇರುವುದನ್ನು ಸ್ಯಾಮ್ ಪಿತ್ರೋಡಾ ಮೂಲಕ ಹೇಳಿ-ಸುತ್ತಿದ್ದಾರೆ’ ಎಂದು ಸುದ್ದಿಗಾರರೆದುರು ದೂರಿದರು.

‘ಈ ವಿಚಾರವಾಗಿ ಚರ್ಚೆಗಳು ನಡೆಯುತ್ತಿದ್ದು, ಮತದಾರರು ಇದನ್ನು ಗಮನಿಸುತ್ತಿದ್ದಾರೆ. ಹಿಂದುಳಿದ ವರ್ಗಕ್ಕೆ ಅನ್ಯಾಯ ಮಾಡಬೇಕು ಎನ್ನುವ ಪಿತೂರಿಯಿಂದ ಮುಂದಿನ ದಿನಗಳಲ್ಲಿ ಅರಾಜಕತೆ ಸೃಷ್ಟಿಯಾಗಬಹುದು. ಬಿಜೆಪಿ ಅಲ್ಪಸಂಖ್ಯಾತರ ವಿರೋಧಿಯಲ್ಲ. ಆದರೆ, ಅಲ್ಪಸಂಖ್ಯಾತರನ್ನು ಖುಷಿಪಡಿಸಲು ಕಾಂಗ್ರೆಸ್ ಇತರೆ ಹಿಂದುಳಿದ ವರ್ಗದವರಿಗೆ ಅನ್ಯಾಯ ಮಾಡುವುದು ಎಷ್ಟು ಸರಿ?’ ಎಂದು ಅವರು ಪ್ರಶ್ನಿಸಿದರು.

‘ಗ್ಯಾರಂಟಿ ಕಾಂಗ್ರೆಸ್ ಕೈಹಿಡಿಯುವುದಿಲ್ಲ’

ಎನ್‌ಡಿಎ ಮೈತ್ರಿಕೂಟ ಕ್ಲೀನ್‌ಸ್ವೀಪ್ ಮಾಡಲಿದೆ: ಕೆ.ಅಣ್ಣಾಮಲೈ ವಿಶ್ವಾಸ

ಪ್ರಜಾವಾಣಿ ವಾರ್ತೆ

ಅಣ್ಣಾಮಲೈ

ಶಿವಮೊಗ್ಗ: ‘ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಿರುವುದು ಗ್ಯಾರಂಟಿ ಭರವಸೆ-ಯಿಂದಲ್ಲ. ಅದಕ್ಕೆ ಬಿಜೆಪಿ ಆಡಳಿತ ವಿರೋಧಿ ಅಲೆಯೂ ಸೇರಿದಂತೆ ಬೇರೆ ಬೇರೆ ಕಾರಣಗಳಿದ್ದವು’ ಎಂದು ಬಿಜೆಪಿಯ ತಮಿಳುನಾಡು ರಾಜ್ಯ ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಾಗೆ ಕೂರುವುದಕ್ಕೂ, ರೆಂಬೆ ಮುರಿಯುವುದಕ್ಕೂ ಸಂಬಂಧವಿಲ್ಲ. ವಿಧಾನಸಭೆ ಚುನಾವಣೆಯಲ್ಲಿ ಗೆಲ್ಲಲು ಗ್ಯಾರಂಟಿ ಸಹಾಯ ಮಾಡಿದೆ ಎಂದು ಕಾಂಗ್ರೆಸ್‌ನವರು ಭಾವಿಸಿದ್ದಾರೆ. ಈ ಬಾರಿ ಲೋಕಸಭೆ ಚುನಾವಣೆಯಲ್ಲಿ-ಯೂ ಗ್ಯಾರಂಟಿ ಅಲೆಯನ್ನೇ ಅವರು ನೆಚ್ಚಿಕೊಂಡಿದ್ದಾರೆ. ಆದರೆ ಅದು ಕೆಲಸ ಮಾಡುವುದಿಲ್ಲ’ ಎಂದರು.

ಸಿದ್ದರಾಮಯ್ಯ ಕೈಲಿಲ್ಲ ಪವರ್ ಸೆಂಟರ್: ‘ರಾಜ್ಯದಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೈಯಲ್ಲಿ ಪವರ್ ಸೆಂಟರ್ ಇಲ್ಲ. ಭವಿಷ್ಯದ ಸಿಎಂ ಡಿ.ಕೆ. ಶಿವಕುಮಾರ ಮತ್ತು ಸಿ.ಎಂ. ಹುದ್ದೆ ಆಕಾಂಕ್ಷಿಗಳಾಗಿ ಕಾಯುತ್ತಿರುವ ಜಿ. ಪರಮೇಶ್ವರ ಮತ್ತು ಸತೀಶ್ ಜಾರಕಿಹೊಳಿ ಅವರ ಬಳಿ ಇದೆ. ಇವರ ನಡುವೆ ಒಳಗೊಳಗೆ ಪೈಪೋಟಿ ನಡೆಯುತ್ತಿದೆ. ಈ ಕಿತ್ತಾಟದಿಂದಾಗಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ’ ಎಂದು ಆರೋಪಿಸಿದರು.

‘ಸಹಜವಾಗಿಯೇ ಮುಖ್ಯಮಂತ್ರಿ ಆದವರು ಮುಂದಾಳತ್ವ ವಹಿಸಿಕೊಂಡು ಆಡಳಿತ ನಡೆಸಬೇಕು. ಆದರೆ, ರಾಜ್ಯದಲ್ಲಿ ಮಾತ್ರ ಹೀಗಾಗುತ್ತಿಲ್ಲ. ಸಿಎಂ ಹುದ್ದೆಯ ಆಕಾಂಕ್ಷಿಗಳು ಸಾಕಷ್ಟು ಜನ ಇರುವುದರಿಂದ ಆಡಳಿತದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿದೆ. ಜನರ ನೆಮ್ಮದಿಗೆ ಭಂಗ ಉಂಟಾಗಿದೆ ಎಂದು ಅಣ್ಣಾಮಲೈ ಹೇಳಿದರು.

ದಕ್ಷಿಣ ಭಾರತದಲ್ಲಿ ಬಿಜೆಪಿಗೆ ಹೆಚ್ಚು ಸ್ಥಾನ: ಈ ಬಾರಿ ಬಿಜೆಪಿಗೆ ಲೋಕಸಭೆ ಚುನಾವಣೆಯಲ್ಲಿ ದಕ್ಷಿಣ ಭಾರತದಲ್ಲಿ ನಿರೀಕ್ಷೆಗಿಂತಲೂ ಅಧಿಕ ಸ್ಥಾನಗಳು ಸಿಗಲಿವೆ ಎಂದು ಅವರು ಹೇಳಿದರು.

‘ಕರ್ನಾಟಕದಲ್ಲಿ ಎನ್‌ಡಿಎ ಮೈತ್ರಿಕೂಟ ಕ್ಲೀನ್‌ಸ್ವೀಪ್ ಮಾಡಲಿದೆ. ಕರುನಾಡಿನ ಜನತೆ ಕಣ್ಣುಮುಚ್ಚಿ ಮೋದಿ ಪರ ಮತ ಹಾಕಲಿದ್ದಾರೆ. ತಮಿಳುನಾಡಿನಲ್ಲಿ 11ಕ್ಕೂ ಅಧಿಕ ಸ್ಥಾನ, ಗೋವಾದಲ್ಲಿ 2, ಕೇರಳದಲ್ಲಿ ಖಾತೆ ತೆರೆಯಲಿದ್ದೇವೆ. ಆಂಧ್ರ ಮತ್ತು ತೆಲಂಗಾಣದಲ್ಲಿಯೂ ಬಿಜೆಪಿ ಹೆಚ್ಚು ಸ್ಥಾನ ಗೆಲ್ಲಲಿದೆ’ ಎಂದರು.

ಲಿಂಗಾಯತ, ಮರಾಠ ಮುಖಂಡರೊಂದಿಗೆ ಯಡಿಯೂರಪ್ಪ ಗೋಪ್ಯ ಸಭೆ

ಬೀದರ್: ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು ಗುರುವಾರ ಜಿಲ್ಲೆಯಲ್ಲಿ ದಿನವಿಡೀ ಬಿರುಸಿನ ಪ್ರಚಾರ ಕೈಗೊಂಡರು. ಲಿಂಗಾಯತ, ಮರಾಠ ಮುಖಂಡರೊಂದಿಗೆ ಪ್ರತ್ಯೇಕವಾಗಿ ಗೋಪ್ಯ ಸಭೆ ನಡೆಸಿದರು.

ಇತ್ತೀಚೆಗೆ ನಿಧನರಾದ ಮಾಜಿ ಶಾಸಕ ರಮೇಶಕುಮಾರ ಪಾಂಡೆ ಅವರ ಮನೆಗೆ ಭೇಟಿ ಕೊಟ್ಟು, ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

ಬಳಿಕ ಜಿಲ್ಲೆಯ ಔರಾದ್‌ನಲ್ಲಿ ಪ್ರಚಾರ ಸಭೆ ನಡೆಸಿದ ಅವರು, ‘ದೇಶಕ್ಕಾಗಿ ದಿನದ 18 ಗಂಟೆಗಳ ಕಾಲ ಕೆಲಸ ಮಾಡುವ ಪ್ರಧಾನಿ ನರೇಂದ್ರ ಮೋದಿ ಅವರಂತಹ ಬಲಿಷ್ಠ ನಾಯಕ ಕಾಂಗ್ರೆಸ್‌ನಲ್ಲಿ ಸಿಗುವುದಿಲ್ಲ. ಕಾಂಗ್ರೆಸ್‌ನಲ್ಲಿ ಪ್ರಧಾನಿ ಅಭ್ಯರ್ಥಿ ಯಾರು ಎಂಬುದು ಅವರಲ್ಲೇ ಗೊಂದಲ ಇದೆ. ಹೀಗಾಗಿ ಕಾಂಗ್ರೆಸ್‌ನವರು ಏನೇ ಅಪಪ್ರಚಾರ ಮಾಡಿದರೂ ಮೋದಿ ಮತ್ತೊಮ್ಮೆ ಪ್ರಧಾನಿಯಾಗುವುದು ಖಚಿತ’ ಎಂದರು.

ಔರಾದ್‌ನಿಂದ ಬೀದರ್‌ಗೆ ಮರಳಿದ ಅವರು ಜಿಲ್ಲೆಯ ಮಠಾಧೀಶರು, ಲಿಂಗಾಯತ ಹಾಗೂ ಮರಾಠ ಸಮಾಜದ ಮುಖಂಡರೊಂದಿಗೆ ಪ್ರತ್ಯೇಕವಾಗಿ ಗೌಪ್ಯ ಸಭೆ ನಡೆಸಿದರು. ಮಾಧ್ಯಮದವರಿಗೆ ಪ್ರವೇಶ ನಿರಾಕರಿಸಿದರು. ಔರಾದ್ ಶಾಸಕ ಪ್ರಭು ಚವಾಣ್ ಅವರು ಪ್ರಚಾರದಿಂದ ದೂರ ಉಳಿದಿರುವುದರ ಕುರಿತು ಮಾಧ್ಯಮದವರು ಯಡಿಯೂರಪ್ಪ ಅವರನ್ನು ಪ್ರಶ್ನಿಸಿದಾಗ, ಸಿಟ್ಟಾಗಿ ಏನೂ ಮಾತನಾಡದೇ ನಿರ್ಗಮಿಸಿದರು.

ರಾಜ್ಯದಲ್ಲಿ ಬಿಸಿ ಗಾಳಿ ಹೆಚ್ಚಳ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಮುಂದಿನ ನಾಲ್ಕು ದಿನಗಳು ಬಿಸಿ ಗಾಳಿ ಹೆಚ್ಚಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು 12 ಜಿಲ್ಲೆಗಳಿಗೆ ಶಾಖಾಘಾತದ ಮುನ್ಸೂಚನೆ ನೀಡಿದೆ.

ಬೆಳಗಾವಿ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಯ ಒಂದೆರಡು ಕಡೆ ಶುಕ್ರವಾರ ಮಳೆಯಾಗುವ ಸಾಧ್ಯತೆಯಿದೆ. ಉಳಿದೆಡೆ ಒಣಹವೆ ಇರಲಿದೆ. ಬಾಗಲಕೋಟೆ, ವಿಜಯಪುರ, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ತುಮಕೂರು, ಮಂಡ್ಯ, ಗದಗ, ದಾವಣಗೆರೆ ಹಾಗೂ ಚಿತ್ರದುರ್ಗದಲ್ಲಿ ಬಿಸಿ ಗಾಳಿಯ ಅಲೆ ಹೆಚ್ಚಾಗುವ ಸಂಭವವಿದೆ. ಇದೇ 29ರವರೆಗೂ ರಾಜ್ಯದ ಬಹುತೇಕ ಕಡೆ ಒಣಹವೆ ಮುಂದುವರಿಯುವ ಸಾಧ್ಯತೆಯಿದ್ದು, ಏ.30ರಿಂದ ರಾಜ್ಯದ ವಿವಿಧೆಡೆ ಮಳೆಯಾಗಬಹುದು ಎಂದು ಇಲಾಖೆ ತಿಳಿಸಿದೆ.

ಮುಂದಿನ 5 ದಿನಗಳು ರಾಜ್ಯದಲ್ಲಿ ಗರಿಷ್ಠ ತಾಪಮಾನ 2ರಿಂದ 3 ಡಿಗ್ರಿ ಸೆಲ್ಸಿಯಸ್ ಏರಿಕೆಯಾಗುವ ಸಂಭವವಿದೆ. ಇದೇ 29ರವರೆಗೆ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬಿಸಿ ವಾತಾವರಣವಿರುವ ಸಾಧ್ಯತೆಯಿದೆ ಎಂದು ಇಲಾಖೆ ಹೇಳಿದೆ.

ಗುರುವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ರಾಜ್ಯದಲ್ಲಿ ರಾಯಚೂರಿನಲ್ಲಿ ಗರಿಷ್ಠ (44.5 ಡಿಗ್ರಿ ಸೆಲ್ಸಿಯಸ್) ಉಷ್ಣಾಂಶ ವರದಿಯಾಗಿದೆ. ಕಲಬುರಗಿ, ರಾಯಚೂರು, ಕೊಪ್ಪಳ ಸೇರಿ 14 ಜಿಲ್ಲೆಗಳಲ್ಲಿ ಗರಿಷ್ಠ ಉಷ್ಣಾಂಶ 40 ಡಿಗ್ರಿ ಸೆಲ್ಸಿಯಸ್ ದಾಟಿದೆ. ಬೆಂಗಳೂರಿನಲ್ಲಿಯೂ ಗರಿಷ್ಠ ತಾಪಮಾನ ಹೆಚ್ಚಳವಾಗಿದ್ದು, 37.6 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ.

ಜೆಇಇ: ಬೆಂಗಳೂರಿನ ಮೂವರು ಮೊದಲಿಗರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಪ್ರಕಟಿಸಿದ ಜಂಟಿ ಪ್ರವೇಶ ಪರೀಕ್ಷೆಯಲ್ಲಿ (ಜೆಇಇ ಮುಖ್ಯ-2) ಬೆಂಗಳೂರಿನ ಮೂವರು ವಿದ್ಯಾರ್ಥಿಗಳಾದ ಅಮೋಘ್ ಅಗರ್‌ವಾಲ್, ಸಾನ್ವಿ ಜೈನ್, ಸಾಯಿ ನವನೀತ್ ಮುಕುಂದ್ 100 ಪರ್ಸೆಂಟೈಲ್ ಗಳಿಸುವ ಮೂಲಕ ರಾಜ್ಯಕ್ಕೆ ಅಗ್ರಸ್ಥಾನ ಪಡೆದಿದ್ದಾರೆ.

ಎಚ್‌ಎಸ್‌ಆರ್ ಲೇಔಟ್‌ನ ನಾರಾಯಣ-ಕೋ-ಕಾವೇರಿ ಭವನ ಕಾಲೇಜಿನ ವಿದ್ಯಾರ್ಥಿಯಾದ ಅಮೋಘ್ ಅಗರ್‌ವಾಲ್ ಮೊದಲ ಮುಖ್ಯ ಪರೀಕ್ಷೆಯಲ್ಲೂ ಶೇ 100 ಪರ್ಸೆಂಟೈಲ್ ಗಳಿಸುವ ಮೂಲಕ ರಾಜ್ಯಕ್ಕೆ ಅಗ್ರಸ್ಥಾನ ಪಡೆದಿದ್ದರು. ಎರಡನೇ ಪ್ರಯತ್ನದಲ್ಲೂ ಸಾಧನೆ ಸರಿಗಟ್ಟಿದ್ದಾರೆ.

ಈ ಮೂವರು ಅಂಕಗಳನ್ನು ಸುಧಾರಿಸಲು ಜೆಇಎನಲ್ಲಿ ಎರಡನೇ ಪ್ರಯತ್ನ ನಡೆಸಿದ್ದರು. ರಾಷ್ಟ್ರೀಯ ಮಟ್ಟದಲ್ಲಿ 100 ಪರ್ಸೆಂಟೈಲ್ ಗಳಿಸಿದ ಇಬ್ಬರು ವಿದ್ಯಾರ್ಥಿನಿಯರಲ್ಲಿ ಸಾನ್ವಿ ಸಹ ಒಬ್ಬರು. ಪ್ರಸ್ತುತ ಮೇ 5ರಂದು ನಡೆಯಲಿರುವ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಗೆ (ನೀಟ್) ಮತ್ತು ಜೆಇಇ ಮುಂದುವರಿದ ಪರೀಕ್ಷೆಗೆ ಸಿದ್ಧತೆ ನಡೆಸಿದ್ದಾರೆ.

ಸಾಯಿ ನವನೀತ್ ಮುಕುಂದ್ ವಾಗ್ದೇವಿ ವಿಲಾಸ್ ಶಾಲೆ ವಿದ್ಯಾರ್ಥಿ. ಜಯನಗರದ ಅಲೆನ್ ಶಾಖೆಯಲ್ಲಿ ತರಬೇತಿ ಪಡೆದಿದ್ದರು. ಮೊದಲ ಪ್ರಯತ್ನದಲ್ಲಿ 99.98 ಪರ್ಸೆಂಟೈಲ್ ಗಳಿಸಿದ್ದರು. ಸಾಯಿ ನವನೀತ್ ಮುಕುಂದ್, ಐಐಟಿ ಬಾಂಬೆಗೆ ಸೇರುವ ಗುರಿ ಇಟ್ಟುಕೊಂಡಿದ್ದಾರೆ.

‘ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜೀಸ್ (ಐಐಟಿ) ಸೇರುವ ಗುರಿ ಹೊಂದಿದ್ದು, ಪ್ರಸ್ತುತ ಜೆಇಇ ಅಡ್ವಾನ್ಸ್‌ಗೆ ಸಿದ್ಧತೆ ನಡೆಸಿದ್ದೇನೆ. ಅಣಕು ಪರೀಕ್ಷೆಗಳ ಮೇಲೆ ಹೆಚ್ಚು ಗಮನ ಹರಿಸಿದ್ದು ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಸಹಕಾರಿಯಾಯಿತು. ಭವಿಷ್ಯದಲ್ಲಿ ಉದ್ಯಮಿಯಾಗುವ ಕನಸಿದೆ’ ಎಂದು ಅಮೋಘ್ ಪ್ರತಿಕ್ರಿಯಿಸಿದರು.

ಈ ವರ್ಷ ಇಬ್ಬರು ವಿದ್ಯಾರ್ಥಿನಿಯರೂ ಸೇರಿದಂತೆ ಒಟ್ಟು 56 ಅಭ್ಯರ್ಥಿಗಳು ರಾಷ್ಟ್ರಮಟ್ಟದಲ್ಲಿ 100 ಪರ್ಸೆಂಟೈಲ್ ಗಳಿಸಿದ್ದಾರೆ. ಜೆಇಇ–ಮೇನ್ ಪರೀಕ್ಷೆಯನ್ನು ಕನ್ನಡ ಸೇರಿದಂತೆ 13 ಭಾಷೆಗಳಲ್ಲಿ ನಡೆಸಲಾಗಿತ್ತು. ವಿದೇಶಗಳಲ್ಲಿ ಸಹ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ಒಟ್ಟು 10 ಲಕ್ಷಕ್ಕೂ ಅಧಿಕ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು.

ಪೆನ್‌ಡ್ರೈವ್: ಎಸ್‌ಐಟಿ ರಚನೆಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಾಸನದ ಪೆನ್‌ಡ್ರೈವ್‌ವೊಂದಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಮಾಧ್ಯಮಗಳಲ್ಲಿ ಸುದ್ದಿ ಹರಿದಾಡುತ್ತಿದ್ದು, ಇದರಿಂದ ಮಹಿಳೆಯರ ಘನತೆಗೆ ಧಕ್ಕೆ ಉಂಟಾಗುತ್ತಿದೆ. ಈ ಸಂಬಂಧ ತನಿಖೆ ನಡೆಸಲು ಎಸ್‌ಐಟಿ (ವಿಶೇಷ ತನಿಖಾ ತಂಡ) ರಚಿಸಬೇಕು’ ಎಂದು ಕೋರಿ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌದರಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಪೊಲೀಸ್ ಮಹಾನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

‘ಮಹಿಳೆಯರನ್ನು ದುರುಪಯೋಗಪಡಿಸಿಕೊಂಡು ಲೈಂಗಿಕವಾಗಿ ಬಳಸಿಕೊಂಡು ವಿಡಿಯೊ ಚಿತ್ರೀಕರಣ ಮಾಡಿಕೊಳ್ಳಲಾಗಿದೆ. ಮಹಿಳೆಯರ ಮೇಲೆ ದೌರ್ಜನ್ಯ ನಡೆದಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಜೊತೆಗೆ, ದೌರ್ಜನ್ಯದ ವಿಡಿಯೊಗಳು ಹಲವೆಡೆ ಹರಿದಾಡುತ್ತಿರುವ ಬಗ್ಗೆ ಮಾಧ್ಯಮಗಳಲ್ಲಿ ಸುದ್ದಿ ಪ್ರಕಟವಾಗುತ್ತಿವೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಹಲವು ಸಂಘಟನೆಗಳು ಆಯೋಗಕ್ಕೆ ಮನವಿಗಳು ಬಂದಿವೆ’ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

‘ದೃಶ್ಯಗಳನ್ನು ಚಿತ್ರೀಕರಿಸಿರುವ ಮತ್ತು ಅದನ್ನು ಸಾರ್ವಜನಿಕಗೊಳಿಸಿದ ವ್ಯಕ್ತಿಗಳನ್ನು ವಿಚಾರಣೆಗೆ ಒಳಪಡಿಸಬೇಕಿದೆ. ಮಹಿಳೆಯರ ಘನತೆಗೆ ಧಕ್ಕೆ ತಂದವರನ್ನು ಪತ್ತೆ ಮಾಡಿ ಕಾನೂನು ಕ್ರಮ ಕೈಗೊಳ್ಳಬೇಕಿದೆ. ಹೀಗಾಗಿ, ಎಸ್‌ಐಟಿ ತನಿಖೆ ಅಗತ್ಯವಿದೆ’ ಎಂಬುದಾಗಿಯೂ ಪತ್ರದಲ್ಲಿ ತಿಳಿಸಲಾಗಿದೆ.

ಆರೋಪಿ ಬಂಧನಕ್ಕೆ ಮಹಿಳಾ ಸಾಂಸ್ಕೃತಿಕ ಸಂಘಟನೆ ಆಗ್ರಹ

ಬೆಂಗಳೂರು: ಹಾಸನದಲ್ಲಿ ಪ್ರಭಾವಿ ರಾಜಕಾರಣಿ ಕುಟುಂಬದ ಸದಸ್ಯರೊಬ್ಬರು ಭಾಗಿಯಾಗಿದ್ದಾರೆ ಎನ್ನಲಾದ ಲೈಂಗಿಕ ಹಗರಣದ ಪ್ರಕರಣದ ಆರೋಪಿಯನ್ನು ಬಂಧಿಸುವಂತೆ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಆಗ್ರಹಿಸಿದೆ.

ಅಮಾಯಕ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ನಡೆಸಿದ ಈ ಪ್ರಕರಣ ಆಘಾತಕಾರಿಯಾಗಿದೆ. ಘಟನೆಯ ಕುರಿತು ರಾಜ್ಯ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು. ಅಮಾನುಷ ಲೈಂಗಿಕ ದೌರ್ಜನ್ಯದಿಂದ ಸಂತ್ರಸ್ತರಾದ ಹೆಣ್ಣುಮಕ್ಕಳಿಗೆ ರಕ್ಷಣೆ ಹಾಗೂ ಆರೈಕೆ ತೀವ್ರ ಜರೂರಾಗಿದೆ. ಸರ್ಕಾರವು ಸಂತ್ರಸ್ತ ಮಹಿಳೆಯರಿಗೆ ರಕ್ಷಣೆ ಹಾಗೂ ವೈದ್ಯಕೀಯ ಸೌಲಭ್ಯ ಒದಗಿಸಬೇಕೆಂದು ಸಂಘಟನೆಯ ರಾಜ್ಯ ಕಾರ್ಯದರ್ಶಿ ಎಸ್. ಶೋಭಾ ಒತ್ತಾಯಿಸಿದ್ದಾರೆ.

ವರ್ಗಾವಣೆ

ಬೆಂಗಳೂರು: ರಾಜ್ಯದ ವಿವಿಧ 138 ಸಿವಿಲ್, 166 ಹಿರಿಯ ಸಿವಿಲ್, 6 ಜಿಲ್ಲಾ ಮತ್ತು ಹಿರಿಯ ಸಿವಿಲ್, 112 ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರನ್ನು ವರ್ಗಾವಣೆ ಮಾಡಲಾಗಿದೆ.

ಈ ಕುರಿತ ಅಧಿಸೂಚನೆಯನ್ನು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಕೆ.ಎಸ್.ಭರತ್ ಕುಮಾರ್ ಗುರುವಾರ ಬಿಡುಗಡೆ ಮಾಡಿದ್ದಾರೆ. ಅಧಿಸೂಚನೆಯ ಅನುಸಾರ 62 ಸಿವಿಲ್ ನ್ಯಾಯಾಧೀಶರಿಗೆ ಜಿಲ್ಲಾ ನ್ಯಾಯಾಧೀಶರಾಗಿ ಬಡ್ತಿ ನೀಡಲಾಗಿದೆ.

ಯಕ್ಷರಂಗದಿಂದ ಮರೆಯಾದ ಅನರ್ಘ್ಯ ರತ್ನ ಧಾರೇಶ್ವರ

• ನೀಲ್ಕೋಡು ಶಂಕರ ಹೆಗಡೆ

ಸುಬ್ರಹ್ಮಣ್ಯ ಧಾರೇಶ್ವರ

ನುಡಿ ನಮನ

28 ವರ್ಷಗಳ ಕಾಲ ಪೆರ್ಡೂರು ಮೇಳದ ಪ್ರಧಾನ ಭಾಗವತರಾಗಿ, ಕೊನೆಯವರೆಗೂ ಯಕ್ಷಗಾನದ-ಲ್ಲಿ ಬೇಡಿಕೆ ಹಾಗೂ ಬಹು ಮನ್ನಣೆ ಉಳಿಸಿಕೊಂಡ ಸ್ಟಾರ್ ಭಾಗವತರು ಸುಬ್ರಹ್ಮಣ್ಯ ಧಾರೇಶ್ವರರು. ಹೊಸ ಪ್ರಸಂಗಗಳನ್ನು ಗೆಲ್ಲಿಸುವಲ್ಲಿ ಧಾರೇಶ್ವರರ ಶ್ರಮ, ಕೊಡುಗೆ ಹಾಗೂ ಸೂತ್ರಧಾರಿಕೆ ಅಪಾರ.

ಯಕ್ಷಗಾನದಲ್ಲಿ ನಾವಡರು ವಿಜೃಂಭಿಸುತ್ತಿದ್ದ ಕಾಲದಲ್ಲಿಯೇ ಪ್ರಧಾನ ಭಾಗವತರು, ಯೋಗ್ಯ ಭಾಗವತರು ಎಂದು ಕರೆಸಿಕೊಂಡಿದ್ದರು. ರಂಗದಲ್ಲಿ ಕಲಾವಿದರು ಒಂದು ಶಬ್ದ ತಪ್ಪಿದರೂ ನಿಷ್ಠುರವಾಗಿ ತಿದ್ದಿ ಹೇಳುತ್ತಿದ್ದ ಧಾರೇಶ್ವರರಿಗೆ ನೂರಾರು ಕಲಾವಿದರನ್ನು ಬೆಳೆಸಿದ ಹಿರಿಮೆ-ಗರಿಮೆ ಸಲ್ಲುತ್ತದೆ.

ಹಾಸ್ಯಪ್ರಜ್ಞೆ ಹೆಚ್ಚಾಗಿತ್ತಾದರೂ ಪ್ರಸಂಗಗಳ ಗೆಲ್ಲಿಸುವಲ್ಲಿ ಕಡು ನಿಷ್ಠುರವಾದಿ. ಯಕ್ಷರಂಗದಲ್ಲಿ ಕ್ಯಾಸೆಟ್‌ನ ಹೊಸ ಶಕೆ ಆರಂಭಿಸಿದಾಗ ಕಾಳಿದಾಸ, ಕಾರ್ತವೀರ್ಯದಂತಹ ಪ್ರಸಂಗಗಳ ಕ್ಯಾಸೆಟ್‌ಗಳು ಮಾರುಕಟ್ಟೆಯಲ್ಲಿ ದಾಖಲೆಯ ಮಾರಾಟ ಕಂಡಿದ್ದವು.

ಯಕ್ಷಗಾನದ ಬಗ್ಗೆ ಅವರಿಗೆ ಬದ್ಧತೆ ಎಷ್ಟಿತ್ತೆಂದರೆ ಬೇಡಿಕೆಯ ಉತ್ತುಂಗದಲ್ಲಿ-ದ್ದಾಗಲೂ ಹೊರಗಿನ ಕಾರ್ಯಕ್ರಮಗಳಿಗೆ ಹೋಗುತ್ತಿರಲಿಲ್ಲ. ಡೇರೆ ಮೇಳದಲ್ಲಿ-ದ್ದುಕೊಂಡು ಹೊರಗಿನ ಕಾರ್ಯಕ್ರಮಕ್ಕೆ ಕಲಾವಿದರು ಹೋದರೆ ಮೇಳಕ್ಕೆ ಬೆಲೆ ಕಡಿಮೆಯಾಗುತ್ತದೆ ಎಂಬುದು ಅವರ ನಿಲುವಾಗಿತ್ತು. ಮೇಳದ ಬಗ್ಗೆ ಅವರಿಗಿದ್ದ ಬದ್ಧತೆಯ ಕಾರಣಕ್ಕೆ ಬಹಳಷ್ಟು ಕಲಾವಿದರ ನಿಷ್ಠುರತೆ ಕಟ್ಟಿಕೊಂಡಿದ್ದರು.

ಪೆರ್ಡೂರು ಮೇಳ ಸ್ಥಾಪನೆಯಲ್ಲಿ ದುರ್ಗಪ್ಪ ಗುಡಿಗಾರ, ಗಜಾನನ ಭಂಡಾರಿ ಅವರಷ್ಟೇ ಶ್ರಮ ಧಾರೇಶ್ವರರದ್ದೂ ಇದೆ. ಪೆರ್ಡೂರಿನ ಅನಂತ ಪದ್ಮನಾಭನ ಕೃಪೆಯೋ ಏನೋ 28 ವರ್ಷಗಳ ಕಾಲ ನಿರಂತರವಾಗಿ ಪೆರ್ಡೂರು ಮೇಳದಲ್ಲಿ ವಿಜೃಂಭಿಸಿದರು. ಪ್ರತಿವರ್ಷ ಹೊಸ ಪ್ರಸಂಗಗಳಲ್ಲಿ ಹೊಸತನ ತುಂಬಿ, ಹೊಸ ಪದ್ಯಗಳನ್ನು ಸೇರಿಸಿ ಪ್ರಸಂಗವನ್ನು ಗೆಲ್ಲಿಸುತ್ತಿದ್ದರು. ಪ್ರಸಂಗ ಮುಗಿದ ಮೇಲೆ ಪ್ರೇಕ್ಷಕರು ಹಾಡನ್ನು ಗುನುಗುವಂತೆ ಮಾಡುತ್ತಿದ್ದ ಸಾಮರ್ಥ್ಯ, ಕಲಾವಿದನ ನಾಡಿಮಿಡಿತ ಅರಿತು ಪದ್ಯ ಹೇಳುವ ಶಕ್ತಿ ಅವರಲ್ಲಿತ್ತು.

ರಂಗಭೂಮಿಯ ಪರಿಚಯವೂ ಇದ್ದ ಕಾರಣ ಯಕ್ಷಗಾನದಲ್ಲಿ ಹೊಸ ಪ್ರಸಂಗಗಳು ಬಂದಾಗ ರಾಗಬಳಕೆ, ರಂಗಸ್ಥಳದಲ್ಲಿ ಸಿನಿಮೀಯ ತಂತ್ರಗಾರಿಕೆ ಬಳಕೆ, ಹೊಸ ಹೊಸ ರಂಗ ತಂತ್ರಗಳ ಅನುಷ್ಠಾನದಿಂದ ಪ್ರೇಕ್ಷಕರನ್ನು ಸೆಳೆಯುತ್ತಿದ್ದರು. ಎಲೆಕ್ಟ್ರಿಷಿಯನ್ ವೃತ್ತಿಯಲ್ಲೂ ನೈಪುಣ್ಯ ಇದ್ದಿದ್ದರಿಂದ ರಂಗದ ಮೇಲೆ ಮೈಕ್ ಬಳಕೆ, ಎಕೋ ತಂತ್ರಜ್ಞಾನ ಬಳಕೆಯಲ್ಲಿ ನಿಷ್ಣಾತರಾಗಿದ್ದರು.

ಅಧ್ಯಯನಶೀಲತೆ, ಚಿಂತನೆ, ಯೋಚನೆ, ಯೋಜನೆ ಹಾಗೂ ಕೌಶಲವನ್ನು ರಂಗಸ್ಥಳದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿದ್ದ ಶ್ರೇಷ್ಠ ಕಲಾವಿದರಾಗಿದ್ದರು. ಧಾರೇಶ್ವರರ ಅಗಲಿಕೆಯ ನಿರ್ವಾತವನ್ನು ತುಂಬಲು ಯಾರಿಂದಲೂ ಸಾಧ್ಯವಿಲ್ಲ. ಚಿಟ್ಟಾಣಿ, ಕೆರೆಮನೆ ಶಂಭು ಹೆಗಡೆ, ಜಲವಳ್ಳಿ ಅವರಂತಹ ಅನರ್ಘ್ಯ ರತ್ನಗಳ ಜತೆಗೆ ಧಾರೇಶ್ವರ ಎಂಬ ರತ್ನವನ್ನೂ ಕಳೆದುಕೊಂಡಿದ್ದೇವೆ.

ಪೆರ್ಡೂರು ಮೇಳದ ಆಟದ ಓಟವೇ ಬೇರೆ, ಪೆರ್ಡೂರು ಮೇಳಕ್ಕೆ, ಧಾರೇಶ್ವರರ ಭಾಗವತಿಕೆಗೆ, ಅವರ ನಿರ್ದೇಶನಕ್ಕೆ ಹೊಸ ಪ್ರೇಕ್ಷಕರು ಹುಟ್ಟಿಕೊಂಡಿದ್ದರು. ಸಾಗರಕ್ಕೆ ಸಾಗರವೇ ಸಾಟಿಯಾದಂತೆ, ಗಗನಕ್ಕೆ ಗಗನವೇ ಉಪಮೆಯಾದಂತೆ ಧಾರೇಶ್ವರರಿಗೆ ಧಾರೇಶ್ವರರೇ ಸಮ ಎಂದು ನಿಶ್ಚಯವಾಗಿ ಹೇಳಬಹುದು.

ಮೇಳವನ್ನು ಹಾಗೂ ಕಲಾವಿದರನ್ನು ಗೆಲ್ಲಿಸುವಲ್ಲಿ ಧಾರೇಶ್ವರರ ಶ್ರಮ ಅಪಾರ. ಭಾಗವತರು ಎಂದು ಕರೆಸಿಕೊಳ್ಳುವ ಕೊನೆಯ ವ್ಯಕ್ತಿ ಬಹುಶಃ ಧಾರೇಶ್ವರರೊಬ್ಬರೇ ಎಂಬುದು ವೈಯಕ್ತಿಕ ಅನಿಸಿಕೆ.

ಪೋಷಕರಿಗೆ ಸಾಂತ್ವನ ಹೇಳಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಅಗತ್ಯವಿದ್ದರೆ ನೇಹಾ ಕುಟುಂಬಕ್ಕೆ ಭದ್ರತೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನಗರದಲ್ಲಿ ಈಚೆಗೆ ಹತ್ಯೆಗೀಡಾದ ವಿದ್ಯಾರ್ಥಿನಿ ನೇಹಾ ಹಿರೇಮಠ ಅವರ ಬಿಡನಾಳದಲ್ಲಿರುವ ಮನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಭೇಟಿ ನೀಡಿ, ಪೋಷಕರಿಗೆ ಸಾಂತ್ವನ ಹೇಳಿದರು.

ನೇಹಾ ತಂದೆ, ಹು–ಧಾ ಮಹಾನಗರ ಪಾಲಿಕೆ ಸದಸ್ಯ ನಿರಂಜನಯ್ಯ ಹಿರೇಮಠ ಅವರಿಗೆ ಧೈರ್ಯ ತುಂಬಿ, ಉಭಯ ಕುಶಲೋಪರಿ ವಿಚಾರಿಸಿದರು. ‘ಇಂತಹ ಅಮಾನುಷ ಘಟನೆ ನಡೆಯಬಾರದಿತ್ತು’ ಎಂದು ಬೇಸರ ವ್ಯಕ್ತಪಡಿಸಿದರು.

ನೇಹಾ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ಇದೊಂದು ದುರದೃಷ್ಟಕರ ಘಟನೆ. ಇದನ್ನು ತೀವ್ರವಾಗಿ ಖಂಡಿಸುತ್ತೇನೆ. ಪ್ರಕರಣವನ್ನು ಸಿಐಡಿಗೆ ವಹಿಸಲಾಗಿದ್ದು, ವಿಶೇಷ ನ್ಯಾಯಾಲಯವನ್ನೂ ಸ್ಥಾಪಿಸಲಾಗಿದೆ. ಕೊಲೆ ಮಾಡಿದವನಿಗೆ ಆದಷ್ಟು ಬೇಗ ಶಿಕ್ಷೆ ಆಗಲಿದೆ’ ಎಂದರು.

ಹುಬ್ಬಳ್ಳಿಯ ಬಿಡನಾಳದಲ್ಲಿರುವ ನೇಹಾ ಹಿರೇಮಠ ಅವರ ಮನೆಗೆ ಗುರುವಾರ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ನೇಹಾ ಅವರ ತಂದೆ ನಿರಂಜನಯ್ಯ ಹಿರೇಮಠ, ತಾಯಿ ಗೀತಾಗೆ ಸಾಂತ್ವನ ಹೇಳಿದರು

‘ನೇಹಾ ಕುಟುಂಬದೊಂದಿಗೆ ನಾವಿದ್ದೇವೆ. ಅವರಿಗೆ ರಕ್ಷಣೆ ಅಗತ್ಯವಿದ್ದರೆ ಒದಗಿಸಲಾಗುತ್ತದೆ. ಕೃತ್ಯದಲ್ಲಿ ಬೇರೆ ಯಾರಾದರೂ ಭಾಗಿಯಾದ್ದರೆ ಆ ನಿಟ್ಟಿನಲ್ಲೂ ತನಿಖೆ ನಡೆಸಲು ಸೂಚಿಸಲಾಗಿದೆ. ಸಿಐಡಿ ಅಧಿಕಾರಿಗಳು ದೋಷಾರೋಪ ಪಟ್ಟಿ ಸಲ್ಲಿಸಿದ ಬಳಿಕ ನ್ಯಾಯಾಲಯ ವಿಚಾರಣೆ ನಡೆಸಲಿದೆ’ ಎಂದು ಹೇಳಿದರು.

‘ಈ ಪ್ರಕರಣದಲ್ಲಿ ಬಿಜೆಪಿ ರಾಜಕೀಯ ಮಾಡುತ್ತಿದೆ. ಅವರು ಅಧಿಕಾರದಲ್ಲಿದ್ದಾಗ ಯಾವೊಂದೂ ಪ್ರಕರಣವನ್ನು ಸಿಬಿಐಗೆ ಕೊಟ್ಟಿಲ್ಲ. ನಾನು ಈ ವಿಚಾರದಲ್ಲಿ ರಾಜಕೀಯ ಮಾಡುವುದಿಲ್ಲ’ ಎಂದು ಹೇಳಿದರು.

ಪೊಲೀಸರ ನಿಯೋಜನೆ: ‘ತಮ್ಮ ಜೀವಕ್ಕೆ ಅಪಾಯವಿದೆ’ ಎಂದು ಹೇಳಿರುವ ನಿರಂಜನಯ್ಯ ಅವರ ನಿವಾಸಕ್ಕೆ ಪೊಲೀಸರು ಭದ್ರತೆ ಒದಗಿಸಿದ್ದಾರೆ. ‘ಅವರ ನಿವಾಸದ ಸುತ್ತ ಮೂವರು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಅವರ ಮನೆ ಸುತ್ತ ಓಡಾಡುವ ಅನುಮಾನಾಸ್ಪದ ವ್ಯಕ್ತಿಗಳ ಮೇಲೆ ನಿಗಾ ಇಡಲಾಗುವುದು’ ಎಂದು ಹುಬ್ಬಳ್ಳಿ - ಧಾರವಾಡ ಪೊಲೀಸ್ ಕಮಿಷನರ್ ರೇಣುಕಾ ಸುಕುಮಾರ್ ಹೇಳಿದರು.

ಮಾಹಿತಿ ಕಲೆ ಹಾಕಿದ ಸಿಐಡಿ ತಂಡ: ವಿದ್ಯಾರ್ಥಿನಿ ನೇಹಾ ಹಿರೇಮಠ ಕೊಲೆ ಪ್ರಕರಣದ ತನಿಖೆ ಗುರುವಾರವೂ ಮುಂದುವರಿಯಿತು. ಸಿಐಡಿ ಎಸ್ಪಿ ವೆಂಕಟೇಶ ನೇತೃತ್ವದ ತಂಡ ಇಲ್ಲಿನ ಬಿಡನಾಳದಲ್ಲಿರುವ ಅವರ ಮನೆಗೆ ಭೇಟಿ ನೀಡಿ ಮಾಹಿತಿ ಕಲೆಹಾಕಿತು.

‘ಗಲ್ಲಿಗೇರಿಸುವ ದಿನಕ್ಕಾಗಿ ಕಾಯುತ್ತಿರುವೆ’

‘ದೇಶದಾದ್ಯಂತ ಪಕ್ಷಾತೀತವಾಗಿ ಎಲ್ಲರೂ ಹೋರಾಟ ಮಾಡಿ, ನಮಗೆ ಶಕ್ತಿ ತುಂಬಿದ್ದಾರೆ. ನಮ್ಮ ಬೇಡಿಕೆಗಳಿಗೆ ರಾಜ್ಯ ಸರ್ಕಾರ ಶೀಘ್ರ ಸ್ಪಂದಿಸಿದೆ. ಸುರ್ಜೇವಾಲ ಅವರು ಭೇಟಿ ನೀಡಿದಾಗ, 90ರಿಂದ 120 ದಿನಗಳಲ್ಲಿ ಶಿಕ್ಷೆ ಪ್ರಕಟವಾಗುವ ಭರವಸೆ ನೀಡಿದ್ದಾರೆ. ಹಂತಕನಿಗೆ ಗಲ್ಲು ಶಿಕ್ಷೆ ವಿಧಿಸಬೇಕು. ಗಲ್ಲಿಗೇರಿಸುವ ದಿನಕ್ಕಾಗಿ ಕಾಯುತ್ತಿದ್ದೇನೆ’ ಎಂದು ನೇಹಾ ತಂದೆ ನಿರಂಜನಯ್ಯ ಹಿರೇಮಠ ಹೇಳಿದರು.

ನನ್ನ ಜೀವಕ್ಕೂ ಅಪಾಯ: ‘ನನ್ನ ಜೀವಕ್ಕೆ ಅಪಾಯವಿರುವ ಮುನ್ಸೂಚನೆ ಸಿಗುತ್ತಿದ್ದು, ನನ್ನ ಕುಟುಂಬಕ್ಕೆ ಸರ್ಕಾರ ಸೂಕ್ತ ಭದ್ರತೆ ಒದಗಿಸಬೇಕು’ ಎಂದು ಹಿರೇಮಠ ಆಗ್ರಹಿಸಿದರು. ‘ನೇಹಾ ಕೊಲೆ ರಾಷ್ಟ್ರ ಮಟ್ಟದಲ್ಲಿ ಸುದ್ದಿ ಆಗಿರುವುದರಿಂದ ಹಲವರು ಸಾಂತ್ವನ ಹೇಳಲು ಮನೆಗೆ ಬರುತ್ತಿದ್ದಾರೆ. ಈ ವೇಳೆ ಸಂಶಯಾಸ್ಪದ ವ್ಯಕ್ತಿಗಳೂ ಕಂಡುಬರುತ್ತಿದ್ದಾರೆ. ಶಂಕಾಸ್ಪದ ವ್ಯಕ್ತಿಗಳಿಂದ ನನ್ನ ಜೀವಕ್ಕೆ ಅಪಾಯವಿರುವ ಮುನ್ಸೂಚನೆ ಇದೆ’ ಎಂದರು.

‘ನೇಹಾ ಹತ್ಯೆ ಮಾಡುವ ಮುನ್ನ ಫಯಾಜ್ ತನ್ನ ಸ್ನೇಹಿತರೊಂದಿಗೆ ನಮ್ಮ ಮನೆಯ ಬಳಿ ಸುತ್ತಾಡಿದ್ದ. ನೇಹಾಗೆ ಕರೆ ಮಾಡಿ, ಜೀವ ಬೆದರಿಕೆಯನ್ನೂ ಹಾಕಿದ್ದ. ಈ ಹಿಂದೆ ಅಪಹರಿಸಲು ಸಹ ಯತ್ನಿಸಿದ್ದ. ಇದೊಂದು ವ್ಯವಸ್ಥಿತ ಕೃತ್ಯವಾಗಿದೆ’ ಎಂದರು.

ಶುಕ್ರವಾರ, ಏಪ್ರಿಲ್ 26, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 116 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಬಿಡುಗಡೆಯಾಗುತ್ತಿರುವ ಕನ್ನಡ ಚಿತ್ರಗಳ ಸಂಖ್ಯೆ ಪ್ರತಿ ವಾರ ಗಣನೀಯವಾಗಿ ಕುಸಿಯುತ್ತಿರುವುದೇಕೆ?

ಆಳ-ಅಗಲ ಮಹಾರಾಷ್ಟ್ರ ಲೋಕ ಕಣ ಗೊಂದಲದ ಗೂಡು
ಎರಡನೇ ಕೀಪರ್ ಸ್ಥಾನಕ್ಕೆ ರಾಹುಲ್? 10
ಆಸ್ತಿ ಉಳಿಸಿಕೊಳ್ಳಲು ಕಾಯ್ದೆ ರದ್ದು: ಮೋದಿ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
74,339	22,570	₹73,960 (ಬೆಂಗಳೂರು)	₹82,600 (ಬೆಂಗಳೂರು)	83.28

ಮತ ಚಲಾಯಿಸಿ ಜನತಂತ್ರ ಗೆಲ್ಲಿಸಿ

ಬೆಂಗಳೂರು: ಲೋಕಸಭಾ ಚುನಾವಣೆಯ ಎರಡನೇ ಹಂತದ ಮತದಾನ ಇಂದು ನಡೆಯಲಿದ್ದು, ರಾಜ್ಯದ 14 ಕ್ಷೇತ್ರಗಳು ಸೇರಿದಂತೆ ದೇಶದ 88 ಕ್ಷೇತ್ರಗಳಿಗೆ ಮತದಾನ ನಡೆಯಲಿದೆ. 1,200ಕ್ಕೂ ಹೆಚ್ಚು ಅಭ್ಯರ್ಥಿಗಳು ಜನಾದೇಶ ಬಯಸಿದ್ದಾರೆ. ಮತ ಚಲಾಯಿಸಿ, ಜನತಂತ್ರ ಗೆಲ್ಲಿಸಲು ಇದು ಸಕಾಲವಾಗಿದೆ

ಕ್ಷೇತ್ರಗಳು	ಒಟ್ಟು ಮತದಾರರು	ಪುರುಷರು	ಮಹಿಳೆಯರು	ಲಿಂಗತ್ವ ಅಲ್ಪಸಂಖ್ಯಾತರು
14	2.88 ಕೋಟಿ	1.44 ಕೋಟಿ	1.43 ಕೋಟಿ	3,067
88	15.88 ಕೋಟಿ	8.08 ಕೋಟಿ	7.8 ಕೋಟಿ	5,929

ಇಂದು ಮತದಾನ ಸಮಯ
ಬೆಳಿಗ್ಗೆ 7ರಿಂದ ಸಂಜೆ 6ರವರೆಗೆ

ಕಣದಲ್ಲಿರುವ ಪ್ರಮುಖರು

ರಾಹುಲ್ ಗಾಂಧಿ (ಕಾಂಗ್ರೆಸ್, ವಯನಾಡ್ ಕೇರಳ)
ಓಂ ಬಿರ್ಲಾ (ಬಿಜೆಪಿ, ಕೋಟಾ ರಾಜಸ್ಥಾನ)
ಕೆ.ಸಿ.ವೇಣುಗೋಪಾಲ್ (ಕಾಂಗ್ರೆಸ್ ಆಳಪ್ಪುಳ, ಕೇರಳ)
ಹೇಮಾಮಾಲಿನಿ (ಬಿಜೆಪಿ;, ಮಥುರಾ, ಉತ್ತರ ಪ್ರದೇಶ)

ಎಚ್.ಡಿ. ಕುಮಾರಸ್ವಾಮಿ (ಮಂಡ್ಯ-ಜೆಡಿಎಸ್)
ತೇಜಸ್ವಿ ಸೂರ್ಯ (ಬೆಂಗಳೂರು ದಕ್ಷಿಣ-ಬಿಜೆಪಿ)
ಡಿ.ಕೆ. ಸುರೇಶ್ (ಬೆಂಗಳೂರು ಗ್ರಾ. ಕಾಂಗ್ರೆಸ್)

ಶೋಭಾ ಕರಂದ್ಲಾಜೆ (ಬೆಂಗಳೂರು ಉತ್ತರ-ಬಿಜೆಪಿ)
ಶ್ರೀನಿವಾಸ ಪೂಜಾರಿ (ಚಿಕ್ಕಮಗಳೂರು-ಉಡುಪಿ, ಬಿಜೆಪಿ)
ರಕ್ಷಾ ರಾಮಯ್ಯ (ಚಿಕ್ಕಬಳ್ಳಾಪುರ, ಕಾಂಗ್ರೆಸ್)

ರಾಜ್ಯದ 14 ಕ್ಷೇತ್ರಗಳಲ್ಲಿ ಹೀಗಿದೆ ಸೆಣಸಾಟ

2019ರಲ್ಲಿ ಗೆದ್ದ ಕ್ಷೇತ್ರಗಳ ಬಲಾಬಲ: ಬಿಜೆಪಿ, ಕಾಂಗ್ರೆಸ್, ಜೆಡಿಎಸ್, ಪಕ್ಷೇತರ



ಚಿತ್ರದುರ್ಗ ಕಾಂಗ್ರೆಸ್ 7, ಬಿಜೆಪಿ 1

ಗೋವಿಂದ ಕಾರಜೋಳ	ಬಿಜೆಪಿ
ಬಿ.ಎನ್.ಚಂದ್ರಪ್ಪ	ಕಾಂಗ್ರೆಸ್

ತುಮಕೂರು ಕಾಂಗ್ರೆಸ್ 4, ಜೆಡಿಎಸ್ 2, ಬಿಜೆಪಿ 2

ಎಸ್.ಪಿ.ಮುದ್ದಹನುಮೇಗೌಡ	ಕಾಂಗ್ರೆಸ್
ವಿ.ಸೋಮಣ್ಣ	ಬಿಜೆಪಿ

ಬೆಂಗಳೂರು ಗ್ರಾಮಾಂತರ ಕಾಂಗ್ರೆಸ್ 5, ಬಿಜೆಪಿ 2, ಜೆಡಿಎಸ್ 1

ಡಿ.ಕೆ. ಸುರೇಶ್	ಕಾಂಗ್ರೆಸ್
ಡಾ.ಸಿ.ಎನ್. ಮಂಜುನಾಥ್	ಬಿಜೆಪಿ

ಚಿಕ್ಕಬಳ್ಳಾಪುರ ಕಾಂಗ್ರೆಸ್ 5, ಬಿಜೆಪಿ 2, ಪಕ್ಷೇತರ 1

ಡಾ.ಕೆ.ಸುಧಾಕರ್	ಬಿಜೆಪಿ
ರಕ್ಷಾ ರಾಮಯ್ಯ	ಕಾಂಗ್ರೆಸ್

ಕೋಲಾರ ಕಾಂಗ್ರೆಸ್ 5, ಜೆಡಿಎಸ್ 3

ಕೆ.ವಿ.ಗೌತಮ್	ಕಾಂಗ್ರೆಸ್
ಎಂ.ಮಲ್ಲೇಶ್ ಬಾಬು	ಜೆಡಿಎಸ್

ಉಡುಪಿ-ಚಿಕ್ಕಮಗಳೂರು ಬಿಜೆಪಿ 4, ಕಾಂಗ್ರೆಸ್ 4

ಕೋಟ ಶ್ರೀನಿವಾಸ ಪೂಜಾರಿ	ಬಿಜೆಪಿ
ಕೆ.ಜಯಪ್ರಕಾಶ್ ಹೆಗ್ಡೆ	ಕಾಂಗ್ರೆಸ್

ಹಾಸನ ಜೆಡಿಎಸ್ 4, ಕಾಂಗ್ರೆಸ್ 2, ಬಿಜೆಪಿ 2

ಪ್ರಜ್ವಲ್ ರೇವಣ್ಣ	ಜೆಡಿಎಸ್
ಶ್ರೇಯಸ್ ಪಟೇಲ್	ಕಾಂಗ್ರೆಸ್

ಬೆಂಗಳೂರು ಕೇಂದ್ರ ಕಾಂಗ್ರೆಸ್ 5, ಬಿಜೆಪಿ 3

ಪಿ.ಸಿ.ಮೋಹನ್	ಬಿಜೆಪಿ
ಮನ್ಸೂರ್ ಅಲಿ ಖಾನ್	ಕಾಂಗ್ರೆಸ್

ಬೆಂಗಳೂರು ದಕ್ಷಿಣ ಬಿಜೆಪಿ 5, ಕಾಂಗ್ರೆಸ್ 3

ತೇಜಸ್ವಿ ಸೂರ್ಯ	ಬಿಜೆಪಿ
ಸೌಮ್ಯಾರೆಡ್ಡಿ	ಕಾಂಗ್ರೆಸ್

ದಕ್ಷಿಣ ಕನ್ನಡ ಬಿಜೆಪಿ 6, ಕಾಂಗ್ರೆಸ್ 2

ಕ್ಯಾ.ಬ್ರಿಜೇಶ್ ಚೌಟ	ಬಿಜೆಪಿ
ಆರ್.ಪದ್ಮರಾಜ್	ಕಾಂಗ್ರೆಸ್

ಬೆಂಗಳೂರು ಉತ್ತರ ಬಿಜೆಪಿ 5, ಕಾಂಗ್ರೆಸ್ 3

ಶೋಭಾ ಕರಂದ್ಲಾಜೆ	ಬಿಜೆಪಿ
ಎಂ.ವಿ. ರಾಜೀವ್ ಗೌಡ	ಕಾಂಗ್ರೆಸ್

ಮೈಸೂರು-ಕೊಡಗು ಕಾಂಗ್ರೆಸ್ 5, ಜೆಡಿಎಸ್ 2, ಬಿಜೆಪಿ 1

ಎಂ.ಲಕ್ಷ್ಮಣ	ಕಾಂಗ್ರೆಸ್
ಯದುವೀರ್ ಒಡೆಯರ್	ಬಿಜೆಪಿ

ಚಾಮರಾಜನಗರ (ಎಸ್‌ಸಿ) ಕಾಂಗ್ರೆಸ್ 7, ಜೆಡಿಎಸ್ 1

ಸುನಿಲ್ ಬೋಸ್	ಕಾಂಗ್ರೆಸ್
ಎಸ್.ಬಾಲರಾಜ್	ಬಿಜೆಪಿ

ಮಂಡ್ಯ ಕಾಂಗ್ರೆಸ್ 6 (ಮೈಸೂರು ಜಿಲ್ಲೆ ಕೆ.ಆರ್.ನಗರ ಸೇರಿ), ಜೆಡಿಎಸ್ 1, 1 ಸರ್ವೋದಯ ಕರ್ನಾಟಕ ಪಕ್ಷ (ಕಾಂಗ್ರೆಸ್ ಬೆಂಬಲ)

ಎಚ್.ಡಿ.ಕುಮಾರಸ್ವಾಮಿ	ಜೆಡಿಎಸ್, ಬಿಜೆಪಿ ಮೈತ್ರಿ
ವೆಂಕಟರಮಣೇಗೌಡ (ಸ್ಟಾರ್ ಚಂದ್ರು)	ಕಾಂಗ್ರೆಸ್

ಪ್ರಚಾರದಲ್ಲಿ ಸದ್ದು ಮಾಡಿದ ವಿಚಾರ

ಬಿಜೆಪಿ ಹೇಳಿದ್ದು...
- ಜನರ ಆಸ್ತಿ, ಮಂಗಳಸೂತ್ರ ಕಸಿದುಕೊಂಡು ಮುಸ್ಲಿಮರಿಗೆ ಹಂಚಿಕೆ
- ಎಸ್‌ಸಿ, ಎಸ್‌ಟಿ, ಒಬಿಸಿ ಮೀಸಲಾತಿ ಕಡಿತ
- ಧರ್ಮದ ಆಧಾರದಲ್ಲಿ ಮೀಸಲಾತಿ
- ಪಿತ್ರಾರ್ಜಿತ ಆಸ್ತಿ ತೆರಿಗೆ

ಕಾಂಗ್ರೆಸ್ ಹೇಳಿದ್ದು...
- ದೇಶದಾದ್ಯಂತ ಜಾತಿ ಸಮೀಕ್ಷೆ, ಸಂಪತ್ತಿನ ಎಕ್ಸ್‌-ರೇ
- ಪ್ರಜಾಪ್ರಭುತ್ವ, ಸಂವಿಧಾನದ ರಕ್ಷಣೆ
- ಬರಪರಿಹಾರ ಕೊಡುವಲ್ಲಿ ರಾಜ್ಯಕ್ಕೆ ಅನ್ಯಾಯ ಮಾಡಿದ ಮೋದಿ-ಶಾ ಗೋಬ್ಯಾಕ್
- ಕೇಂದ್ರ ಸರ್ಕಾರ ಕನ್ನಡಿಗರಿಗೆ ಚೊಂಬು ನೀಡಿದೆ

ಪ್ರಧಾನಿಯ ಮಾತು ಬಿಜೆಪಿಗೆ ನೋಟಿಸ್

ಖರ್ಗೆಗೂ ನೋಟಿಸ್ ನೀಡಿದ ಆಯೋಗ

ನರೇಂದ್ರ ಮೋದಿ

ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಪ್ರತಿಪಕ್ಷಗಳು ಸಲ್ಲಿಸಿದ್ದ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯ ದೂರುಗಳಿಗೆ ಮೊದಲ ಬಾರಿಗೆ ಪ್ರತಿಕ್ರಿಯಿಸಿರುವ ಚುನಾವಣಾ ಆಯೋಗವು, ಬಿಜೆಪಿಗೆ ಗುರುವಾರ ನೋಟಿಸ್ ಜಾರಿ ಮಾಡಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೂ ನೋಟಿಸ್ ಜಾರಿ ಮಾಡಿರುವ ಚುನಾವಣಾ ಆಯೋಗವು, ಅವರು ಮತ್ತು ಪಕ್ಷದ ನಾಯಕ ರಾಹುಲ್ ಗಾಂಧಿ ನೀಡಿದ್ದ ಹೇಳಿಕೆಗಳ ವಿರುದ್ಧ ಬಿಜೆಪಿ ನೀಡಿದ್ದ ದೂರಿನ ಸಂಬಂಧ ಪ್ರತಿಕ್ರಿಯೆ ನೀಡುವಂತೆ ಕೇಳಿದೆ.

ನಡ್ಡಾ ಮತ್ತು ಖರ್ಗೆ ಅವರು ನೋಟಿಸ್‌ಗಳಿಗೆ ಸೋಮವಾರ ಮಧ್ಯಾಹ್ನ 11ರ ಒಳಗೆ ಉತ್ತರ ನೀಡಬೇಕು ಎಂದು ತಿಳಿಸಲಾಗಿದೆ. ಮೋದಿ ಅವರು ಏಪ್ರಿಲ್ 21ರಂದು ರಾಜಸ್ಥಾನದ ಬನ್ಸ್ವಾರದಲ್ಲಿ ನೀಡಿದ್ದ ಹೇಳಿಕೆಗಳಿಗೆ ಸಂಬಂಧಿಸಿದಂತೆ ಕಾಂಗ್ರೆಸ್, ಸಿಪಿಐ ನೀಡಿದ್ದ ದೂರಿನ ಆಧಾರದ ಮೇಲೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾಗೆ ನೋಟಿಸ್ ನೀಡಲಾಗಿದೆ.

ಕಾಂಗ್ರೆಸ್ ಪಕ್ಷವು ಜನರ ಸಂಪತ್ತನ್ನು ಮುಸ್ಲಿಮರಿಗೆ ಮರುಹಂಚಿಕೆ ಮಾಡಲು ಪ್ರಯತ್ನಿಸುತ್ತಿದ್ದು, ಅದು ಮಹಿಳೆಯರ ಮಂಗಳಸೂತ್ರವನ್ನೂ ಬಿಡುವುದಿಲ್ಲ ಎಂದು ಮೋದಿಯವರು ಹೇಳಿದ್ದನ್ನು ದೂರುಗಳಲ್ಲಿ ಉಲ್ಲೇಖಿಸಲಾಗಿತ್ತು.

> ಪ್ರಧಾನಿಯ ಮಿತಿಮೀರಿದ ಮಾತಿನಿಂದ ಕೆರಳಿದ ಜನರ ಒತ್ತಡದಿಂದ ಆಯೋಗ ಕ್ರಮಕ್ಕೆ ಮುಂದಾಗಿದೆ ಎನ್ನುವುದು ಸ್ಪಷ್ಟ. ಆದರೆ, ಅವರ ಜತೆಗೆ ರಾಹುಲ್ ಗಾಂಧಿ ಅವರಿಗೂ ನೋಟಿಸ್ ನೀಡುವ ಮೂಲಕ ಅದನ್ನು ಸರಿದೂಗಿಸಬೇಕಿತ್ತೇ?
>
> **ಜೈರಾಮ್ ರಮೇಶ್**, ಪ್ರಧಾನ ಕಾರ್ಯದರ್ಶಿ, ಎಐಸಿಸಿ

ಮೋದಿ ಹೇಳಿಕೆ ರಾಜಕೀಯ ವಾಕ್ಸಮರಕ್ಕೆ ಕಾರಣವಾಗಿತ್ತು. ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳು ಪ್ರಧಾನಿ ಸುಳ್ಳು ಹೇಳುತ್ತಿದ್ದಾರೆ ಎಂದು ಆರೋಪಿಸಿದ್ದರೆ, 'ಕಾಂಗ್ರೆಸ್ ಪಕ್ಷ ಸಮಾಜದ ಹಿಂದುಳಿದವರ ಹಿತ ಬಲಿ ಕೊಟ್ಟು ಮುಸ್ಲಿಮರ ಓಲೈಕೆಯ ರಾಜಕಾರಣ ಮಾಡುತ್ತಿದೆ' ಎಂದು ಬಿಜೆಪಿ ದೂರಿತ್ತು.

9ನೇ ಪುಟ ನೋಡಿ

ಆಯೋಗದ ಅತಿ ಜಾಗರೂಕತೆ: ಕಾಂಗ್ರೆಸ್

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧದ ದೂರುಗಳ ವಿಚಾರದಲ್ಲಿ ಚುನಾವಣಾ ಆಯೋಗವು ಅತಿ ಜಾಗರೂಕತೆಯಿಂದ ವರ್ತಿಸುತ್ತಿದೆ ಎಂದು ಕಾಂಗ್ರೆಸ್ ಗುರುವಾರ ಹೇಳಿದೆ.

ಪಕ್ಷವು ಮೋದಿ ಅವರ ವಿರುದ್ಧ ನೀಡಿದ್ದ ದೂರುಗಳಿಗೆ ಸಂಬಂಧಿಸಿದಂತೆ ಚುನಾವಣಾ ಆಯೋಗವು ಬಿಜೆಪಿಗೆ ನೋಟಿಸ್ ನೀಡಿರುವ ಬಗ್ಗೆ ಕಾಂಗ್ರೆಸ್ ಈ ರೀತಿ ಪ್ರತಿಕ್ರಿಯಿಸಿದೆ. 'ಪ್ರಧಾನಿ ವಿರುದ್ಧ ನಾವು ದೂರು ನೀಡುತ್ತಿರುವುದು ಇದು ಎರಡನೇ ಬಾರಿ. ಈ ಹಿಂದೆ ನಾವು ಗೃಹ ಸಚಿವರ (ಅಮಿತ್ ಶಾ) ವಿರುದ್ಧ ದೂರು ನೀಡಿದ್ದೆವು. ಆದರೆ, ಯಾವ ಕ್ರಮವನ್ನೂ ಜರುಗಿಸಿರಲಿಲ್ಲ. ಅಸ್ಸಾಂ ಮುಖ್ಯಮಂತ್ರಿ ವಿರುದ್ಧ ಕ್ರಮ ಕೈಗೊಳ್ಳಲಾಗಿತ್ತು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಕಲಾವಿದ ಸುಬ್ರಹ್ಮಣ್ಯ ಧಾರೇಶ್ವರ ನಿಧನ

ಉಡುಪಿ: ಬಡಗುತಿಟ್ಟು ಯಕ್ಷಗಾನದ ಪ್ರಸಿದ್ಧ ಭಾಗವತರಾಗಿದ್ದ ಸುಬ್ರಹ್ಮಣ್ಯ ಧಾರೇಶ್ವರ (67) ಗುರುವಾರ ಬೆಳಗಿನ ಜಾವ ಬೆಂಗಳೂರಿನಲ್ಲಿರುವ ಪುತ್ರನ ಮನೆಯಲ್ಲಿ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಸಂಜೆ ಕುಂದಾಪುರ ತಾಲ್ಲೂಕಿನ ನಾಗೂರಿನ ಸ್ವಗೃಹದಲ್ಲಿ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗಿತ್ತು. ಬಳಿಕ ಅಂತ್ಯಸಂಸ್ಕಾರ ನೆರವೇರಿತು.

ಉತ್ತರ ಕನ್ನಡ ಜಿಲ್ಲೆ ಗೋಕರ್ಣದಲ್ಲಿ ಜನಿಸಿದ ಧಾರೇಶ್ವರರು ನಾಲ್ಕೂವರೆ ದಶಕಗಳ ಕಾಲ ಯಕ್ಷರಂಗದಲ್ಲಿ ವಿಜೃಂಭಿಸಿದ್ದಾರೆ. ನಾರ್ಣಪ್ಪ ಉಪ್ಪೂರರ ಶಿಷ್ಯರಾಗಿ, ಕಾಳಿಂಗ ನಾವುಡರ ಸಹವರ್ತಿಯಾಗಿ ಯಕ್ಷಗಾನ ಕ್ಷೇತ್ರದ ಬೆಳವಣಿಗೆಗೆ ಕೊಡುಗೆ ನೀಡಿದ್ದಾರೆ.

ಯಕ್ಷಗಾನದಲ್ಲಿ ಕ್ಯಾಸೆಟ್‌ಗಳ ಶಕೆಯನ್ನು ಆರಂಭಿಸಿ 400ಕ್ಕೂ ಹೆಚ್ಚು ಕ್ಯಾಸೆಟ್‌ಗಳನ್ನು ಹೊರತಂದಿದ್ದರು. 300ಕ್ಕೂ ಅಧಿಕ ಪೌರಾಣಿಕ, ಸಾಮಾಜಿಕ, ಐತಿಹಾಸಿಕ ಪ್ರಸಂಗಗಳನ್ನು ನಿರ್ದೇಶಿಸಿದ್ದಾರೆ.

ಧಾರೇಶ್ವರ ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿ ಹಲವು ಗೌರವಗಳು ಸಂದಿವೆ.

ಚಿನಕುರುಳಿ
ಪ್ರಕಾಶ್ ಶೆಟ್ಟಿ



'ರಾಜ'ನಿಗೆ ಸ್ವಾಗತ

ಟೊರಾಂಟೊದಲ್ಲಿ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿ ಗೆದ್ದು, ಗುರುವಾರ ಬೆಳಗಿನ ಜಾವ ಚೆನ್ನೈ ವಿಮಾನ ನಿಲ್ದಾಣಕ್ಕೆ ಬಂದಿಳಿದ ಗ್ರ್ಯಾಂಡ್ ಮಾಸ್ಟರ್ ಡಿ. ಗುಕೇಶ್ ಅವರನ್ನು ತಾಯಿ ಮತ್ತು ಬಂಧುಗಳು ಸ್ವಾಗತಿಸಿದರು –ಪಿಟಿಐ ಚಿತ್ರ

ಸ್ತ್ರೀಧನ: ಪತಿಗೆ ಇಲ್ಲ ಹಕ್ಕು

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: 'ಸ್ತ್ರೀಧನ'ವು ಮಹಿಳೆಯ ಆಸ್ತಿಯಾಗಿದ್ದು, ಅದರ ಮೇಲೆ ಆಕೆಗೆ ಪರಿಪೂರ್ಣವಾದ ಹಕ್ಕು ಇದೆ. ಅದನ್ನು ಆಕೆ ತನಗೆ ಇಷ್ಟಬಂದ ರೀತಿಯಲ್ಲಿ ಬಳಸಿಕೊಳ್ಳಬಹುದು ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಈ ಆಸ್ತಿಯು ಎಂದಿಗೂ ಪತಿಯ ಜೊತೆಗಿನ ಜಂಟಿ ಆಸ್ತಿ ಆಗದು. 'ಸ್ತ್ರೀಧನ'ವನ್ನು ಪತಿಯು ಕಷ್ಟದ ಪರಿಸ್ಥಿತಿಗಳಲ್ಲಿ ಬಳಕೆ ಮಾಡಿಕೊಳ್ಳಬಹುದು. ಆದರೆ ಆ ಆಸ್ತಿಯನ್ನು ಪತ್ನಿಗೆ ಹಿಂದಿರುಗಿಸುವ ನೈತಿಕ ಹೊಣೆ ಪತಿಗೆ ಇದೆ ಎಂದು ಕೂಡ ಕೋರ್ಟ್ ಸ್ಪಷ್ಟಪಡಿಸಿದೆ.

ಪತ್ನಿಯ ಅಷ್ಟೂ ಚಿನ್ನಾಭರಣಗಳನ್ನು ತೆಗೆದುಕೊಂಡಿದ್ದ ಪತಿಯು, ಪತ್ನಿಗೆ ಹಣಕಾಸಿನ ಪರಿಹಾರದ ರೂಪದಲ್ಲಿ ₹25 ಲಕ್ಷ ಪಾವತಿಸಬೇಕು ಎಂದು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಾಂಕರ್ ದತ್ತ ಅವರ ವಿಭಾಗೀಯ ಪೀಠವು ಸೂಚಿಸಿದೆ.

ಈ ಪ್ರಕರಣದಲ್ಲಿ ಮಹಿಳೆಯು, 'ಮದುವೆಯ ಸಂದರ್ಭದಲ್ಲಿ 89 ಸವರನ್ ಚಿನ್ನವನ್ನು ನನ್ನ ತವರಿನ ಕಡೆಯವರು ನನಗೆ ಉಡುಗೊರೆಯಾಗಿ ನೀಡಿದ್ದರು. ಅಲ್ಲದೆ, ಮದುವೆಯ ನಂತರದಲ್ಲಿ ನನ್ನ ತಂದೆಯು ₹2 ಲಕ್ಷ ಮೌಲ್ಯದ ಚೆಕ್‌ಅನ್ನು ಪತಿಗೆ ನೀಡಿದ್ದರು' ಎಂದು ಹೇಳಿದ್ದರು.

'ಮದುವೆಯ ಮೊದಲ ರಾತ್ರಿಯ ದಿನ ಪತಿಯು ಎಲ್ಲ ಚಿನ್ನಾಭರಣಗಳನ್ನು ತನ್ನ ಸುಪರ್ದಿಗೆ ತೆಗೆದುಕೊಂಡ. ಅವುಗಳನ್ನು ಸುರಕ್ಷಿತವಾಗಿ ಇರಿಸುವ ಹೆಸರಿನಲ್ಲಿ ತನ್ನ ತಾಯಿಗೆ ಹಸ್ತಾಂತರಿಸಿದ. ಪತಿ ಮತ್ತು ಆತನ ತಾಯಿ ತಮ್ಮ ಹಳೆಯ ಹಣಕಾಸಿನ ಹೊರೆಗಳನ್ನು ಇಳಿಸಿಕೊಳ್ಳಲು ಆ ಚಿನ್ನಾಭರಣಗಳನ್ನು ದುರ್ಬಳಕೆ ಮಾಡಿಕೊಂಡರು' ಎಂಬುದು ಮಹಿಳೆಯ ಆರೋಪ.

ಈ ಪ್ರಕರಣದ ಕುರಿತಾಗಿ 2011ರಲ್ಲಿ ಆದೇಶ ನೀಡಿದ್ದ ಕೌಟುಂಬಿಕ ನ್ಯಾಯಾಲಯವು, ಪತಿ ಮತ್ತು ತಾಯಿ ಆ ಚಿನ್ನಾಭರಣಗಳನ್ನು ದುರ್ಬಳಕೆ ಮಾಡಿಕೊಂಡಿರುವುದು ನಿಜ ಎಂದು ಹೇಳಿತ್ತು. ಅಲ್ಲದೆ, ಅದಕ್ಕೆ ಪರಿಹಾರ ಪಡೆಯುವ ಹಕ್ಕನ್ನು ಮಹಿಳೆಯು ಹೊಂದಿದ್ದಾಳೆ ಎಂದಿತ್ತು. ಆದರೆ, ಚಿನ್ನಾಭರಣಗಳನ್ನು ಪತಿ ಮತ್ತು ಆತನ ತಾಯಿ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂಬ ಆರೋಪವನ್ನು ಸಾಬೀತು ಮಾಡಲು ಮಹಿಳೆಗೆ ಸಾಧ್ಯವಾಗಿಲ್ಲ ಎಂದು ಕೇರಳ ಹೈಕೋರ್ಟ್ ಹೇಳಿತ್ತು.

ಇದನ್ನು ಪ್ರಶ್ನಿಸಿ ಮಹಿಳೆಯು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

'ಮಹಿಳೆಗೆ ಮದುವೆಯ ಮೊದಲು, ಮದುವೆಯ ಸಂದರ್ಭದಲ್ಲಿ ಅಥವಾ ತವರಿನಿಂದ ಕಳಿಸಿಕೊಡುವಾಗ ನೀಡುವ ಆಸ್ತಿ ಆಕೆಯ ಸ್ತ್ರೀಧನ ಆಸ್ತಿಯಾಗುತ್ತದೆ. ಆ ಆಸ್ತಿಯ ಮೇಲೆ ಆಕೆಗೆ ಪರಿಪೂರ್ಣ ಹಕ್ಕಿರುತ್ತದೆ' ಎಂದು ಹೇಳಿದೆ.

ವಾಟ್ಸ್‌ಆ್ಯಪ್‌ನಲ್ಲಿ ವಿಚಾರಣೆ ಮಾಹಿತಿ


ನ್ಯಾ. ಡಿ.ವೈ. ಚಂದ್ರಚೂಡ್

ನವದೆಹಲಿ (ಪಿಟಿಐ): ವಿಚಾರಣೆಗೆ ಬಾಕಿ ಇರುವ ಮೊಕದ್ದಮೆಗಳ ಪಟ್ಟಿ, ಪ್ರಕರಣಗಳ ದಾಖಲಾತಿ ಮತ್ತು ಅರ್ಜಿಗಳ ವಿಚಾರಣೆಗೆ ಪಟ್ಟಿ ಮಾಡುವುದಕ್ಕೆ ಸಂಬಂಧಿಸಿದಂತಹ ಮಾಹಿತಿಗಳನ್ನು ವಕೀಲರಿಗೆ ಇನ್ನುಮುಂದೆ ವಾಟ್ಸ್‌ಆ್ಯಪ್ ಸಂದೇಶದ ಮೂಲಕ ರವಾನಿಸಲಾಗುವುದು ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಗುರುವಾರ ತಿಳಿಸಿದರು.

ಸುಪ್ರೀಂ ಕೋರ್ಟ್‌ನ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ಐಸಿಟಿ) ಆಧಾರಿತ ಸೇವೆಗಳಲ್ಲಿ ವಾಟ್ಸ್‌ಆ್ಯಪ್ ಆಧರಿತ ಸೇವೆಯನ್ನೂ ಸೇರಿಸುವ ಕುರಿತು ತಮ್ಮ ನೇತೃತ್ವದ ಒಂಬತ್ತು ಸದಸ್ಯರ ನ್ಯಾಯಪೀಠಕ್ಕೆ ಸಲ್ಲಿಕೆಯಾದ ಅರ್ಜಿಯೊಂದರ ವಿಚಾರಣೆ ವೇಳೆ ಅವರು ಮಾಹಿತಿ ನೀಡಿದರು.

ಡಿಜಿಟಲೀಕರಣದ ನಿಟ್ಟಿನಲ್ಲಿ ಇದೊಂದು ಮಹತ್ವದ ಹೆಜ್ಜೆಯಾಗಿದ್ದು, ಭವಿಷ್ಯದಲ್ಲಿ ಗುರುತರ ಪರಿಣಾಮ ಬೀರಲಿದೆ. ಕಾಗದ ಮತ್ತು ಮರ ರಕ್ಷಿಸುವ ನಿಟ್ಟಿನಲ್ಲಿ ಅನುಕೂಲಕರವಾಗಲಿದೆ ಎಂದು ಸಿಜೆಐ ತಿಳಿಸಿದರು.

ಸುಪ್ರೀಂ ಕೋರ್ಟ್‌ನ ಅಧಿಕೃತ ವಾಟ್ಸ್‌ಆ್ಯಪ್ ಸಂಖ್ಯೆಯಾದ 8767687676 ಅನ್ನು ಕೋರ್ಟ್ ಅಧಿಕಾರಿಗಳ ಜೊತೆ ಹಂಚಿಕೊಂಡರು. ಇದು ಯಾವುದೇ ಕರೆ-ಸಂದೇಶಗಳನ್ನು ಸ್ವೀಕರಿಸುವುದಿಲ್ಲ ಎಂದೂ ಹೇಳಿದರು.

'ತನ್ನ 75 ವರ್ಷಗಳ ಅನುಭವದಲ್ಲಿ ಸುಪ್ರೀಂ ಕೋರ್ಟ್ ಚಿಕ್ಕದೊಂದು ಉಪಕ್ರಮಕ್ಕೆ ಮುಂದಾಗಿದೆ' ಎಂದರು.

9ನೇ ಪುಟ ನೋಡಿ

ಬೀದಿ ಬದಿ ವ್ಯಾಪಾರ ನಿರ್ಬಂಧಕ್ಕೆ ಮನವಿ: ಕೋರ್ಟ್ ನಿರಾಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆ.ಆರ್. ಮಾರುಕಟ್ಟೆ, ಅವೆನ್ಯೂ ಮತ್ತು ಎಸ್‌ಜೆಪಿ ರಸ್ತೆಗಳ ಪಾದಚಾರಿ ಮಾರ್ಗದ ಎರಡೂ ಬದಿಗಳಲ್ಲಿನ ಬೀದಿ ಬದಿಯ ವ್ಯಾಪಾರಿಗಳು ಹಣ್ಣು, ಹೂವು ಮಾರಾಟ ಮಾಡುವುದನ್ನು ಶಾಶ್ವತವಾಗಿ ನಿರ್ಬಂಧಿಸುವಂತೆ ಕೋರಲಾದ ಅರ್ಜಿಯನ್ನು ಪುರಸ್ಕರಿಸಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ಎನ್‌.ಎಸ್‌.ಪಾಳ್ಯ ನಿವಾಸಿ ಬಿ.ಸುನೀಲ್ ಕುಮಾರ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್‌.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್‌.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ, ‘ಅರ್ಜಿದಾರರು ತಮ್ಮ ಕುಂದುಕೊರತೆ ಪರಿಹಾರಕ್ಕಾಗಿ ಲೋಕಾಯುಕ್ತ ಮೊರೆ ಹೋಗಲು ಸ್ವತಂತ್ರವಾಗಿದ್ದಾರೆ’ ಎಂದು ತಿಳಿಸಿ ಅರ್ಜಿ ವಿಲೇವಾರಿ ಮಾಡಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಬೀದಿ ಬದಿ ವ್ಯಾಪಾರಿಗಳು ಕೆ.ಆರ್.ಮಾರುಕಟ್ಟೆ, ಅವೆನ್ಯೂ ರಸ್ತೆ ಮತ್ತು ಎಸ್‌ಜೆಪಿ ರಸ್ತೆಯಲ್ಲಿನ ಪಾದಚಾರಿ ಮಾರ್ಗ ಹಾಗೂ ರಸ್ತೆಯ ಇಕ್ಕೆಲಗಳಲ್ಲಿ ಹಣ್ಣು ಮತ್ತು ಹೂವುಗಳ ಮಾರಾಟ ಮಾಡುತ್ತಿದ್ದಾರೆ. ಇದರಿಂದ, ಪಾದಚಾರಿಗಳ ಸುಗಮ ಸಂಚಾರಕ್ಕೆ ಕಷ್ಟವಾಗಿದೆ’ ಎಂದರು.

‘ಪಾದಚಾರಿ ಮಾರ್ಗ, ರಸ್ತೆ ಬದಿಯಲ್ಲಿನ ತರಕಾರಿ ಹಾಗೂ ಹೂವು ಮಾರಾಟವನ್ನು ಶಾಶ್ವತವಾಗಿ ನಿರ್ಬಂಧಿಸಲು ಕೋರಿ ರಾಜ್ಯ ನಗರಾಭಿವೃದ್ಧಿ ಇಲಾಖೆ ಮತ್ತು ಬಿಬಿಎಂಪಿ ಮುಖ್ಯ ಆಯುಕ್ತರಿಗೆ 2023ರ ಸೆಪ್ಟೆಂಬರ್ 22ರಂದು ಮನವಿ ಸಲ್ಲಿಸಲಾಗಿದೆ. ಅದನ್ನು ಈವರೆಗೂ ಪರಿಗಣಿಸಿಲ್ಲ. ಆದ್ದರಿಂದ, ಮನವಿ ಪರಿಗಣಿಸಲು ಪ್ರತಿವಾದಿಗಳಿಗೆ ನಿರ್ದೇಶನ ನೀಡಬೇಕು’ ಎಂದು ಕೋರಿದರು.

ಇದನ್ನು ತೀವ್ರವಾಗಿ ಆಕ್ಷೇಪಿಸಿದ ನ್ಯಾಯಪೀಠ, ‘ಈ ಸಂಬಂಧ ಲೋಕಾಯುಕ್ತ ಹಾಗೂ ಉಪ ಲೋಕಾಯುಕ್ತರಿಗೆ ಮನವಿ ಮಾಡಿಕೊಳ್ಳಬಹುದಾಗಿದೆ. ಇಂತಹ ವಿಚಾರಗಳನ್ನು ಹೈಕೋರ್ಟ್ ಮೇಲ್ವಿಚಾರಣೆ ನಡೆಸಿಕೊಂಡು ಕೂರಲು ಸಾಧ್ಯವಿಲ್ಲ’ ಎಂದು ಮೌಖಿಕವಾಗಿ ನುಡಿಯಿತು.

ಶಿವಕುಮಾರ್ ವಿರುದ್ಧದ ಎಫ್ಐಆರ್‌ಗೆ ಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೋಕಸಭೆ ಚುನಾವಣೆ ಪ್ರಚಾರದ ವೇಳೆ ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ಆಮಿಷ ವೊಡ್ಡಿದ್ದಾರೆ’ ಎಂಬ ಆರೋಪದಡಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಆರ್‌ಎಂಸಿ ಯಾರ್ಡ್‌ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್ಐಆರ್‌ಗೆ ಹೈಕೋರ್ಟ್ ತಡೆ ನೀಡಿದೆ.

ಎಫ್ಐಆರ್ ರದ್ದುಪಡಿಸುವಂತೆ ಕೋರಿ ಡಿ.ಕೆ.ಶಿವಕುಮಾರ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್‌.ದೀಕ್ಷಿತ್ ಅವರು ಗುರುವಾರ ವಿಚಾರಣೆ ನಡೆಸಿದರು.

ಅರ್ಜಿದಾರರ ಪರ ವಕೀಲರ ವಾದ ಆಲಿಸಿದ ನ್ಯಾಯಮೂರ್ತಿಗಳು, ‘ಸದ್ಯದ ಚುನಾವಣೆ ಪ್ರಚಾರದ ಗುಣಮಟ್ಟ ಕಳಪೆಯಾಗುತ್ತಿದೆ. ರಾಜಕಾರಣಿಗಳು ತಮ್ಮ ಭಾಷಣದ ವೇಳೆ ಭಾಷೆಯ ಮೇಲೆ ಕಾಳಜಿ ವಹಿಸಿ ಮಾತನಾಡಬೇಕು. ಇಂದು ಡಿಜಿಟಲ್ ಕ್ರಾಂತಿಯಾಗಿರುವಾಗ ಯಾರು ಏನು ಮಾತನಾಡುತ್ತಾರೆ ಎಂಬುದನ್ನು ತಿಳಿಯಲು ಕಷ್ಟಪಡಬೇಕಿಲ್ಲ, ದೇಶದ ಮತ್ತು ಸಮಾಜದ ಕಳಕಳಿಯಿಂದ ವರ್ತಿಸಬೇಕು’ ಎಂದು ಕಿವಿಮಾತು ಹೇಳಿ ಎಫ್ಐಆರ್‌ಗೆ ತಡೆ ನೀಡಿ ಆದೇಶಿಸಿದರು.

ಪ್ರಕರಣವೇನು?: ರಾಜರಾಜೇಶ್ವರಿ ನಗರದ ಅಪಾರ್ಟ್‌ಮೆಂಟ್ ನಿವಾಸಿಗಳೊಂದಿಗೆ ಚುನಾವಣಾ ಪ್ರಚಾರ ಸಭೆ ನಡೆಸಿದ್ದ ಡಿ.ಕೆ. ಶಿವಕುಮಾರ್, ‘ಅಪಾರ್ಟ್‌ಮೆಂಟ್‌ಗೆ ಸಿಎ ನಿವೇಶನ ನೀಡಬೇಕು ಹಾಗೂ ಕಾವೇರಿ ನೀರು ಒದಗಿಸಬೇಕು ಎಂದು ನಿವಾಸಿಗಳು ಬೇಡಿಕೆಯಿಟ್ಟಿದ್ದಾರೆ. ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಗೆ (ಡಿ.ಕೆ.ಸುರೇಶ್) ಮತ ನೀಡಿದರೆ ನಿಮ್ಮ ಬೇಡಿಕೆಯನ್ನು ಎರಡು ಮೂರು ತಿಂಗಳಲ್ಲಿ ಈಡೇರಿಸುತ್ತೇನೆ. ಇಲ್ಲವಾದರೆ ನನ್ನನ್ನು ಏನೂ ಕೇಳಬೇಡಿ’ ಎಂದು ಮಾತನಾಡಿದ್ದ ವಿಡಿಯೊ ತುಣುಕು ಬಹಿರಂಗವಾಗಿತ್ತು.

ಶಾಸಕ ಉದಯ ಗರುಡಾಚಾರ್ ದೋಷಮುಕ್ತ

ಬೆಂಗಳೂರು: ‘ಚುನಾವಣೆ ವೇಳೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ತಮ್ಮ ಮೇಲಿರುವ ಕ್ರಿಮಿನಲ್ ಪ್ರಕರಣಗಳ ಮಾಹಿತಿ ಮರೆಮಾಚಿದ್ದಾರೆ’ ಎಂಬ ಆರೋಪದಡಿ ಶಾಸಕ ಉದಯ ಗರುಡಾಚಾರ್ ಅವರಿಗೆ ವಿಚಾರಣಾ ನ್ಯಾಯಾಲಯ ವಿಧಿಸಿದ್ದ 2 ತಿಂಗಳು ಜೈಲು ಶಿಕ್ಷೆ ಮತ್ತು ದಂಡವನ್ನು ರದ್ದುಪಡಿಸಿರುವ ಹೈಕೋರ್ಟ್ ಅವರನ್ನು ಈ ಕುರಿತ ಆರೋಪ ಗಳಿಂದ ದೋಷಮುಕ್ತಗೊಳಿಸಿದೆ.

ಈ ಸಂಬಂಧ ಉದಯ ಗರುಡಾಚಾರ್ ಸಲ್ಲಿಸಿದ್ದ ಕ್ರಿಮಿನಲ್ ಮರು ಪರಿಶೀಲನಾ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್‌.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದ್ದು, ಈ ಸಂಬಂಧ ವಿಚಾರಣಾ ನ್ಯಾಯಾಲಯ ನೀಡಿದ್ದ ಆದೇಶವನ್ನು ತಳ್ಳಿ ಹಾಕಿದೆ. ಶಾಸಕರು ಪಾವತಿಸಿರುವ ದಂಡದ ಮೊತ್ತವನ್ನು ವಾಪಸು ನೀಡುವಂತೆಯೂ ನಿರ್ದೇಶಿಸಿದೆ.

ಪ್ರಕರಣವೇನು?: ‘ಶಾಸಕ ಉದಯ್ ಗರುಡಾಚಾರ್ 2018ರಲ್ಲಿ ಚಿಕ್ಕಪೇಟೆಯಲ್ಲಿ ಚುನಾವಣೆಗೆ ಸ್ಪರ್ಧಿಸಿದ್ದಾಗ ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ತಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣ ಹಾಗೂ ಪತ್ನಿಯ ಬ್ಯಾಂಕ್ ವಿವರಗಳನ್ನು ಬಹಿರಂಗಪಡಿಸಿಲ್ಲ’ ಎಂದು ಆರೋಪಿಸಿ ಎಚ್‌.ಜಿ.ಪ್ರಶಾಂತ್ ಎಂಬುವರು ಖಾಸಗಿ ದೂರು ದಾಖಲಿಸಿದ್ದರು. ದೂರಿನ ವಿಚಾರಣೆ ನಡೆಸಿದ್ದ, ‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯ (42ನೇ ಎಸಿಎಂಎಂ) ಎರಡು ತಿಂಗಳ ಸಾಧಾರಣ ಜೈಲು ಶಿಕ್ಷೆ ಮತ್ತು ₹ 10 ಸಾವಿರ ದಂಡ ವಿಧಿಸಿ 2022ರ ಅಕ್ಟೋಬರ್ 13ರಂದು ಆದೇಶಿಸಿತ್ತು. ಆ ಆದೇಶವನ್ನು ಜಿಲ್ಲಾ ಸೆಷನ್ಸ್ ನ್ಯಾಯಾಲಯ 2023ರ ಸೆಪ್ಟೆಂಬರ್ 11ರಂದು ಪುರಸ್ಕರಿಸಿತ್ತು.

ಸುದ್ದಿ 2 ನಿಮಿಷ

ನಾಡಗೀತೆ ಗಾಯನ ಕಟ್ಟುನಿಟ್ಟಾಗಿ ಜಾರಿಗೊಳಿಸಿ: ಮಹೇಶ ಜೋಶಿ

ಬೆಂಗಳೂರು: ‘ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ಎಂಬ ಬೇಧವಿಲ್ಲದೆ ಎಲ್ಲ ಶಾಲೆಗಳಲ್ಲಿ ಹಾಗೂ ಕಾರ್ಯಕ್ರಮಗಳಲ್ಲಿ ನಾಡಗೀತೆ ಗಾಯನದ ಆದೇಶವನ್ನು ಸರ್ಕಾರ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಆಗ್ರಹಿಸಿದ್ದಾರೆ.

ನಾಡಗೀತೆ ಧಾಟಿಗೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ತೀರ್ಪನ್ನು ಸ್ವಾಗತಿಸಿರುವ ಅವರು, ‘ಕನ್ನಡ ನೆಲದಲ್ಲಿ ನಡೆಯುವ ಎಲ್ಲ ಕಾರ್ಯಕ್ರಮಗಳಲ್ಲೂ ನಾಡಗೀತೆಯನ್ನು ಹಾಡುವಂತಾಗಬೇಕು. ನಾಡಗೀತೆಯು ಕನ್ನಡ ಸಂಸ್ಕೃತಿಯ ಅಸ್ಮಿತೆಯನ್ನು ಉಳಿಸುವ ಪ್ರಮುಖ ಹೆಜ್ಜೆಯಾಗಬೇಕು. ಈ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತು ಕೂಡ ರಚನಾತ್ಮಕ ಪಾತ್ರ ವಹಿಸಲಿದೆ’ ಎಂದು ಹೇಳಿದ್ದಾರೆ.

‘ನಾಡು-ನುಡಿಗೆ ಸಂಬಂಧಪಟ್ಟ ವಿಚಾರಗಳು ನ್ಯಾಯಾಲಯ ತಲುಪಬಾರದು. ಇದರಿಂದ ಕನ್ನಡಿಗರಲ್ಲಿ ಒಗ್ಗಟ್ಟಿಲ್ಲ ಎನ್ನುವ ತಪ್ಪು ಸಂದೇಶ ಹೋಗಲಿದೆ. ಈ ಕುರಿತು ಬರಹಗಾರರು, ಗಾಯಕರು, ಸಂಗೀತ ಸಂಯೋಜಕರು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು’ ಎಂದು ತಿಳಿಸಿದ್ದಾರೆ.

‘ನಾಡಗೀತೆ ಮತ್ತು ನಾಡ ಧ್ವಜಗಳು ಕನ್ನಡಿಗರ ಪಾಲಿಗೆ ಕೇವಲ ಭಾವನಾತ್ಮಕ ಸಂಗತಿಗಳಲ್ಲ, ಅವು ಕನ್ನಡದ ಅಸ್ಮಿತೆ’ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಭಾನುವಾರ ಮೆಟ್ರೊ ರೈಲು ಸಂಚಾರ ಅವಧಿ ವಿಸ್ತರಣೆ

ಬೆಂಗಳೂರು: ನಗರದಲ್ಲಿ ಏ.28ರಂದು ಫೀಲ್ಡ್ ಮಾರ್ಷಲ್ ಮಾಣಿಕ್‌ಷಾ ಪರೇಡ್ ಮೈದಾನದಲ್ಲಿ ಆರಂಭವಾಗಿ ನಗರದಲ್ಲಿ ನಡೆಯಲಿರುವ ‘ಟಿಸಿಎಸ್ ವರ್ಲ್ಡ್ 10ಕೆ ರನ್’ ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ಅನುಕೂಲವಾಗುವಂತೆ ‘ನಮ್ಮ ಮೆಟ್ರೊ’ ರೈಲು ಸಂಚಾರವನ್ನು ಅಂದು ಬೆಳಿಗ್ಗೆ 3.35ಕ್ಕೆ ಆರಂಭಿಸಲು ಬಿಎಂಆರ್‌ಸಿಎಲ್ ನಿರ್ಧರಿಸಿದೆ.

ನಾಲ್ಕು ಟರ್ಮಿನಲ್‌ಗಳಾದ ನಾಗಸಂದ್ರ, ರೇಷ್ಮೆ ಸಂಸ್ಥೆ, ಚಲ್ಲಘಟ್ಟ, ವೈಟ್ ಫೀಲ್ಡ್ (ಕಾಡುಗೋಡಿ) ನಿಲ್ದಾಣಗಳಿಂದ ಅಂದು ಬೆಳಿಗ್ಗೆ 3.35ಕ್ಕೆ ಆರಂಭಗೊಳ್ಳಲಿದ್ದು, ಬೆಳಿಗ್ಗೆ 4.25ರ ವರೆಗೆ ಪ್ರತಿ 10 ನಿಮಿಷಕ್ಕೊಂದು ರೈಲು ಸಂಚರಿಸಲಿದೆ. ಮೆಜೆಸ್ಟಿಕ್‌ನಿಂದ ಎಂ.ಜಿ. ರಸ್ತೆ ಕಡೆಗೆ ಬೆಳಿಗ್ಗೆ 4.10ರಿಂದ 5 ಗಂಟೆವರೆಗೆ ಪ್ರತಿ 10 ನಿಮಿಷಕ್ಕೊಂದು ರೈಲು ಸಂಚರಿಸಲಿದೆ.

ಬಳಿಕ ಜನದಟ್ಟಣೆಗೆ ಅನುಗುಣವಾಗಿ ರೈಲುಗಳು ಸಂಚರಿಸಲಿವೆ. ಸಾರ್ವಜನಿಕರು ನಗದು ರಹಿತ ಕ್ಯುಆರ್ ಟಿಕೆಟ್‌ಗಳನ್ನು ಖರೀದಿಸಿ ಪ್ರಯಾಣಿಸುವಂತೆ ಬಿಎಂಆರ್‌ಸಿಎಲ್ ಕೋರಿದೆ. ಸಾಮಾನ್ಯ ದಿನಗಳಲ್ಲಿ ಭಾನುವಾರ ಬೆಳಿಗ್ಗೆ 7ಕ್ಕೆ ಮೆಟ್ರೊ ರೈಲು ಸಂಚಾರ ಆರಂಭವಾಗುತ್ತಿತ್ತು.

ಇಂದಿನಿಂದ ‘ಕೆಪ್ಲೆಕ್ಸ್’ ಮೇಳ

ಬೆಂಗಳೂರು: ಕರ್ನಾಟಕ ಪಾಲಿಮರ್ಸ್ ಅಸೋಸಿಯೇಷನ್ ವತಿಯಿಂದ ಇದೇ 26 ರಿಂದ 29ರವರೆಗೆ ‘ಕೆಪ್ಲೆಕ್ಸ್-2024‘- ಪ್ಲಾಸ್ಟಿಕ್ ತ್ಯಾಜ್ಯ ಮರುಬಳಕೆ, ಸಂಸ್ಕರಣೆ’ ಕುರಿತು ಅಂತರರಾಷ್ಟ್ರೀಯ ಮೇಳ ತುಮಕೂರು ರಸ್ತೆಯಲ್ಲಿರುವ ಬೆಂಗಳೂರು ಅಂತರ ರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ನಡೆಯಲಿದೆ.

ಮೇಳದ ಕುರಿತು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಸೋಸಿಯೇಷನ್ ಅಧ್ಯಕ್ಷ ವಿಜಯಕುಮಾರ್, ‘ಪ್ಲಾಸ್ಟಿಕ್ ಮರು ಬಳಕೆ, ಅತ್ಯಾಧುನಿಕ ತಂತ್ರಜ್ಞಾನ ಪ್ರದರ್ಶನಕ್ಕೆ ಈ ಮೇಳ ವೇದಿಕೆಯಾಗಲಿದೆ. ಬಿಬಿಎಂಪಿ, ರಾಜ್ಯ ಪರಿಸರ ಮಾಲಿನ್ಯ ಮಂಡಳಿ, ನಗರಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರು ಮೇಳದಲ್ಲಿ ಭಾಗಿ ಆಗಲಿದ್ದಾರೆ. ಅತ್ಯಾಧುನಿಕ ಯಂತ್ರೋಪಕರಣಗಳು, ಪ್ಯಾಕೇಜಿಂಗ್ ಉತ್ಪನ್ನಗಳು, ಕಚ್ಚಾ ವಸ್ತುಗಳು, ಪ್ಲಾಸ್ಟಿಕ್ ಮರು ಬಳಕೆ ಮತ್ತು ಸುಸ್ಥಿರತೆ ವಿಷಯಗಳಿಗೆ ಸಂಬಂಧಿಸಿದಂತೆ ಪ್ರದರ್ಶನ ನಡೆಯಲಿದೆ’ ಎಂದು ತಿಳಿಸಿದರು.

ಮಹಾರಾಷ್ಟ್ರ ನ್ಯಾಚುರಲ್ ಗ್ಯಾಸ್ ಲಿಮಿಟೆಡ್
(ಗೇಲ್ & ಬಿಪಿಸಿಎಲ್ ಜಾಯಿಂಟ್ ವೆಂಚರ್)

ಡಿ-ಕಾಂಪ್ರೆಷನ್ ಸ್ಕಿಡ್ (ಡಿಸಿಎಸ್) ಸೌಕರ್ಯ ಸ್ಥಾಪನೆಗಾಗಿ ರಾಮನಗರ ಜಿಲ್ಲೆಯ ರಾಮನಗರ, ಕನಕಪುರ ಮತ್ತು ಮಾಗಡಿ ಪ್ರದೇಶಗಳಲ್ಲಿ ದೀರ್ಘಾವಧಿ ಭೋಗ್ಯದ / ಲೀಸ್ ಆಧಾರದಲ್ಲಿ ಆಫರ್ ಅರ್ಜಿ ಆಹ್ವಾನ ಪ್ರಕಟಣೆ.

ಎಂಎನ್‌ಜಿಎಲ್ ಸಂಸ್ಥೆಗೆ ರಾಮನಗರ, ಕನಕಪುರ ಮತ್ತು ಮಾಗಡಿ ಪ್ರದೇಶಗಳಲ್ಲಿ ಸಿಟಿ ಗ್ಯಾಸ್ ಡಿಸ್ಟ್ರಿಬ್ಯೂಷನ್ ಪ್ರಾಜೆಕ್ಟ್‌ಗಾಗಿ ದೀರ್ಘಾವಧಿ ಭೋಗ್ಯದ ಆಧಾರದಲ್ಲಿ (ಕನಿಷ್ಠ 5 ವರ್ಷ) ಸೂಕ್ತ ಜಮೀನು ಬೇಕಾಗಿರುತ್ತದೆ. ರಾಮನಗರ ಜಿಲ್ಲೆಯ ರಾಮನಗರ, ಕನಕಪುರ ಮತ್ತು ಮಾಗಡಿ ಪ್ರದೇಶಗಳಲ್ಲಿ ಸುಮಾರು 250 ಚ.ಮೀ.-360 ಚ.ಮೀ. (ಕನಿಷ್ಠ 10 ಮೀ. ಫ್ರಂಟೇಜ್ ಹೊಂದಿರುವ) ಸೂಕ್ತ ನಿವೇಶನಗಳಿಗೆ ಆದ್ಯತೆ ನೀಡಲಾಗುತ್ತದೆ.

ಸಂಪೂರ್ಣ ವಿವರಗಳಿಗಾಗಿ ಮತ್ತು ನಿಗದಿತ ಸಮಯದೊಳಗೆ ಅರ್ಜಿ ಸಲ್ಲಿಸಲು, ಆಸಕ್ತಿಯುಳ್ಳ ಅರ್ಜಿದಾರರು ನಮ್ಮ **www.mngl.in** ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಅಥವಾ ಈ ಕೆಳಗಿನವರನ್ನು ಸಂಪರ್ಕಿಸಬಹುದು:

ದಿನೇಶಕುಮಾರ್ ಶರ್ಮಾ – +91 8999807684
ಸುರೇಂದ್ರನ್ – +91 9591032409
ಭರತೇಂದ್ರ ಸಿಂಗ್ – +91 9687641692
ರಾಮ್ ಅಂಬ್ರೆ – +91 9637961193

ಯಾವುದೇ ಸ್ಪಷ್ಟೀಕರಣ/ತಿದ್ದುಪಡಿ/ಮಾರ್ಪಾಡುಗಳು ಎದುರಾದಲ್ಲಿ, ಅಂತಹವುಗಳನ್ನು ಮೇಲ್ಕಂಡ ನಮ್ಮ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಪ್ರಸ್ತಾವಣೆಗಳನ್ನು ಸಲ್ಲಿಸಬೇಕಾದ ವಿಳಾಸ:
ಮಹಾರಾಷ್ಟ್ರ ನ್ಯಾಚುರಲ್ ಗ್ಯಾಸ್ ಲಿಮಿಟೆಡ್
ಬಾಷ್ ಗೇಟ್ ನಂ. 1 ಎದುರು, ಪ್ಲಾಟ್ ನಂ.: ವೆಹಿಕಲ್ ಪಾರ್ಕಿಂಗ್ 1, ಕೆಐಎಡಿಬಿ, 2ನೇ ಹಂತ,
ಸೆಕ್ಟರ್-2 ಬಿಡದಿ ಕೈಗಾರಿಕಾ ಪ್ರದೇಶ, ತಾಲ್ಲೂಕು & ಜಿಲ್ಲೆ: ರಾಮನಗರ, ಕರ್ನಾಟಕ-562109

ಎಂಎನ್‌ಜಿಎಲ್ ಸಂಸ್ಥೆಯು ಯಾವುದೇ ಪ್ರಸ್ತಾವಣೆಯನ್ನು ಯಾವುದೇ ಕಾರಣ ನೀಡದೆಯೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಸೂಚನೆ:- ಈ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ 21 ದಿನಗಳೊಳಗೆ ಮೊಹರಾದ ಲಕೋಟೆಯಲ್ಲಿ ನಿಮ್ಮ ಪ್ರಸ್ತಾವಣೆಗಳನ್ನು ಸಲ್ಲಿಸುವುದು.

ಬನ್ನೇರುಘಟ್ಟ ಉದ್ಯಾನಕ್ಕೆ ಇಂದು ರಜೆ

ಪ್ರಜಾವಾಣಿ ವಾರ್ತೆ

ಆನೇಕಲ್: ಮೊದಲ ಹಂತದ ಲೋಕಸಭಾ ಚುನಾವಣೆ ಮತದಾನದ ಹಿನ್ನೆಲೆಯಲ್ಲಿ ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಏ.26 (ಶುಕ್ರವಾರ) ರಜೆ ಘೋಷಿಲಾಗಿದೆ.

ಸಫಾರಿ ಮತ್ತು ಚಿಟ್ಟೆ ಉದ್ಯಾನ ವೀಕ್ಷಕರಿಗೆ ಲಭ್ಯವಿರುವುದಿಲ್ಲ. ಆದರೆ, ಏ.30 ರಂದು (ಮಂಗಳವಾರ) ಪ್ರವಾಸಿಗರ ವೀಕ್ಷಣೆಗೆ ಲಭ್ಯವಿದೆ. ಮತದಾನ ಪ್ರೋತ್ಸಾಹಿಸಲು ಕ್ರಮ ವಹಿಸಲಾಗಿದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕರು ತಿಳಿಸಿದ್ದಾರೆ.



ಪ್ರಜಾವಾಣಿ

ನಿಮ್ಮ ಮತ ತರಲಿ ಪ್ರಜಾಹಿತ

ಚುನಾವಣೆಯ ಪ್ರಯುಕ್ತ ಪ್ರಜಾವಾಣಿಯು ರಾಷ್ಟ್ರಾದ್ಯಂತ ತನ್ನ ವರದಿಗಾರರನ್ನು ನೇಮಿಸಿ, “ಪ್ರಜಾಮತ” ವಿಶೇಷ ಪುಟದಲ್ಲಿ ಸಮಗ್ರ ಚುನಾವಣಾ ಮಾಹಿತಿಯನ್ನು ಪ್ರಸ್ತುತಪಡಿಸುತ್ತಿದೆ. ಆಳವಾದ ವರದಿಗಳು, ವಿಶ್ಲೇಷಣೆಗಳು, ಸಂದರ್ಶನಗಳೊಂದಿಗೆ ಭಾರತದ ರಾಜಕೀಯ ಕ್ಷೇತ್ರದ ಪಕ್ಷಿನೋಟವು ಇದರಲ್ಲಿದ್ದು , ಸೂಕ್ತ ಅಭ್ಯರ್ಥಿಯನ್ನು ಆಯ್ಕೆ ಮಾಡಲು ನಿಮಗಿದು ನೆರವಾಗಲಿದೆ.

ನಮ್ಮ ಮತ ನಮ್ಮ ಹಕ್ಕು
#INFORMED VOTE

ಚಂದಾದಾರರಾಗಲು ಸಂಪರ್ಕಿಸಿ
ವಾಟ್ಸಾಪ್/ ಐ.ವಿ.ಆರ್. - 9008366666
ಅಥವಾ
QR ಕೋಡ್ ಸ್ಕ್ಯಾನ್ ಮಾಡಿ

Follow Us

ಸಂಕ್ಷಿಪ್ತ ಸುದ್ದಿ

ಜಲಮಂಡಳಿ ಫೋನ್-ಇನ್ ಮುಂದೂಡಿಕೆ

ಬೆಂಗಳೂರು: ಲೋಕಸಭಾ ಚುನಾವಣೆಯ ಮತದಾನ ಶುಕ್ರವಾರ ನಡೆಯಲಿರುವುದರಿಂದ, ಏ.26ರಂದು ನಡೆಯಬೇಕಿದ್ದ ಜಲಮಂಡಳಿ ಅಧ್ಯಕ್ಷರೊಂದಿಗಿನ ಫೋನ್ ಇನ್ ಕಾರ್ಯಕ್ರಮವನ್ನು ಮುಂದೂಡಲಾಗಿದೆ.

ಮೇ 3ರಂದು ಫೋನ್ ಇನ್ ಕಾರ್ಯಕ್ರಮ ನಡೆಯಲಿದೆ ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ.

27, 29ರಂದು ಉಚಿತ ಉದ್ಯೋಗ ಮೇಳ

ಬೆಂಗಳೂರು: ನಿರ್ಮಾಣ ಸಂಸ್ಥೆ ಮತ್ತು ಮೈಕ್ರೋಸಾಫ್ಟ್ ಸಹಯೋಗದಲ್ಲಿ ಇದೇ 27 (ಶನಿವಾರ) ಹಾಗೂ 29ರಂದು (ಸೋಮವಾರ) ‘ಉಚಿತ ಉದ್ಯೋಗ (ಕರಿಯರ್) ಮೇಳ‘ವನ್ನು ಜೆ.ಪಿ. ನಗರದಲ್ಲಿರುವ ಮೈಕ್ರೋಸಾಫ್ಟ್ ತರಬೇತಿ ಕೇಂದ್ರದಲ್ಲಿ ಆಯೋಜಿಸಲಾಗಿದೆ.

ಈ ಮೇಳದಲ್ಲಿ 18 ರಿಂದ 27 ವರ್ಷದೊಳಗಿನ ಆಸಕ್ತ ಉದ್ಯೋಗಾಕಾಂಕ್ಷಿಗಳು ಭಾಗವಹಿಸಬಹುದು.

ಮೇಳದಲ್ಲಿ ಆಯ್ಕೆ ಆದವರಿಗೆ ಕೃತಕ ಬುದ್ಧಿಮತ್ತೆ (ಎಐ), ಫುಲ್ ಸ್ಟ್ಯಾಕ್ ಜಾವಾ, ಡೇಟಾ ಅನಾಲಿಟಿಕ್ಸ್, ವೆಬ್ ಮತ್ತು ಮೊಬೈಲ್ ಅಪ್ಲಿಕೇಶನ್ ಡೆವಲಪರ್, ಐಟಿ-ಸಕ್ರಿಯಗೊಳಿಸಿದ ಸೇವೆಗಳು ಮತ್ತು ಪೈಥಾನ್ ವಿಷಯಗಳ ಬಗ್ಗೆ ತರಬೇತಿ ನೀಡಲಾಗುತ್ತದೆ. ಯಶಸ್ವಿಯಾಗಿ ತರಬೇತಿ ಪೂರೈಸಿದ ಅಭ್ಯರ್ಥಿಗಳಿಗೆ ವಿವಿಧ ಐಟಿ ಮತ್ತು ವಾಣಿಜ್ಯ ಕಂಪನಿಗಳಲ್ಲಿ ಉದ್ಯೋಗ ಸಂದರ್ಶನವನ್ನು ಆಯೋಜಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಮೈಕ್ರೋಸಾಫ್ಟ್ ತರಬೇತಿ ಕೇಂದ್ರ, ಮೆಟ್ರೊ ಕಂಬದ ಸಂಖ್ಯೆ 50ರ ಎದುರು, 2ನೇ ಮಹಡಿ, ಮಂಜುನಾಥ ಕಾಂಪ್ಲೆಕ್ಸ್, ಜೆ.ಪಿ. ನಗರ, ಬೆಂಗಳೂರು-560078. ಮಾಹಿತಿಗೆ: 91549 56753

ಕೆಎಸ್‌ಆರ್, ಎಸ್‌ಎಂವಿಟಿ ರೈಲು ನಿಲ್ದಾಣಗಳಲ್ಲಿ ಆರಂಭ

ರೈಲು ಬೋಗಿ ಈಗ ರೆಸ್ಟೋರೆಂಟ್

ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ಮುಖ್ಯದ್ವಾರದ ಮುಂದೆ ಆರಂಭಗೊಂಡಿರುವ ರೈಲು ಕೋಚ್ ರೆಸ್ಟೋರೆಂಟ್

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್) ಮತ್ತು ಬೈಯಪನಹಳ್ಳಿ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ (ಎಸ್‌ಎಂವಿಟಿ) ರೈಲು ನಿಲ್ದಾಣಗಳಲ್ಲಿ ವಿಶಿಷ್ಟವಾದ 'ರೈಲು ಕೋಚ್ ರೆಸ್ಟೋರೆಂಟ್' ಆರಂಭಗೊಂಡಿದ್ದು, ಗ್ರಾಹಕರನ್ನು ಕೈ ಬೀಸಿ ಕರೆಯುತ್ತಿದೆ.

ಕೆಎಸ್‌ಆರ್ ರೈಲು ನಿಲ್ದಾಣದ ರೆಸ್ಟೋರೆಂಟ್ ಗುತ್ತಿಗೆಯನ್ನು ಓಂ ಇಂಡಸ್ಟ್ರೀಸ್ (ಹಲ್ದಿರಾಮ್) ಹಾಗೂ ಎಸ್‌ಎಂವಿಟಿಯ ರೈಲು ನಿಲ್ದಾಣದ ರೆಸ್ಟೋರೆಂಟ್ ಅನ್ನು ಗೌರವ್ ಎಂಟರ್‌ಪ್ರೈಸಸ್ ಪಡೆದುಕೊಂಡಿವೆ. ಹವಾನಿಯಂತ್ರಿತ ಬೋಗಿಯೊಳಗೆ ಆರಾಮದಾಯಕ 40 ಆಸನಗಳಿವೆ. ಅಲ್ಲದೇ ಬೋಗಿಯ ಹೊರಗೆ 30 ಆಸನಗಳನ್ನು ಅಳವಡಿಸಲಾಗುತ್ತದೆ. ಸಸ್ಯಾಹಾರ ಮತ್ತು ಮಾಂಸಾಹಾರ ಎರಡಕ್ಕೂ ಅವಕಾಶ ನೀಡಲಾಗಿದೆ. ಆರಂಭದಲ್ಲಿ ಸಸ್ಯಾಹಾರ ಮಾತ್ರ ಇರಲಿದೆ.

ದಕ್ಷಿಣ ಭಾರತ, ಉತ್ತರ ಭಾರತೀಯ ಶೈಲಿಯ ಖಾದ್ಯಗಳು ಸೇರಿದಂತೆ ದೇಶದ ವಿವಿಧ ಭಾಗಗಳ ತಿನಿಸುಗಳು ಇಲ್ಲಿ ಸಿಗಲಿವೆ. ದಿನದ 24 ಗಂಟೆಯೂ ರೆಸ್ಟೋರೆಂಟ್ ಕಾರ್ಯನಿರ್ವಹಿಸಲಿದೆ. ಬೋಗಿಯ ಗೋಡೆಯ ಮೇಲೆ ರಾಜ್ಯದ ಕಲಾಕುಸರಿಗಳು, ರೈಲ್ವೆಯ ಇತಿಹಾಸ ವಿವರಿಸುವ ಚಿತ್ರಗಳನ್ನು ಜೋಡಿಸಲಾಗಿದೆ.



ಬೈಯಪ್ಪನಹಳ್ಳಿಯ ಎಸ್‌ಎಂವಿಟಿ ರೈಲು ನಿಲ್ದಾಣದಲ್ಲಿ ಆರಂಭಗೊಂಡಿರುವ ರೈಲು ಕೋಚ್ ರೆಸ್ಟೋರೆಂಟ್

ರೈಲ್ವೆಯಲ್ಲಿ 15 ವರ್ಷ ಬಳಸಿದ ಬೋಗಿಗಳನ್ನು ಗುಜರಿಗೆ ಹಾಕುವ ಬದಲು ರೆಸ್ಟೋರೆಂಟ್‌ಗಳನ್ನಾಗಿ ಮಾಡಲು ನೈರುತ್ಯ ರೈಲ್ವೆ ನಿರ್ಧರಿಸಿತ್ತು. ಅದರ ಮೊದಲ ಪ್ರಯತ್ನವಾಗಿ ಹುಬ್ಬಳ್ಳಿಯಲ್ಲಿ 'ಬೋಗಿ ಬೋಗಿ ರೆಸ್ಟೋರೆಂಟ್' ಆರಂಭಿಸಿತ್ತು. ಈ ಪಟ್ಟಿಗೆ ಮತ್ತೆರಡು ಕೋಚ್ ರೆಸ್ಟೋರೆಂಟ್‌ಗಳು ಸೇರ್ಪಡೆಯಾಗಿವೆ. ಇವೆರಡರ ಗುತ್ತಿಗೆ ಅವಧಿ ಐದು ವರ್ಷಗಳಾಗಿದ್ದು, ರೈಲ್ವೆಗೆ ₹ 7.54 ಕೋಟಿ ಆದಾಯ ಬರಲಿದೆ ಎಂದು ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕಾಧಿಕಾರಿ ಕೆ.ಆರ್. ತ್ರಿನೇತ್ರ 'ಪ್ರಜಾವಾಣಿ'ಗೆ ತಿಳಿಸಿದರು.

'ಕೆಎಸ್‌ಆರ್ ರೈಲು ನಿಲ್ದಾಣದ ಮುಖ್ಯಪ್ರವೇಶ ದ್ವಾರದ ಮುಂಭಾಗದಲ್ಲಿ ಕೋಚ್ ರೆಸ್ಟೋರೆಂಟ್ ಆರಂಭವಾಗಿದೆ. ಗ್ರಾಹಕರಿಂದ ಉತ್ತಮ ಸ್ಪಂದನೆ ದೊರೆತಿದೆ. ಈ ಸ್ಪಂದನೆ ಮುಂದುವರಿಯುವ ವಿಶ್ವಾಸವಿದೆ. ಕೆಎಸ್‌ಆರ್ ನಿಲ್ದಾಣಕ್ಕೆ ಪ್ರತಿ ದಿನ 2 ಲಕ್ಷ ಪ್ರಯಾಣಿಕರು ಬಂದು ಹೋಗುತ್ತಾರೆ. ಎಸ್‌ಎಂವಿಟಿ ನಿಲ್ದಾಣದಲ್ಲಿ ಪ್ರಯಾಣಿಕರ ಸಂಖ್ಯೆ 60 ಸಾವಿರವಿದೆ. ಹಾಗಾಗಿ ಗ್ರಾಹಕರ ಕೊರತೆಯಾಗದು' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇನ್ನಷ್ಟು ಜಾಗ ಬೇಕು: 'ಕೋಚ್ ರೆಸ್ಟೋರೆಂಟ್ ಅನ್ನು ಚುನಾವಣೆಯ ಸಂದರ್ಭದಲ್ಲಿ ಆರಂಭಿಸಿರುವುದರಿಂದ ಪ್ರಚಾರ ಸಿಕ್ಕಿಲ್ಲ. ಪ್ರಚಾರ ದೊರೆತು ಗ್ರಾಹಕರ ಸಂಖ್ಯೆ ಹೆಚ್ಚಿದರೆ ಈಗಿರುವ ಜಾಗ ಸಾಕಾಗುವುದಿಲ್ಲ ಅಂತ ಎನ್ನಿಸುತ್ತಿದೆ' ಎಂದು ಗ್ರಾಹಕ ಕೆ.ಎನ್. ಕೃಷ್ಣಪ್ರಸಾದ್ ಅವರು ತಿಳಿಸಿದರು.

'ಚೆನ್ನೈನಲ್ಲಿ ಕೋಚ್ ರೆಸ್ಟೋರೆಂಟ್ ಚೆನ್ನಾಗಿ ಮಾಡಿದ್ದಾರೆ. ಎಸ್‌ಎಂವಿಟಿಯಲ್ಲಿಯೂ ಬೇಕಾದಷ್ಟು ಜಾಗವಿದೆ. ಕೆಎಸ್‌ಆರ್ ನಿಲ್ದಾಣದ-ಲ್ಲಿಯೇ ಜಾಗದ ಸಮಸ್ಯೆ ಇದೆ. ಎರಡನೇ ದ್ವಾರದ ಬಳಿ ಮಾಡಿದರೆ ಸಾಕಷ್ಟು ಜಾಗ ಸಿಗಬಹುದು' ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಬೇಡಿಕೆ ಇರುವ ಕಡೆ ರೆಸ್ಟೋರೆಂಟ್

ಬೆಂಗಳೂರಿನಲ್ಲಿ ಸದ್ಯ ಎರಡು ಕೋಚ್ ರೆಸ್ಟೋರೆಂಟ್ ಆರಂಭಿಸಲಾಗಿದೆ. ಇ- ಟೆಂಡರ್‌ನಲ್ಲಿ ಗುತ್ತಿಗೆ ಪಡೆದವರಿಗೆ ಕೋಚ್‌ಗಳನ್ನು ಉಚಿತವಾಗಿ ನೀಡಿದ್ದೇವೆ. ಗುತ್ತಿಗೆ ಪಡೆದವರು ಅವರಿಗೆ ಬೇಕಾದಂತೆ ವಿನ್ಯಾಸ ಮಾಡಿಕೊಂಡಿದ್ದಾರೆ. ಕೋಚ್ ಒಳಗೆ ಮಾತ್ರವಲ್ಲ, ಹೊರಗೂ ಟೇಬಲ್ ಜೋಡಿಸಿಕೊಂಡು ಗ್ರಾಹಕರಿಗೆ ಸೇವೆ ನೀಡಬಹುದು ಎಂದು ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕಾಧಿಕಾರಿ ಕೆ.ಆರ್. ತ್ರಿನೇತ್ರ ತಿಳಿಸಿದರು.

ಈ ರೆಸ್ಟೋರೆಂಟ್‌ಗಳು ಯಶಸ್ವಿಯಾದರೆ ಕೆಎಸ್‌ಆರ್ ರೈಲು ನಿಲ್ದಾಣದ ಎರಡನೇ ದ್ವಾರದ ಬಳಿಯೂ ಆರಂಭಿಸಲಾಗುವುದು. ಅಲ್ಲದೇ ಯಶವಂತಪುರ, ಕಂಟೋನ್ಮೆಂಟ್ ನಿಲ್ದಾಣಗಳು ಸೇರಿದಂತೆ ಬೇಡಿಕೆಗೆ ಅನುಗುಣವಾಗಿ ಕೋಚ್ ರೆಸ್ಟೋರೆಂಟ್ ತೆರೆಯಲಾಗುವುದು ಎಂದು ಮಾಹಿತಿ ನೀಡಿದರು.

ಟೈಟನ್ ಐ–ಪ್ಲಸ್‌ನಿಂದ ವಿಶೇಷ ರಿಯಾಯಿತಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಕನ್ನಡಕ ತಯಾರಿಕಾ ಕಂಪನಿಯಾದ ಟೈಟನ್ ಐ–ಪ್ಲಸ್, ಆಕರ್ಷಕ ಫ್ರೇಮ್, ಲೆನ್ಸ್, ಸನ್‌ಗ್ಲಾಸಸ್ ಮತ್ತು ಕಾಂಟ್ಯಾಕ್ಟ್ ಲೆನ್ಸ್ ಮೇಲೆ ಬೇಸಿಗೆಯ ಆಕರ್ಷಕ ರಿಯಾಯಿತಿಯನ್ನು ಪ್ರಕಟಿಸಿದೆ.

₹750ಕ್ಕೆ ಫ್ಯಾಷನ್ ಫ್ರೇಮ್ ಮತ್ತು ಬ್ಲ್ಯೂ ಸೇಫ್ ಲೆನ್ಸ್, ₹500ಕ್ಕೆ ಆ್ಯಂಟಿ–ರಿಫ್ಲೆಕ್ಟಿವ್ ಲೆನ್ಸ್, ₹1,799ಕ್ಕೆ ಪ್ರೊಗ್ರೆಸ್ಸಿವ್ ಲೆನ್ಸ್‌ನಂತಹ ಬಹು ಮಾದರಿಯ ಲೆನ್ಸ್‌ಗಳ ಆಯ್ಕೆ ಸೌಲಭ್ಯವಿದೆ ಎಂದು ಕಂಪನಿ ತಿಳಿಸಿದೆ.

ಬಾಲಕ ಮತ್ತು ಬಾಲಕಿಯರಿಗೆ ₹999ಕ್ಕೆ ಕನ್ನಡಕಗಳು ಲಭ್ಯವಿವೆ ಎಂದು ಹೇಳಿದೆ.

ಫ್ರೇಮ್‌ಗಳು ಜಿಯೊಮೆಟ್ರಿಕಲ್, ಸ್ಲಿಮ್, ಓವರ್‌ಸೈಜ್ಡ್, ಕ್ಯಾಟ್–ಐ, ಪಾರದರ್ಶಕ, ದುಂಡಗಿನ ಮತ್ತು ಚೌಕಾಕಾರದ ಶೈಲಿಯಲ್ಲಿವೆ. ಎಲ್ಲರ ಅಭಿರುಚಿಗೆ ತಕ್ಕಂತೆ ತಯಾರಿಸಲಾಗಿದೆ. 20ಕ್ಕೂ ಹೆಚ್ಚು ಅಂತರರಾಷ್ಟ್ರೀಯ ಬ್ರ್ಯಾಂಡ್‌ಗಳು ಮತ್ತು ವೈವಿಧ್ಯಮಯ ಆಯ್ಕೆಗಳ ಮೇಲೆ ಶೇ 20ರಷ್ಟು ರಿಯಾಯಿತಿ ಸೌಲಭ್ಯವಿದೆ ಎಂದು ತಿಳಿಸಿದೆ.

ಗ್ರಾಹಕರು ಕಂಪನಿಯ ಮಳಿಗೆ ಅಥವಾ ವೆಬ್‌ಸೈಟ್‌ನಲ್ಲಿ ಖರೀದಿಸ-ಬಹುದಾಗಿದೆ ಎಂದು ತಿಳಿಸಿದೆ.

ಜನತಾ ಸೇವಾ ಬ್ಯಾಂಕ್ ಲಾಭ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ 2023–24ನೇ ಆರ್ಥಿಕ ವರ್ಷದಲ್ಲಿ ₹15.94 ಕೋಟಿ ನಿವ್ವಳ ಲಾಭ ಗಳಿಸಿದೆ.

ಬ್ಯಾಂಕ್‌ನ ಒಟ್ಟು ವ್ಯವಹಾರ ₹2,083.49 ಕೋಟಿ ಆಗಿದೆ. ಷೇರು ಬಂಡವಾಳವು ₹31.07 ಕೋಟಿ ದಾಟಿದೆ. ಆಪದ್ಧನ ನಿಧಿ ಮತ್ತು ಇತರೆ ನಿಧಿಗಳ ಮೊತ್ತವು ₹201.53 ಕೋಟಿ ಆಗಿದ್ದು, ಒಟ್ಟು ₹1,184.33 ಕೋಟಿ ಠೇವಣಿ ಸಂಗ್ರಹಿಸಲಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಈ ಅವಧಿಯಲ್ಲಿ ಬ್ಯಾಂಕ್ ಒಟ್ಟು 674.67 ಕೋಟಿ ಸಾಲ ನೀಡಿದೆ. ಸರ್ಕಾರಿ ಸಾಲ ಪತ್ರಗಳಲ್ಲಿ ₹663.08 ಕೋಟಿ ಹೂಡಿಕೆ ಮಾಡಿದೆ. ನಿವ್ವಳ ಅನುತ್ಪಾದಕ ಸಾಲವು ಶೂನ್ಯ ಮಟ್ಟದಲ್ಲಿದೆ ಎಂದು ತಿಳಿಸಿದೆ.

ಬೆಂಗಳೂರಿನಲ್ಲಿ ಬ್ಯಾಂಕ್‌ನ ಐದು ಶಾಖೆಗಳಿವೆ. ಷೇರು ಸಂಗ್ರಹ, ಸ್ವಂತ ನಿಧಿ ಕ್ರೋಢೀಕರಣ, ಠೇವಣಿ ಸಂಗ್ರಹ, ಸಾಲ ವಿತರಣೆಯಲ್ಲಿ ರಾಜ್ಯದ ಇತರೆ ಪಟ್ಟಣ ಸಹಕಾರ ಬ್ಯಾಂಕ್‌ಗಳಿ-ಗಿಂತಲೂ ಮುಂದಿದೆ ಎಂದು ಬ್ಯಾಂಕ್‌ನ ಕಾರ್ಯನಿರ್ವಹಣಾಧಿಕಾರಿ ಅವರು ತಿಳಿಸಿದ್ದಾರೆ.

ಜೆಇಇ: ಚೈತನ್ಯ ಸಂಸ್ಥೆ ವಿದ್ಯಾರ್ಥಿಗಳ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನಡೆಸುವ ಜಂಟಿ ಪ್ರವೇಶ ಪರೀಕ್ಷೆಯಲ್ಲಿ (ಜೆಇಇ-ಮೇನ್ಸ್) ಶ್ರೀ ಚೈತನ್ಯ ಎಜುಕೇಷನಲ್ ಇನ್‌ಸ್ಟಿಟ್ಯೂ-ಷನ್ಸ್ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಅನಿಮೇಶ್ ಸಿಂಗ್ ಅಖಿಲ ಭಾರತ ಮಟ್ಟದಲ್ಲಿ (ಎಐಆರ್) ಎರಡನೇ ರ‍್ಯಾಂಕ್ ಪಡೆದರೆ, ಮನೋಜ್ ಸೋಹನ್ ಗಾಜುಲಾ 96, ಅರ್ಮಾನ್ ಸಿಂಗಲ್ 542, ಆಯುಷ್ ರೈ 552, ಚಿರಾಗ್ ವಿ. ಗೌಡ 572, ಜಗದೀಶ್ ರೆಡ್ಡಿ ಎಂ. 668, ರೋಹಿತ್ ರಾಜೀವ್ ನಂಬಿಯಾರ್ 696, ವೇದ್ ಬನ್ಸಾಲ್ 701, ಎಂ. ಲಿಲಿತ್ ಚಂದನ್ 736, ಶಶಾಂಗ್ ಡಿ.ಆರ್. 738, ಆಕಾಶ್ ಕುಮಾರ್ 757, ಆದಿತ್ಯ ಎ. 796, ರಾಹುಲ್ ರಾವ್ 809, ಗೌತಮ್ ತಥಾಂಡ 824 ಹಾಗೂ ಆಯುಷ್ ಅಗರ್ವಾಲ್ 836 ರ‍್ಯಾಂಕ್ ಪಡೆದಿದ್ದಾರೆ.

ಸಂಸ್ಥೆಯ 15 ವಿದ್ಯಾರ್ಥಿಗಳು ಸಾವಿರದೊಳಗೆ ರ‍್ಯಾಂಕ್ ಪಡೆದರೆ, 810 ಅಭ್ಯರ್ಥಿಗಳು 'ಜೆಇಇ ಅಡ್ವಾನ್ಸ್ಡ್' ಅರ್ಹತೆ ಪಡೆದಿದ್ದಾರೆ. ಶಿಕ್ಷಣ ಸಂಸ್ಥೆಯ ನಿರ್ದೇಶಕಿ ಸುಷ್ಮಾ ಬೊಪ್ಪನಾ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ ಎಂದು ಬೆಂಗಳೂರಿನ ಶ್ರೀ ಚೈತನ್ಯ ಎಜುಕೇಶನಲ್ ಇನ್‌ಸ್ಟಿಟ್ಯೂಷನ್ಸ್‌ನ ಹೆಚ್ಚುವರಿ ಪ್ರಧಾನ ವ್ಯವಸ್ಥಾಪಕ ವಿ. ಸತೀಶ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನಿಮೇಶ್ ಸಿಂಗ್

ಮನೋಜ್ ಸೋಹನ್ ಗಾಜುಲಾ

ಆಯುಷ್ ರೈ

ಅರ್ಮಾನ್ ಸಿಂಗಲ್

ಚಿರಾಗ್ ವಿ. ಗೌಡ

ಜಗದೀಶ್ ರೆಡ್ಡಿ

ರೋಹಿತ್ ರಾಜೀವ್ ನಂಬಿಯಾರ್

ರಷ್ಯಾ ಸೇನೆಯಲ್ಲಿದ್ದ 10 ಭಾರತೀಯರು ವಾಪಸ್

ನವದೆಹಲಿ (ಪಿಟಿಐ): ರಷ್ಯಾ ಸೇನೆಯಲ್ಲಿ ಕೆಲಸ ಮಾಡುತ್ತಿದ್ದ 10 ಭಾರತೀಯರ ಬಿಡುಗಡೆಯಾಗಿದ್ದು, ಅವರು ಭಾರತಕ್ಕೆ ಮರಳುತ್ತಿದ್ದಾರೆ.

'ರಷ್ಯಾದ ಸೇನೆಯ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ಭಾರತೀಯರು ಮರಳುತ್ತಿರು-ವುದನ್ನು ರಷ್ಯಾ ಖಚಿತಪಡಿಸಿದೆ' ಎಂದು ಭಾರತೀಯ ವಿದೇಶಾಂಗ ಇಲಾಖೆಯ ವಕ್ತಾರ ರಣ್‌ಧೀರ್ ಜೈಸ್ವಾಲ್ ಗುರುವಾರ ತಿಳಿಸಿದ್ದಾರೆ.

ರಷ್ಯಾದ ಸೇನೆಯಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಭಾರತೀಯರು ಕಳೆದ ತಿಂಗಳು ಮೃತಪಟ್ಟಿದ್ದರು. ಈ ಬಳಿಕ ಭಾರತವು, ಜೀವಕ್ಕೆ ಅಪಾಯ ತಂದೊಡ್ಡುವ ಕೆಲಸಕ್ಕೆ ಸೇರದಂತೆ ಎಚ್ಚರಿಕೆ ನೀಡಿತ್ತು.

'ರಷ್ಯಾ ಸೇನೆಯ ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಿಸುತ್ತಿ-ರುವ ಇತರ ಭಾರತೀಯರ ಬಗ್ಗೆಯೂ ಗಮನಹರಿಸಲಾಗಿದೆ. ಭಾರತಕ್ಕೆ ಮರಳಲು ಇಚ್ಛಿಸುವವರ ಜೊತೆ ಸಂಪರ್ಕ ಸಾಧಿಸಲಾಗಿದ್ದು, ಅವರನ್ನು ಕರೆತರಲು ವ್ಯವಸ್ಥೆ ಮಾಡಲಾಗುತ್ತಿದೆ' ಎಂದು ಜೈಸ್ವಾಲ್ ತಿಳಿಸಿದರು.

ಕಳೆದ ವರ್ಷದಿಂದ ಈವರೆಗೆ 200 ಭಾರತೀಯರು ರಷ್ಯಾದ ಸೇನೆಯ ಸಹಾಯಕರಾಗಿ ಸೇರಿಕೊಂಡಿದ್ದಾರೆ ಎಂದು ವರದಿಯೊಂದು ತಿಳಿಸಿದೆ.

ಉದ್ಯಮಿಯೊಬ್ಬರಿಂದ ₹5ಲಕ್ಷ ಹಣ ಸ್ವೀಕಾರ

ಲಂಚ: ಬುಡಾ ಆಯುಕ್ತ ಸೇರಿ ಆರು ಮಂದಿ ಲೋಕಾಯುಕ್ತ ಬಲೆಗೆ

ಬಳ್ಳಾರಿ: ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರಿಂದ ₹5ಲಕ್ಷ ಲಂಚ ಪಡೆಯುತ್ತಿದ್ದ 'ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ'(ಬುಡಾ)ದ ಆಯುಕ್ತ ರಮೇಶ್ ವಟಗಲ್ ಅವರನ್ನು ಲೋಕಾಯುಕ್ತ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಇವರ ಜತೆಗೆ, ಇನ್ನೂ ನಾಲ್ಕು ಮಂದಿ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನೂ ಬಂಧಿಸಲಾಗಿದೆ ಎಂದು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಸಿದ್ದರಾಜು ಸಿ. 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

20 ಎಕರೆ ಭೂಮಿ ಅಭಿವೃದ್ಧಿಗೆ ತಾತ್ಕಾಲಿಕ ಅನುಮೋದನೆ ನೀಡಲು ಬಳ್ಳಾರಿಯ ರಿಯಲ್ ಎಸ್ಟೇಟ್ ಉದ್ಯಮಿ ಈರೇಶಿ ಎಂಬುವವರ ಬಳಿ ಬುಡಾದ ಆಯುಕ್ತ ರಮೇಶ್ ವಟಗಲ್, ಅಧಿಕಾರಿ ಮತ್ತು ಸಿಬ್ಬಂದಿ ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ರಮೇಶ್ ವಟಗಲ್

ಈ ಬಗ್ಗೆ ಈರೇಶಿ ಲೋಕಾಯುಕ್ತ ಪೊಲೀಸರಿಗೆ ಬುಧವಾರ ದೂರು ನೀಡಿದ್ದರು. ಆ ದೂರಿನ ಆಧಾರದಲ್ಲಿ ಗುರುವಾರ ದಾಳಿ ನಡೆಸಿದ ಲೋಕಾಯುಕ್ತ ಅಧಿಕಾರಿಗಳು ₹5ಲಕ್ಷ ಲಂಚ ಪಡೆಯುತ್ತಿದ್ದಾಗಲೇ ರಮೇಶ್ ವಟಗಲ್ ಅವರನ್ನು ಬಂಧಿಸಿದರು.

'ಜತೆಗೆ ₹6 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದ ನಗರ ಯೋಜನಾ ವಿಭಾಗದ ಸದಸ್ಯ ಕಲ್ಲಿನಾಥ, ₹3 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದ ಸಹಾಯಕ ನಗರ ಯೋಜನಾಧಿಕಾರಿ ಯಶಸ್ವಿನಿ, ₹10 ಸಾವಿರ ಲಂಚ ಪಡೆದ ವ್ಯವಸ್ಥಾಪಕ ನಾರಾಯಣ, ₹60 ಸಾವಿರಕ್ಕೆ ಬೇಡಿಕೆ ಇಟ್ಟು ₹20 ಸಾವಿರ ಹಣವನ್ನು ಫೋನ್‌ಪೇ ಮೂಲಕ ಪಡೆದ ಕೇಸ್ ವರ್ಕರ್ ಶಂಕರ್, ಫೋನ್ ಪೇ ಮೂಲಕ ₹20 ಸಾವಿರ ಪಡೆದ ಕಿರಿಯ ಎಂಜಿನಿಯರ್ ಖಾಜಿ ಖಾಜಾ ಹುಸೇನ್ ಅವರನ್ನೂ ಬಂಧಿಸಲಾಗಿದೆ' ಎಂದು ಹೇಳಿದರು.

'ಬಂಧಿತ ಆರು ಜನರಿಂದಲೂ ಲಂಚದ ಹಣ ವಶಕ್ಕೆ ಪಡೆಯಲಾಗಿದೆ' ಎಂದು ತಿಳಿಸಿದರು.

ತಾಪಮಾನ ಏರಿಕೆ, ಮಳೆ ಕೊರತೆಯಿಂದ ಗಗನಕ್ಕೇರಿದ ತರಕಾರಿ ಬೆಲೆ

₹120ರ ಗಡಿ ದಾಟಿದ ಬೀನ್ಸ್ ದರ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆ ಕೊರತೆಯಿಂದಾಗಿ ಸೊಪ್ಪು, ತರಕಾರಿ ಬೆಳೆಯುವ ಪ್ರಮಾಣವೂ ಕಡಿಮೆಯಾಗುತ್ತಿದೆ. ಬೆಳೆದವರಿಗೆ ಸರಿಯಾದ ಇಳುವರಿ ಸಿಗದ ಕಾರಣ, ಮಾರುಕಟ್ಟೆಗೆ ಪೂರೈಕೆಯಾಗುತ್ತಿರುವ ಪ್ರಮಾಣದಲ್ಲೂ ವ್ಯತ್ಯಯವಾಗಿದೆ. ಪರಿಣಾಮವಾಗಿ ಕೆಲ ತರಕಾರಿ ಮತ್ತು ಸೊಪ್ಪಿನ ಬೆಲೆ ಹೆಚ್ಚಾಗಿದ್ದು, ಅದರಲ್ಲೂ ಬೀನ್ಸ್ (ಹುರುಳಿಕಾಯಿ) ದರ ₹120ರ ಗಡಿ ದಾಟಿದೆ !

ರಾಜ್ಯದ ಕೆಲವು ಭಾಗಗಳಲ್ಲಿ ಮಳೆಯಾಗಿದ್ದರೂ, ಬಿಸಿಲಿನ ತಾಪ ಕಡಿಮೆಯಾಗಿಲ್ಲ. ನೀರಿನ ಕೊರತೆ ಮುಂದುವರಿದಿದೆ. ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ತರಕಾರಿಗಳು ಪೂರೈಕೆಯಾಗುತ್ತಿಲ್ಲ. ಜೊತೆಗೆ, ಬೇಡಿಕೆಯೂ ಹೆಚ್ಚಾದ ಕಾರಣ, ಸಹಜವಾಗಿ ಕೆಲ ತರಕಾರಿಗಳ ಬೆಲೆ ಏರಿಕೆಯಾಗಿದೆ.

'ಚಿಕ್ಕಬಳ್ಳಾಪುರ, ಕೋಲಾರ, ಕುಣಿಗಲ್, ತುಮಕೂರು ಮತ್ತು ತಮಿಳುನಾಡಿನಿಂದ ಮಾರುಕಟ್ಟೆಗೆ ಬರುತ್ತಿದ್ದ ಬೀನ್ಸ್ ಪ್ರಮಾಣ ಕಡಿಮೆಯಾಗಿದೆ. ಇದರಿಂದ ಬೆಲೆಯೂ ಹೆಚ್ಚಾಗಿದೆ. ಗ್ರಾಹಕರಿಗೆ ಮತ್ತು ಮದುವೆ ಮತ್ತಿತರ ಸಮಾರಂಭ ಆಯೋಜಿಸುವವರಿಗೆ ಸ್ವಲ್ಪ ತೊಂದರೆಯಾಗಿದೆ. ಮತ್ತೊಂದೆಡೆ ಸಮರ್ಪಕ ಇಳುವರಿ ಬಾರದ ಕಾರಣ ರೈತರಿಗೂ ಹೆಚ್ಚಿನ ಲಾಭವಾಗುತ್ತಿಲ್ಲ' ಎನ್ನುತ್ತಾರೆ ಕೆ.ಆರ್. ಮಾರುಕಟ್ಟೆಯ ತರಕಾರಿ ವ್ಯಾಪಾರಿಗಳು.

ಕಳೆದ ವಾರ ಕೆ.ಜಿಗೆ ₹80ರಂತೆ ಮಾರಾಟವಾಗುತ್ತಿದ್ದ ಬೀನ್ಸ್ ಈಗ ₹120ರ ಗಡಿ ದಾಟಿದೆ. ಪ್ರತಿ ಕೆ.ಜಿ ಕ್ಯಾರೆಟ್ ಹಾಗೂ ಕ್ಯಾಪ್ಸಿಕಮ್ ₹60 ಹಿರೇಕಾಯಿ ₹70, ಮೆಣಸಿನಕಾಯಿ ₹80, ಬಟಾಣಿ ₹180, ಹೂಕೋಸು ₹50, ಬದನೆಕಾಯಿ ₹60, ಬೆಳ್ಳುಳ್ಳಿ ₹180 ಹಾಗೂ ಶುಂಠಿ ₹200 ರಂತೆ ಮಾರಾಟವಾಗುತ್ತಿದೆ.

ಕಳೆದ ವಾರದಂತೆ ಅಗತ್ಯ ಪ್ರಮಾಣದ ತರಕಾರಿಗಳು ಮಾರುಕಟ್ಟೆಗೆ

ಪೂರೈಕೆಯಾಗುತ್ತಿಲ್ಲ. ಸರಿಯಾಗಿ ಮಳೆಯಾಗುವವರೆಗೂ ತರಕಾರಿ ದರ ಇಳಿಯುವ ಸಾಧ್ಯತೆ ಕಡಿಮೆ' ಎನ್ನುತ್ತಾರೆ ಕೆ.ಆರ್. ಮಾರುಕಟ್ಟೆಯ ತರಕಾರಿ ವ್ಯಾಪಾರಿಗಳಾದ ಸುಹೇಲ್, ಅಕ್ರಂ ಪಾಷಾ, ರಾಜೇಶ್.

ಸೊಪ್ಪಿನ ದರ ಹೆಚ್ಚಳ: ಕಳೆದ ವಾರ ಒಂದು ಕಟ್ಟು ಕೊತ್ತಂಬರಿ ₹20ರಂತೆ ಮಾರಾಟವಾಗುತ್ತಿತ್ತು. ಈಗ ₹30ಕ್ಕೆ ಏರಿದೆ. ಮೆಂತೆ, ಸಬ್ಬಿಗೆ ಪ್ರತಿ ಕಟ್ಟಿಗೆ ₹20ರಂತೆ ಮಾರಾಟವಾಗುತ್ತಿದೆ.

ಕೆ.ಆರ್. ಮಾರುಕಟ್ಟೆಯಲ್ಲಿ
(ಪ್ರತಿ ಕೆ.ಜಿಗೆ ₹ಗಳಲ್ಲಿ)

ತರಕಾರಿ	ಕಳೆದ ವಾರದ ದರ	ಈ ವಾರದ ದರ
ಬೀನ್ಸ್	80	120
ಕ್ಯಾಪ್ಸಿಕಮ್	60	60
ಕ್ಯಾರೆಟ್	50	60
ಹೀರೆಕಾಯಿ	60	60
ಬೆಂಡೇಕಾಯಿ	50	40
ಚವಳಿಕಾಯಿ	60	60
ಮೆಣಸಿನಕಾಯಿ	80	80
ಬಟಾಣಿ	200	160
ಆಲೂಗಡ್ಡೆ	20	30
ಟೊಮೆಟೊ	20	30
ಈರುಳ್ಳಿ	20	20
ಹೂಕೋಸು	30	50
ಬದನೆಕಾಯಿ	60	60
ಕ್ಯಾಬೇಜ್	40	40
ತೊಂಡೆಕಾಯಿ	60	60
ಸೌತೆಕಾಯಿ	60	40
ಬಿಟ್‌ರೂಟ್	40	40
ಮೂಲಂಗಿ	40	60
ಹಾಗಲಕಾಯಿ	60	60
ಕುಂಬಳಕಾಯಿ	30	40
ಬೆಳ್ಳುಳ್ಳಿ	200	180
ಶುಂಠಿ	180	200

ಸೊಪ್ಪು	ಚಿಲ್ಲರೆ ದರ	ಪ್ರತಿ ಕಟ್ಟಿಗೆ ₹ಗಳಲ್ಲಿ
ಕೊತ್ತಂಬರಿ	20	30
ಮೆಂತ್ಯ	20	20
ಸಬ್ಬಿಗೆ	15	20
ಪಾಲಕ್	10	20
ಪುದೀನ	10	30

'ಹಿಂದುಳಿದ ಸಮುದಾಯದ ದಿಕ್ಕು ತಪ್ಪಿಸುತ್ತಿರುವ ಪ್ರಧಾನಿ'

ಪ್ರಜಾವಾಣಿ ವಾರ್ತೆ

ಸಿ.ಎಸ್. ದ್ವಾರಕಾನಾಥ್

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಮತ್ತು ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಹನ್ಸರಾಜ್ ಗಂಗಾರಾಮ್ ಅಹೀರ ಇಬ್ಬರೂ ಕೂಡಿ ಹಿಂದುಳಿದ ವರ್ಗಗಳನ್ನು ದಿಕ್ಕು ತಪ್ಪಿಸುವ ಕೆಲಸಕ್ಕೆ ಇಳಿದಿದ್ದಾರೆ ಎಂದು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್. ದ್ವಾರಕಾನಾಥ್ ತಿಳಿಸಿದ್ದಾರೆ.

'ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಒಬಿಸಿಗಳ ಪಟ್ಟಿಯಲ್ಲೇ ಮುಸ್ಲಿಮರಿಗೂ ಮೀಸಲಾತಿ ಕಲ್ಪಿಸುವ ಮೂಲಕ ಹಿಂದುಳಿದವರ ಮೀಸಲಾತಿಯನ್ನು ಕಡಿತಗೊಳಿಸಿತ್ತು. ಅದನ್ನು ದೇಶದಾದ್ಯಂತ ವಿಸ್ತರಿಸಲೂ ಯೋಚಿಸಿತ್ತು' ಎಂದು ಪ್ರಧಾನಿ ನರೇಂದ್ರ ಮೋದಿ ಮಧ್ಯಪ್ರದೇಶದ ಸಾಗರ್ ಜಿಲ್ಲೆಯಲ್ಲಿ ಚುನಾವಣಾ ಭಾಷಣ ಮಾಡಿದ್ದಾರೆ. ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ಮೋದಿ ಹೇಳಿಕೆಯನ್ನೇ ಪುನರುಚ್ಚರಿಸಿದ್ದಾರೆ. ಇಬ್ಬರಿಗೂ ಕರ್ನಾಟಕದ ಹಿಂದುಳಿದ ವರ್ಗಗಳ ಮೀಸಲಾತಿಯ ಅರಿವಿಲ್ಲ ಎಂದು ದ್ವಾರಕಾನಾಥ್ ಟೀಕಿಸಿದ್ದಾರೆ.

ಸ್ವಾತಂತ್ರ್ಯ ಪೂರ್ವದ ನಾಲ್ವಡಿ ಕೃಷ್ಣರಾಜ ಒಡೆಯರ್ ನೇಮಿಸಿದ 'ಮಿಲ್ಲರ್ ಆಯೋಗ'ದಿಂದ ಹಿಡಿದು ಸ್ವಾತಂತ್ರ್ಯಾನಂತರದ ಚಿನ್ನಪ್ಪರೆಡ್ಡಿ ಆಯೋಗ, ವೆಂಕಟಸ್ವಾಮಿ ಆಯೋಗದ ಆದಿಯಾಗಿ ಇಂದಿನ ಎಲ್ಲ ಆಯೋಗಗಳು ಮುಸ್ಲಿಮರನ್ನು ಹಿಂದುಳಿದ ವರ್ಗಗಳು ಎಂದೇ ಕರ್ನಾಟಕದಲ್ಲಿ ಗುರುತಿಸಿವೆ. ಮುಸ್ಲಿಮರನ್ನೆಂದೂ ಧಾರ್ಮಿಕ ಅಲ್ಪಸಂಖ್ಯಾತರು ಎಂದು ಗುರುತಿಸಿಲ್ಲ, ಅಂತೆಯೇ ಕ್ರೈಸ್ತರು, ಜೈನರು, ಬೌದ್ಧರು, ಸಿಖ್ಖರು ಕೂಡ ಹಿಂದುಳಿದ ವರ್ಗಗಳ ಪಟ್ಟಿಯಲ್ಲೇ ಇದ್ದಾರೆ ಎಂದು ತಿಳಿಸಿದ್ದಾರೆ.

ದೇವರಾಜ ಅರಸರು ಮುಸ್ಲಿಂ ಸಮುದಾಯವನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಿದರು. ನಂತರ ವೀರಪ್ಪ ವೀರಪ್ಪ ಮೊಯಿಲಿಯವರು ಮುಸ್ಲಿಂ ಸಮುದಾಯಕ್ಕೆ ಶೇ 4 ಮೀಸಲಾತಿ ನೀಡಿದರು. ತಾವು ಮಾಡಿದ್ದೆಂದು ದೇವೇಗೌಡರು ಹೇಳುತ್ತಿರುವುದು ಕೂಡಾ ಸುಳ್ಳು ಎಂದು ಹೇಳಿದ್ದಾರೆ.

ಕುಂಚಿಟಿಗರ ಅವಹೇಳನ ಹರಿದಾಡಿದ ಆಡಿಯೊ

ಪ್ರಜಾವಾಣಿ ವಾರ್ತೆ

ತುಮಕೂರು: ಲೋಕಸಭೆ ಮತದಾನಕ್ಕೆ ಕ್ಷಣ ಗಣನೆ ಆರಂಭವಾಗಿರುವ ಹೊತ್ತಿನಲ್ಲೇ ಸಂಸದ ಜಿ.ಎಸ್. ಬಸವರಾಜು ಅವರು ಕುಂಚಿಟಿಗ ಒಕ್ಕಲಿಗರನ್ನು ಅವಹೇಳನ ಮಾಡಿದ್ದಾರೆ ಎನ್ನಲಾದ ಆಡಿಯೊ ಸಾಮಾಜಿಕ ಜಾಲ ತಾಣದಲ್ಲಿ ಹರಿದಾಡುತ್ತಿದೆ.

ಎಚ್‌ಎಎಲ್ ವಿಚಾರ ಮುಂದಿಟ್ಟುಕೊಂಡು ಕುಂಚಿಟಿಗರನ್ನು ಅಪಮಾನ ಮಾಡಲಾಗಿದೆ ಎಂದು ಬಿಂಬಿಸಲಾಗಿದೆ. ಮತದಾನದ ಹಿಂದಿನ ದಿನ ಈ ಆಡಿಯೊ ಜಾಲ ತಾಣದಲ್ಲಿ ಹರಿದಾಡುತ್ತಿದ್ದು ಚರ್ಚೆಗೆ ಕಾರಣವಾಗಿದೆ.

ಬಸವರಾಜು ಅವರು ಕೊರಟಗೆರೆ ತಾಲ್ಲೂಕಿನ ನಾಗೇಶ್ ಎಂಬುವರ ಜತೆಗೆ ಮೊಬೈಲ್‌ನಲ್ಲಿ ಮಾತನಾಡುವ ಸಮಯದಲ್ಲಿ 'ಕುಂಚಿಟಿಗರ ಬುದ್ಧಿ ಬಿಡ್ರೊ, ಕೊರಟಗೆರೆ ಬುದ್ಧಿ ಬಿಡ್ರೊ' ಎಂದು ನಿಂದಿಸಿದ್ದಾರೆ ಎನ್ನಲಾಗಿದೆ.

'ಏನೋ ನಾಗೇಶ, ಎಚ್‌ಎಎಲ್ ಮದ್ದಹನುಮೇಗೌಡ ತಂದಿದ್ದು ಎಂದು ಪತ್ರಿಕೆಗೆ ಹೇಳಿಕೆ ನೀಡಿದ್ದೀಯಾ? ನಾನು ಎಚ್‌ಎಎಲ್ ತಂದಿದ್ದು. ಆದರೆ ಉದ್ಘಾಟನೆ ಸಂದರ್ಭದಲ್ಲಿ ಸೋತಿದ್ದೆ. ಅವನು ಗೆದ್ದಿದ್ದ. ಏನೇನೋ ಹೇಳಿಕೆ ನೀಡಬೇಡ ನನ್ನ ಮಗನೇ ಹುಷಾರಾಗಿರು. ನನ್ನ ಮಕ್ಳ, ನಿಮ್ಮ ಕುಂಚಿಟಿಗರ ಬುದ್ಧಿ ಬಿಟ್ಟು ಬಿಡ್ರೊ. ಸರಿಯಾಗಿರ್ರೋ... ಮುದ್ದಹನುಮೇಗೌಡಗೂ ಎಚ್‌ಎಎಲ್‌ಗೂ ಏನೋ ಸಂಬಂಧ?' ಎಂದು ಪ್ರಶ್ನಿಸಿದ್ದಾರೆ.

'ಅವನು ಯಾವತ್ತಾದರೂ ಒಂದು ಅರ್ಜಿ ಬರೆದಿದ್ದನಾ? ಎಚ್‌ಎಎಲ್ ಉದ್ಘಾಟನೆ ಸಮಯದಲ್ಲಿ ನನ್ನನ್ನು ಉದ್ದೇಶ ಪೂರ್ವಕವಾಗಿ ಬಿಸಿಲಿನಲ್ಲಿ ಕೂರಿಸಿದ್ದರು. ನಾಯಿಯ ರೀತಿ ಕಾದು ಕುಳಿತಿದ್ದೆ. ಆಗ ಮಾಧುಸ್ವಾಮಿ ನನ್ನ ಮೇಲೆ ಕ್ರಿಮಿನಲ್ ಕೇಸ್ ಹಾಕಿಸಿದ. ಯಡಿಯೂರಪ್ಪ ಏನ್ ಮಾಡ್ದ, ಏನೂ ಮಾಡಲಿಲ್ಲ... ಮುದ್ದಹನುಮೇಗೌಡ ಎಚ್‌ಎಎಲ್ ತಂದಿದ್ದೆಂದು ಮತ್ತೆ ಯಾವತ್ತೂ, ಎಲ್ಲೂ ಹೇಳಬೇಡ. ನನ್ನ ಮಗನೇ ಹುಷಾರಾಗಿರು' ಎಂದು ಹೇಳಿದ್ದಾರೆ.

ಜನರನ್ನು ದಾರಿ ತಪ್ಪಿಸುವ ಸಂಚು

'ಎಚ್‌ಎಎಲ್ ತಂದಿದ್ದು ನಾನು ಎಂದು ಹೇಳಿರಬಹುದು. ಆದರೆ ಈ ಆಡಿಯೋಗೂ ನನಗೂ ಸಂಬಂಧವಿಲ್ಲ. ಚುನಾವಣೆ ಸಮಯದಲ್ಲಿ ಉದ್ದೇಶ ಪೂರ್ವಕವಾಗಿ, ಜನರನ್ನು ದಾರಿ ತಪ್ಪಿಸಲು ಈ ರೀತಿ ಮಾಡಿದ್ದಾರೆ. ತಿಳಿಗೇಡಿಗಳಿಗೆ ದೇವರು ಒಳ್ಳೆಯ ಬುದ್ಧಿ ಕೊಡಲಿ' ಎಂದು ಜಿ.ಎಸ್.ಬಸವರಾಜು ಸ್ಪಷ್ಟನೆ ನೀಡಿದ್ದಾರೆ.

ಜಿ.ಎಸ್. ಬಸವರಾಜು

ನಗರದಲ್ಲಿ ಇಂದು

ರಾಮನವಮಿ ಸಂಗೀತೋತ್ಸವ-2024: ವಿಶೇಷ ಸಂಗೀತ ಕಛೇರಿ: ಗಾಯತ್ರಿ ಬಿ., ಮತ್ತು ತಂಡ, ವಿಶೇಷ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಎಸ್. ಸಾಕೇತರಾಮನ್, ಮೈಸೂರು ಕಾರ್ತಿಕ್, ವಿಜಯ ನಟೇಶನ್, ಜಿ. ಗುರುಪ್ರಸನ್ನ, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 5ರಿಂದ

ಶ್ರೀರಾಮೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಎಚ್.ಜಿ. ಅಮೃತವರ್ಷಿಣಿ, ಪಿಟೀಲು: ವೆಂಕಟೇಶ್, ಮೃದಂಗ: ಜಿ.ಎಸ್. ನಾಗರಾಜ್, ಆಯೋಜನೆ ಹಾಗೂ ಸ್ಥಳ: ಜಯರಾಮ ಸೇವಾ ಮಂಡಳಿ, 1ನೇ ಮುಖ್ಯರಸ್ತೆ, 8ನೇ ಬಡಾವಣೆ, ಜಯನಗರ, ಸಂಜೆ 6.30

ಕಾರ್ಯಕ್ರಮದ ಆಮಂತ್ರಣಗಳ ಪತ್ರಿಕೆಗಳನ್ನು ಕೆಳಗಿನ ಇ-ಮೇಲ್‌ಗೆ ಕಳುಹಿಸಿ nagaradalli_indu prajavani.co.in

'ಅವಿರತ ಹರೀಶ್ 60ರ ಸಾಂಸ್ಕೃತಿಕ ಸಂಭ್ರಮ' ಕಾರ್ಯಕ್ರಮ

ಗುತ್ತಿಗೆ ಸಂಸ್ಕೃತಿಗೆ ಮುಕ್ತಿ ಅಗತ್ಯ:ಬರಗೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಮತ್ತು ಸಂಸ್ಕೃತಿ ಸೇರಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹೆಚ್ಚಿನವರು ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದು, ಅವರಿಗೆ ಅಭದ್ರತೆ ಕಾಡುತ್ತಿದೆ. ಆದ್ದರಿಂದ ಗುತ್ತಿಗೆ ಪದ್ಧತಿಯಿಂದ ಮುಕ್ತಿ ನೀಡಬೇಕು' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ತಿಳಿಸಿದರು.

ಅವಿರತ ಹರೀಶ್ ಗೆಳೆಯರ ಬಳಗ ನಗರದಲ್ಲಿ ಗುರುವಾರ ಹಮ್ಮಿಕೊಂಡ 'ಅವಿರತ ಹರೀಶ್ 60ರ ಸಾಂಸ್ಕೃತಿಕ ಸಂಭ್ರಮ' ಕಾರ್ಯಕ್ರಮದಲ್ಲಿ ಪ್ರಕಾಶಕ, ಲೇಖಕ ಹಾಗೂ ಸಂಘಟಕರಾಗಿರುವ ಅವಿರತ ಹರೀಶ್ ಹಾಗೂ ಅವರ ಪತ್ನಿ-ವಿಜಯಲಕ್ಷ್ಮಿ ಅವರನ್ನು ಗೌರವಿಸಿ, ಮಾತನಾಡಿದರು.

ಕಾರ್ಯಕ್ರಮದಲ್ಲಿ ಅವಿರತ ಹರೀಶ್ ಹಾಗೂ ಅವರ ಪತ್ನಿ ವಿಜಯಲಕ್ಷ್ಮಿ ಅವರನ್ನು ಅಭಿನಂದಿಸಲಾಯಿತು. ಸೃಷ್ಟಿ ಪ್ರಕಾಶನದ ಸೃಷ್ಟಿ ನಾಗೇಶ್, ಗಾಯಕ ಜೋಗಿಲ ಸಿದ್ದರಾಜು, ಕರ್ನಾಟಕ ಸಾಹಿತ್ಯ ಅಕಾಡೆಮಿ ರಿಜಿಸ್ಟ್ರಾರ್ ಕರಿಯಪ್ಪ ಎನ್.,ಜಿ.ಎನ್. ಮೋಹನ್, ಬರಗೂರು ರಾಮಚಂದ್ರಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಟಿ.ಎಸ್. ದಕ್ಷಿಣಾಮೂರ್ತಿ, ರಾಜಶೇಖರ ಮಠಪತಿ, ಓ. ವೆಂಕಟೇಶ್ ಮತ್ತು ಗಾಯಕ ಪದ ದೇವರಾಜ್ ಪಾಲ್ಗೊಂಡಿದ್ದರು.

'ಸಾಂಸ್ಕೃತಿಕ ಅಕಾಡೆಮಿಗಳು ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಇರುವ ಬಹಳಷ್ಟು ಮಂದಿ ಸಂಚಿತ ವೇತನ ಪಡೆಯುವ ನೌಕರರಾಗಿದ್ದಾರೆ. ಯಾವುದೇ ಕೆಲಸಕ್ಕೆ ಸೇರಿದರೂ ನಿವೃತ್ತಿ ಕಾಯಂ ಆಗಿದೆ. ಆದರೆ, ಹುದ್ದೆ ಕಾಯಂ ಇಲ್ಲವಾಗಿದೆ. ರಾಜ್ಯದಲ್ಲಿನ 410 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕೇವಲ ನಾಲ್ಕು ಕಾಲೇಜುಗಳಲ್ಲಿ ಮಾತ್ರ ಕಾಯಂ ಪ್ರಾಂಶುಪಾಲರು ಇದ್ದಾರೆ. 14 ಸಾವಿರ ಅತಿಥಿ ಉಪನ್ಯಾಸಕರು ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆ, ಪದವಿಪೂರ್ವ ಕಾಲೇಜುಗಳಲ್ಲಿ 23,700ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ಕೇಂದ್ರ ಸರ್ಕಾರದಲ್ಲಿ 30 ಲಕ್ಷ ಹಾಗೂ ರಾಜ್ಯ ಸರ್ಕಾರದಲ್ಲಿ 2.5 ಲಕ್ಷ ಹುದ್ದೆಗಳು ಖಾಲಿಯಿವೆ' ಎಂದರು.

'ದೇಶದಲ್ಲಿ ವಿದ್ಯಾವಂತರಿಗೆ ಕಾಯಂ ಉದ್ಯೋಗ ನೀಡದಿದ್ದರೆ ಅದೆಂತಹ ಪ್ರಜಾಪ್ರಭುತ್ವ ಎಂಬ ಪ್ರಶ್ನೆ ಮಾಡಬೇಕಾದ ಪರಿಸ್ಥಿತಿಯಲ್ಲಿದ್ದೇವೆ. ಉದ್ಯೋಗ ನೀತಿಯಲ್ಲಿ ಇರುವಂತಹ ಅಪಾಯಗಳ ಬಗ್ಗೆ ಜಾಗೃತವಾಗಬೇಕಿದೆ. ಕನಿಷ್ಠ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಾದರೂ ಗುತ್ತಿಗೆ ಪದ್ಧತಿ ಬಿಡಬೇಕು' ಎಂದರು.

'ಇತ್ತೀಚಿನ ದಿನಗಳಲ್ಲಿ ಅಭಿನಂದನೆಯ ಮೌಲ್ಯ ಕುಸಿದಿದೆ. ಅಭಿನಂದನೆ ಮಾಡಿಸಿಕೊಳ್ಳುವವರು ಜಾಸ್ತಿಯಾಗಿದ್ದು, ಅಭಿನಂದನೆ ಮಾಡುವವರು ಕಡಿಮೆಯಾಗಿದ್ದಾರೆ' ಎಂದರು. ಪತ್ರಕರ್ತ ಜಿ.ಎನ್. ಮೋಹನ್ ಅವರು ಅಭಿನಂದಿಸಿದರು. ಹರೀಶ್ ಅವರ ಬರಹಗಳ ಬಗ್ಗೆ ಪ್ರಾಧ್ಯಾಪಕ ರಾಜಶೇಖರ ಮಠಪತಿ ಮಾತನಾಡಿದರು.

ಇವಿಎಂ–ವಿವಿ–ಪ್ಯಾಟ್ ಮತಗಳ ಹೋಲಿಕೆ: ಇಂದು 'ಸುಪ್ರೀಂ' ತೀರ್ಪು

ನವದೆಹಲಿ (ಪಿಟಿಐ): ಮತ ಎಣಿಕೆ ವೇಳೆ ಇವಿಎಂಗಳಲ್ಲಿನ ಮತಗಳು ಮತ್ತು ವಿವಿ- ಪ್ಯಾಟ್‌ನಲ್ಲಿನ ಮತಗಳನ್ನು ತಾಳೆ ಮಾಡಬೇಕು ಎಂದು ಕೋರಿ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ಪೂರ್ಣಗೊಳಿಸಿರುವ ಸುಪ್ರೀಂ ಕೋರ್ಟ್ ಶುಕ್ರವಾರ ತೀರ್ಪು ನೀಡಲಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಾಂಕರ್ ದತ್ತ ಅವರನ್ನು ಒಳಗೊಂಡ ನ್ಯಾಯಪೀಠವು ತೀರ್ಪು ನೀಡಲಿದೆ. ಅರ್ಜಿದಾರರಲ್ಲಿ ಒಬ್ಬರಾಗಿರುವ ಅಸೋಷಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ಸಂಸ್ಥೆಯು, ಇವಿಎಂಗಳಲ್ಲಿನ ಪಾರದರ್ಶಕ ಗಾಜಿನ ಬದಲು ಅರೆಪಾರದರ್ಶಕ ಗಾಜನ್ನು ಅಳವಡಿಸುವ ಆಯೋಗದ 2017ರ ನಿರ್ಧಾರವನ್ನು ಕೈಬಿಡುವಂತೆ ಹಾಗೂ ಮತಪತ್ರಗಳ ಮೂಲಕ ಮತ ಚಲಾಯಿಸುವ ಪದ್ಧತಿಯನ್ನೇ ಜಾರಿಗೆ ತರುವಂತೆ ಮನವಿ ಮಾಡಿತ್ತು.

ದ್ವಿತೀಯ ಪಿಯು ಪರೀಕ್ಷೆ–2 ವಿದ್ಯಾರ್ಥಿಗಳಿಗೆ ಪ್ರಯಾಣ ಉಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆ–2ರ ವಿದ್ಯಾರ್ಥಿಗಳಿಗೆ ಪರೀಕ್ಷಾ ಅವಧಿಯಲ್ಲಿ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್‌ಗಳಲ್ಲಿ ಉಚಿತವಾಗಿ ಸಂಚರಿಸಲು ಅವಕಾಶ ನೀಡಲಾಗಿದೆ.

ಏ.29ರಿಂದ ಮೇ 16ರ ವರೆಗೆ ಪರೀಕ್ಷೆ ನಡೆಯುವ ದಿನಗಳಂದು ವಾಸಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರಗಳಿಗೆ ತೆರಳುವ ಮತ್ತು ಅಲ್ಲಿಂದ ಹಿಂದಿರುಗುವ ವೇಳೆ ವಿದ್ಯಾರ್ಥಿಗಳು ಪರೀಕ್ಷಾ ಪ್ರವೇಶ ಪತ್ರಗಳನ್ನು ತೋರಿಸಿ ಪ್ರಯಾಣಿಸಬಹುದು.

ಕೆಎಸ್‌ಆರ್‌ಟಿಸಿಯ ನಗರ, ಹೊರವಲಯ, ಸಾಮಾನ್ಯ ಮತ್ತು ವೇಗದೂತ ಬಸ್‌ಗಳಲ್ಲಿ, ಬಿಎಂಟಿಸಿಯ ಸಾಮಾನ್ಯ ಸೇವಾ ಬಸ್‌ಗಳಲ್ಲಿ ಈ ಸೌಲಭ್ಯ ಕಲ್ಪಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ. ಹೆಚ್ಚುವರಿ ಟ್ರಿಪ್‌ಗಳ ಅಗತ್ಯ ಕಂಡು ಬಂದಲ್ಲಿ ಕಾರ್ಯಾಚರಣೆ ಮಾಡಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ.

ನಿಷೇಧಾಜ್ಞೆ: ದ್ವಿತೀಯ ಪಿಯುಸಿ ಪರೀಕ್ಷೆ–2 ಸುಸೂತ್ರವಾಗಿ ಮತ್ತು ವ್ಯವಸ್ಥಿತವಾಗಿ ನಡೆಸಲು ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ವ್ಯಾಪ್ತಿಯ ಪ್ರದೇಶಕ್ಕೆ ಅನ್ವಯವಾಗುವಂತೆ ಏ. 29ರಿಂದ ಮೇ 16ರವರೆಗೆ ನಿಷೇಧಾಜ್ಞೆ ಹೇರಲಾಗಿದೆ ಎಂದು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

EDUCATIONAL

Admission

AIR FORCE SCHOOL, JALAHALLI
CBSE AFFILIATION No.880006
APTITUDE TEST FOR ADMISSION IN CLASS XI (SCIENCE AND COMMERCE) STREAM
Air Force School invites Application for Aptitude Test (AT) from who have appeared in Class X (2023-2024) Board Exams for seeking Admission in Class XI (Science and Commerce) Stream for Session 2024-25
Online Registration form for Aptitude Test will be available on School Website from 26 Apr 2024 to 06 May 2024 till 1700 hrs
For Registration login : www.afsjal.org
Date of Aptitude Test : 09 May 24
Venue : AFS Jalahalli (East)
For any queries Contact : 080-2345509, 23455063
Principal
Air Force School, Jalahalli

Accounts & Finance

REQUIRED B.COM/ CA inter Graduates with IT and GST Knowledge for Auditors office at Jayanagar. Preferable 1- 2 years' experience. Contact: 8050131627

JOB OPPORTUNITIES

Walk-in

Security & Detectives

REPUTED SECURITY Agency Requires Security Guards/ Supervisors, Field Officers, Area Managers, Operations/ Marketing Team for Bangalore. Contact: 8073668816.

PUBLIC NOTICE

PROCLAMATION REQUIRING ATTENDANCE OF DEFENDANT
(ORDER 5, rule 20 of the Code of Civil Procedure)
In the court of Ms. Naina Gupta
Commercial Civil Judge cum ARC cum ADMIN-CJ, South East
Room No. 203, Saket Courts, New Delhi
Case Reg. No.: CS NO. 453/2023
Punit Gupta Prop. of M/s Rattirams
Versus
M/s Pancharathna Enterprises & Ors.
To,
1. M/s Pancharathna Enterprises Thr. Its Partners
2. Mr. Kishan Kumar Chanderpal Hedge (Partner) M/s Pancharathna Enterprises
3. Mr. Nire Subhash Shetty (Partner) M/s Pancharathna Enterprises
4. Mr. Pavanram Kabiyadi Acharya (Partner) M/s Pancharathna Enterprises
5. Mr. Dinesh Shetty Partner) M/s Pancharathna Enterprises
6. Mr. Beguraiah Tipur Manjunatha (Partner) M/s Pancharathna Enterprises
7. Mr. Prashul Shetty (Partner) M/s Pancharathna Enterprises
8. Mr. Sunder Sadananda Shetty (Partner) M/s Pancharathna Enterprises
All At - 72/1, Bellaundour Village, Varthur Hobli, Outer Ring road, Banglore, Bengaluru Urban, Karnataka-560130
WHEREAS you are intentionally evading service of summons it is hereby notified that if you shall not defend the case on the 25-05-2024 at 10.00 am the day fixed for the final disposal, it will be heard and determined ex-parte.
GIVEN under my hand and the seal of the court, this 04-04-2024. Sd/
Seal
Commercial Civil Judge cum ARC cum ADMIN-CJ, South East Saket Courts, New Delhi

CONNECT

Re-drilling or deepening 6½" borewells by Robo Rig

VIJAYALAKSHMI BOREWELLS-BANGALORE
94481-71416

CHANGE OF NAME
I, JALAJA RAMACHANDRA w/o. B.V. Ramachandra R/at. #548, 12th 'A' Cross, Bhuvaneshwari Nagar, Hebbal, Bengaluru-560024, Declare that my name erroneously mentioned as HOIGE BAZAR JALAJAKSHI MENDON and JALAJAKSHI RAMACHANDRA in some documents. My actual & correct name is JALAJA RAMACHANDRA only, vide affidavit dated 24/04/2024 before notary Vijayalakshmi.K., Bengaluru.

Announcements

ANNOUNCEMENT
I, Shobha Siddanagouda Patil, W/o Siddanagouda Patil, aged about 65 years, Residing at No.296, Varada Devaraj Urs Colony, Belgaum Karnataka-591124. Hereby declare that am the natural guardian of Ms.Tejal M Burli, D/o Late Mrutyunjay D Burli, age 17 Years Resident of #17, Deepak Layout, Besides Brooks Heaven Layout, Raghavanapalya, JP Nagar 8th Phase, Bangalore, Karnataka-560078. as per Aadhar card/pan card/SSLC marks card mentioned as TEJAL M BURLI instead of mentioned in passport & Birth certificate as TEJAL MRUTYUNJAY BURLI both above names are one and the same person vide affidavit dated 23/04/2024 before notary Hegde Ganapati Venkatraman, Bangalore.

TATA ADVANCED SYSTEMS
WALK-IN DRIVE
We are hiring for Final Assembly line – Rotary Wings

QA & QC - Lead	• Responsible for development, deployment, and adherence to TASL QMS and other Quality standards (AS9100, AS9102, AS9145 etc.) and requirements as applicable including customer Quality flow downs and requirements. • Knowledge of aircraft configuration, effectivity management and conformity management. • Familiarity and comfort with aviation airworthiness regulations and requirements (DGCA, DGAQA, FAA, EASA). Experience in dealing with DGCA and DGAQA will be plus • Knowledge of aircraft systems, avionics, their architecture, installation, and trouble shooting. • Experience in implementing quality management best Practices. • Ability to manage special and chemical process certification etc. including qualification and certification planning, audits etc. **Qualification: B. E / B Tech** **Experience: 12 -15 Years of experience in Aerospace industry**
Production Planning & Controlling	• Ability to manage end to end production planning and requirements (include but not limited to material, tools, manpower etc.) based on available resources and business forecast • Material planning for each work-centre and ensure correct material is available as per the production plan • Ensuring there are no shortages in terms of material, tools and testers for production. • Expertise in MS Project and IE techniques MOST, line balancing etc. **Qualification: B. E / B Tech** **Experience: 8 -10 Years of experience in Aerospace industry**
Tooling	• Responsible for preparation in basics of tooling design, development, installation, calibration, buy-off, inspection, repair and upgrades Should be able to set-up and conduct and support periodic tooling inspection and calibration requirements Should be able to independently contribute on tooling requirements including customer interfacing and management **Qualification: B. E / B Tech** **Experience: 8 -10 Years of experience in Aerospace industry**
Production / Operation - FAL Lead	• Knowledge on airframe, avionics and electricals and propulsion systems engineering pertaining to Helicopter and be able to guide and train reports and team • Be able to prepare, review and improve on comprehensive production planning and resourcing readiness and requirements • Deploy metric based tracking and reporting on shopfloor and be able to support reviews with senior management • Prepare and participate in regular program reviews with management, customer and Be detail oriented and keen for risk identification and mitigation. • In-depth knowledge of applicable aerostructure assembly and integration processes. • Ability to do problem solving for non-routine tasks, influence and guide the team to implement solution on shopfloor **Qualification: B. E / B Tech** **Experience: 10 -12 Years of experience in Aerospace industry**
Supply Chain Management (Procurement)	mandatorily experience as buyer in early career stages with preference for hands-on experience in aerospace and international procurements Should have demonstrated experience in selecting, on-boarding, and managing suppliers (RFP preparation and release, quote analysis and shortlisting, contract and price customization and negotiations, supplier flow-downs, follow-up, evaluation, and rating etc.) **Qualification: MBA** **Experience: 10 -12 Years of experience in Aerospace industry**

Work Location: Bangalore & Multiple location PAN India.
Date of Interview & Timing: 28.04.2024 | 09.30 AM to 05.00 PM
Documents to Carry: CV, 2 Photographs, Last Three Months Pay Slip
VENUE: 3rd Floor, Rmz Galleria Office, Ambedkar Colony, Yelahanka, Bengaluru, Karnataka 560065

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Sites

Kanakapura Road

WANTED/ BUYING SITE 30x40, 40x60 Anjanapura BDA Banashankari 6th Stage BDA, Doddakallasandra, Vajarahalli, Gubblala Konanakunte Cross Agents Excuse 9008259222

DH Classifieds More value, more impact ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
Book your ad with us now! For more details contact:
+91 9845114560 | +91 9901641752 +91 9886213331
+91 9731810277 | +91 9900428036
080-45557163/164
*Conditions apply

PERSONAL

Change of Name

I, NAVEEN Kumar K.M, S/o Kumar born on 10.11.2000 residing at, no #25 lakshmi nilaya dasanapura hobli siddanahosahalli madanayakanahalli Karnataka- 562123 have changed my name NENAVATH NAIK to NAVEEN KUMAR K.M vide affidavit dated 29-02-2024 before notary A.C. Subbu Swamy, Bangalore

I, PARSHWA KOTHARI S/o.Uttam Chand Kothari R/a#83/B, 6th main, 1st cross, 50 Feet Road, Near to Nirmala Store Bus-Stop,BSK 1st Stage Hanumanthanagar Bangalore- 560050 have changed my Name to NAMAN PARSHWA KOTHARI vide`affidavit dated: 24.4.2024 before Notary Mamatha.N.K. Bengaluru

I, KAJAL KOTHARI D/o.Uttam Chand Kothari R/a#83/B, 6th main, 1st cross, 50 Feet Road, Near to Nirmala Store Bus-Stop, BSK 1st Stage, Hanumanthanagar Bangalore- 560050 have changed my Name to HAITAL JAIN vide`affidavit dated:24.4.2024 before Notary Mamatha.N.K. Bengaluru

REAL ESTATE SELLING

Sites

Kempegowda Layout

NADAPRABHU KEMPEGOWDA LAYOUT 1st Block 30x40 N/F,3rd Block 50x80 N/F,7th Block 30x40 W/F.Contact:9686469799

Whitefield

BDA APPROVED sites for Sale off Whitefield/ Old Madras'Road. Ready for registration. Hurry! Call: 9035083224

PUBLIC NOTICE

This is to inform the general public that I have cancelled and revoked the General Power of Attorney dated 30/09/2009, registered on 07/11/2009, as document bearing No. JAL-4-00284/2009-10, contained in Book IV, stored in CD No:JALD53, in the office of the Sub-Registrar, Jala, Bangalore, executed by me in favour of NITESH HOUSING DEVELOPERS PRIVATE LIMITED (presently known as North Roof Ventures Private Limited) ('NITESH'), earlier having its registered office at "Nitesh Timesquare", 7th Floor, No.8, M. G Road, Bengaluru– 560 001 and now having its registered office at No.110, 'B' Wing, Level 1, Andrews Building, M.G. Road, authorising it, to develop lands owned by me bearing Survey No. 174/4 measuring 22 Guntas and Sy No. 175/2 measuring 3 acres 32 Guntas, in all measuring 4 Acres 14 Guntas, situated at Kattigenahalli Village, Jala Hobli, Bengaluru North Additional Taluk, Bengaluru on which the project namely 'NITESH COLUMBUS SQUARE' is being developed, vide Deed of Revocation of Power of Attorney dated 24.04.2024, registered as document bearing No. YAN-4-00031-2024-25, in Book 4, in the office of the Sub-Registrar, Yelahanka, Bengaluru.
The general public is hereby cautioned not to deal with NITESH in any manner whatsoever in respect of the aforesaid project and the lands. Any person doing so will be doing it solely at his/her/their/its own risk and consequences.
H. R. Suresh
No. 1, Shreshta, Jakkur Layout Main Road, Jakkur Post, Bengaluru – 560 064.

ಮದುವೆ ವಿಷಯಾಧಾರಿತ ಮತಗಟ್ಟೆ

ಅರಣ್ಯ ವಿಷಯಾಧಾರಿತ ಮತಗಟ್ಟೆ

ಅಂಗವಿಕಲರಿಗಾಗಿ ವಿಶೇಷ ಮತಗಟ್ಟೆ

'ಕರಗ' ವಿಷಯಾಧಾರಿತ ಮತಗಟ್ಟೆ

ಬೆಳಿಗ್ಗೆ 5.30ರಿಂದ ಅಣಕು ಮತದಾನ; ಇವಿಎಂ ಸಮಸ್ಯೆಯಿದ್ದರೆ ಪರ್ಯಾಯ ವ್ಯವಸ್ಥೆ

ಮತದಾನಕ್ಕೆ ಸಜ್ಜಾದ ಬೆಂಗಳೂರಿನ ಜನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಜಿಲ್ಲಾ ವ್ಯಾಪ್ತಿಯ ಕೇಂದ್ರ, ಉತ್ತರ, ದಕ್ಷಿಣ ಲೋಕಸಭಾ ಕ್ಷೇತ್ರಗಳು ಹಾಗೂ ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರಗಳಲ್ಲಿ ಮತದಾನಕ್ಕಾಗಿ 8,984 ಮತಗಟ್ಟೆಗಳು ಸಜ್ಜಾಗಿವೆ.

ಮತದಾನ ಪ್ರಕ್ರಿಯೆ ಸುಗಮವಾಗಿರುವುದನ್ನು ಖಾತರಿಪಡಿಸಿಕೊಳ್ಳಲು ಶುಕ್ರವಾರ ಬೆಳಿಗ್ಗೆ 5.30ಕ್ಕೆ ಅಣಕು ಮತದಾನ ನಡೆಯಲಿದೆ. ಬೆಳಿಗ್ಗೆ 7ರಿಂದ ಮತದಾರರಿಗೆ ಮತದಾನಕ್ಕೆ ಅವಕಾಶವಿದ್ದು, ಸಂಜೆ 6ರವರೆಗೆ ಮತದಾನ ಮಾಡಬಹುದು.

ಎಲ್ಲಾ ಮತಗಟ್ಟೆ ಅಧಿಕಾರಿಗಳು ಗುರುವಾರ ಮಸ್ಟರಿಂಗ್ ಕೇಂದ್ರಗಳಿಗೆ ಬಂದು ಇವಿಎಂ, ಬ್ಯಾಲೆಟ್ ಯುನಿಟ್, ಕಂಟ್ರೋಲ್ ಯುನಿಟ್, ವಿವಿ ಪ್ಯಾಟ್ ಸೇರಿದಂತೆ ಎಲ್ಲಾ ಸಾಮಗ್ರಿಗಳನ್ನು ತೆಗೆದುಕೊಂಡು ಬಿ.ಎಂ.ಟಿ.ಸಿ, ಕೆ.ಎಸ್.ಆರ್.ಟಿ.ಸಿ, ಇತರೆ ವಾಹನಗಳ ಮೂಲಕ ಪೊಲೀಸ್ ಬಂದೋಬಸ್ತ್‌ನಲ್ಲಿ ಮತಗಟ್ಟೆಗಳಿಗೆ ತೆರಳಿದ್ದಾರೆ. ಮತಗಟ್ಟೆಗಳಲ್ಲಿ ವಸತಿ, ನೀರಿನ ವ್ಯವಸ್ಥೆ ಸೇರಿದಂತೆ ಮೂಲ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ತಿಳಿಸಿದರು.

ಅಣಕು ಮತದಾನದ ವೇಳೆ ಇವಿಎಂನಲ್ಲಿ ಲೋಪದೋಷಗಳು ಕಂಡುಬಂದರೆ ಸೆಕ್ಟರ್ ಅಧಿಕಾರಿ ಮೂಲಕ ಕನಿಷ್ಠ 10 ಮತಗಟ್ಟೆಗಳಿಗೆ ನಿಯೋಜನೆ ಮಾಡಿರುವಂತಹ 'ಮಾರ್ಗ ಅಧಿಕಾರಿ'(ರೂಟ್ ಆಫೀಸರ್) ಪರ್ಯಾಯ ವ್ಯವಸ್ಥೆ ಮಾಡಲಿದ್ದಾರೆ ಎಂದು ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿಯ ಬೆಂಗಳೂರು ಕೇಂದ್ರ, ಬೆಂಗಳೂರು ಉತ್ತರ ಹಾಗೂ ಬೆಂಗಳೂರು ದಕ್ಷಿಣದ 3 ಲೋಕಸಭಾ ಕ್ಷೇತ್ರಗಳಲ್ಲಿ ವಿಷಯಾಧಾರಿತ ಮತಗಟ್ಟೆಗಳಾದ ಸಖಿ ಮತಗಟ್ಟೆ, ಯುವ ಮತಗಟ್ಟೆ, ಅಂಗವಿಕಲರ ಮತಗಟ್ಟೆ, ಅರಣ್ಯಾಧಾರಿತ ಮತಗಟ್ಟೆ, ಕರಗ ಮತಗಟ್ಟೆ, ಯಕ್ಷಗಾನ ಮತಗಟ್ಟೆ, ನೀರು ಉಳಿಸುವ ಕುರಿತ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

ಒಟ್ಟು 140 ಸಖಿ ಮತಗಟ್ಟೆಗಳು, 28 ಯುವ ಮತಗಟ್ಟೆಗಳು, 28 ಅಂಗ ವಿಕಲರ ಮತಗಟ್ಟೆಗಳು, 28 ಥೀಮ್ (ವಿಷಯಾಧಾರಿತ) ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

ಮೊಬೈಲ್‌ಗೆ ನಿರ್ಬಂಧ: ಮತಗಟ್ಟೆಗಳ ಒಳಗೆ ಮತದಾರರು ಮೊಬೈಲ್ ತೆಗೆದುಕೊಂಡು ಹೋಗುವಂತಿಲ್ಲ ಎಂದು ಪ್ರಕಟಣೆ ತಿಳಿಸಿದೆ.

ಚಾಮರಾಜಪೇಟೆಯ ಸರ್ ಎಂ. ವಿಶ್ವೇಶ್ವರಯ್ಯ ಬಿಬಿಎಂಪಿ ಪಬ್ಲಿಕ್ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜಿನಲ್ಲಿ ಗುರುವಾರ ಇವಿಎಂ ಯಂತ್ರಗಳನ್ನು ಅಧಿಕಾರಿಗಳು ಪರಿಶೀಲಿಸಿದರು

ಚಾಮರಾಜಪೇಟೆಯ ಸರ್ ಎಂ. ವಿಶ್ವೇಶ್ವರಯ್ಯ ಬಿಬಿಎಂಪಿ ಪಬ್ಲಿಕ್ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜಿನಿಂದ ಇವಿಎಂ ಯಂತ್ರಗಳನ್ನು ಪಡೆದು ಮತಗಟ್ಟೆಗಳಿಗೆ ಕೊಂಡೊಯ್ದ ಚುನಾವಣಾ ಸಿಬ್ಬಂದಿ

–ಪ್ರಜಾವಾಣಿ ಚಿತ್ರಗಳು: ಎಂ.ಎಸ್.ಮಂಜುನಾಥ್

ಚುನಾವಣೆಗೆ 1,700 ಬಿಎಂಟಿಸಿ, 2,780 ಕೆಎಸ್‌ಆರ್‌ಟಿಸಿ ಬಸ್

ಬೆಂಗಳೂರು: ರಾಜ್ಯದಲ್ಲಿ ಏ. 26ರಂದು ನಡೆಯಲಿರುವ ಲೋಕಸಭಾ ಚುನಾವಣೆಗೆ 1,700 ಬಿಎಂಟಿಸಿ ಬಸ್ ಮತ್ತು 2,780 ಕೆಎಸ್‌ಆರ್‌ಟಿಸಿ ಬಸ್‌ಗಳು ಬಳಕೆಯಾಗಲಿವೆ.

ಇವಿಎಂ, ವಿವಿಪ್ಯಾಟ್‌ಗಳೊಂದಿಗೆ ಮತಗಟ್ಟೆ ಅಧಿಕಾರಿಗಳು, ಸಿಬ್ಬಂದಿ ಮತ್ತು ಭದ್ರತಾ ಸಿಬ್ಬಂದಿಯನ್ನು ಕರೆದೊಯ್ಯಲು ಬಸ್‌ಗಳು ಬಳಕೆಯಾಗುತ್ತವೆ. ಗುರುವಾರ ಮಸ್ಟರಿಂಗ್ ಕೇಂದ್ರಗಳಿಂದ ಹೊರಟು ಮತಗಟ್ಟೆಗಳಿಗೆ ತಲುಪಿದ್ದು, ಶುಕ್ರವಾರ ಸಂಜೆ ಮತದಾನ ಪ್ರಕ್ರಿಯೆ ಮುಗಿದ ಬಳಿಕ ಮತಗಟ್ಟೆಗಳಿಂದ ಡಿಮಸ್ಟರಿಂಗ್ ಕೇಂದ್ರಗಳಿಗೆ ವಾಪಸ್ ಆಗಲಿವೆ.

ಒಟ್ಟು ಬಸ್‌ಗಳಲ್ಲಿ ಶೇ 33ರಷ್ಟು ಚುನಾವಣೆ ಕಾರ್ಯಕ್ಕೆ ಬಳಕೆಯಾಗಲಿವೆ. ಉಳಿದ ಬಸ್‌ಗಳು ಎಂದಿನಂತೆ ಸಂಚರಿಸಲಿವೆ. ಎಲ್ಲ ಮಾರ್ಗಗಳಲ್ಲಿ ಬಸ್‌ಗಳು ಇರಲಿವೆ. ಆದರೆ, ಅವುಗಳ ಪ್ರಮಾಣ ಕಡಿಮೆ ಇರಲಿದೆ ಎಂದು ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಕೆಎಸ್‌ಆರ್‌ಟಿಸಿ ಮಾರ್ಗಕ್ಕೆ ಬಿಎಂಟಿಸಿ ಬಸ್: ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ಚುನಾವಣೆ ಕಾರ್ಯಕ್ಕೆ ಬಳಸುತ್ತಿರುವುದರಿಂದ ಪ್ರಯಾಣಿಕರ ದಟ್ಟಣೆ ಹೆಚ್ಚಿರುವ ಮಾರ್ಗಗಳಲ್ಲಿ ಬಿಎಂಟಿಸಿ ಬಸ್ ಸಂಚರಿಸಲಿದೆ. ಗುರುವಾರ 575, ಶುಕ್ರವಾರ 465, ಶನಿವಾರ 40 ಬಿಎಂಟಿಸಿ ಬಸ್‌ಗಳು ಕೆಎಸ್‌ಆರ್‌ಟಿಸಿ ಮಾರ್ಗದಲ್ಲಿ ಕಾರ್ಯಾಚರಣೆ ಮಾಡಲಿವೆ. ಚಿಕ್ಕಮಗಳೂರು, ಮೈಸೂರು, ಮಂಡ್ಯ, ಚಿತ್ರದುರ್ಗ, ಕೋಲಾರ, ತುಮಕೂರು ಸಹಿತ ವಿವಿಧ ಜಿಲ್ಲೆಗಳಿಗೆ ಸಂಚರಿಸಲಿವೆ.

₹46.11 ಕೋಟಿ ಮೌಲ್ಯದ ವಸ್ತು ವಶ

ಲೋಕಸಭಾ ಚುನಾವಣೆ ಪ್ರಕಟವಾದ ಮಾರ್ಚ್ 16ರಿಂದ ಏಪ್ರಿಲ್ 25ರವರೆಗೆ ಮಾದರಿ ಚುನಾವಣೆ ನೀತಿ ಸಂಹಿತೆ ಉಲ್ಲಂಘಿಸಿ ಸಾಗಣೆ ಮಾಡುತ್ತಿದ್ದ ₹46.11 ಕೋಟಿ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ.

₹11.83 ಕೋಟಿ ನಗದು, ₹19.20 ಕೋಟಿ ಮೌಲ್ಯದ 4.67 ಲಕ್ಷ ಲೀಟರ್ ಮದ್ಯ, ₹7.15 ಕೋಟಿ ಮೌಲ್ಯದ 227 ಕೆ.ಜಿ ಮಾದಕ ವಸ್ತು, ₹53.71 ಲಕ್ಷ ಮೌಲ್ಯದ 49.58 ಕೆ.ಜಿ ಚಿನ್ನ-ಬೆಳ್ಳಿ ಆಭರಣಗಳು, ₹1.23 ಕೋಟಿ ಮೌಲ್ಯದ ಉಡುಗೊರೆ, ₹6.14 ಕೋಟಿ ಮೌಲ್ಯದ ವಾಹನಗಳು ಸೇರಿದಂತೆ ₹46.11 ಕೋಟಿ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ. ಅಲ್ಲದೆ, ಪೊಲೀಸ್ ಠಾಣೆಯಲ್ಲಿ 129, ಅಬಕಾರಿ ಇಲಾಖೆಯಲ್ಲಿ 6,423 ಪ್ರಕರಣ ಸೇರಿದಂತೆ 6,552 ಎಫ್‌ಐಆರ್‌ಗಳನ್ನು ಈವರೆಗೆ ದಾಖಲಿಸಲಾಗಿದೆ ಎಂದು ಬಿಬಿಎಂಪಿಯ ವಿಶೇಷ ಚುನಾವಣಾ ಆಯುಕ್ತರು ತಿಳಿಸಿದ್ದಾರೆ.

ಬೆಂಗಳೂರಿನ ನ್ಯಾಷನಲ್ ಪ್ರೌಢ ಶಾಲೆಯ ಮಸ್ಟರಿಂಗ್ ಕೇಂದ್ರದಿಂದ ಚುನಾವಣಾ ಅಧಿಕಾರಿಗಳು ಮತಯಂತ್ರ ಹಾಗೂ ಚುನಾವಣೆ ಸಾಮಗ್ರಿ ಪಡೆದು ಮತಗಟ್ಟೆಗಳತ್ತ ಹೆಜ್ಜೆ ಹಾಕಿದರು.
ಪ್ರಜಾವಾಣಿ ಚಿತ್ರ ಪ್ರಶಾಂತ್ ಎಚ್.ಜಿ.

ನಗರ ಜಿಲ್ಲೆಯಲ್ಲಿರುವ ಮತದಾರರು

1,01,27,869 ಒಟ್ಟು ಮತದಾರರು

52,16,091 ಪುರುಷರು

49,09,958 ಮಹಿಳೆಯರು

1,820 ಇತರೆ

ಮತಗಟ್ಟೆಗಳು

8,984 ಒಟ್ಟು ಮತಗಟ್ಟೆಗಳು

2,003 ಸೂಕ್ಷ್ಮ ಮತಗಟ್ಟೆಗಳು

253 ಅತಿಸೂಕ್ಷ್ಮ ಮತಗಟ್ಟೆಗಳು

'ಕೈ'ಹಿಡಿದ ನಂಜುಂಡಿ; ಪಕ್ಷಕ್ಕೆ ಬಲ– ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ಸ್ಥಾನಕ್ಕೆ ರಾಜೀನಾಮೆ ನೀಡಿರುವ ವಿಶ್ವಕರ್ಮ ಸಮುದಾಯದ ಮುಖಂಡ ಕೆ.ಪಿ. ನಂಜುಂಡಿ ಅವರು, ಬಿಜೆಪಿ ತ್ಯಜಿಸಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಸಮ್ಮುಖದಲ್ಲಿ ಬುಧವಾರ ಕಾಂಗ್ರೆಸ್ ಪಕ್ಷ ಸೇರಿದರು.

ಈ ಸಂದರ್ಭದಲ್ಲಿ ಮಾತನಾಡಿದ ಡಿ.ಕೆ. ಶಿವಕುಮಾರ್, 'ಹಿಂದುಳಿದ ವರ್ಗದ ನಾಯಕರಾದ ನಂಜುಂಡಿ ಅವರು ಕಾಂಗ್ರೆಸ್ ಪಕ್ಷಕ್ಕೆ ವಾಪಸಾಗಿದ್ದಾರೆ. ನನ್ನ ರಾಜಕಾರಣದ ಅನುಭವದಲ್ಲಿ ಸಿದ್ದರಾಮಯ್ಯ ಅವರನ್ನು ಬಿಟ್ಟರೆ ಹಿಂದುಳಿದ ವರ್ಗದ ಪೈಕಿ ಕಾಯಕ ಸಮಾಜದಲ್ಲಿ ಸಂಘಟನೆಗೆ ಶಕ್ತಿ ಹೊಂದಿರುವವರು ನಂಜುಂಡಿ ಎಂದು ಭಾವಿಸಿದ್ದೇನೆ' ಎಂದರು.

'ರಾಜ್ಯ ಸರ್ಕಾರ ನೀಡುತ್ತಿರುವ ಹಣ ಮತ್ತು ಉಳಿತಾಯದಿಂದ ಬಡ ಮಹಿಳೆಯರು ಸಣ್ಣಪುಟ್ಟ ಚಿನ್ನದ ಆಭರಣ ಹಾಗೂ ಮಾಂಗಲ್ಯ ಮಾಡಿಸಿಕೊಳ್ಳುತ್ತಿದ್ದಾರೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಇಂತಹ ಒಂದೇ ಒಂದು ತೀರ್ಮಾನ ತೆಗೆದುಕೊಳ್ಳಲು ಆಗಲಿಲ್ಲ. ಹೀಗಾಗಿ, ಕಾಂಗ್ರೆಸ್ ಪಕ್ಷದಲ್ಲಿ ಇರಬೇಕೆಂದು ನಿರ್ಧರಿಸಿದೆ ಎಂದು ನಂಜುಂಡಿ ನನ್ನ ಬಳಿ ಹೇಳಿದರು' ಎಂದರು.

ಪಕ್ಷದ ಬಾವುಟ ನೀಡಿ ಕೆ.ಪಿ. ನಂಜುಂಡಿ ಅವರನ್ನು ರಣದೀಪ್ ಸಿಂಗ್ ಸುರ್ಜೇವಾಲಾ ಮತ್ತು ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ಪಕ್ಷಕ್ಕೆ ಬರಮಾಡಿಕೊಂಡರು. ಬೆಂಗಳೂರು ದಕ್ಷಿಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾ ರೆಡ್ಡಿ, ವಿಧಾನ ಪರಿಷತ್ ಸದಸ್ಯ ಎಸ್. ರವಿ ಇದ್ದರು

ಸುರ್ಜೇವಾಲಾ ಮಾತನಾಡಿ, 'ಹಿಂದುಳಿದ ವರ್ಗದ ನಾಯಕರಾದ ನಂಜುಂಡಿ ಅವರು ವಿಶ್ವಕರ್ಮ ಸಮಾಜ ಮಾತ್ರವಲ್ಲ, ಹಿಂದುಳಿದ ವರ್ಗಗಳ ಧ್ವನಿ ಆಗಿದ್ದಾರೆ' ಎಂದರು.

ಕಾಂಗ್ರೆಸ್ ಸೇರಿದ ಬಳಿಕ ಮಾತನಾಡಿದ ನಂಜುಂಡಿ, 'ನಾನು ಕಾಂಗ್ರೆಸ್ ಪಕ್ಷದಲ್ಲಿ 15 ವರ್ಷಗಳ ಕಾಲ ಇದ್ದೆ. ಆಗ ನನಗೆ ಸಂಪೂರ್ಣ ಸ್ವಾತಂತ್ರ್ಯವಿತ್ತು. ಕಾರಣಾಂತರಗಳಿಂದ ಬಿಜೆಪಿಗೆ ಹೋದೆ. ಹಿಂದುಳಿದ ವರ್ಗದ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಒದಗಿಸಬಹುದು ಎಂಬ ನಿರೀಕ್ಷೆಯಿಂದ ಬಿಜೆಪಿಗೆ ಹೋಗಿದ್ದೆ. ವಿಧಾನ ಪರಿಷತ್ ಸದಸ್ಯನಾಗುವುದು ನನ್ನ ಉದ್ದೇಶ ಆಗಿರಲಿಲ್ಲ. ಹಿಂದುಳಿದ ಸಮಾಜದ ಧ್ವನಿಯಾಗುವುದು ನನ್ನ ಉದ್ದೇಶ. ಅವರು ನನ್ನನ್ನು ಪರಿಷತ್ ಸದಸ್ಯನಾಗಿ ಮಾಡಿ ಕೂರಿಸಿದರು' ಎಂದರು.

'ಕೋವಿಡ್ ಸಮಯದಲ್ಲಿ ನಮ್ಮ ಸಮಾಜದವರಿಗೆ ₹ 2 ಸಾವಿರ ಕೊಡುವಂತೆ ಹಿಂದಿನ ಬಿಜೆಪಿ ಸರ್ಕಾರಕ್ಕೆ ಮನವಿ ಮಾಡಿದ್ದೆ. ಆದರೆ, ಹಣ ಕೊಡಲಿಲ್ಲ ಎಂಬ ಕೊರಗಿದೆ. ಅಂದು ನಮಗೆ ಶಕ್ತಿ ತುಂಬಿ ಧ್ವನಿಯಾಗಿ ನಿಂತವರು ಡಿ.ಕೆ. ಶಿವಕುಮಾರ್. ಕಾಂಗ್ರೆಸ್ ಪಕ್ಷಕ್ಕೆ ಬರುವಂತೆ ಸಿದ್ದರಾಮಯ್ಯ ಆಹ್ವಾನಿಸಿದರು. ಕಾಂಗ್ರೆಸ್ ಪಕ್ಷದ ಸಿದ್ಧಾಂತ, ತತ್ವಗಳನ್ನು ನಂಬಿ ಪಕ್ಷ ಸೇರಿದ್ದೇನೆ' ಎಂದರು.

ವಿಧಾನ ಪರಿಷತ್ತಿನ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಈ ಸಂದರ್ಭದಲ್ಲಿ ಇದ್ದರು.

ಬಿಜೆಪಿ-ಜೆಡಿಎಸ್ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಜಾರಿಗೊಳಿಸಿರುವ ಐದು ಗ್ಯಾರಂಟಿ ಯೋಜನೆಗಳು ಹಾಗೂ ಲೋಕಸಭಾ ಚುನಾವಣೆಗೆ ರಾಷ್ಟ್ರೀಯ ಕಾಂಗ್ರೆಸ್ ನೀಡಿರುವ ಗ್ಯಾರಂಟಿ ಯೋಜನೆಗಳನ್ನು ತಡೆಯುವುದಾಗಿ ಅಪಪ್ರಚಾರ ನಡೆಸುತ್ತಿರುವ ಬಿಜೆಪಿ-ಜೆಡಿಎಸ್ ವಿರುದ್ಧ ಕ್ರಮ ಜರುಗಿಸಬೇಕು ಎಂದು ಚುನಾವಣಾ ಆಯೋಗಕ್ಕೆ ಕೆಪಿಸಿಸಿ ದೂರು ಸಲ್ಲಿಸಿದೆ.

ರಮೇಶ್ ಬಾಬು

ಮುಖ್ಯ ಚುನಾವಣಾಧಿಕಾರಿಗಳನ್ನು ಗುರುವಾರ ಭೇಟಿ ಮಾಡಿದ ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಈ ದೂರು ಸಲ್ಲಿಸಿದ್ದಾರೆ.

ಸುಮಾರು ಐದು ಕೋಟಿ ಜನರು ರಾಜ್ಯ ಸರ್ಕಾರದ ಐದು ಗ್ಯಾರಂಟಿಗಳ ಫಲಾನುಭವಿಗಳಾಗಿದ್ದಾರೆ. ಬಿಜೆಪಿ, ಜೆಡಿಎಸ್ ಸೇರಿದಂತೆ ಎಲ್ಲ ಪಕ್ಷಗಳ ಕಾರ್ಯಕರ್ತರನ್ನೂ ಒಳಗೊಂಡ ಫಲಾನುಭವಿಗಳು ಇದ್ದಾರೆ. ಬಡವರ್ಗದ ಜನರ ಬದುಕು ಹಸನಾಗಿದೆ. 2024ರ ಲೋಕಸಭಾ ಚುನಾವಣೆಗೆ ಕಾಂಗ್ರೆಸ್ ಬಿಡುಗಡೆ ಮಾಡಿರುವ ಪ್ರಣಾಳಿಕೆಯಲ್ಲಿ ಮಹಾಲಕ್ಷ್ಮಿ ಯೋಜನೆ ಜಾರಿಗೊಳಿಸುವ ಭರವಸೆ ನೀಡಿದೆ. ಯೋಜನೆ ಜಾರಿಯಾದರೆ ಮಹಿಳೆಯರ ಖಾತೆಗೆ ವರ್ಷಕ್ಕೆ ₹1 ಲಕ್ಷ ಪಾವತಿಯಾಗಲಿದೆ ಎಂದು ದೂರಿನಲ್ಲಿ ವಿವರಿಸಲಾಗಿದೆ.

ಚುನಾವಣಾ ಆಯೋಗ ಹಾಗೂ ಪ್ರಜಾ ಪ್ರಾತಿನಿಧ್ಯ ಕಾಯ್ದೆಯ ನಿಯಮಗಳಿಗೆ ಒಳಪಟ್ಟು ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯ ಮೂಲಕ ಇಂತಹ ಭರವಸೆ ನೀಡಿದೆ. ಆದರೆ, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ಜೆಡಿಎಸ್-ಬಿಜೆಪಿಯ ಹಲವು ನಾಯಕರು ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳ ಕುರಿತು ಅಪಪ್ರಚಾರ ನಡೆಸುತ್ತಿದ್ದಾರೆ ಎಂದು ಹೇಳಲಾಗಿದೆ.

ಅವಕಾಶ, ಅಧಿಕಾರ ಸಿಕ್ಕರೆ ಯೋಜನೆ ಸ್ಥಗಿತಗೊಳಿಸುವುದಾಗಿ ಹೇಳುತ್ತಿದ್ದಾರೆ. ಇಂತಹ ಹೇಳಿಕೆಗಳು ವಾಸ್ತವ ಮರೆಮಾಚುವ ಹಾಗೂ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳಿಗೆ ಅವಮಾನ ಮಾಡುವ ಪ್ರಯತ್ನ ಒಳಗೊಂಡಿವೆ. ಕಾಂಗ್ರೆಸ್ ಪಕ್ಷಕ್ಕೆ ಮತಗಳು ಚಲಾವಣೆಯಾಗದಂತೆ ತಡೆಯುವ ಉದ್ದೇಶವಿದೆ. ಇದು ಚುನಾವಣಾ ನಿಯಮಗಳ ಉಲ್ಲಂಘನೆ ಎಂದು ಅವರು ದೂರಿನಲ್ಲಿ ಹೇಳಿದ್ದಾರೆ.

ಶೋಭಾ ವಿರುದ್ಧ ಕಾಂಗ್ರೆಸ್ ಅಪಪ್ರಚಾರ: ಬಿಜೆಪಿ ದೂರು

ಬೆಂಗಳೂರು: ಬೆಂಗಳೂರು ಉತ್ತರ ಕ್ಷೇತ್ರದ ಅಭ್ಯರ್ಥಿ ಶೋಭಾ ಕರಂದ್ಲಾಜೆ ಅವರ ಚಿತ್ರ ಬಳಸಿ ಕಾಂಗ್ರೆಸ್ ಅಪಪ್ರಚಾರ ನಡೆಸುತ್ತಿದ್ದು, ಈ ಬಗ್ಗೆ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ಚುನಾವಣಾ ಆಯೋಗಕ್ಕೆ ಬಿಜೆಪಿ ದೂರು ನೀಡಿದೆ.

'ಕರಪತ್ರಗಳಲ್ಲಿ ಶೋಭಾ ಮತ್ತು ಕಾಂಗ್ರೆಸ್ ಅಭ್ಯರ್ಥಿ ಪ್ರೊ. ರಾಜೀವ್ ಗೌಡ ಅವರ ಚಿತ್ರಗಳನ್ನು ಹಾಕಿ ನಿಮ್ಮ ಮತ ಯಾರಿಗೆ ಎಂಬ ತಲೆ ಬರಹದ ಅಡಿಯಲ್ಲಿ ಶೋಭಾ ಕುರಿತು ಆಧಾರ ರಹಿತ ಆರೋಪಗಳನ್ನು ಮಾಡಿ ಕ್ಷೇತ್ರದಲ್ಲಿ ಕನ್ನಡ ಮತ್ತು ಇಂಗ್ಲಿಷ್ ದಿನ ಪತ್ರಿಕೆಗಳ ಮೂಲಕ ವಿತರಿಸಲಾಗಿದೆ' ಎಂದು ದೂರಿನಲ್ಲಿ ಬಿಜೆಪಿ ತಿಳಿಸಿದೆ.

'ನಮ್ಮ ಪಕ್ಷದ ಅಭ್ಯರ್ಥಿ ವಿರುದ್ಧ ವಿರೋಧಿ ಭಾವನೆ ಮೂಡಿಸುವ ಮೂಲಕ ಚುನಾವಣೆಯಲ್ಲಿ ಅಕ್ರಮ ಲಾಭ ಪಡೆಯುವ ದುರುದ್ದೇಶ ಹೊಂದಿದ್ದಾರೆ. ಇದು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ ಆಗಿದೆ. ಆದ್ದರಿಂದ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಮನವಿ ಮಾಡಿದೆ.

ಜೆ.ಪಿ.ನಗರದ 3 ನೇ ಹಂತದಲ್ಲಿರುವ ಸೇಂಟ್ ಮಾರ್ಕ್ಸ್ ಶಾಲೆಗೆ ಮತದಾನದ ದಿನ ರಜೆ ನೀಡಿಲ್ಲ. ಇದರಿಂದ ಶಾಲೆಯ ಸಿಬ್ಬಂದಿಗೆ ಮತದಾನ ಮಾಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಶಾಲೆಗೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಬಿಜೆಪಿ ಹೇಳಿದೆ.

ಮಂಗಳಸೂತ್ರ ಮಾಡಿಸಲು ಆಗದಷ್ಟು ಬಂಗಾರದ ಬೆಲೆ ಏರಿಕೆ: ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನರೇಂದ್ರ ಮೋದಿ ಅವರು 2014ರಲ್ಲಿ ದೇಶದ ಪ್ರಧಾನ ಮಂತ್ರಿಯಾದಾಗ ₹2,800 ಇದ್ದ ಒಂದು ಗ್ರಾಂ ಚಿನ್ನದ ಬೆಲೆ ಈಗ ₹7,500 ಆಗಿದೆ. ಮಹಿಳೆಯರು ಮಂಗಳಸೂತ್ರ ಮಾಡಿಸಲೂ ಆಗದಷ್ಟು ಚಿನ್ನದ ಬೆಲೆ ಏರಿಕೆಗೆ ಯಾರು ಕಾರಣ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ದಕ್ಷಿಣ ಭಾರತದಲ್ಲಿ ಬಿಜೆಪಿಗೆ ನೆಲೆ ಇಲ್ಲ. ಕರ್ನಾಟಕದಲ್ಲೂ ಈ ಬಾರಿ 10 ಸ್ಥಾನ ಪಡೆಯಲ್ಲ. ಹಾಗಾಗಿ, ಹತಾಶೆಯಿಂದ ಹೇಳಿಕೆಗಳನ್ನು ನೀಡುತ್ತಿದ್ದಾರೆ. ತಮ್ಮ ತಾಯಿ ದೇಶಕ್ಕಾಗಿ ತನ್ನ ಮಾಂಗಲ್ಯಸೂತ್ರ ತ್ಯಾಗ ಮಾಡಿದ್ದಾರೆ ಎಂಬ ಪ್ರಿಯಾಂಕಾ ಗಾಂಧಿ ಅವರ ನೋವಿನ ಹೇಳಿಕೆಯನ್ನು ಮೋದಿ ಅರಿತುಕೊಳ್ಳಬೇಕು' ಎಂದರು.

'ನಮ್ಮ ದೇಶ, ಧರ್ಮ ಕಾಪಾಡಿಕೊಳ್ಳಲು ನಾನು ನಮ್ಮ ಪಕ್ಷಕ್ಕೂ ಸಲಹೆ ನೀಡುವೆ. ದೇಶದ ಪರಂಪರೆ, ಪದ್ಧತಿ ಮುಂದುವರಿಯಬೇಕು. ಆಸ್ತಿ ವರ್ಗಾವಣೆಗೆ ಕಾಂಗ್ರೆಸ್ ಅವಕಾಶ ನೀಡುವುದಿಲ್ಲ' ಎಂದು ಹೇಳಿದರು.

ಕಾಂಗ್ರೆಸ್ ಪ್ರಣಾಳಿಕೆಯ ಅಂಶಗಳೇ ಅಂತಿಮ. ಅದರಿಂದಾಚೆಗಿನ ವಿಷಯಗಳಿಗೂ, ಪಕ್ಷಕ್ಕೂ ಸಂಬಂಧವಿಲ್ಲ. ದೇಶದ ಸಂಪತ್ತನ್ನು ನಗದೀಕರಣ ಮಾಡಲು ಬಿಜೆಪಿಯೇ ಮುಂದಾಗಿತ್ತು ಎಂದು ಸುದ್ದಿ ಹರಿದಾಡಿತ್ತು' ಎಂದು ಹೇಳಿದರು.

ಕಾಂಗ್ರೆಸ್ ನಾಯಕರ ಮೇಲಷ್ಟೇ ಐಟಿ ದಾಳಿ: ಆದಾಯ ತೆರಿಗೆ ಅಧಿಕಾರಿಗಳು ಕಾಂಗ್ರೆಸ್ ನಾಯಕರನ್ನು ಗುರಿಯಾಗಿಸಿ ದಾಳಿ ಮಾಡುತ್ತಿದ್ದಾರೆ. ಹೆದರಿಸುತ್ತಿದ್ದಾರೆ. ಅವರ ಬಳಿ ಸಿಕ್ಕ ಹಣ ಕಾಂಗ್ರೆಸ್ ಹಾಗೂ ಡಿ.ಕೆ. ಶಿವಕುಮಾರ್ ಅವರ ಹಣ ಎಂದು ಹೇಳಲು ಒತ್ತಾಯ ಮಾಡುತ್ತಿದ್ದಾರೆ. ಇಡೀ ದಿನ ಕೂರಿಸಿಕೊಂಡು ಚುನಾವಣಾ ಪ್ರಚಾರಕ್ಕೆ ಹೋಗುವುದನ್ನು ತಡೆಯುತ್ತಿದ್ದಾರೆ. ಬೆಂಗಳೂರು ಗ್ರಾಮಾಂತರ ಕ್ಷೇತ್ರವನ್ನು ಗುರಿಯಾಗಿಸಿಕೊಂಡಿದ್ದಾರೆ. ಅತ್ತ ಬಿಜೆಪಿ ಹಣ ಹಂಚುತ್ತಿದ್ದರೂ, ಆ ಪಕ್ಷದ ಯಾವ ನಾಯಕರ ಮನೆಯ ಮೇಲೂ ದಾಳಿ ನಡೆಸುತ್ತಿಲ್ಲ ಎಂದು ಅವರು ದೂರಿದರು.

ಮತದಾರರು ಊರಿನತ್ತ
ರಾಜ್ಯದ 14 ಲೋಕಸಭಾ ಕ್ಷೇತ್ರಗಳಲ್ಲಿ ಶುಕ್ರವಾರ ಮತದಾನ ನಡೆಯಲಿದ್ದು, ಮತ ಚಲಾಯಿಸಲು ಬೆಂಗಳೂರಿನಿಂದ ತಮ್ಮ ಊರುಗಳಿಗೆ ಹೊರಟ ಜನ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಗುರುವಾರ ಬಸ್‌ಗೆ ಕಾಯುತ್ತಿದ್ದರು.
ಪ್ರಜಾವಾಣಿ ಚಿತ್ರ/ಎಂ. ಎಸ್. ಮಂಜುನಾಥ್

'ರಾಜ್ಯಗಳ ಸ್ವಾತಂತ್ರ್ಯಕ್ಕೆ ಧಕ್ಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಗಳ ಅಧಿಕಾರವನ್ನು ಕಿತ್ತು, ಕೇವಲ ಆಡಳಿತ ಘಟಕಗಳನ್ನಾಗಿ ಮಾಡಲಾಗುತ್ತಿದೆ ಎಂದು 'ಆಲ್ ಇಂಡಿಯಾ ಲಾಯರ್ಸ್ ಅಸೋಸಿಯೇಶನ್ ಫಾರ್ ಜಸ್ಟೀಸ್' ರಾಷ್ಟ್ರೀಯ ಕಾರ್ಯದರ್ಶಿ ಕ್ಲಿಫ್ಟನ್ ಡಿ ರೊಜಾರಿಯೊ ಆರೋಪಿಸಿದರು.

ರಾಜ್ಯಗಳು ಒಕ್ಕೂಟ ಸರ್ಕಾರದ ಕೆಳಗೆ ಕೆಲಸ ಮಾಡುವುದಿಲ್ಲ. ಎರಡು ಸರ್ಕಾರಗಳು ಸ್ವತಂತ್ರವಾಗಿರುತ್ತವೆ. ರಾಜ್ಯಗಳು ಆಡಳಿತ ಘಟಕಗಳಲ್ಲ ಎಂದು ಅಂಬೇಡ್ಕರ್ ತಿಳಿಸಿದ್ದರು. ಈಗ ರಾಜ್ಯಗಳ ಅಧಿಕಾರವನ್ನು ಕಿತ್ತು ಸ್ವಂತ ಅಸ್ತಿತ್ವವಿಲ್ಲದ ಘಟಕಗಳನ್ನಾಗಿ ಕೇಂದ್ರ ಸರ್ಕಾರ ಮಾಡುತ್ತಿದೆ. ಇದು ಒಕ್ಕೂಟ ವ್ಯವಸ್ಥೆಗೆ, ಏಕತೆಗೆ ಅಪಾಯ ಎಂದು ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಹುತ್ವ ಕರ್ನಾಟಕದ ಸದಸ್ಯೆ ಜಾನಕಿ ನಾಯರ್ ಮಾತನಾಡಿ, 'ಬಹುಭಾಷೆ, ಬಹು ಸಂಸ್ಕೃತಿ ಭಾರತದ ಒಗ್ಗಟ್ಟಿಗೆ ಮುಖ್ಯ. ಒಕ್ಕೂಟ ಸರ್ಕಾರವು ಭಾಷೆಗಳ ಮೇಲೆ ದಾಳಿ ಮಾಡುತ್ತಿದೆ. ರಾಜ್ಯಗಳ ಆರ್ಥಿಕ ಶಕ್ತಿಯನ್ನು ಕುಗ್ಗಿಸುತ್ತಿದೆ. ಸಾಮಾಜಿಕ, ಸಾಂಸ್ಕೃತಿಕ ದಬ್ಬಾಳಿಕೆ ನಡೆಸುತ್ತಿದೆ' ಎಂದು ಆರೋಪಿಸಿದರು.

'ಎದ್ದೇಳು ಕರ್ನಾಟಕ'ದ ವೆಂಕಟ್ ಶ್ರೀನಿವಾಸನ್ ಮಾತನಾಡಿ, 'ಕೇಂದ್ರ ಸರ್ಕಾರವು ತೆರಿಗೆಯ ಆದಾಯದ ಹೆಚ್ಚಿನ ಭಾಗವನ್ನು ಸೆಸ್ ಮತ್ತು ಹೆಚ್ಚುವರಿ ಶುಲ್ಕಗಳ ರೂಪದಲ್ಲಿ ಸಂಗ್ರಹಿಸುತ್ತಿದೆ. ಅವುಗಳನ್ನು ರಾಜ್ಯಗಳ ಜೊತೆ ಹಂಚಿಕೊಳ್ಳಬೇಕಾಗಿಲ್ಲ. ಹಾಗಾಗಿ ರಾಜ್ಯಗಳಿಗೆ ಸಿಗಬೇಕಾದ ಪಾಲನ್ನು ಕಡಿತಗೊಳಿಸಿದ್ದಾರೆ' ಎಂದು ತಿಳಿಸಿದರು.

'ಮೋದಿಯಿಂದ ಒಡಕಿನ ಮಾತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣೆಯ ಹೊಸ್ತಿಲಲ್ಲಿ ಧರ್ಮದ ಆಧಾರದ ಮೇಲೆ ಸಮಾಜ ಒಡೆಯುವ ಮಾತುಗಳನ್ನು ಆಡಿದ್ದಾರೆ' ಎಂದು ಕಾಂಗ್ರೆಸ್ ಮುಖಂಡ ಪ್ರೊ.ಬಿ.ಕೆ. ಚಂದ್ರಶೇಖರ್ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಅಧಿಕಾರದಲ್ಲಿ ಉಳಿಯಲು ಮೋದಿ ಅವರಿಗೆ ವಾಸ್ತವಾಂಶಕ್ಕಿಂತ ಮತವು ಅವಶ್ಯವಾದ ಸರಕಾಗಿದೆ. ಅವರು ಭಾಷಣದಲ್ಲಿ ಮುಸ್ಲಿಮರು ಎಂದು ಹೆಸರಿಸದೇ 'ಯಾರು ಬಹಳಷ್ಟು ಮಕ್ಕಳಿಗೆ ಜನ್ಮ ಕೊಟ್ಟಿದ್ದಾರೋ' ಎಂದು ಹೇಳಿದ್ದಾರೆ. 'ನಿಮ್ಮ ಮಾಂಗಲ್ಯವೂ ಸೇರಿದಂತೆ ಎಲ್ಲವನ್ನೂ ಅವರಿಗೆ ಹಂಚುವ ಯೋಜನೆ ಕಾಂಗ್ರೆಸ್ ಪಕ್ಷಕ್ಕಿದೆ' ಎಂದಿದ್ದಾರೆ. ಕೇಂದ್ರ ಸರ್ಕಾರದ 2019–21ರ ಅಂಕಿ-ಅಂಶಗಳ ಪ್ರಕಾರ ಮುಸ್ಲಿಂ ಮಹಿಳೆಯರು ಜನ್ಮಕೊಡುವ ಮಕ್ಕಳ ಸಂಖ್ಯೆ ಇಳಿಮುಖವಾಗಿದೆ. ದೇಶದ ಬಹುಪಾಲು ಜನರಿಗೆ ಈ ವಿಷಯ ತಿಳಿದಿಲ್ಲವೆಂದು ಮೋದಿಯವರು ನಂಬಿರಬಹುದು' ಎಂದು ತಿಳಿಸಿದ್ದಾರೆ.

ಪ್ರೊ.ಬಿ.ಕೆ. ಚಂದ್ರಶೇಖರ್

'ಹಿಂದೂ ಮಹಿಳೆಯರ ಸಂತಾನೋತ್ಪತ್ತಿ ಪ್ರಮಾಣ ಶೇ 1.94ರಷ್ಟಿದ್ದು, ಮುಸ್ಲಿಂ ಮಹಿಳೆಯರಲ್ಲಿ ಈ ಪ್ರಮಾಣ ಶೇ 2.36ರಷ್ಟಿದೆ. ಶಿಕ್ಷಣ ಪಡೆಯುತ್ತಿರುವುದರಿಂದಾಗಿ ಮುಸ್ಲಿಂ ಮಹಿಳೆಯರಲ್ಲಿ ಈ ಪ್ರಮಾಣ ಕಡಿಮೆಯಾಗುತ್ತಿದೆ. 1998-99ರ ವೇಳೆ ಮುಸ್ಲಿಂ ಸಮುದಾಯದಲ್ಲಿ ಶೇ 37ರಷ್ಟು ಮಹಿಳೆಯರು ಗರ್ಭನಿರೋಧಕವನ್ನು ಬಳಸುತ್ತಿದ್ದರು. 2019–21ರ ಅಂಕಿ ಅಂಶಗಳ ಪ್ರಕಾರ ಅದು ಶೇ 60.20ಕ್ಕೆ ಏರಿದೆ. ಅಂದರೆ, ಶೇ 23.2 ರಷ್ಟು ಹೆಚ್ಚಾಗಿದೆ' ಎಂದು ಹೇಳಿದ್ದಾರೆ.

ಲೋಕಸಭೆಯಲ್ಲಿ ಜನರ ಧ್ವನಿಯಾಗುವೆ: ರಾಜೀವ್ ಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಲ್ಲಿಂದ ಆಯ್ಕೆಯಾಗಿ ದೆಹಲಿಗೆ ಹೋದ ಬಿಜೆಪಿಯವರು ಕಾಲ ಹರಣ ಮಾಡಿ ಜನರನ್ನು ವಂಚಿಸಿದರೇ ಹೊರತು ಜನರ ಬವಣೆಗಳ ಕುರಿತು ಯಾವುದೇ ಆಸಕ್ತಿ ಇರಲಿಲ್ಲ' ಎಂದು ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪ್ರೊ. ರಾಜೀವ್ ಗೌಡ ದೂರಿದರು.

'ನಾನು ಲೋಕಸಭೆಗೆ ಆಯ್ಕೆಯಾದರೆ ಜನರ ಧ್ವನಿಯಾಗಿ ಕೆಲಸ ಮಾಡುವೆ' ಎಂದು ಅವರು ಭರವಸೆ ನೀಡಿದರು.

ಲೋಕಸಭಾ ಚುನಾವಣೆಯ ಪ್ರಚಾರದ ಕೊನೆಯ ದಿನವಾದ ಗುರುವಾರ ವಿವಿಧೆಡೆ ಮನೆ ಮನೆಗೆ ತೆರಳಿ ಮತ ಯಾಚಿಸಿದರು. ಮತದಾರರೊಂದಿಗೆ ಚರ್ಚಿಸಿದರು.

'ಕೇಂದ್ರದಿಂದ ರಾಜ್ಯಕ್ಕೆ ಅನ್ಯಾಯವಾಗಿದೆ. ಈ ಬಗ್ಗೆ ಇಲ್ಲಿಂದ ಆಯ್ಕೆಯಾಗಿರುವವರು ರಾಜ್ಯಕ್ಕೆ ಆಗಿರುವ ಮೋಸದ ಬಗ್ಗೆ ಎಲ್ಲಿಯೂ ಮಾತನಾಡಿಲ್ಲ' ಎಂದು ವಿವರಿಸಿದರು.

'ದೇಶದ ವಿವಿಧ ರಾಜ್ಯಗಳಲ್ಲಿ ಕುದುರೆ ವ್ಯಾಪಾರದ ಮೂಲಕ ಜನಪ್ರತಿನಿಧಿಗಳನ್ನು ಖರೀದಿಸಿ, ಜನಪರ ಸರ್ಕಾರಗಳನ್ನು ಬೀಳಿಸುತ್ತಿರುವ ಬಿಜೆಪಿಯ ನಾಯಕರು ಸರ್ವಾಧಿಕಾರದ ಕನಸು ಕಾಣುತ್ತಿದ್ದಾರೆ. ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ಉಳಿಸಲು ನನ್ನನ್ನು ಗೆಲ್ಲಿಸಿ' ಎಂದು ಮನವಿ ಮಾಡಿಕೊಂಡರು.

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ವಿ. ರಾಜೀವ್ ಗೌಡ ಮನೆ ಮನೆಗೆ ಭೇಟಿ ನೀಡಿ ಮತ ಯಾಚಿಸಿದರು

'ಸಿ.ಎಂ ಆದರೆ ಸಾವಿರ ಜೆಸಿಬಿಗೆ ಆರ್ಡರ್'

ಸಿಂದಗಿ (ವಿಜಯಪುರ ಜಿಲ್ಲೆ): 'ನಾನು ಮುಖ್ಯಮಂತ್ರಿಯಾದರೆ ತಕ್ಷಣವೇ ಸಾವಿರ ಜೆಸಿಬಿಗೆ ಆರ್ಡರ್ ಕೊಡುತ್ತೇನೆ. ರಾಜ್ಯದಲ್ಲಿ ಉತ್ತರಪ್ರದೇಶ ಮಾದರಿ ಕಾರ್ಯಾಚರಣೆ ಮಾಡಲಾಗುವುದು' ಎಂದು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಬುಧವಾರ ರೋಡ್ ಶೋ ನಡೆಸಿದ ನಂತರ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು. 'ಮುಸ್ಲಿಂ ಮೀಸಲಾತಿ ರದ್ದುಪಡಿಸಿ ಅದನ್ನು ಎಸ್.ಸಿ, ಎಸ್.ಟಿ ಹಾಗೂ ಹಿಂದುಳಿದ ವರ್ಗಗಳಿಗೆ ಹಂಚಿಕೆ ಮಾಡಲಾಗುವುದು' ಎಂದು ಹೇಳಿದರು.

ಮೆಜೆಸ್ಟಿಕ್ ಬಳಿಯ ಅಣ್ಣಮ್ಮ ದೇವಸ್ಥಾನದ ಎದುರು ಘಟನೆ • ಅಪ್ರಾಪ್ತರಿಂದ ಕೃತ್ಯ

‘ಕರಗ’ ದಾರಿಯಲ್ಲಿ ‘ನೃತ್ಯ’ ಗಲಾಟೆ: ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಜೆಸ್ಟಿಕ್ ಬಳಿಯ ಅಣ್ಣಮ್ಮ ದೇವಸ್ಥಾನದ ಎದುರು ನೃತ್ಯ ಮಾಡುತ್ತಿದ್ದ ಸಂದರ್ಭದಲ್ಲಿ ಪರಸ್ಪರ ತಳ್ಳಾಟದಿಂದ ಗಲಾಟೆ ನಡೆದಿದ್ದು, ಡಿ. ಸಾರಥಿ (17) ಎಂಬಾತನನ್ನು ಕೊಲೆ ಮಾಡಲಾಗಿದೆ.

‘ಶೇಷಾದ್ರಿಪುರದ ವಿ.ವಿ. ಗಿರಿ ಕಾಲೊನಿಯ ಸಾರಥಿ, ಕರಗ ಮಹೋತ್ಸವದ ಮೆರವಣಿಗೆ ನೋಡಲೆಂದು ಏಪ್ರಿಲ್ 23ರಂದು ತಡರಾತ್ರಿ ಮೆಜೆಸ್ಟಿಕ್‌ನ ಅಣ್ಣಮ್ಮ ದೇವಸ್ಥಾನ ಬಳಿ ಬಂದಿದ್ದ. ಇದೇ ಸಂದರ್ಭದಲ್ಲಿ ಕೊಲೆ ಆಗಿದೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಉಪ್ಪಾರಪೇಟೆ ಠಾಣೆ ಪೊಲೀಸರು ಹೇಳಿದರು.

‘ಏಪ್ರಿಲ್ 23ರಂದು ರಾತ್ರಿ ಕರಗ ಮಹೋತ್ಸವ ಮೆರವಣಿಗೆ ಜರುಗಿತ್ತು. ಮರುದಿನ ನಸುಕಿನಲ್ಲಿ ಅಣ್ಣಮ್ಮ ದೇವಸ್ಥಾನ ಎದುರಿನ ರಸ್ತೆಯಲ್ಲಿ ಮೆರವಣಿಗೆ ಸಾಗಬೇಕಿತ್ತು. ಹೀಗಾಗಿ, ರಸ್ತೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಿದ್ದರು. ಇದೇ ಸ್ಥಳದಲ್ಲಿದ್ದ ಕೆಲ ಬಾಲಕರು ನೃತ್ಯ ಮಾಡುತ್ತಿದ್ದರು’ ಎಂದು ತಿಳಿಸಿದರು.

‘ಸಾರಥಿ ಸಹ ಸ್ನೇಹಿತರ ಜೊತೆ ಏಪ್ರಿಲ್ 24ರಂದು ನಸುಕಿನ 3.30 ಗಂಟೆ ಸುಮಾರಿಗೆ ಅಣ್ಣಮ್ಮ ದೇವಸ್ಥಾನ ಎದುರು ನೃತ್ಯ ಮಾಡುತ್ತಿದ್ದ. ಇದೇ ಸಂದರ್ಭದಲ್ಲಿ ಆರೋಪಿಯೊಬ್ಬನಿಗೆ ಸಾರಥಿ ಕೈ ತಾಗಿತ್ತು. ನಂತರ, ಪರಸ್ಪರ ತಳ್ಳಾಟ ನಡೆದಿತ್ತು. ಅದರಿಂದ ಕೋಪಗೊಂಡ ನಾಲ್ವರು ಆರೋಪಿಗಳು, ಸಾರಥಿ ಹಾಗೂ ಸ್ನೇಹಿತರ ಜೊತೆ ಜಗಳ ತೆಗೆದಿದ್ದರು’ ಎಂದು ಹೇಳಿದರು.

‘ಸಾರಥಿ ಮೇಲೆ ಹಲ್ಲೆ ಮಾಡಿದ್ದ ಆರೋಪಿಗಳು, ಹೂವು ಕತ್ತರಿಸಲು ಬಳಸುವ 2 ಇಂಚಿನ ಕಟ್ಟರ್‌ನಿಂದ ಎದೆ ಹಾಗೂ ದೇಹದ ಹಲವೆಡೆ ಇರಿದಿದ್ದರು. ತೀವ್ರ ಗಾಯಗೊಂಡಿದ್ದ ಸಾರಥಿಯನ್ನು ಸ್ಥಳೀಯರು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದಿದ್ದರು. ಅಲ್ಲಿಯೇ ಸಾರಥಿ ಮೃತಪಟ್ಟಿದ್ದಾರೆ’ ಎಂದು ತಿಳಿಸಿದರು.

‘ನಸಕಿನ 5.30 ಗಂಟೆ ಸುಮಾರಿಗೆ ಕರಗ ಮೆರವಣಿಗೆ ಅಣ್ಣಮ್ಮ ದೇವಸ್ಥಾನ ಎದುರು ಬಂದಿತ್ತು. ಇದಕ್ಕೂ ಮುನ್ನವೇ ಕೊಲೆ ನಡೆದಿದೆ’ ಎಂದು ಹೇಳಿದರು

ಬಾಲಕರಿಂದ ಕೃತ್ಯ: ‘ಕೊಲೆ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಹೋಗಿ ಪರಿಶೀಲಿಸಲಾಯಿತು. ಮೃತ ಸಾರಥಿ ಸ್ನೇಹಿತರು ಹಾಗೂ ಇತರರ ಹೇಳಿಕೆ ಪಡೆಯಲಾಯಿತು. ಕೃತ್ಯ ಎಸಗಿರುವ ಆರೋಪಿಗಳು, ಬಾಲಕರು ಎಂಬುದು ಗೊತ್ತಾಗಿದೆ. ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ �ಂದು ಪೊಲೀಸರು ಹೇಳಿದರು.

ಯುವತಿ ಅಪಹರಿಸಿ ಅತ್ಯಾಚಾರ: ಸ್ನೇಹಿತನಿಂದ ಕೃತ್ಯ

ಬೆಂಗಳೂರು: ಯುವತಿಯೊಬ್ಬರನ್ನು ಅಪಹರಿಸಿ ಅತ್ಯಾಚಾರ ಎಸಗಿರುವ ಆರೋಪದಡಿ ಸ್ನೇಹಿತ ಸೇರಿ ಐವರನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಠಾಣೆ ವ್ಯಾಪ್ತಿಯಲ್ಲಿರುವ ಪೇಯಿಂಗ್ ಗೆಸ್ಟ್ (ಪಿ.ಜಿ) ಕಟ್ಟಡವೊಂದರಲ್ಲಿ ವಾಸವಿದ್ದ ಯುವತಿಯನ್ನು ಏಪ್ರಿಲ್ 20ರಂದು ಬೆಳಿಗ್ಗೆ 8.30 ಗಂಟೆ ಸುಮಾರಿಗೆ ಅಪಹರಿಸಲಾಗಿತ್ತು. ಕಟ್ಟಡದ ಮಾಲೀಕ ನೀಡಿದ್ದ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ, ಕೇವಲ ಎರಡು ಗಂಟೆಯೊಳಗಾಗಿ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ’ ಎಂದು ಹೈಗ್ರೌಂಡ್ಸ್ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

‘ಯುವತಿಯನ್ನು ಅಪಹರಿಸಿ ಅತ್ಯಾಚಾರ ಎಸಗಿರುವ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸ್ನೇಹಿತ, ಆತನ ಸಹೋದರ ಹಾಗೂ ಮೂವರು ಸ್ನೇಹಿತರನ್ನು ಬಂಧಿಸಲಾಗಿದೆ. ಎಲ್ಲರೂ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಹಲವು ವರ್ಷಗಳ ಪರಿಚಯ: ‘ಸಂತ್ರಸ್ತ ಯುವತಿ ಹಾಗೂ ಆರೋಪಿ, ಹಲವು ವರ್ಷಗಳಿಂದ ಪರಿಚಿತರು. ಇಬ್ಬರೂ ಪರಸ್ಪರ ಪ್ರೀತಿಸುತ್ತಿದ್ದರೆಂದು ಗೊತ್ತಾಗಿದೆ. ಇತ್ತೀಚೆಗೆ ಯುವತಿಗೆ ಸರ್ಕಾರಿ ನೌಕರಿ ಸಿಕ್ಕಿತ್ತು. ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿ ಉಳಿದುಕೊಂಡು, ಅಲ್ಲಿಂದಲೇ ಕೆಲಸಕ್ಕೆ ಹೋಗಿ ಬರುತ್ತಿದ್ದರು’ ಎಂದು ಮೂಲಗಳು ಹೇಳಿವೆ.

‘ಆರೋಪಿ ಹಾಗೂ ಯುವತಿ ಹಲವು ಬಾರಿ ಭೇಟಿಯಾಗಿದ್ದರು. ಹಲವೆಡೆ ಸುತ್ತಾಡಿದ್ದರು. ಆರೋಪಿ, ತನ್ನನ್ನೇ ಮದುವೆಯಾಗುವಂತೆ ಯುವತಿಯನ್ನು ಪೀಡಿಸಲಾರಂಭಿಸಿದ್ದ. ಸರ್ಕಾರಿ ನೌಕರಿ ಸಿಗುತ್ತಿದ್ದಂತೆ ಯುವತಿ, ಆರೋಪಿಯಿಂದ ಅಂತರ ಕಾಯ್ದುಕೊಂಡಿದ್ದರು. ಕರೆ ಮಾಡಿದರೂ ಸ್ವೀಕರಿಸುತ್ತಿರಲಿಲ್ಲ.’

‘ಕೋಪಗೊಂಡಿದ್ದ ಆರೋಪಿ, ಯುವತಿಯನ್ನು ಅಪಹರಿಸಿ ಅತ್ಯಾಚಾರವೆಸಗಲು ಸಂಚು ರೂಪಿಸಿದ್ದ. ಸಹೋದರ ಹಾಗೂ ಸ್ನೇಹಿತರಿಗೆ ವಿಷಯ ತಿಳಿಸಿ ಸಹಕಾರ ಕೋರಿದ್ದ. ಅವರೆಲ್ಲರೂ ಒಪ್ಪಿಕೊಂಡಿದ್ದರು’ ಎಂದು ತಿಳಿಸಿವೆ.

‘ಪೇಯಿಂಗ್ ಗೆಸ್ಟ್ ಕಟ್ಟಡ ಬಳಿ ಹೋಗಿದ್ದ ಆರೋಪಿಗಳು, ಯುವತಿಯನ್ನು ಅಪಹರಿಸಿದ್ದರು. ಕೊಠಡಿಯೊಂದರಲ್ಲಿ ಯುವತಿ ಮೇಲೆ ಸ್ನೇಹಿತ ಅತ್ಯಾಚಾರ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ಹೇಳಿವೆ.

‘ಪ್ರಕರಣದ ಬಗ್ಗೆ ಮಾಹಿತಿ ಬಹಿರಂಗಪಡಿಸದಂತೆ ದೂರುದಾರರು ಕೋರಿದ್ದಾರೆ. ಹೀಗಾಗಿ, ಎಲ್ಲ ಮಾಹಿತಿ ಗೋಪ್ಯವಾಗಿರಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

ದರೋಡೆ: ವೈದ್ಯನ ಕೂಡಿಹಾಕಿ ಪರಾರಿ

ಬೆಂಗಳೂರು: ಸಹಕಾರ ನಗರದಲ್ಲಿರುವ ಮನೆಯೊಂದಕ್ಕೆ ನುಗ್ಗಿದ್ದ ದುಷ್ಕರ್ಮಿಗಳು ಚಿನ್ನಾಭರಣ ಹಾಗೂ ನಗದು ದೋಚಿ ಮನೆ ಮಾಲೀಕನನ್ನು ಕೂಡಿಹಾಕಿ ಪರಾರಿಯಾಗಿದ್ದು, ಈ ಬಗ್ಗೆ ಕೊಡಿಗೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ವೈದ್ಯ ಉಮಾಶಂಕರ್ ಅವರ ಮನೆಯಲ್ಲಿ ದರೋಡೆ ನಡೆದಿದೆ. 500 ಗ್ರಾಂ ತೂಕದ ಚಿನ್ನಾಭರಣ, ಬೆಲೆಬಾಳುವ 6 ಕೈ ಗಡಿಯಾರಗಳು ಹಾಗೂ ₹ 20 ಲಕ್ಷ ಹಣವನ್ನು ದುಷ್ಕರ್ಮಿಗಳು ದೋಚಿದ್ದಾರೆ. ಉಮಾಶಂಕರ್ ನೀಡಿರುವ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಉಮಾಶಂಕರ್ ಅವರು ಬುಧವಾರ ಮನೆಯಲ್ಲಿ ಒಬ್ಬರೇ ಇದ್ದರು. ತರಕಾರಿ ಖರೀದಿಸಲೆಂದು ಮನೆಯಿಂದ ಹೊರಗೆ ಹೋಗಿದ್ದರು. ಬಾಗಿಲು ಲಾಕ್ ಮಾಡುವುದನ್ನು ಮರೆತಿದ್ದರು. ಇದೇ ಸಂದರ್ಭದಲ್ಲಿ ನಾಲ್ವರು ದುಷ್ಕರ್ಮಿಗಳು, ಮನೆಯೊಳಗೆ ನುಗ್ಗಿದ್ದರು. ಮನೆಯ ಮುಖ್ಯ ದ್ವಾರದ ಬಳಿ ಒಬ್ಬ ನಿಂತುಕೊಂಡಿದ್ದರು. ಉಳಿದ ಮೂವರು ಕೊಠಡಿಗಳಲ್ಲಿ ಹುಡುಕಾಟ ನಡೆಸಿದ್ದರು. ಚಿನ್ನಾಭರಣ ಹಾಗೂ ನಗದು ದೋಚಿ ಬ್ಯಾಗ್‌ನಲ್ಲಿ ತುಂಬಿಕೊಂಡಿದ್ದರು’ ಎಂದು ತಿಳಿಸಿದರು.

ಬಂದೂಕು ತೋರಿಸಿ ಬೆದರಿಕೆ: ‘ತರಕಾರಿ ತರಲು ಹೋಗಿದ್ದ ಉಮಾಶಂಕರ್ ವಾಪಸು ಮನೆಗೆ ಬಂದಿದ್ದರು. ಇದೇ ಸಂದರ್ಭದಲ್ಲಿ ಮುಖ್ಯ ದ್ವಾರದ ಬಳಿ ನಿಂತಿದ್ದ ದುಷ್ಕರ್ಮಿಯನ್ನು ನೋಡಿದ್ದರು. ‘ಯಾರು ನೀನು?’ ಎಂದು ಪ್ರಶ್ನಿಸಿದ್ದರು. ಗಾಬರಿಗೊಂಡಿದ್ದ ದುಷ್ಕರ್ಮಿ, ಕೂಗಾಡಿ ಒಳಗಿದ್ದವರಿಗೆ ಮಾಹಿತಿ ನೀಡಿದ್ದ’ ಎಂದು ಪೊಲೀಸರು ಹೇಳಿದರು.

‘ಮನೆಯೊಳಗೆ ಹೋಗಿದ್ದ ಉಮಾಶಂಕರ್, ಬಾಗಿಲು ಒಳಗಿನಿಂದ ಲಾಕ್ ಮಾಡಿಕೊಳ್ಳಲು ಮುಂದಾಗಿದ್ದರು. ಇದೇ ಸಂದರ್ಭದಲ್ಲಿ ಉಮಾಶಂಕರ್ ಅವರನ್ನು ಸುತ್ತುವರೆದಿದ್ದ ಆರೋಪಿಗಳು, ಬಂದೂಕು ತೋರಿಸಿ ಜೀವ ಬೆದರಿಕೆಯೊಡ್ಡಿದ್ದರು. ಉಮಾಶಂಕರ್ ಅವರನ್ನು ಹಿಡಿದುಕೊಂಡು, ಕೊಠಡಿಯೊಂದರಲ್ಲಿ ಕೂಡಿ ಹಾಕಿ ಪರಾರಿಯಾಗಿದ್ದಾರೆ’ ಎಂದು ತಿಳಿಸಿದರು.

‘ಬಾಗಿಲು ಮೀಟಿ ಕೊಠಡಿಯಿಂದ ಹೊರಬಂದಿದ್ದ ವೈದ್ಯ, ಮನೆಯಲ್ಲಿ ತಪಾಸಣೆ ನಡೆಸಿದ್ದರು. ಚಿನ್ನಾಭರಣ, ನಗದು ದರೋಡೆಯಾಗಿದ್ದು ಗೊತ್ತಾಗಿತ್ತು. ಬಳಿಕವೇ ಠಾಣೆಗೆ ವಿಷಯ ತಿಳಿಸಿದ್ದರು. ಪರಿಶೀಲನೆ ನಡೆಸಲಾಗಿದೆ. ಉತ್ತರ ಪ್ರದೇಶದ ಅಪರಾಧ ಹಿನ್ನೆಲೆಯುಳ್ಳ ಆರೋಪಿಗಳಿಂದ ಕೃತ್ಯ ನಡೆದಿರುವ ಶಂಕೆ ಇದ್ದು, ಅವರ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ’ ಎಂದು ಹೇಳಿದರು.

ಸುದ್ದಿ 2 ನಿಮಿಷ

‘ಬೈಕ್ ಟ್ಯಾಕ್ಸಿ ಚಾಲಕರಿಗೆ ಅಡ್ಡಿ ಸಲ್ಲ’

ಬೆಂಗಳೂರು: ‘ಬೆಂಗಳೂರು ಮಹಾನಗರವೂ ಸೇರಿದಂತೆ ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ಚಾಲಕರಿಗೆ ಯಾವುದೇ ರೀತಿಯಲ್ಲಿ ಅಡ್ಡಿ ಪಡಿಸದಂತೆ ಕ್ರಮ ಕೈಗೊಳ್ಳಬೇಕು’ ಎಂದು ಹೈಕೋರ್ಟ್ ಗೃಹ ಇಲಾಖೆಗೆ ನಿರ್ದೇಶಿಸಿದೆ.

ಮಡಿವಾಳದ ‘ಬೈಕ್ ಟ್ಯಾಕ್ಸಿ ಚಾಲಕರ ಕಲ್ಯಾಣ ಸಂಘ’ ಸೇರಿದಂತೆ ಮತ್ತಿತರರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ಹಿರಿಯ ವಕೀಲ ಕೆ.ಎನ್.ಫಣೀಂದ್ರ, ‘ಬೈಕ್ ಟ್ಯಾಕ್ಸಿ ಚಾಲಕರ ಮೇಲೆ ಹಲ್ಲೆ ಮತ್ತು ಅವರ ಸೇವೆಗೆ ತಡೆಯೊಡ್ಡುವುದು ಮುಂದುವರಿದಿದೆ. ಈ ಕುರಿತು ಸಂಬಂಧಿಸಿದವರಿಗೆ ದೂರು ನೀಡಿದರೂ ಪೊಲೀಸರು ಕ್ರಮ ಕೈಗೊಳ್ಳುತ್ತಿಲ್ಲ. ಹಾಗಾಗಿ, ಬೈಕ್ ಟ್ಯಾಕ್ಸಿ ಕಾರ್ಯಾಚರಣೆಗೆ ಅಡ್ಡಿ ಉಂಟು ಮಾಡುವವರ ವಿರುದ್ಧ ಪೊಲೀಸರಿಗೆ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಬೇಕು’ ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ‘ಬೈಕ್ ಟ್ಯಾಕ್ಸಿ ಕಾರ್ಯಾಚರಣೆಗೆ ಯಾರಾದರೂ ಕಾನೂನು ಬಾಹಿರವಾಗಿ ತಡೆಯೊಡ್ಡಲು ಯತ್ನಿಸಿದರೆ ಅಂತಹವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು’ ಎಂದು ನಿರ್ದೇಶಿಸಿ ಅರ್ಜಿ ವಿಲೇವಾರಿ ಮಾಡಿದೆ. ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ವಾದ ಮಂಡಿಸಿದರು.

ಪ್ರಶ್ನೆ ಪತ್ರಿಕೆ ಸೋರಿಕೆ: ಎಲ್ಲ ಆರೋಪಿಗಳ ಖುಲಾಸೆ

ಬೆಂಗಳೂರು: ಪರೀಕ್ಷೆಗೂ ಮುನ್ನವೇ ದ್ವಿತೀಯ ಪಿಯು ರಸಾಯನ ವಿಜ್ಞಾನ ಪ್ರಶ್ನೆ ಪತ್ರಿಕೆ ಬಹಿರಂಗಗೊಂಡ ಹಗರಣದ ಎಲ್ಲ 15 ಆರೋಪಿಗಳನ್ನು ನಗರದ ಸೆಷನ್ಸ್ ನ್ಯಾಯಾಲಯ ಖುಲಾಸೆಗೊಳಿಸಿದೆ.

ಈ ಕುರಿತ ಆದೇಶವನ್ನು ಸಿಟಿ ಸಿವಿಲ್ ಕೋರ್ಟ್ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶ ಮುರಳೀಧರ ಪೈ ಗುರುವಾರ ಪ್ರಕಟಿಸಿದ್ದು, ‘ಆರೋಪ ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ’ ಎಂದು ಆದೇಶದಲ್ಲಿ ವಿವರಿಸಿದ್ದಾರೆ.

2016ನೇ ಸಾಲಿನ ಪಿಯು ಪ್ರಶ್ನೆ ಪತ್ರಿಕೆ ಸೋರಿಕೆಯ ಈ ಪ್ರಕರಣವನ್ನು ಸಿಐಡಿಯ 13 ಸಹಾಯಕ ತನಿಖಾಧಿಕಾರಿಗಳ ತಂಡ ತನಿಖೆ ನಡೆಸಿತ್ತು. ಪ್ರಾಸಿಕ್ಯೂಷನ್ 126 ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿತ್ತು. ಪ್ರಕರಣದಲ್ಲಿ ಒಂಬತ್ತು ಆರೋಪಿಗಳ ವಿರುದ್ಧ ಕೋಕಾ ಕಾಯ್ದೆ ಅನ್ವಯಿಸಲಾಗಿತ್ತು.

ಮೊದಲ ಆರೋಪಿ ಕುಮಾರಸ್ವಾಮಿ, ಕುಮಾರ ಕಿರಣ್ ಸೇರಿದಂತೆ ಒಟ್ಟು 15 ಆರೋಪಿಗಳನ್ನು ಖುಲಾಸೆಗೊಳಿಸಲಾಗಿದೆ. ಆರೋಪಿಗಳ ಪರವಾಗಿ ಆರ್.ಪಿ.ಚಂದ್ರಶೇಖರ್ ವಾದ ಮಂಡಿಸಿದ್ದರು.

ಸೋಂಪುರ ಹೋಬಳಿ ಶಿವಗಂಗೆಯಯಲ್ಲಿ ಹೊನ್ನಾದೇವಿ ರಥೋತ್ಸವ ನಡೆಯಿತು

ಹೊನ್ನಾದೇವಿ ರಥೋತ್ಸವ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ಸೋಂಪುರ ಹೋಬಳಿ ಶಿವಗಂಗೆಯ ಹೊನ್ನಾದೇವಿ ಬ್ರಹ್ಮ ರಥೋತ್ಸವವು ಗುರುವಾರ ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಶಿವಗಂಗೆ ಬೆಟ್ಟದ ಮೇಲಿನ ಹೊನ್ನಾದೇವಿ ದೇವಾಲಯದಲ್ಲಿ ಅಮ್ಮನವರ ಮೂರ್ತಿಗೆ ಬೆಳಿಗ್ಗೆ ಪೂಜೆ, ಅಭಿಷೇಕ ನಡೆಯಿತು. ಉತ್ಸವಗಳು ಜರುಗಿದವು.

ಅಲಂಕೃತ ಉತ್ಸವ ಮೂರ್ತಿಯನ್ನು ಮೆರವಣಿಗೆ ಮೂಲಕ ನಡೆಮುಡಿಯಿಂದ ಶಾಸ್ತ್ರೋಕ್ತವಾಗಿ ಮಂಗಳವಾದ್ಯದಲ್ಲಿ ಭಕ್ತರ ಜಯಘೋಷದೊಂದಿಗೆ ತಂದು ವೇದ ಮಂತ್ರ ಘೋಷಗಳೊಂದಿಗೆ ರಥದಲ್ಲಿ ಕೂರಿಸಲಾಯಿತು.

ತೇರನ್ನು ಅಲಂಕಾರ ಮಾಡಲಾಗಿತ್ತು. ಭಕ್ತರು ರಥವನ್ನು ಮುಂದೆ ಎಳೆದರು. ರಥ ಮುಂದೆ ಸಾಗುತ್ತಿದಂತೆ ಭಕ್ತರು ಬಾಳೆಹಣ್ಣು ಎಸೆದು ಹರಕೆಗಳನ್ನು ತೀರಿಸಿದರು. ಜನಪದ ಕಲಾತಂಡಗಳಾದ ವೀರಗಾಸೆ, ನಂದಿಧ್ವಜ, ಕರಡಿ ವಾದ್ಯ, ಬೃಹತ್ ಗೊಂಬೆಗಳ ಕುಣಿತ ಮೆರುಗು ನೀಡಿದವು. ಸ್ಥಳೀಯರು ಭಕ್ತರಿಗೆ ಮಜ್ಜಿಗೆ, ಪಾನಕ ವಿತರಿಸಿದರು. ದೇವಾಲಯದ ಸಮಿತಿ ವತಿಯಿಂದ ಅನ್ನಸಂತರ್ಪಣೆ ಆಯೋಜಿಸಲಾಗಿತ್ತು.

ಅಪಘಾತ: ದಿನಕ್ಕೆ ಮೂವರು ಸಾವು

ಮೃತರಲ್ಲಿ ಬೈಕ್ ಸವಾರರು, ಪಾದಚಾರಿಗಳು • ನಿರ್ಲಕ್ಷ್ಯದ ಚಾಲನೆ ಕಾರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ನಿತ್ಯವೂ ಅಪಘಾತಗಳು ಸಂಭವಿಸುತ್ತಿದ್ದು, ಬೈಕ್ ಸವಾರರು ಹಾಗೂ ಪಾದಚಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಾವಿಗೀಡಾಗುತ್ತಿದ್ದಾರೆ. ಪ್ರಸಕ್ತ ವರ್ಷದ ಜನವರಿ 1ರಿಂದ ಮಾರ್ಚ್ 31ರವರೆಗೆ 1,280 ಅಪಘಾತಗಳು ಸಂಭವಿಸಿದ್ದು, 243 ಮಂದಿ ಮೃತಪಟ್ಟಿದ್ದಾರೆ.

ನಗರದ ಸಂಚಾರ ಪೊಲೀಸರು ಅಪಘಾತದ ಅಂಕಿ–ಅಂಶ ಬಿಡುಗಡೆ ಮಾಡಿದ್ದು, ಈ ಪ್ರಕಾರ ನಗರದಲ್ಲಿ ದಿನಕ್ಕೆ ಸರಾಸರಿ ಮೂವರು ಮೃತಪಡುತ್ತಿದ್ದಾರೆ.

ಅತೀ ವೇಗ, ನಿರ್ಲಕ್ಷ್ಯದ ಚಾಲನೆ ಕಾರಣ: ‘ನಗರದಲ್ಲಿ ಅಪಘಾತ ಸಂಭವಿಸಿದ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ವಿಧಿವಿಜ್ಞಾನ ಪ್ರಯೋಗಾಲಯ ತಜ್ಞರು, ಲೋಕೋಪಯೋಗಿ ಹಾಗೂ ಸಾರಿಗೆ ಇಲಾಖೆ ಅಧಿಕಾರಿಗಳು ಸಹ ಸ್ಥಳ ಪರಿಶೀಲಿಸುತ್ತಿದ್ದಾರೆ. ಅತೀ ವೇಗ ಹಾಗೂ ನಿರ್ಲಕ್ಷ್ಯದ ಚಾಲನೆಯಿಂದ ಹೆಚ್ಚಿನ ಅಪಘಾತ ಸಂಭವಿಸಿರುವುದು ಪರಿಶೀಲನೆಯಿಂದ ತಿಳಿದುಬರುತ್ತಿದೆ’ ಎಂದು ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ರಸ್ತೆಗೆ ಸಂಬಂಧಪಟ್ಟ ಕಾರಣಗಳಿಗಾಗಿಯೂ ಕೆಲವೆಡೆ ಅಪಘಾತಗಳು ಸಂಭವಿಸಿದೆ. ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳುವಂತೆ ಕಾಲ ಕಾಲಕ್ಕೆ ಬಿಬಿಎಂಪಿ ಅಧಿಕಾರಿಗಳಿಗೆ ವರದಿ ಸಲ್ಲಿಸಲಾಗುತ್ತಿದೆ. ಆದರೆ, ಕೆಲವೆಡೆ ರಸ್ತೆ ಸುಧಾರಣೆ ಆಗುತ್ತಿಲ್ಲ. ಪದೇ ಪದೇ ಅಪಘಾತ ಸಂಭವಿಸುವ ಸ್ಥಳಗಳನ್ನು ಗುರುತಿಸಿ, ಅಲ್ಲಲ್ಲ ಬ್ಯಾರಿಕೇಡ್‌ಗಳನ್ನು ನಿಲ್ಲಿಸಲಾಗುತ್ತಿದೆ’ ಎಂದು ಅವರು ಹೇಳಿದರು.

‘ಬೈಕ್ ಸವಾರರು, ಹಿಂಬದಿ ಸವಾರರು ಹಾಗೂ ಪಾದಚಾರಿಗಳು ಹೆಚ್ಚಿನ ಪ್ರಮಾಣದಲ್ಲಿ ಮೃತಪಡುತ್ತಿದ್ದಾರೆ. ಪ್ರತಿಯೊಬ್ಬ ಸವಾರರು ಹೆಲ್ಮೆಟ್ ಧರಿಸದಿದ್ದರಿಂದ, ತಲೆಗೆ ಪೆಟ್ಟು ಬಿದ್ದು ಸಾವಿಗೀಡಾಗುತ್ತಿದ್ದಾರೆ. ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ, ರಸ್ತೆ ದಾಟುವ ಸಂದರ್ಭದಲ್ಲಿ ವಾಹನಗಳು ಡಿಕ್ಕಿ ಹೊಡೆದು ಪಾದಚಾರಿಗಳು ಮೃತಪಡುತ್ತಿದ್ದಾರೆ’ ಎಂದು ತಿಳಿಸಿದರು.

‘ಸಂಚಾರ ನಿಯಮ ಉಲ್ಲಂಘನೆಯೂ ಅಪಘಾತಕ್ಕೆ ಕಾರಣವಾಗಿದೆ. ನಿಯಮ ಉಲ್ಲಂಘಿಸುವವರ ವಿರುದ್ಧ ಸುಧಾರಿತ ಕ್ಯಾಮೆರಾಗಳ ಸಹಾಯದಿಂದ ಪ್ರಕರಣಗಳನ್ನು ದಾಖಲಿಸಿಕೊಂಡು, ದಂಡ ವಿಧಿಸಲಾಗುತ್ತಿದೆ. ₹ 50 ಸಾವಿರಕ್ಕಿಂತ ಹೆಚ್ಚು ದಂಡ ಬಾಕಿ ಇರಿಸಿಕೊಂಡಿರುವ ವಾಹನಗಳ ಮಾಲೀಕರ ಮನೆಗೂ ಹೋಗಿ ದಂಡ ಸಂಗ್ರಹಿಸಲಾಗುತ್ತಿದೆ’ ಎಂದು ಹೇಳಿದರು.

ನಿಯಮ ಉಲ್ಲಂಘನೆ, ದಂಡ ವಸೂಲಿ ವಿವರ (ಜ. 1ರಿಂದ ಮಾ. 31ರವರೆಗೆ)

₹23.71 ಲಕ್ಷ — ಸಂಚಾರ ನಿಯಮ ಉಲ್ಲಂಘನೆ ಪ್ರಕರಣ ಸಂಖ್ಯೆ

₹14.80 ಕೋಟಿ — ನಿಯಮ ಉಲ್ಲಂಘನೆ ವಿರುದ್ಧ ವಿಧಿಸಿರುವ ದಂಡ

ಅಪಘಾತಗಳ ವಿವರ (ಜ. 1ರಿಂದ ಮಾ. 31ರವರೆಗೆ)

240 — ಮಾರಣಾಂತಿಕ ಅಪಘಾತಗಳ ಸಂಖ್ಯೆ

1,040 — ಮಾರಣಾಂತಿಕವಲ್ಲದ ಅಪಘಾತಗಳ ಸಂಖ್ಯೆ

1,082 — ಗಾಯಗೊಂಡವರು

ವರ್ಷವಾರು ಅಪಘಾತ ವಿವರ

ವರ್ಷ	ಅಪಘಾತಗಳು	ಮೃತರು	ಗಾಯಾಳು
2023	4,974	910	4,191
2022	3,823	771	3,218
2021	3,211	651	2,828
2020	3,236	647	2,760
2019	4,688	766	4,253
2018	4,611	684	4,133
2017	5,064	642	4,256
2016	7,506	793	4,193
2015	4,828	740	4,047

2024ರ ತಿಂಗಳವಾರು ದಂಡದ ವಿವರ

	ಜನವರಿ	ಫೆಬ್ರುವರಿ	ಮಾರ್ಚ್
ಪ್ರಕರಣಗಳು (ಲಕ್ಷಗಳಲ್ಲಿ)	8.47	7.79	7.43
ದಂಡ (ಕೋಟಿಗಳಲ್ಲಿ)	₹4,34	₹5.95	₹4.50

ಬಾಲಕಿ ಮೇಲೆ ದೌರ್ಜನ್ಯ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ಮಂಜುಮ್ (30) ಎಂಬಾತನನ್ನು ಕೆ.ಆರ್. ಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.



‘ಕೋಲ್ಕತ್ತದ ಮಂಜುಮ್, ಕೆಲ ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದ. ಕೂಲಿ ಕಾರ್ಮಿಕನಾಗಿ ಕೆಲಸಕ್ಕೆ ಸೇರಿದ್ದ. ಬಾಲಕಿಯ ಪೋಷಕರು ನೀಡಿದ್ದ ದೂರು ಆಧರಿಸಿ ಈತನನ್ನು ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿ ಹಾಗೂ ಬಾಲಕಿ, ಒಂದೇ ಪ್ರದೇಶದಲ್ಲಿ ವಾಸವಿದ್ದರು. ಏಪ್ರಿಲ್ 18ರಂದು ಬಾಲಕಿಯ ಪೋಷಕರು ಹೊರಗಡೆ ಹೋಗಿದ್ದರು. ಇದೇ ಸಂದರ್ಭದಲ್ಲಿ ಮನೆಗೆ ನುಗ್ಗಿದ್ದ ಆರೋಪಿ, ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಪರಾರಿಯಾಗಿದ್ದ. ಪೋಷಕರು ಮನೆಗೆ ಬಂದಾಗ, ಬಾಲಕಿ ಅಸ್ವಸ್ಥಗೊಂಡು ಬಿದ್ದಿದ್ದಳು. ಅವಳನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು.’

‘ತಪಾಸಣೆ ನಡೆಸಿದ್ದ ವೈದ್ಯರು, ಲೈಂಗಿಕ ದೌರ್ಜನ್ಯ ನಡೆದಿರುವುದಾಗಿ ಹೇಳಿದ್ದರು. ಬಳಿಕವೇ ಪೋಷಕರು ಠಾಣೆಗೆ ದೂರು ನೀಡಿದ್ದರು. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ಸೆರೆ ಹಿಡಿಯಲಾಗಿದೆ. ಬಾಲಕಿ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ’ ಎಂದು ತಿಳಿಸಿದರು.

ಹಳಿ ದಾಟುವಾಗ ರೈಲು ಡಿಕ್ಕಿ: ಮೂವರ ಸಾವು

ಬೆಂಗಳೂರಿನ ಮಾರತ್ತಹಳ್ಳಿ ಸಮೀಪದ ಚಿನ್ನಪ್ಪನಹಳ್ಳಿ ಗೇಟ್ ಬಳಿ ಸ್ನೇಹಿತರ ದುರ್ಮರಣದ ಘಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರತ್ತಹಳ್ಳಿ ಸಮೀಪದ ಚಿನ್ನಪ್ಪನಹಳ್ಳಿ ಗೇಟ್ ಬಳಿ ರೈಲು ಡಿಕ್ಕಿಯಾಗಿ ಮೂವರು ಸ್ನೇಹಿತರು ಮೃತಪಟ್ಟಿದ್ದು, ಈ ಸಂಬಂಧ ಬೈಯಪ್ಪನಹಳ್ಳಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಆಂಧ್ರಪ್ರದೇಶದ ಚಿತ್ತೂರಿನ ಲೋಕೇಶ್ (23), ಬಾಲ ಸುಬ್ರಹ್ಮಣ್ಯಂ (22) ಹಾಗೂ ಸಿ. ಶಶಿಕುಮಾರ್ (20) ಮೃತರು. ಮೂವರು ಒಂದೇ ಊರಿನವರು. ಬುಧವಾರ ರಾತ್ರಿ ಮೂವರು ಒಟ್ಟಿಗೆ ಹಳಿ ದಾಟುತ್ತಿದ್ದ ಸಂದರ್ಭದಲ್ಲಿ ಈ ಅವಘಡ ಸಂಭವಿಸಿದೆ’ ಎಂದು ರೈಲ್ವೆ ಎಸ್ಪಿ ಎಸ್.ಕೆ. ಸೌಮ್ಯಲತಾ ‘ಪ್ರಜಾವಾಣಿ’ಗೆ ತಿಳಿಸಿದರು.

ಶಶಿಕುಮಾರ್

ಲೋಕೇಶ್

ಬಾಲ ಸುಬ್ರಹ್ಮಣ್ಯಂ

‘ಮೃತ ಲೋಕೇಶ್, ಕ್ಯಾಬ್ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಶಶಿಕುಮಾರ್, ಕೆಲಸ ಹುಡುಕಿಕೊಂಡು ಇತ್ತೀಚೆಗಷ್ಟೇ ಬೆಂಗಳೂರಿಗೆ ಬಂದಿದ್ದರು. ಪದವೀಧರಾಗಿದ್ದ ಬಾಲಸುಬ್ರಹ್ಮಣ್ಯಂ ಉನ್ನತ ವ್ಯಾಸಂಗಕ್ಕಾಗಿ ನಗರಕ್ಕೆ ಬಂದಿದ್ದರು. ಮೂವರು ಮಾರತ್ತಹಳ್ಳಿ ಬಳಿಯ ಪೇಯಿಂಗ್ ಗೆಸ್ಟ್ (ಪಿ.ಜಿ) ಕಟ್ಟಡವೊಂದರಲ್ಲಿ ನೆಲೆಸಿದ್ದರು’ ಎಂದು ಹೇಳಿದರು.

ಎಕ್ಸ್‌ಪ್ರೆಸ್ ರೈಲು ಗಮನಿಸದ ಸ್ನೇಹಿತರು: ‘ಲೋಕೇಶ್, ಶಶಿಕುಮಾರ್ ಹಾಗೂ ಬಾಲ ಸುಬ್ರಹ್ಮಣ್ಯಂ ಅವರು ಕೆಲಸ ನಿಮಿತ್ತ ಪೇಯಿಂಗ್ ಗೆಸ್ಟ್ ಕಟ್ಟಡದಿಂದ ಹೊರಗಡೆ ಹೋಗಿದ್ದರು. ಚಿನ್ನಪ್ಪನಹಳ್ಳಿ ಗೇಟ್‌ನಿಂದ 1 ಕಿ.ಮೀ ದೂರದಲ್ಲಿರುವ ಹಳಿ ಮೇಲೆ ಸಾರ್ವಜನಿಕರು ಅಕ್ರಮವಾಗಿ ಓಡಾಡುತ್ತಾರೆ. ಇದೇ ಸ್ಥಳದಲ್ಲಿಯೇ ಮೂವರು ಹಲವು ಬಾರಿ ಓಡಾಡಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಬುಧವಾರ ರಾತ್ರಿ 10.20 ಗಂಟೆ ಸುಮಾರಿಗೆ ಮೂವರು ಒಟ್ಟಿಗೆ ಹಳಿ ದಾಟುತ್ತಿದ್ದರು. ಯಶವಂತಪುರದಿಂದ ಕಣ್ಣೂರಿಗೆ ಹೊರಟಿದ್ದ ಎಕ್ಸ್‌ಪ್ರೆಸ್ ರೈಲು, ಇದೇ ಮಾರ್ಗದಲ್ಲಿ ಅತೀ ವೇಗದಲ್ಲಿ ಹೊರಟಿತ್ತು. ಅದನ್ನು ಮೂವರು ಸ್ನೇಹಿತರು ಗಮನಿಸಿರಲಿಲ್ಲ.’

‘ಹಳಿ ದಾಟುತ್ತಿದ್ದ ಮೂವರು ಸ್ನೇಹಿತರಿಗೆ ರೈಲು ಡಿಕ್ಕಿ ಹೊಡೆದಿತ್ತು. ಇದರಿಂದಾಗಿ ಮೂವರು, ಹಳಿ ಅಕ್ಕ–ಪಕ್ಕದಲ್ಲಿ ಹಾರಿ ಬಿದ್ದಿದ್ದರು. ಇವರ ತಲೆ ಹಾಗೂ ದೇಹದ ಇತರೆ ಭಾಗಗಳಿಗೆ ತೀವ್ರ ಪೆಟ್ಟಾಗಿತ್ತು. ಮೂವರು ಸ್ಥಳದಲ್ಲೇ ಮೃತಪಟ್ಟಿದ್ದರು’ ಎಂದು ಪೊಲೀಸರು ಹೇಳಿದರು.

ಮಾಹಿತಿ ನೀಡಿದ್ದ ಲೋಕೊ ಪೈಲಟ್: ‘ರೈಲಿನಲ್ಲಿದ್ದ ಲೋಕೊ ಪೈಲಟ್, ಹಳಿ ಮೇಲೆ ಮೂವರು ಸ್ನೇಹಿತರು ಇರುವುದನ್ನು ನೋಡಿದ್ದರು. ಆದರೆ, ರೈಲು ಅತೀ ವೇಗದಲ್ಲಿ ಇದ್ದುದರಿಂದ ಅವರಿಂದ ನಿಯಂತ್ರಿಸಲು ಸಾಧ್ಯವಾಗಿರಲಿಲ್ಲ. ಮೂವರಿಗೆ ರೈಲು ಡಿಕ್ಕಿಯಾಗಿದ್ದನ್ನು ನೋಡಿದ್ದ ಅವರು, ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಸ್ಥಳಕ್ಕೆ ಹೋಗಿದ್ದ ಭದ್ರತಾ ಸಿಬ್ಬಂದಿ, ಮೃತದೇಹಗಳಿಗಾಗಿ ಹುಡುಕಾಟ ನಡೆಸಿದ್ದರು. ನಸುಕಿನಲ್ಲಿ ಮೃತದೇಹಗಳು ಪತ್ತೆಯಾದವು. ಅವುಗಳನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದು ಹೇಳಿದರು.

‘ಹಳಿ ಮೇಲೆ ಅಕ್ರಮವಾಗಿ ಸಂಚರಿಸಿದ್ದರಿಂದ ಈ ಅವಘಡ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಮೂವರ ಸಾವಿನ ಬಗ್ಗೆ ಯುಡಿಆರ್ (ಅಸಹಜ ಸಾವು) ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಬೆಂಗಳೂರು ಕಲಾವಿದರ ವಿವಿಧೋದ್ದೇಶ ಸಹಕಾರ ಸಂಘ ನಗರದ ರವೀಂದ್ರ ಕಲಾಕ್ಷೇತ್ರ ಆವರಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ‘ಕ್ಯಾಂಟೀನ್ ಕಾರಂತರಿಗೆ ಸಾಂಸ್ಕೃತಿಕ ಬೀಳ್ಕೊಡುಗೆ’ ಸಮಾರಂಭದಲ್ಲಿ ಅನಂತಪದ್ಮನಾಭ ಕಾರಂತ ಮತ್ತು ರೇಖಾ ಕಾರಂತ ಅವರಿಗೆ ಲೇಖಕಿ ವಿಜಯಾ ಸನ್ಮಾನಿಸಿದರು. ಕಲಾವಿದರಾದ ಶ್ರೀನಿವಾಸ್ ಜಿ. ಕಪ್ಪಣ್ಣ, ಬಿ. ಸುರೇಶ್, ಬಿ. ವಿ. ರಾಜಾರಾಂ, ಜೆ. ಲೋಕೇಶ್, ಕೆ. ವಿ. ನಾಗರಾಜಮೂರ್ತಿ, ಜೆಪಿಓ ಚಂದ್ರು, ಭಾಗವತರು ಸಂಘಟನೆಯ ಕೆ. ರೇವಣ್ಣ, ವಿವಿಧ ಸಾಂಸ್ಕೃತಿಕ ಸಂಘಟನೆಗಳ ಪ್ರತಿನಿಧಿಗಳು ಹಾಗೂ ಕಲಾವಿದರು ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಕಾಜಲ್ ಹಿಂದೂಸ್ಥಾನಿ ವಿರುದ್ಧದ ಪ್ರಕರಣಕ್ಕೆ ಹೈಕೋರ್ಟ್ ತಡೆ

ಬೆಂಗಳೂರು: ಕೋಮು ದ್ವೇಷ ಹರಡುವ ಭಾಷಣ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಕಾಜಲ್ ಹಿಂದೂಸ್ಥಾನಿ ವಿರುದ್ಧ ದಾಖಲಿಸಿರುವ ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಪ್ರಕ್ರಿಯೆಗಳಿಗೆ ಹೈಕೋರ್ಟ್ ತಡೆ ನೀಡಿದೆ.

ಈ ಸಂಬಂಧ ಕಾಜಲ್ ಹಿಂದೂಸ್ತಾನಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು, ಅರ್ಜಿದಾರರ ವಿರುದ್ಧದ ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದ ಮುಂದಿನ ಎಲ್ಲಾ ಪ್ರಕ್ರಿಯೆಗಳಿಗೆ ತಡೆ ನೀಡಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ್ದ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, ‘ಅರ್ಜಿದಾರರ ವಿರುದ್ಧ ಪೂರಕ ಸಾಕ್ಷ್ಯಾಧಾರಗಳ ಕೊರತೆಯಿದ್ದರೂ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಜಿಲ್ಲಾಧಿಕಾರಿ ಪ್ರಾಸಿಕ್ಯೂಷನ್‌ಗೆ ಪೂರ್ವಾನುಮತಿ ನೀಡಿದ್ದಾರೆ. ಆದ್ದರಿಂದ, ಪೂರ್ವಾನುಮತಿ ರದ್ದುಪಡಿಸಬೇಕು’ ಎಂದು ಕೋರಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ ಎಫ್‌ಐಆರ್‌ಗೆ ತಡೆ ನೀಡಿ ವಿಚಾರಣೆ ಮುಂದೂಡಿದೆ.

ಕಾಜಲ್ ಹಿಂದೂಸ್ತಾನಿ

ಪ್ರಕರಣವೇನು?: ಉಡುಪಿ ಕೃಷ್ಣಮಠದ ಬಳಿ 2022ರ ಅಕ್ಟೋಬರ್ 2ರಂದು ಹಿಂದೂ ಜಾಗರಣಾ ವೇದಿಕೆ ಆಯೋಜಿಸಿದ್ದ ‘ದುರ್ಗಾ ದೌಡ್ ’ ಕಾರ್ಯಕ್ರಮದಲ್ಲಿ ಕಾಜಲ್ ಹಿಂದೂಸ್ತಾನಿ ಅತಿಥಿಯಾಗಿ ಭಾಗವಹಿಸಿದ್ದರು.

ಈ ವೇಳೆ ಮಾತನಾಡಿದ್ದ ಅವರು, ‘ಮುಸ್ಲಿಂ ಸಮುದಾಯದವರು ಲವ್ ಜಿಹಾದ್ ನಡೆಸುವ ಮೂಲಕ ಹಿಂದೂ ಹೆಣ್ಣು ಮಕ್ಕಳನ್ನು ವಂಚಿಸುತ್ತಿದ್ದಾರೆ. ಲವ್ ಜಿಹಾದ್‌ಗೆ ಬಾಲಿವುಡ್ ಸಹ ಅಗತ್ಯ ನೆರವು ಹಾಗೂ ಬೆಂಬಲ ನೀಡುತ್ತಿದೆ’ ಎಂದು ಹೇಳಿಕೆ ನೀಡಿದ್ದಾಗಿ ಆರೋಪಿಸಿ ಉಡುಪಿ ಟೌನ್ ಪೊಲೀಸರು ಕಾಜಲ್ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು.

ತನಿಖೆ ಪೂರ್ಣಗೊಳಿಸಿದ್ದ ಪೊಲೀಸರು ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಾಸಿಕ್ಯೂಷನ್ ಪ್ರಕ್ರಿಯೆಗಾಗಿ ಉಡುಪಿ ಜಿಲ್ಲಾಧಿಕಾರಿ ತನಿಖಾಧಿಕಾರಿಗಳಿಗೆ 2023ರ ಡಿಸೆಂಬರ್ 18ರಂದು ಪೂರ್ವಾನುಮತಿ ನೀಡಿದ್ದರು. ಇದನ್ನು ರದ್ದುಪಡಿಸುವಂತೆ ಕೋರಿ ಕಾಜಲ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

‘ಮಲೆಗಳಲ್ಲಿ ಮದುಮಗಳ ಮೊಮ್ಮಗಳಂತೆ ಕುಸುಮಬಾಲೆ’ ಹೇಳಿಕೆ ಇಷ್ಟ

‘ದೇವನೂರ ಮಹಾದೇವ ಜೊತೆ ಮಾತುಕತೆ’ ಬಿಡುಗಡೆ

ಪ್ರಜಾವಾಣಿ ವಾರ್ತೆ

ಮೈಸೂರು: ‘ವಿಮರ್ಶಕರೊಬ್ಬರು ನಿಮ್ಮನ್ನು ಕುವೆಂಪು ಅವರ ಉತ್ತರಾಧಿಕಾರಿಯೆಂದು ಹೇಳುತ್ತಾರೆ. ನಿಮ್ಮದೇನು ಅಭಿಪ್ರಾಯ’ ಎಂಬ ಲೇಖಕಿ ಎಚ್.ಜಿ.ಸರಸ್ವತಿ ಅವರ ಪ್ರಶ್ನೆಗೆ ಉತ್ತರಿಸಿದ ಲೇಖಕ ದೇವನೂರ ಮಹಾದೇವ, ‘ಕುಸುಮಬಾಲೆ ಕೃತಿ ವಿಮರ್ಶೆಗಳಲ್ಲಿ ನಿಮಗ್ಯಾವುದು ಇಷ್ಟವೆಂದು ಒಬ್ಬರು ನನ್ನನ್ನು ಕೇಳುತ್ತಾರೆ. ಆಗ ಯಾರೋ ಒಬ್ಬರು ‘ಮಲೆಗಳಲ್ಲಿ ಮದುಮಗಳ ಮೊಮ್ಮಗಳ ತರ ಕುಸುಮಬಾಲೆ ಇದ್ದಾಳೆ’ ಎಂದಿದ್ದಾರೆ. ಆ ಮಾತು ನನಗಿಷ್ಟ’ ಎಂದು ಉತ್ತರಿಸಿದರು.

ಇಂಥ ಅಪರೂಪದ ಸಂವಾದಕ್ಕೆ ನಗರದ ನವಕರ್ನಾಟಕ ಪುಸ್ತಕ ಮಳಿಗೆಯು ಗುರುವಾರ ಸಾಕ್ಷಿಯಾಯಿತು.

ತಮ್ಮ ಆಯ್ದ ಸಂದರ್ಶನ ಲೇಖನಗಳ ಸಂಗ್ರಹ ‘ದೇವನೂರ ಮಹಾದೇವ ಜೊತೆ ಮಾತುಕತೆ’ ಕೃತಿಯ ಬಿಡುಗಡೆ ಕಾರ್ಯಕ್ರಮದಲ್ಲಿ ನಡೆದ ಸಂವಾದದಲ್ಲಿ ಅವರು ಚುರುಕು, ಚುಟುಕು ಉತ್ತರಗಳನ್ನು ನೀಡಿದರು.

‘ಕುವೆಂಪು ಪ್ರಶಸ್ತಿ ಬಂದಾಗ ಸಂದರ್ಶಿಸಿದ್ದ ವಿಮರ್ಶಕ ನಟರಾಜ್ ಹುಳಿಯಾರ್, ‘ಫೋಟೊದಲ್ಲಿನ ಕುವೆಂಪು ನಿಮ್ಮತ್ತ ನೋಡುತ್ತಿಲ್ಲವಲ್ಲವೆಂದಿದ್ದರು’. ಅದಕ್ಕೆ ನಾನು ‘ಇದು ತುಂಬಾ ಕ್ಷೇಮ. ಅವರು ನೋಡುತ್ತಿದ್ದರೆ ಬೇರೇನೂ ಮಾಡೋದಕ್ಕೆ ಆಗುವುದಿಲ್ಲ. ಗಂಭೀರವಾಗಿರಬೇಕೆಂದಿದ್ದೆ’ ಎಂದು ಸ್ಮರಿಸಿದರು.

ಮೈಸೂರಿನ ನವಕರ್ನಾಟಕ ಪುಸ್ತಕ ಮಳಿಗೆಯಲ್ಲಿ ದೇವನೂರ ಮಹಾದೇವ ಅವರ ಆಯ್ದ ಸಂದರ್ಶನ ಲೇಖನಗಳ ಸಂಗ್ರಹ ‘ದೇವನೂರ ಮಹಾದೇವ ಜೊತೆ ಮಾತುಕತೆ’ ಕೃತಿಯನ್ನು ಲೇಖಕ ಪ್ರೊ.ಕೃಷ್ಣಮೂರ್ತಿ ಹನೂರು ಗುರುವಾರ ಬಿಡುಗಡೆ ಮಾಡಿದರು. ಸೇನಾನಿ, ಕೃಪಾಕರ, ಎನ್‌ಕೆ. ಸತ್ಯನಾರಾಯಣ, ಸಿ.ಬಸವಲಿಂಗಯ್ಯ, ಸರಸ್ವತಿ, ನಿವೃತ್ತ ಮೇಜರ್ ಜನರಲ್ ಸುಧೀರ್ ಒಂಬತ್ಕೆರೆ, ಸುಮಿತ್ರಾ, ಅಭಿರುಚಿ ಗಣೇಶ್, ಪ್ರಕಾಶ್ ರಾಜ್ ಹಾಜರಿದ್ದರು —ಪ್ರಜಾವಾಣಿ ಚಿತ್ರ

ಪುಸ್ತಕ ವಿವರ

ಕೃತಿ: ದೇವನೂರ ಮಹಾದೇವ ಜೊತೆ ಮಾತುಕತೆ (ಆಯ್ದ ಸಂದರ್ಶನಗಳ ಸಂಕಲನ)
ಸಂಪಾದನೆ: ಬನವಾಸಿಗರು
ಪ್ರ: ಅಭಿರುಚಿ ಪ್ರಕಾಶನ
ಪುಟ: 232, ಬೆಲೆ: ₹ 220

ಕೃತಿ ಬಿಡುಗಡೆ ಮಾಡಿದ ಕೃಷ್ಣಮೂರ್ತಿ ಹನೂರು ಮಾತನಾಡಿ, ‘ದೇವನೂರ ಮಹಾದೇವ ಲೋಕ ಸಂವಾದಿ. ಅವರ ಮಾತಿನಲ್ಲಿ ಕಥೆಗಳಿರುತ್ತವೆ, ಅವುಗಳಲ್ಲಿ ವಿಚಾರದ ಜೊತೆಗೆ ಸದ್ಯದ ಪರಿಸ್ಥಿತಿಯ ಬಗೆಗಿನ ವಿಷಾದ ಇರುತ್ತದೆ. ಏನು ಮಾಡಬೇಕೆಂಬ ಪರಿಹಾರ ಕೂಡ ಇರುತ್ತದೆ. ಅವರು ಯಾವ ಮತ-ಧರ್ಮಕ್ಕೂ ಸೇರದವರು. ಆದರೆ, ಎಲ್ಲ ಮತ- ಧರ್ಮಕ್ಕೂ ಸಲ್ಲುತ್ತಾರೆ’ ಎಂದರು.

ಭಾರತದ ಚುನಾವಣಾ ಆಯೋಗ
Election Commission of India

चुनाव का पर्व
DESH KA GARV
LOK SABHA ELECTION 2024

ಬನ್ನಿರಿ, ಈ ದಿನ ನಿಮ್ಮ

ಪ್ರಜಾಪ್ರಭುತ್ವದ ಅತಿ ದೊಡ್ಡ ಹಬ್ಬವನ್ನು ಸಂಭ್ರಮಾಚರಿಸಿ

13 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು

88 ಪಾರ್ಲಿಮೆಂಟರಿ ಕ್ಷೇತ್ರಗಳು

26 ಏಪ್ರಿಲ್

ಪಾರ್ಲಿಮೆಂಟರಿ ಕ್ಷೇತ್ರಗಳು

ಅಸ್ಸಾಂ – 5
ಬಿಹಾರ್ – 5
ಛತ್ತೀಸ್‌ಗಢ್ – 3
ಜಮ್ಮು & ಕಾಶ್ಮೀರ – 1
ಕರ್ನಾಟಕ – 14
ಕೇರಳ – 20
ಮಧ್ಯಪ್ರದೇಶ – 6
ಮಹಾರಾಷ್ಟ್ರ– 8
ಮಣಿಪುರ – 1
ರಾಜಸ್ಥಾನ – 13
ತ್ರಿಪುರ – 1
ಉತ್ತರಪ್ರದೇಶ – 8
ಪಶ್ಚಿಮ ಬಂಗಾಳ – 3

'ನನ್ನ ಮತ, ನನ್ನ ಕರ್ತವ್ಯ' ಚಿತ್ರ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ

CBC 52101/13/0016/2425

ಲಾಗಾನ್ ಮಾಡಿ: elections24.eci.gov.in

ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ಮತದಾನದ ಪ್ರತಿಜ್ಞೆ ಮಾಡಿ
ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ ಮತ್ತು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವದ ಕುರಿತ ಪ್ರತಿಜ್ಞೆಗಳ ಸಂಖ್ಯೆಯನ್ನು ಹೆಚ್ಚಿಸಿ ಹಾಗೂ #IvoteForSure ಹ್ಯಾಂಡಲ್ ಬಳಸಿಕೊಂಡು ಪ್ರತಿಜ್ಞೆಯನ್ನು ನಿಮ್ಮ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳಿ.

ಮತದಾರರ ಸಹಾಯವಾಣಿ **1950**

ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರನ್ನು ಪರಿಶೀಲಿಸಿಕೊಳ್ಳಲು ಮತ್ತು ನಿಮ್ಮ ಕ್ಷೇತ್ರದಲ್ಲಿನ ಮತದಾನದ ದಿನಾಂಕವನ್ನು ತಿಳಿದುಕೊಳ್ಳಲು ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ

#IVoteForSure | #MeraVoteDeshKeLiye

fb.com/ECI | @ecisveep | youtube.com/eci | /company/election-commission-of-india-official | @ecisveep | Election Commission of India

ಸುಭಾಷಿತ

ಜನರಿಗೆ ತಮ್ಮ ಹಕ್ಕಿನ ಹೊಣೆಗಾರಿಕೆಯ ಅರಿವು
ಇಲ್ಲದೇಹೋದರೆ ಪ್ರಜಾಪ್ರಭುತ್ವ ಬರೀ ನಕಲಿ ಮಾಲು.
–ಗೋಪಾಲಕೃಷ್ಣ ಅಡಿಗ

ಆರೋಗ್ಯ ವಿಮೆ ನಿಯಮ ಬದಲಾವಣೆ ಪ್ರಾಧಿಕಾರದ ನಡೆ ಸ್ವಾಗತಾರ್ಹ

ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಐಆರ್‌ಡಿಎಐ) ತನ್ನ ನಿಯಮಗಳಲ್ಲಿ ಕೆಲವು ಬದಲಾವಣೆಗಳನ್ನು ತಂದಿದೆ. ಈ ಮೂಲಕ ಅದು ವಿಮಾ ಸೇವೆಗಳು ಇನ್ನಷ್ಟು ಜನರನ್ನು ಒಳಗೊಳ್ಳುವಂತೆ ಮಾಡಿದೆ. ನಿಯಮಗಳಲ್ಲಿನ ಈ ಬದಲಾವಣೆಗಳು ವಿಮಾ ಗ್ರಾಹಕರಿಗೆ ಅನುಕೂಲಕರವಾಗಿವೆ. ನಿಯಮಗಳಲ್ಲಿನ ಬದಲಾವಣೆಯ ಕಾರಣದಿಂದಾಗಿ, ವಿಮಾ ಕಂಪನಿಗಳು ತಮ್ಮ ಉತ್ಪನ್ನಗಳಲ್ಲಿ ಎರಡು ಪ್ರಮುಖ ಬದಲಾವಣೆಗಳನ್ನು ತರಬೇಕಾಗುತ್ತದೆ. ಒಂದು ಪ್ರಮುಖ ಬದಲಾವಣೆಯೆಂದರೆ, ವಿಮಾ ಕಂಪನಿಗಳು ಎಲ್ಲ ವಯೋಮಾನದವರಿಗೂ ಆರೋಗ್ಯ ವಿಮೆಯ ಸೌಲಭ್ಯವನ್ನು ಒದಗಿಸಬೇಕಾಗುತ್ತದೆ. ಇದುವರೆಗೆ ಆರೋಗ್ಯ ವಿಮೆಯ ಸೌಲಭ್ಯವನ್ನು ಪಡೆಯಲು 65 ವರ್ಷ ವಯಸ್ಸಿನ ಮಿತಿಯನ್ನು ಹೇರಲಾಗಿತ್ತು. ಹೊಸ ನಿಯಮವು ಈ ಮಿತಿಯನ್ನು ಇನ್ನಷ್ಟು ಹಿರಿದಾಗಿಸುವ ಕೆಲಸ ಮಾಡುತ್ತದೆ. ಇನ್ನೊಂದು ಬದಲಾವಣೆಯು ಆರೋಗ್ಯ ವಿಮೆಯ ಸೌಲಭ್ಯ ಪಡೆದವರಿಗೆ, ಸೌಲಭ್ಯ ಪಡೆಯುವುದಕ್ಕೂ ಮೊದಲೇ ಇದ್ದ ಕಾಯಿಲೆಗಳಿಗೆ ವಿಮಾ ರಕ್ಷಣೆಯನ್ನು ಪಡೆಯಲು ಇದ್ದ ಕಾಯುವಿಕೆಯ ಅವಧಿಯನ್ನು 48 ತಿಂಗಳ ಬದಲು 36 ತಿಂಗಳಿಗೆ ಇಳಿಸುತ್ತದೆ. ಇದು ಕೂಡ ಹಲವಾರು ಮಂದಿಗೆ ಅನುಕೂಲಕರ ಆಗಲಿದೆ. ಏಕೆಂದರೆ, ವಿಮಾ ಸೌಲಭ್ಯ ಪಡೆದುಕೊಳ್ಳುವ ಸಂದರ್ಭದಲ್ಲೇ ಇರುವ ಆರೋಗ್ಯ ಸಮಸ್ಯೆಗಳಿಗೆ ವಿಮಾ ರಕ್ಷಣೆಯನ್ನು ಮೊದಲಿಗಿಂತ ಬೇಗನೆ ಪಡೆಯಲು ಸಾಧ್ಯವಾಗುತ್ತದೆ. ಕ್ಯಾನ್ಸರ್, ಹೃದ್ರೋಗದಂತಹ ಗಂಭೀರ ಸ್ವರೂಪದ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿರುವವರು ಹೊಸ ಬದಲಾವಣೆಯಿಂದ ಹೆಚ್ಚಿನ ಪ್ರಯೋಜನ ಪಡೆದುಕೊಳ್ಳಲಿದ್ದಾರೆ.

ದೇಶದ ಆರೋಗ್ಯ ವಿಮಾ ವಲಯದಲ್ಲಿನ ಪಾರದರ್ಶಕತೆ ಕೊರತೆಯ ಸಮಸ್ಯೆಗೂ ಹೊಸ ನಿಯಮವು ಪರಿಹಾರ ಒದಗಿಸಬೇಕು

ದೇಶದ ಜನಸಂಖ್ಯೆಯ ಸ್ವರೂಪವು ಬದಲಾಗುತ್ತಿರುವ ಸಂದರ್ಭದಲ್ಲಿ, ಆರೋಗ್ಯಸೇವೆಗಳ ವೆಚ್ಚವು ದುಬಾರಿ ಆಗಿರುವಾಗ ಆರೋಗ್ಯ ವಿಮೆಯ ವ್ಯಾಪ್ತಿಗೆ ಹೆಚ್ಚಿನವರನ್ನು ತರುವುದು ಬಹಳ ಮುಖ್ಯವಾಗುತ್ತದೆ. ಈಗಿನ ಬದಲಾವಣೆಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಜಾರಿಯಲ್ಲಿ ಇರುವ ನಿಯಮಗಳಿಗೆ ಅನುಗುಣವಾಗಿ ಇವೆ. 65 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿರುವ ಹಿರಿಯ ನಾಗರಿಕರಿಗೆ ಆರೋಗ್ಯ ವಿಮೆಯ ಸೌಲಭ್ಯವು ಅತ್ಯಗತ್ಯ, ಆದರೆ ಅವರಿಗೆ ಹೊಸ ಆರೋಗ್ಯ ವಿಮೆಯನ್ನು ಖರೀದಿಸಲು ನಿರ್ಬಂಧ ಇತ್ತು. ಆರೋಗ್ಯ ವಿಮೆಯು ಒಂದು ಅಗತ್ಯ ಎಂಬುದು ಹೆಚ್ಚಿನ ಜನರಿಗೆ ತೀರಾ ಈಚಿನವರೆಗೆ ಮನದಟ್ಟಾಗಿರುವ ಕಾರಣ, 65 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿರುವ ಹಲವರು, ಆ ವಯಸ್ಸು ದಾಟುವ ಮೊದಲು ಆರೋಗ್ಯ ವಿಮೆ ಖರೀದಿಸುವ ಸಾಧ್ಯತೆ ಕಡಿಮೆ. 65 ವರ್ಷಕ್ಕಿಂತ ಹೆಚ್ಚು ವಯಸ್ಸಾದವರ ಸಂಖ್ಯೆಯು ಮುಂದಿನ ದಿನಗಳಲ್ಲಿ ಹೆಚ್ಚಲಿದೆ. ಹೀಗಾಗಿ, ಅವರನ್ನು ಆರೋಗ್ಯ ವಿಮಾ ಸೌಲಭ್ಯದ ವ್ಯಾಪ್ತಿಗೆ ತರುವುದು ಅಗತ್ಯವಾಗುತ್ತದೆ. ದೇಶದ ಜನರಿಗೆ ಆರೋಗ್ಯಸೇವಾ ವ್ಯವಸ್ಥೆಯು ಸಮರ್ಪಕವಾಗಿ ಇಲ್ಲ. ದೇಶದಲ್ಲಿನ ಖಾಸಗಿ ಆರೋಗ್ಯಸೇವಾ ವ್ಯವಸ್ಥೆಯು ದುಬಾರಿ, ಹೆಚ್ಚಿನ ಜನರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವುದು ಬಹಳ ದೊಡ್ಡ ಹೊರೆ. ಇಂತಹ ಪರಿಸ್ಥಿತಿಯಲ್ಲಿ ಹೊಸ ನಿಯಮವು ಹೆಚ್ಚಿನ ಪ್ರಯೋಜನ ತಂದುಕೊಡಲಿದೆ. ಕುಟುಂಬವನ್ನು ನೆಚ್ಚಿಕೊಂಡಿದ್ದ ಸಾಂಪ್ರದಾಯಿಕ ಸಾಮಾಜಿಕ ಭದ್ರತಾ ವ್ಯವಸ್ಥೆಯು ಇಂದು ದುರ್ಬಲಗೊಳ್ಳುತ್ತಿದೆ. ಹೀಗಾಗಿ, ಹಿರಿಯ ನಾಗರಿಕರಿಗೆ ಇಂತಹ ಆಯ್ಕೆಗಳ ಅಗತ್ಯ ಇದೆ.

ವಿಮಾ ಸೌಲಭ್ಯ ಪಡೆಯುವ ಮೊದಲೇ ಇದ್ದ ಕಾಯಿಲೆಗಳಿಗೆ ಸಂಬಂಧಿಸಿದಂತೆ ನಿಯಮಗಳಲ್ಲಿ ತರಲಾಗಿರುವ ಬದಲಾವಣೆಯು ಕೂಡ ಬಹಳ ಅನುಕೂಲಕರ. ಏಕೆಂದರೆ, ಈ ನಿಯಮಗಳ ಅಡಿಯಲ್ಲಿಯೇ ಬಹಳಷ್ಟು ವಿಮಾ ಕಂಪನಿಗಳು ವಿಮಾ ಸೌಲಭ್ಯವನ್ನು ಹಲವರಿಗೆ ನಿರಾಕರಿಸುತ್ತಿದ್ದವು. ವಿಮಾ ಪಾಲಿಸಿಯನ್ನು ಖರೀದಿಸುವ ಸಂದರ್ಭದಲ್ಲಿ ಗ್ರಾಹಕರು ತಾನು ಅದಾಗಲೇ ಎದುರಿಸುತ್ತಿದ್ದ ಆರೋಗ್ಯ ಸಮಸ್ಯೆಗಳ ಮಾಹಿತಿಯನ್ನು ಪೂರ್ಣ ಪ್ರಮಾಣದಲ್ಲಿ ನೀಡಿರಲಿಲ್ಲ ಎಂಬ ಕಾರಣ ನೀಡಿ, ಕಂಪನಿಗಳು ವಿಮಾ ಕ್ಲೇಮ್‌ಗಳನ್ನು ತಿರಸ್ಕರಿಸುತ್ತಿದ್ದವು. ಇದು ವಿಮಾ ಕಂಪನಿಗಳಿಗೆ ವಿಮಾ ಸೌಲಭ್ಯವನ್ನು ನಿರಾಕರಿಸಲು ಹಲವು ಮಾರ್ಗಗಳನ್ನು ಒದಗಿಸಿಕೊಡುತ್ತಿತ್ತು. ಈಗ ನಿಯಮಗಳನ್ನು ಅನುಷ್ಠಾನಕ್ಕೆ ತರುವ ಸಂದರ್ಭದಲ್ಲಿ, ಮುಂದೆ ಈ ರೀತಿ ಆಗದಂತೆ ನಿಗಾ ವಹಿಸಬೇಕು. ಅದೇ ರೀತಿಯಲ್ಲಿ, 65 ವರ್ಷಕ್ಕಿಂತ ಹೆಚ್ಚು ವಯಸ್ಸಾದವರಿಗೆ ವಿಮಾ ಪಾಲಿಸಿಗಳು ಬಹಳ ದುಬಾರಿ ಆಗದಂತೆಯೂ ಕಾಳಜಿ ವಹಿಸಬೇಕು. ಒಂದು ವೇಳೆ, ಅವು ದುಬಾರಿ ಆದಲ್ಲಿ, 65 ವರ್ಷಕ್ಕಿಂತ ಹೆಚ್ಚು ವಯಸ್ಸಾದವರು ಹೊಸದಾಗಿ ಆರೋಗ್ಯ ವಿಮೆ ಖರೀದಿಸಲು ಅನುವಾಗಿಸುವ ನಿಯಮವೇ ಹಲವರ ಪಾಲಿಗೆ ನಿರುಪಯುಕ್ತ ಆಗಿಬಿಡಬಹುದು. ದೇಶದ ಆರೋಗ್ಯ ವಿಮಾ ವಲಯವು ಪಾರದರ್ಶಕತೆಯ ಕೊರತೆಯ ಕಾರಣದಿಂದಾಗಿಯೇ ಹೆಚ್ಚು ಪ್ರಚಾರ ಪಡೆದುಕೊಂಡಿದೆ. ಅಲ್ಲದೆ, ಅಲ್ಲಿನ ನಿಬಂಧನೆಗಳು ಎಲ್ಲರಿಗೂ ಸುಲಭಕ್ಕೆ ಅರ್ಥವಾಗುವುದಿಲ್ಲ, ಕ್ಲೇಮ್ ಪ್ರಕ್ರಿಯೆ ಕೂಡ ಸುಲಭವಲ್ಲ. ಹೊಸ ನಿಯಮಗಳು ಈ ಸಮಸ್ಯೆಗಳಿಗೆ ಕೂಡ ಪರಿಹಾರ ಒದಗಿಸಿಕೊಡಬೇಕು.

ಜನಾದೇಶದ ಖರೀದಿ, ಜನಾದೇಶದ ಅಪಹರಣ, ಜನಾದೇಶದ ಸರ್ಜರಿ ನಡುವೆ...

ಚುನಾವಣೆ ಎಂಬ ಹಬ್ಬ, ಮಾರಿಹಬ್ಬ

ಅನುರಣನ

ನಾರಾಯಣ ಎ.

ಚುನಾವಣೆಯನ್ನು ಪ್ರಜಾತಂತ್ರದ ಹಬ್ಬ ಅಂತ ಕರೆಯುವುದು ರೂಢಿ. ಚುನಾವಣೆ ಒಂದು ಹಬ್ಬವೇ ಆಗಿದ್ದಲ್ಲಿ ಅದನ್ನು ಮಾರಿಹಬ್ಬ ಅಂತ ಕರೆಯುವುದು ಸೂಕ್ತ. ಮಾರಿಹಬ್ಬದಲ್ಲಿ ಎರಡು ವಿಧಗಳಿವೆ. ಒಂದು, ಊರ ದೇವತೆ ಮಾರಮ್ಮನನ್ನು ಪೂಜಿಸುವ ಹಬ್ಬ. ಇನ್ನೊಂದು ರೀತಿಯ ಮಾರಿಹಬ್ಬದಲ್ಲಿ ಊರ ಮಾರಿಯನ್ನು ಅಂದರೆ ಕೆಡುಕನ್ನು ಮೆರವಣಿಗೆಯಲ್ಲಿ ಕೊಂಡೊಯ್ದು ಊರ ಗಡಿಯಾಚೆ ಬಿಟ್ಟುಬರಲಾಗುತ್ತದೆ. ಇದನ್ನು 'ಮಾರಿ ನೂಕುವುದು' ಅಂತಲೂ ಕರೆಯುತ್ತಾರೆ. ಚುನಾವಣೆಯನ್ನು ಮಾರಿಹಬ್ಬ ಎಂದು ಕರೆಯಬಹುದಾಗಿರುವುದು ಈ 'ಮಾರಿ ನೂಕುವುದು' ಎನ್ನುವ ಅರ್ಥದಲ್ಲಿ. ಯಾಕೆಂದರೆ, ಬೇಡವಾದದ್ದನ್ನು ಅಥವಾ ಕೆಟ್ಟದ್ದನ್ನು ಹೊರದಬ್ಬಲು ಸಾಂವಿಧಾನಿಕವಾಗಿ ಈ ದೇಶದ ಸಾಮಾನ್ಯ ಜನರಿಗೆ ಚುನಾವಣೆ ಒಂದು ಅವಕಾಶ ಒದಗಿಸುತ್ತದೆ. ಈ ಅವಕಾಶದ ಬಳಕೆ ಹೇಗಾಗುತ್ತದೆ ಎನ್ನುವ ವಿಚಾರಕ್ಕೆ ಮತ್ತೆ ಬರೋಣ.

ಚುನಾವಣೆ ಎಂದರೆ ಪ್ರಜಾತಂತ್ರದ ಒಂದು ಸಂಭ್ರಮದ ಗಳಿಗೆ ಎನ್ನುವಂತೆ ಅದನ್ನು ವೈಭವೀಕರಿಸುವ ಕೆಲಸ ಪ್ರತಿಸಾರಿ ಚುನಾವಣೆ ಬಂದಾಗಲೂ ಈ ದೇಶದಲ್ಲಿ ನಡೆಯುತ್ತದೆ. ಮತದಾನದ ಹಕ್ಕು ಶ್ರೇಷ್ಠ ಹಕ್ಕು, ಮತದಾನದ ಮೂಲಕ ಆಳುವ ಅಧಿಕಾರವನ್ನು ಯಾರಿಗೆ ಬೇಕೋ ಅವರಿಗೆ ನೀಡಬಹುದಾದ ಸ್ವಾತಂತ್ರ್ಯ ಏನಿದೆ ಅದು ಶ್ರೇಷ್ಠ ಸ್ವಾತಂತ್ರ್ಯ ಎನ್ನುವುದೆಲ್ಲ ಸರಿ. ಆದರೆ ಈ ಹಕ್ಕಿನ ಶ್ರೇಷ್ಠತೆಯನ್ನು ಮಾತ್ರ ದೃಷ್ಟಿಯಲ್ಲಿ ಇಟ್ಟುಕೊಂಡು ಚುನಾವಣೆಯನ್ನು ಒಂದು ಹಬ್ಬ ಎನ್ನುವ ರೀತಿಯಲ್ಲಿ ಸಂಭ್ರಮಿಸಿ ಮೈಮರೆಯುವಾಗ, ದೇಶದ ಸಮಗ್ರ ಚುನಾವಣಾ ವ್ಯವಸ್ಥೆಯ ಕುರಿತಾದ ಕೆಲವು ಕರಾಳ ಸತ್ಯಗಳು ಮರೆತುಹೋಗಬಾರದು. ಸಂಭ್ರಮದಾಚೆಗಿನ ಚುನಾವಣಾ ವಾಸ್ತವಗಳನ್ನು ಗಮನಕ್ಕೆ ತಂದುಕೊಂಡರೆ, ಪ್ರತಿಬಾರಿಯೂ ಚುನಾವಣೆ ನಡೆದಾಗ ದೇಶದಲ್ಲಿ ಕಾಣಿಸುವುದು ಪ್ರಜಾತಂತ್ರದ ಜೀವಂತಿಕೆಯೋ ಅಥವಾ ಪ್ರಜಾತಂತ್ರ ಜೀವಚ್ಛವವಾಗುತ್ತಿರುವ ಲಕ್ಷಣವೋ ಎನ್ನುವ ಪ್ರಶ್ನೆಯೊಂದು ಕಾಡುತ್ತದೆ.

ಈ ದೇಶದಲ್ಲಿ ಸಮಾನತೆ ಎನ್ನುವ ಸಾಂವಿಧಾನಿಕ ಮೌಲ್ಯವನ್ನು ಎಲ್ಲಾದರೂ ಅಪ್ಪಟ ಸ್ವರೂಪದಲ್ಲಿ ಕಾಣಬಹುದಾದರೆ ಅದು ಮತಗಟ್ಟೆಗಳ ಮುಂದೆ ನಿಂತ ಮತದಾರರ ಸಾಲಿನಲ್ಲಿ ಮಾತ್ರ ಎನ್ನುವುದು ನಿಜ. ಅದೊಂದೇ ಸಾಲಿನಲ್ಲಿ ಈ ದೇಶದಲ್ಲಿ ಎಲ್ಲರೂ ಸಮಾನರು. ಆ ಸಾಲಿನಲ್ಲಿ ಮಾತ್ರ ಮುಂದೆ ಬಂದವರು ಮುಂದೆ ನಂತರ ಬಂದವರು ಹಿಂದೆ. ಸ್ಥಾನ, ಮಾನ, ಜಾತಿ, ಮತ, ಕುಲ, ಅಂತಸ್ತು ಎಲ್ಲವೂ ಆ ಒಂದು ಪಂಕ್ತಿಯಲ್ಲಿ ಮಾತ್ರ ಗೌಣ. ಆ ಸಾಲಿನಲ್ಲಿ ನಿಂತ ಎಲ್ಲರ ಬಳಿಯೂ ಇರುವುದು ಒಂದೇ ಒಂದು ವೋಟು. ಯಾರು ಏನೇ ಆಗಿದ್ದರೂ ಯಾರು ಏನೇ ಮಾಡಿದರೂ ಅಷ್ಟೇ– ಒಬ್ಬರಿಗೆ ಒಂದೇ ವೋಟು. ಆ ಒಂದು ವೋಟಿನ ಮೂಲಕ ಪ್ರತಿ ಪ್ರಜೆಗೂ ಸಂವಿಧಾನ ನೀಡಿದ ಸಾರ್ವಭೌಮ ಅಧಿಕಾರ ಆ ಪ್ರಜೆ ಬಯಸುವ ಯಾವುದೋ ರಾಜಕೀಯ ಪಕ್ಷಕ್ಕೆ ಅಥವಾ ಆ ಪಕ್ಷವನ್ನು ಪ್ರತಿನಿಧಿಸುವ ವ್ಯಕ್ತಿಗಳಿಗೆ ಐದು ವರ್ಷಗಳ ಅವಧಿಗೆ ವರ್ಗಾವಣೆಯಾಗುತ್ತದೆ.

ದೇಶದ ಪ್ರತಿ ಪ್ರಜೆಯೂ ತಾನು ಯಾರಿಗೂ ಕಡಿಮೆಯಿಲ್ಲ, ತಾನು ಯಾರಿಗಿಂತಲೂ ಹೆಚ್ಚಲ್ಲ ಎನ್ನುವ ಭಾವದಿಂದ ತನ್ನ ಬಳಿ ಇರುವ ಸಾರ್ವಭೌಮಾಧಿಕಾರವನ್ನು ವರ್ಗಾಯಿಸುವ ಆ ಕ್ಷಣದಲ್ಲಿ ಅನುಭವಿಸುವ ಧನ್ಯತೆಯ ಕ್ಷಣ ಶ್ರೇಷ್ಠವಾದದ್ದು. ಅಷ್ಟರಮಟ್ಟಿಗಿನ ಸಂಭ್ರಮವನ್ನು ಅರ್ಥ ಮಾಡಿಕೊಳ್ಳಬಹುದು. ಆ ಚೌಕಟ್ಟಿನ ಪಾವಿತ್ರ್ಯವನ್ನು ಅರ್ಥ ಮಾಡಿಕೊಳ್ಳಬಹುದು. ಆದರೆ ಚುನಾವಣೆ ಎಂದರೆ ಅಷ್ಟು ಮಾತ್ರ ಅಲ್ಲವಲ್ಲ.

ಒಂದು ಕ್ಷಣ ಚುನಾವಣೆಯ ಹೆಸರಿನಲ್ಲಿ ಮತಗಟ್ಟೆಯ ಹೊರಗೆ, ಚುನಾವಣೆ ಘೋಷಣೆ ಆಗುವುದಕ್ಕೆ ಮೊದಲು ಮತ್ತು ನಂತರ ಆಗುವ ಎಲ್ಲಾ ವಿದ್ಯಮಾನಗಳನ್ನು ಮನಸ್ಸಿಗೆ ತಂದುಕೊಂಡು ಚುನಾವಣೆಯ ಬಗ್ಗೆ ಯೋಚಿಸಿ ನೋಡಿ. ಚುನಾವಣೆಯ ಕಾಲದಲ್ಲಿ ಯಥೇಚ್ಛ ಹರಿಯುವ ಹಣದ ಹೊಳೆಯ ಬಗ್ಗೆ ಯೋಚಿಸಿ. ಆ ಹಣದ ಮೂಲಗಳ ಬಗ್ಗೆ ಊಹಿಸಿಕೊಳ್ಳಿ. ಚುನಾವಣೆಯ ಕಾಲದಲ್ಲಿ ಎಗ್ಗಿಲ್ಲದೆ ಹರಿಯಬಿಡಲಾಗುವ ಸುಳ್ಳುಗಳ ಬಗ್ಗೆ ಯೋಚಿಸಿ. ಚುನಾವಣೆಯ ಕಾಲದಲ್ಲಿ ಬಳಕೆಯಾಗುವ ತೋಳ್ಬಲದ ಬಗ್ಗೆ ಯೋಚಿಸಿ. ಚುನಾವಣಾ ಕಾಲದಲ್ಲಿ ಸೃಷ್ಟಿಸಲಾಗುವ ಭ್ರಮೆಗಳ ಬಗ್ಗೆ ಯೋಚಿಸಿ. ಯೋಚಿಸುತ್ತಾ ಹೋದ ಹಾಗೆ ಈ ದೇಶದಲ್ಲಿ ಚುನಾವಣೆಯ ಮೂಲಕ ಜನಾದೇಶವನ್ನು ಒಂದು ಪವಿತ್ರ ಒಪ್ಪಂದವಾಗಿ ಪಡೆದುಕೊಳ್ಳಲಾಗುತ್ತಿಲ್ಲ, ಬದಲಿಗೆ ಜನಾದೇಶವನ್ನು ಪರೋಕ್ಷವಾಗಿ ಖರೀದಿಸಲಾಗುತ್ತದೆ, ಜನಾದೇಶವನ್ನು ಬಲವಂತವಾಗಿ ಕಸಿದುಕೊಳ್ಳಲಾಗುತ್ತದೆ ಅಥವಾ ಜನರನ್ನು ಯಾವುದೋ ಉನ್ಮಾದದಲ್ಲಿ ಮುಳುಗಿಸಿ ಜನಾದೇಶವನ್ನು ಅಪಹರಿಸಲಾಗುತ್ತದೆ ಎನ್ನುವ ಸತ್ಯ ಗೋಚರಿಸುತ್ತದೆ.

ಎಪ್ಪತ್ತೈದು ವರ್ಷಗಳಷ್ಟೇ ತುಂಬಿರುವ ಜನತಂತ್ರ, ಆರಂಭದಲ್ಲಿ ಹೀಗೆಲ್ಲಾ ಆಗುವುದು ಸಹಜ, ಮುಂದೆ ಎಲ್ಲವೂ ಸರಿಹೋದೀತು ಅಂತ ಭಾವಿಸೋಣವೇ? ಇಲ್ಲ, ಚುನಾವಣೆಯಿಂದ ಚುನಾವಣೆಗೆ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತಿದೆ. ಈಗ ನಡೆಯುತ್ತಿರುವ ಚುನಾವಣಾ ಕಣದ ವಿದ್ಯಮಾನಗಳು ಈ ಮಾತಿಗೆ ಇನ್ನಷ್ಟು ಪುಷ್ಟಿ ನೀಡುತ್ತವೆ.

ಚುನಾವಣೆಯ ಕಾಲದ ಭ್ರಷ್ಟಾಚಾರದ ಬಗ್ಗೆ ಬಹಳ ಕಾಲದಿಂದ ಕೇಳಿದ್ದೇವೆ. ಅದೇನೋ ಬಿಡಿ, ಇದ್ದದ್ದರಲ್ಲಿ ಕಡಿಮೆ ಭ್ರಷ್ಟರನ್ನು ಜನ ಆಯ್ದುಕೊಳ್ಳುತ್ತಾರೆ ಎಂದು ಅದಕ್ಕೆ ಹೊಂದಿಕೊಂಡದ್ದಾಯಿತು. ಆದರೆ ಈಗ ಕಾಣಿಸುವುದು ಬರೀ ಭ್ರಷ್ಟತೆಯಷ್ಟೇ ಅಲ್ಲ, ಅತ್ಯಂತ ಭ್ರಷ್ಟರಾದವರು ಅತ್ಯಂತ ಭ್ರಷ್ಟಾತೀತರು ಎನ್ನುವಂತೆ ಜನರನ್ನು ಯಶಸ್ವಿಯಾಗಿ ನಂಬಿಸುವ ವಿದ್ಯಮಾನ. ಸುಳ್ಳುಗಳನ್ನು ಹರಿಯಬಿಡುವುದು ಬಹಳ ಕಾಲದಿಂದಲೂ ಚುನಾವಣೆಯ ಭಾಗ. ಅದೇನೋ ಬಿಡಿ, ಇದ್ದವರ ಪೈಕಿ ಕಡಿಮೆ ಸುಳ್ಳು ಹೇಳುವವರನ್ನು ಜನ ಆರಿಸಿಕೊಳ್ಳುತ್ತಾರೆ ಎಂದು ಅದಕ್ಕೂ ಹೊಂದಿಕೊಂಡದ್ದಾಯಿತು. ಆದರೆ ಈಗ ಹಾಗಲ್ಲ, ಅತ್ಯಂತ ಹೆಚ್ಚು ಸುಳ್ಳು ಹೇಳುವವರು ಅತ್ಯಂತ ಪ್ರಾಮಾಣಿಕರು ಎನ್ನುವಂತೆ ಜನರನ್ನು ಯಶಸ್ವಿಯಾಗಿ ನಂಬಿಸಲಾಗುತ್ತದೆ. ಹಿಂದಿನ ಚುನಾವಣೆಯ ಕಾಲದಲ್ಲಿ ನೀಡಿದ ಭರವಸೆಯನ್ನು ಮುಂದಿನ ಚುನಾವಣೆಯ ಕಾಲಕ್ಕೆ ಈಡೇರಿಸದೇ ಇರುವುದು ಬಹಳ ಕಾಲದಿಂದ ನಡೆದುಬಂದಿತ್ತು. ಇರಲಿ, ಇದ್ದವರಲ್ಲಿ ಕಡಿಮೆ ಅಸಮರ್ಥರನ್ನು ಜನ ಆರಿಸಿಕೊಳ್ಳುತ್ತಾರೆ ಅಂತ ಅದನ್ನೂ ಒಪ್ಪಿಕೊಂಡದ್ದಾಯಿತು. ಆದರೆ ಈಗ ಹಾಗಲ್ಲ. ಈಗ ಅತ್ಯಂತ ಕೆಟ್ಟ ಆಡಳಿತ ನೀಡಿದವರನ್ನು ಅದ್ವಿತೀಯ ಸಮರ್ಥ ನಾಯಕ ಅಂತ ಬಿಂಬಿಸಿ ನಂಬಿಸಲಾಗುತ್ತದೆ.

ಅಷ್ಟೇ ಅಲ್ಲ. ಭೀಕರವಾದ ಇತ್ತೀಚಿನ ಸತ್ಯ ಏನೆಂದರೆ, ಒಂದೊಮ್ಮೆ ಎಲ್ಲ ಕುತಂತ್ರಗಳನ್ನೂ ಮೀರಿ ನಿಂತು ಮತದಾರರು ಜನಾದೇಶ ನೀಡಿದರು ಅಂದುಕೊಳ್ಳಿ. ಅದೇನೂ ಅಂತಿಮವಲ್ಲ. ಕೆಲವೊಂದು ಸಂದರ್ಭಗಳಲ್ಲಿ ಚುನಾವಣೆ ಎಂಬುದು ಬರೀ ಸೆಮಿಫೈನಲ್. ಚುನಾವಣೆಯ ನಂತರ ಹೆಚ್ಚು ಹಣ ಮತ್ತು ಹೆಚ್ಚು ಅಧಿಕಾರ ಇದ್ದವರು ಏನೇನೋ ಹೆಸರಿನ 'ಆಪರೇಷನ್' ಮಾಡಿ, ಗೆದ್ದವರನ್ನು ಖರೀದಿಸಿ, ಖರೀದಿತರಿಂದ ರಾಜೀನಾಮೆ ಕೊಡಿಸಿ, ಯಾವುದೋ ಪಕ್ಷದಿಂದ ಗೆದ್ದವರನ್ನು ಮತ್ತೆ ಯಾವುದೋ ಪಕ್ಷದಿಂದ ಗೆಲ್ಲಿಸಿ ಜನಾದೇಶಕ್ಕೆ ಪ್ಲಾಸ್ಟಿಕ್ ಸರ್ಜರಿ ಮಾಡುವ ವಿದ್ಯಮಾನ ಕೂಡ ನಡೆಯುತ್ತದೆ. ಅಂದರೆ ಮತದಾನದ ಮಾರಿಹಬ್ಬದಲ್ಲಿ ಊರಾಚೆಗೆ ನೂಕಿದ ಮಾರಿ ಮತ್ತೆ ವಕ್ಕರಿಸಿದಂತೆ.

ಇವೆಲ್ಲಕ್ಕೂ ಮಾಧ್ಯಮಗಳ ಯಥೇಚ್ಛ ಸಹಕಾರ ಸಿಗುತ್ತದೆ, ನ್ಯಾಯಾಂಗವೂ ಮೂಕಸಾಕ್ಷಿಯಾಗುತ್ತದೆ. ಇವನ್ನೆಲ್ಲ ನೆನೆಸಿಕೊಂಡಾಗ, ಚುನಾವಣೆಯನ್ನು 'ಮಾರಿ ದೂಡುವ ಹಬ್ಬ' ಎನ್ನುವ ಅರ್ಥದಲ್ಲಾದರೂ ಸಂಭ್ರಮಿಸಲು ಸಾಧ್ಯವೇ? 'ಭರತಂ' ಎಂಬ ಹೆಸರಿನ ಮಲಯಾಳಂ ಸಿನಿಮಾದ ಕ್ಲೈಮ್ಯಾಕ್ಸ್ ಸನ್ನಿವೇಶದಲ್ಲಿ, ಒಂದೇ ಕುಟುಂಬದೊಳಗೆ ಏಕಕಾಲದಲ್ಲಿ ಒಬ್ಬರ ಮದುವೆ ಮತ್ತು ಇನ್ನೊಬ್ಬರ ಶವಸಂಸ್ಕಾರ ನಡೆಯುತ್ತಿರುತ್ತದೆ. ಮತದಾನದ ಸಂಭ್ರಮವನ್ನು ಕಂಡಾಗಲೆಲ್ಲಾ ಈ ಸನ್ನಿವೇಶ ನೆನಪಾಗುತ್ತದೆ. ಅದೇನೇ ಇರಲಿ, ಸಂಭ್ರಮಿಸುವುದು ಕೂಡ ಒಂದು ವೈಯಕ್ತಿಕ ಆಯ್ಕೆ. ಅಷ್ಟೇಅಲ್ಲ, ಪ್ರಜಾತಂತ್ರದಲ್ಲಿ ಏನೇ ಕೆಟ್ಟರೂ ಅದನ್ನು ಸರಿಪಡಿಸಲು ಇರುವ ಅಂತಿಮ ಅಸ್ತ್ರ ಚುನಾವಣೆಯೇ ಆಗಿರುತ್ತದೆ.

ಚುರುಮುರಿ



ಕೆಟ್ಟ ಸುದ್ದಿ!

• ಬಿ.ಎನ್. ಮಲ್ಲೇಶ್

'ಏನ್ರಲೆ ಹೊಸ ಸುದ್ದಿ? ಎಷ್ಟಾತು ಎಲೆಕ್ಷನ್ ಕಮಾಯಿ?' ಹರಟೆಕಟ್ಟೆಯಲ್ಲಿ ದುಬ್ಬೀರ ಕೇಳಿದ.

'ಈ ಗುಡ್ಡೆ ಸಖತ್ ರೊಕ್ಕ ಮಾಡ್ತದಾನೆ ಕಣ್ರಲೆ, ಚೊಂಬು-ಚಿಪ್ಪು ಎರಡೂ ಕಡೆಗೆ ಪ್ರಚಾರಕ್ಕೆ ಜನರನ್ನ ಕರ್ಕಂಡ್ ಹೋಗ್ತದಾನಂತೆ' ಎಂದ ತೆಪರೇಸಿ.

'ಹೌದೇನೋ? ಮತ್ತೆ ನನ್ ಹೋಟ್ಲು ಬಾಕಿ ತೀರ್ಸು' ಎಂದಳು ಮಂಜಮ್ಮ.

'ಎಲೆಕ್ಷನ್ ಮುಗೀಲಿ ತಡಿ, ತೀರುಸ್ತೀನಿ' ಎಂದ ಗುಡ್ಡೆ, 'ಅಲ್ರಲೆ, ಈ ಚೊಂಬಿಗೂ ಚಿಪ್ಪಿಗೂ ಏನ್ ವ್ಯತ್ಯಾಸ?' ಎಂದ.

'ಚೊಂಬನ್ನ ಸ್ನಾನಕ್ಕೂ ಸಂಡಾಸಿಗೂ ಎರಡಕ್ಕೂ ಬಳಸಬೋದು, ಆದ್ರೆ ಚಿಪ್ಪು ಹಂಗೆ ಮಾಡಕ್ಕೆ ಬರಲ್ಲ' ದುಬ್ಬೀರ ನಕ್ಕ.

'ಮತ್ತೆ ಈ ಪೆನ್‌ಡ್ರೈವ್ ಕತಿ ಏನು?' ಕೊಟ್ರೇಶಿ ಕೊಕ್ಕೆ.

'ಅಯ್ಯಪ್ಪ, ಸದ್ಯ ಅದರ ಸುದ್ದಿ ಬ್ಯಾಡ' ತೆಪರೇಸಿ ತಲೆ ಒಗೆದ.

'ಆಮೇಲೆ ಈ ಕೈನೋರು ಅಧಿಕಾರಕ್ಕೆ ಬಂದ್ರೆ ಅರ್ಧ ಆಸ್ತಿ ಕಿತ್ಕಂತಾರಂತಲ್ಲೋ ಗುಡ್ಡೆ... ಹುಷಾರು' ಎಂದಳು ಮಂಜಮ್ಮ.

'ಕಿತ್ಕಳ್ಳಲಿ ತಗಾ, ನನ್ ಹತ್ರ ಇರೋದೇ ಎರಡು ಪುಟುಗೋಸಿ' ಗುಡ್ಡೆ ಕಿಸಕ್ಕೆಂದ.

'ಅಷ್ಟರಲ್ಲಿ ತೆಪರೇಸಿ ಮೊಬೈಲ್ ರಿಂಗಾಯಿತು. ಕಾಲ್ ರಿಸೀವ್ ಮಾಡಿದ ತೆಪರೇಸಿ 'ಏನು? ಹೌದಾ? ಯಾವಾಗ? ಥೋ ಎಂಥ ಕೆಟ್ ಸುದ್ದಿ ಹೇಳಿದ್ಯೋ ಮಾರಾಯ' ಎನ್ನುತ್ತ ತಲೆ ಮೇಲೆ ಕೈ ಹೊತ್ತು ಕೂತ.

'ದುಬ್ಬೀರನಿಗೆ ಗಾಬರಿ. 'ಏನಾತೋ, ಏನಂತೆ, ಯಾರರೆ ಸತ್ರಾ?' ಎಂದ. ಮಂಜಮ್ಮ, ಗುಡ್ಡೆ ಎಲ್ಲರಿಗೂ ಆತಂಕ.

'ಕೆಟ್ ಸುದ್ದಿ ಕಣ್ರಲೆ, ಎಲೆಕ್ಷನ್‌ಗೆ ಮೂರು ದಿನ ಎಣ್ಣೆ ಅಂಗಡಿ ಬಂದ್ ಅಂತೆ' ಎಂದ.

'ಅಯ್ಯೋ ನಿನ್ ಮುಖ ಮುಚ್ಚ' ಎನ್ನುತ್ತ ಸಿಟ್ಟಿಗೆದ್ದ ಮಂಜಮ್ಮ, ತೆಪರೇಸಿ ಮೇಲೆ ಒಂದು ಕಾಫಿ ಕಪ್ ಬೀಸಿ ಒಗೆದಳು. ಅದರಿಂದ ತಪ್ಪಿಸಿಕೊಂಡ ತೆಪರೇಸಿ, 'ಸಾರಿ ಸಾರಿ' ಎಂದ. ಎಲ್ಲರೂ ಗೊಳ್ಳಂತ ನಕ್ಕರು.

ದಿನದ ಟ್ವೀಟ್

ರಕ್ತಹೀನತೆ: ಉದಾಸೀನ ಸಲ್ಲ

ಹವಾಮಾನ ವೈಪರೀತ್ಯವು ಭಾರತದಲ್ಲಿ ತಾಯಂದಿರಾಗುವ ವಯೋಮಾನದ 37.8 ಕೋಟಿ ಮಹಿಳೆಯರಿಗೆ ರಕ್ತಹೀನತೆಯ ಭೀತಿಯನ್ನು ಒಡ್ಡಿದೆ. ಆದರೆ, ರಕ್ತಹೀನತೆಗೆ ಸಂಬಂಧಿಸಿದ ಸಂಶೋಧನೆಗಳಲ್ಲಿ ಈ ಅಂಶವನ್ನು ಉದಾಸೀನ ಮಾಡಲಾಗುತ್ತಿದೆ. ಇದು, ರಕ್ತಹೀನತೆಯ ದುಷ್ಪರಿಣಾಮಗಳ ತೀವ್ರತೆಯನ್ನು ಸರಿಯಾಗಿ ಅಂದಾಜು ಮಾಡಲು ತೊಡಕಾಗಿ ಪರಿಣಮಿಸಬಹುದು.

ಸಂಕೇತ್ ಜೈನ್, ಪತ್ರಕರ್ತ

ಕಿಡಿನುಡಿ

ಮಹಿಳೆಯರು ಅವಿವಾಹಿತರಾಗಿ ಉಳಿಯುವುದಕ್ಕೆ ಮತ್ತು ಮಕ್ಕಳನ್ನು ಹೊಂದದೇ ಇರಲು ತೀರ್ಮಾನಿಸುವುದಕ್ಕೆ ಅವರು ಪುರುಷರನ್ನು ದ್ವೇಷಿಸುತ್ತಾರೆ, ಪಾಶ್ಚಿಮಾತ್ಯ ಪ್ರಭಾವಕ್ಕೆ ಒಳಗಾಗಿದ್ದಾರೆ ಎಂಬುವೆಲ್ಲ ಕಾರಣಗಳಲ್ಲ. ಈ ವಿಷಯದಲ್ಲಿ ಅವರು ತಮ್ಮ ಸುತ್ತಲಿನ ಮಹಿಳಾ ಸಹೋದ್ಯೋಗಿಗಳು, ಸ್ನೇಹಿತರು, ಸಂಬಂಧಿಕರ ಬಳಲಿಕೆಯನ್ನು ಅಭಿವ್ಯಕ್ತಿಸುತ್ತಿರುತ್ತಾರೆ. ಮಗುವಿನ ಜೊತೆಯಲ್ಲಿ ಗಂಡನನ್ನೂ ಸಾಕುವ ಮತ್ತು ಅಸಮಾನ ದುಡಿಮೆಗೆ ಒಡ್ಡಿಕೊಳ್ಳುವ ಆಯ್ಕೆಯಿಂದ ದೂರವಿರುವ ನಿರ್ಧಾರಕ್ಕೆ ಬಂದಿರುತ್ತಾರೆ.

ರಿತುಪರ್ಣ ಚಟರ್ಜಿ, ಪತ್ರಕರ್ತೆ

25 ವರ್ಷಗಳ ಹಿಂದೆ

ಸೋಮವಾರ, 26-4-1999

• ಮತ್ತೆ ಚುನಾವಣೆ: ಇಂದು ನಿರ್ಧಾರ

ನವದೆಹಲಿ, ಏ. 25– ಪರ್ಯಾಯ ಸರ್ಕಾರ ರಚನೆಯ ವಿರೋಧ ಪಕ್ಷಗಳ ಪ್ರಯತ್ನ ವಿಫಲವಾದ ಹಿನ್ನೆಲೆಯಲ್ಲಿ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರು ಉಸ್ತುವಾರಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರನ್ನು ಇಂದು ರಾತ್ರಿ ಕರೆದು, ನಾಳೆ ಕೇಂದ್ರ ಸಂಪುಟ ಸಭೆ ಕರೆದು ಸೂಕ್ತ ನಿರ್ಣಯ ಕೈಗೊಳ್ಳುವಂತೆ ಆದೇಶಿಸಿದ್ದಾರೆ.

ಕೇಂದ್ರ ಸಂಪುಟ ಸಭೆ 12ನೇ ಲೋಕಸಭೆಯನ್ನು ವಿಸರ್ಜಿಸಿ ಆದಷ್ಟು ಬೇಗ ಮಧ್ಯಂತರ ಚುನಾವಣೆಗೆ ಶಿಫಾರಸು ಮಾಡುವ ನಿರ್ಣಯ ಕೈಗೊಳ್ಳುವ ಸಂಭವ ಇದೆ. ಇದರೊಂದಿಗೆ ಒಂಬತ್ತು ದಿನಗಳ ರಾಜಕೀಯ ಅನಿಶ್ಚಿತತೆಯ ಬಳಿಕ ದೇಶವು ಅನಿವಾರ್ಯವಾಗಿ ಮಧ್ಯಂತರ ಚುನಾವಣೆಗೆ ಸಜ್ಜಾಗುವ ಸ್ಥಿತಿಗೆ ಬಂದಿದೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ರಾಷ್ಟ್ರಪತಿಗಳನ್ನು ಭೇಟಿ ಮಾಡಿ ಸರ್ಕಾರ ರಚನೆ ತಮ್ಮ ಪಕ್ಷದಿಂದ ಸಾಧ್ಯವಿಲ್ಲ ಎಂದು ತಿಳಿಸಿದ ನಂತರ ರಾಷ್ಟ್ರಪತಿಯವರು ವಾಜಪೇಯಿ ಅವರಿಗೆ ಕರೆ ಕಳುಹಿಸಿದ್ದರು.

• ಸಿಪಿಎಂ 'ಹತಾಶ ಯತ್ನ'ಕ್ಕೆ ಬಿಜೆಪಿ ಖಂಡನೆ

ನವದೆಹಲಿ, ಏ. 25 (ಪಿಟಿಐ)– ಕಾಂಗ್ರೆಸ್, ಸಿಪಿಎಂ ಹಾಗೂ ಇತರ ಪಕ್ಷಗಳು ಸರ್ಕಾರ ರಚನೆ ಯತ್ನದಲ್ಲಿ ದೇಶಕ್ಕೆ ವಂಚಿಸಲು ತೊಡಗಿವೆ ಎಂದು ಬಿಜೆಪಿ ಟೀಕಿಸಿದೆ.

ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಸರ್ಕಾರ ರಚನೆಗೆ ಯತ್ನಿಸುತ್ತಿರುವ ಹತಾಶ ಪ್ರಯತ್ನವನ್ನು ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರು ಒಪ್ಪಲೇಬಾರದು ಎಂದು ಬಿಜೆಪಿಯ ವಕ್ತಾರ ವೆಂಕಯ್ಯನಾಯ್ಡು ಇಂದು ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 26-4-1974

• ರಾಜಿ ಯತ್ನ ಬಿಟ್ಟು ಮುಷ್ಕರಕ್ಕೇ ಪಟ್ಟು ಹಿಡಿದರೆ ಬಿಗಿ ಕ್ರಮ

ನವದೆಹಲಿ, ಏ. 25– ತೃಪ್ತಿಕರ ರಾಜಿ ಇತ್ಯರ್ಥದ ಮೂಲಕ ರೈಲು ಮುಷ್ಕರ ತಪ್ಪಿಸಲು ತಾವು ಆಸಕ್ತಿ ವಹಿಸಿರುವುದಾಗಿ ರೈಲ್ವೆ ಸಚಿವ ಎಲ್.ಎನ್. ಮಿಶ್ರಾ ಅವರು ಇಂದು ಲೋಕಸಭೆಯಲ್ಲಿ ಮತ್ತೆ ಮತ್ತೆ ಆಶ್ವಾಸನೆ ನೀಡಿದರು.

ಆದರೆ, ಮುಷ್ಕರ ಹೂಡಿಯೇ ತೀರುವುದಾಗಿ ಪಟ್ಟುಹಿಡಿದಲ್ಲಿ ಅಗತ್ಯ ವಸ್ತುಗಳ ಸರಬರಾಜಿಗಾಗಿ ಸೂಕ್ತ ಕಂಡ ಎಲ್ಲಾ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಅವರು ತಿಳಿಸಿದರು.

ಉದ್ದೇಶಿತ ರೈಲು ಮುಷ್ಕರ ಕುರಿತು ಮಾರ್ಕ್ಸಿಸ್ಟ್ ನಾಯಕ ಎ.ಕೆ. ಗೋಪಾಲನ್ ಮತ್ತು ಇತರ ನಾಲ್ವರ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡುತ್ತಾ, ಸಂಧಾನ ಯತ್ನ ನಡೆಯುತ್ತಿರುವಾಗಲೇ ಮುಷ್ಕರಕ್ಕೆ ನೋಟಿಸ್ ಜಾರಿಗೊಳಿಸುವುದು ಸರಿಯಾದ ಕ್ರಮವಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ರೈಲ್ವೆ ಉಪಸಚಿವ ಮಹಮ್ಮದ್ ಷಫೀ ಖುರೇಷಿ ಮತ್ತು ಕಾರ್ಮಿಕರ ನಡುವೆ ಏ. 27ರಂದು ನಡೆಯುವ ಸಂಧಾನದಲ್ಲಿ ಉಭಯ ಬಣಗಳೂ ಪ್ರತಿಪಕ್ಷ ನೀಡುವ ಸಹಕಾರದ ಬಗ್ಗೆ ಗಮನ ಕೇಂದ್ರೀಕರಿಸಿವೆ.

ಸಂಗತ

ರಜೆ ಸಿಕ್ಕಿದೆ, ಮೋಜಿಗಲ್ಲ!

ಚುನಾವಣಾ ದಿನದಂದು ಘೋಷಿಸಲಾಗುವ ರಜೆ ನಿಜ ಅರ್ಥದಲ್ಲಿ ರಜೆಯೇ ಅಲ್ಲ. ನಾಗರಿಕರು ಮಹತ್ತರ ಕರ್ತವ್ಯವನ್ನು ನಿಭಾಯಿಸಲು ನೀಡುವ ಅವಕಾಶ

• ಡಾ. ಮುರಳೀಧರ ಕಿರಣಕೆರೆ

ಮಹಾ ಚುನಾವಣೆಗೆ ಸಂಬಂಧಿಸಿದ ಈ ಅಂಕಿಅಂಶಗಳು ನಿಜಕ್ಕೂ ಬೆರಗುಗೊಳಿಸುತ್ತವೆ! ಒಟ್ಟು 97 ಕೋಟಿಗೂ ಹೆಚ್ಚು ಮತದಾರರು, ಮೊದಲ ಬಾರಿಗೆ ಮತ ಚಲಾಯಿಸಲಿರುವ 1.82 ಕೋಟಿ ಯುವ ಮತದಾರರು, 10.5 ಲಕ್ಷ ಮತಗಟ್ಟೆಗಳು, 55 ಲಕ್ಷ ವಿದ್ಯುನ್ಮಾನ ಮತಯಂತ್ರಗಳು, 543 ಕ್ಷೇತ್ರಗಳು, 44 ದಿನಗಳಲ್ಲಿ 7 ಹಂತಗಳ ಚುನಾವಣೆ, ಉಸ್ತುವಾರಿಗೆ ನಿಯೋಜನೆಗೊಂಡ ಒಂದೂವರೆ ಕೋಟಿಯಷ್ಟು ಅಧಿಕಾರಿಗಳು, ಸಿಬ್ಬಂದಿ... ವಿಶ್ವದಲ್ಲೇ ಬೃಹತ್ತಾದ ಈ ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಭಾರತೀಯರಾದ ನಾವು ಭಾಗೀದಾರರು ಎಂಬುದು ಹೆಮ್ಮೆಯ ವಿಚಾರ. ಸಣ್ಣಪುಟ್ಟ ರಾಷ್ಟ್ರಗಳೇ ವ್ಯವಸ್ಥಿತವಾಗಿ ಚುನಾವಣೆ ನಡೆಸಲು ಪರದಾಡುತ್ತಿರುವಾಗ ಅತ್ಯಂತ ಯಶಸ್ವಿಯಾಗಿ ಚುನಾವಣೆ ನಡೆಸುವ ನಮ್ಮ ಆಡಳಿತದತ್ತ ಜಗತ್ತಿನ ಕಣ್ಣು ನೆಟ್ಟಿರುವುದು ಹೆಮ್ಮೆಯ ಸಂಗತಿಯೇ ಸರಿ.

ಮೊದಲ ಹಂತದ ಚುನಾವಣೆ ಮುಗಿದಾಗಿದೆ. ಶೇಕಡ 65ರ ಮತದಾನದ ಪ್ರಮಾಣ ನಿಜಕ್ಕೂ ನಿರಾಶಾದಾಯಕ. ವ್ಯಾಪಕ ಪ್ರಚಾರ, ಅರಿವು ಆಂದೋಲನ, ಸೌಕರ್ಯ, ಸವಲತ್ತುಗಳ ನಡುವೆಯೂ ಸಂಸತ್ತಿಗೆ ನಮ್ಮ ಪ್ರತಿನಿಧಿಗಳನ್ನು ಕಳುಹಿಸುವ ಈ ಪ್ರಕ್ರಿಯೆ ಬಗ್ಗೆ ದೊಡ್ಡ ಸಂಖ್ಯೆಯ ನಾಗರಿಕರ ನಿರಾಸಕ್ತಿಯನ್ನು ಗಮನಿಸಿದರೆ ಪ್ರಜಾಪ್ರಭುತ್ವದ ಸ್ವಾಸ್ಥ್ಯದ ಬಗ್ಗೆ ಕಳವಳ ಮೂಡುತ್ತದೆ. ಚುನಾವಣೆಯ ದಿನ ರಜೆಯೆಂದು ಮೋಜಿನ ಪ್ರವಾಸ, ಸರದಿ ಸಾಲಲ್ಲಿ ನಿಂತು ಮತ ಹಾಕಬೇಕಲ್ಲ ಎಂಬ ಸೋಮಾರಿತನ, ಮದುವೆ-ಮುಂಜಿಯಂತಹ ನೆಪ, ಬೇರೆಡೆ ಉದ್ಯೋಗದಲ್ಲಿದ್ದು ಬರೀ ಒಂದು ಮತಕ್ಕಾಗಿ ಊರಿಗೆ ಹೋಗಬೇಕಲ್ಲ ಎಂಬ ಉದಾಸೀನ, ತನ್ನ ಒಂದು ವೋಟಿನಿಂದ ಏನೂ ಆಗದೆಂಬ ನಕಾರಾತ್ಮಕ ನಿಲುವು, ವಯಸ್ಸು, ಅನಾರೋಗ್ಯ, ಅಖಾಡದಲ್ಲಿ ಯೋಗ್ಯರೇ ಇಲ್ಲದಿರುವಾಗ ಆಯ್ಕೆಯ ಪ್ರಶ್ನೆ ಎಲ್ಲಿ ಎಂಬ ಅಸಡ್ಡೆಯ ಭಾವ, ಭ್ರಷ್ಟ ವ್ಯವಸ್ಥೆಯಲ್ಲಿ ಯಾರನ್ನು ಆರಿಸಿದರೂ ಹಣೆಬರಹ ಬದಲಾಗದೆಂಬ ಸಿನಿಕತನ, ಸೌಕರ್ಯಗಳನ್ನು ಒದಗಿಸದ ಸತ್ತೆಯ ಮೇಲಿನ ಆಕ್ರೋಶದಿಂದ ಚುನಾವಣಾ ಬಹಿಷ್ಕಾರ... ಮತದಾನದಿಂದ ದೂರವುಳಿಯಲು ಕಾರಣಗಳು ಹಲವು.

ಮತ ಪ್ರಮಾಣವನ್ನು ಹೆಚ್ಚಿಸಲು ಚುನಾವಣಾ ಆಯೋಗ ಸುಧಾರಣೆಗಳನ್ನು ತರುತ್ತಲೇ ಇದೆ. ಎಂಬತ್ತೈದು ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು, ಅಧಿಕ ಅಂಗವೈಕಲ್ಯ ಹೊಂದಿರುವವರಿಗೆ ಮನೆಯಿಂದಲೇ ಮತದಾನ ಮಾಡುವ ಸೌಲಭ್ಯ, ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಮತಕೇಂದ್ರಗಳನ್ನು ಸುಲಭವಾಗಿ ಹುಡುಕಲು ಮತದಾರರ ಮಾಹಿತಿ ಚೀಟಿಯಲ್ಲಿ ಕ್ಯೂಆರ್ ಕೋಡ್ ಮುದ್ರಣ, ಮತದಾರಸ್ನೇಹಿ ಮತಗಟ್ಟೆಯಂತಹ ಉಪಕ್ರಮಗಳಲ್ಲದೆ ಮತದಾರರಲ್ಲಿ ಜಾಗೃತಿ ಮತ್ತು ಮತದಾನದಲ್ಲಿ ಭಾಗವಹಿಸುವಿಕೆಯ ವ್ಯವಸ್ಥಿತ ಕಾರ್ಯಕ್ರಮ (ಸ್ವೀಪ್), ಚಟುವಟಿಕೆಗಳ ಮೂಲಕ ಜನರನ್ನು ಸೆಳೆಯಲು ನಿರಂತರವಾಗಿ ಪ್ರಯತ್ನಿಸುತ್ತಿದೆ. ಆದರೆ ಫಲಿತಾಂಶ ಮಾತ್ರ ನಿರೀಕ್ಷಿತ ಮಟ್ಟ ಮುಟ್ಟುತ್ತಿಲ್ಲ.

ಚುನಾವಣಾ ದಿನದಂದು ಘೋಷಿಸಲಾಗುವ ರಜೆ ನಿಜ ಅರ್ಥದಲ್ಲಿ ರಜೆಯೇ ಅಲ್ಲ. ಅದು ನಾಗರಿಕರಿಗೆ ಮತದಾನವೆಂಬ ತಮ್ಮ ಮಹತ್ತರ ಕರ್ತವ್ಯವನ್ನು ನಿಭಾಯಿಸಲು ನೀಡಿದ ಅವಕಾಶ. ಮತಪ್ರಮಾಣ ಕಡಿಮೆಯಾಗುತ್ತಿದೆಯೆಂದರೆ ಪ್ರಜಾಸತ್ತೆ ಸೊರಗುತ್ತಿದೆ ಎಂದರ್ಥ. ನಾವು ಚಲಾಯಿಸುವ ಮತವು ನಮ್ಮ ಪ್ರಬಲ ಧ್ವನಿಯಷ್ಟೇ ಅಲ್ಲ ಅಸ್ತ್ರ ಕೂಡ. ಹಾಗಾಗಿ, ಯಾವುದೇ ಆಸೆ, ಆಮಿಷ, ಪ್ರಲೋಭನೆಗೆ ಒಳಗಾಗದೆ ವಿವೇಚನೆಯಿಂದ ಮತ ಹಾಕಬೇಕು. ನಾಳೆ ಸರ್ಕಾರ ತಪ್ಪು ಮಾಡಿದರೆ ಪ್ರಶ್ನಿಸುವ, ಟೀಕಿಸುವ, ಪ್ರತಿಭಟಿಸುವ, ಸಲಹೆ ನೀಡುವ ಮನೋಬಲ, ನೈತಿಕ ಸ್ಥೈರ್ಯ ದೊರೆಯುವುದು ಪ್ರಾಮಾಣಿಕವಾಗಿ ಮತ ಹಾಕಿದಾಗ ಮಾತ್ರ. ಹಾಗಾಗಿ, ಮತದಾನ ಮಾಡದಿರುವುದು ಒಂದರ್ಥದಲ್ಲಿ ಅಪರಾಧಕ್ಕೆ ಸಮ!

ಮತದಾನ ಕಡಿಮೆಯಿರುವಲ್ಲಿ ಮತದಾರರನ್ನು ಭ್ರಷ್ಟರನ್ನಾಗಿಸುವುದು ಸುಲಭ. ಅದೇ ಅತ್ಯಧಿಕ ಮತದಾನ ಆಗುವುದಾದರೆ ಎಲ್ಲರಿಗೂ ಹಣ, ಮದ್ಯ, ವಸ್ತುಗಳ ರೂಪದಲ್ಲಿ ಆಮಿಷ ಒಡ್ಡುವುದು ಕಷ್ಟವಾಗುವುದರಿಂದ ಮತ ಖರೀದಿಸುವ ಕೆಟ್ಟ ಚಾಳಿಗೂ ಕಡಿವಾಣ ಬೀಳುವುದು ನಿಶ್ಚಿತ. ಹಾಗಾಗಿ, ನೈತಿಕ ಮತದಾನದ ಜೊತೆಯಲ್ಲಿ ಪ್ರಮಾಣವೂ ಗರಿಷ್ಠವಾಗಿರುವಂತೆ ನೋಡಿಕೊಳ್ಳುವ ಜವಾಬ್ದಾರಿಯೂ ನಮ್ಮದೇ.

ಹಾಗೆಂದು ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಮತದಾನವನ್ನು ಕಾನೂನಿನ ಮೂಲಕ ಕಡ್ಡಾಯಗೊಳಿಸುವುದು ಕಷ್ಟಸಾಧ್ಯ. ಶಾಲಾ-ಕಾಲೇಜು ಹಂತದಿಂದಲೇ ಪರಿಣಾಮಕಾರಿಯಾಗಿ ಅರಿವು ಮೂಡಿಸುವುದೇ ಎದುರಿಗಿರುವ ದಾರಿ. ಇನ್ನು ಮತದಾರರ ಪಟ್ಟಿಯಿಂದ ಹೊರಗುಳಿದವರ ಸಂಖ್ಯೆಯೂ ತುಂಬಾ ದೊಡ್ಡದಿದೆ. ಅರ್ಹ ಯುವಜನರಲ್ಲಿ ಬಹಳಷ್ಟು ಮಂದಿ ತಮ್ಮ ಹೆಸರು ನೋಂದಾಯಿಸಿಕೊಂಡಿಲ್ಲ ಎನ್ನುವ ಮಾತಿದೆ. ರಾಜಕೀಯ ಪಕ್ಷಗಳು, ಸಂಘ-ಸಂಸ್ಥೆಗಳ ಸಹಕಾರದಿಂದ ನೋಂದಣಿ ಕ್ರಿಯೆ ನಿರಂತರವಾಗಿರುವಂತೆ ಚುನಾವಣಾ ಆಯೋಗವು ಪರಿಣಾಮಕಾರಿ ಕಾರ್ಯಯೋಜನೆಯನ್ನು ರೂಪಿಸಬೇಕಿದೆ.

ನಮ್ಮ ರಾಜ್ಯದಲ್ಲಿ ಇಂದು (ಏ. 26) ಮತ್ತು ಮೇ 7ರಂದು ಎರಡು ಹಂತಗಳಲ್ಲಿ ನಡೆಯುವ ಲೋಕಸಭಾ ಚುನಾವಣೆಯಲ್ಲಿ ಗರಿಷ್ಠ ಮತದಾನದ ದಾಖಲೆ ಬರೆದು ರಾಷ್ಟ್ರಕ್ಕೆ ಮಾದರಿಯಾಗುವ ಸುವರ್ಣ ಅವಕಾಶವೊಂದು ನಮ್ಮ ಮುಂದಿದೆ.

ವಾಚಕರ ವಾಣಿ

ಕನ್ನಡಿಗರಿಗೆ ಹುದ್ದೆ: ಸ್ವಾಗತಾರ್ಹ ಸಲಹೆ

ಕೆಲವು ಕಂಪನಿಗಳು ಕನ್ನಡದ ನೆಲದಲ್ಲಿ ಸ್ಥಾಪಿಸುವ ಉದ್ದಿಮೆಗಳಲ್ಲಿ ಅಧಿಕಾರಿಗಳ ಹುದ್ದೆಗಳಿಗೆ ಕನ್ನಡಿಗರನ್ನು ಪರಿಗಣಿಸದಿರುವ ಕ್ರಮವನ್ನು ಹೈಕೋರ್ಟ್ ಟೀಕಿಸಿರುವುದು ಸರಿಯಾಗಿದೆ. 'ಕನ್ನಡಿಗರಿಗೆ ಕನ್ನಡಿಗರಿಂದ ಆದಷ್ಟು ಅನ್ಯಾಯ ಬೇರೆಯವರಿಂದ ಆಗಿಲ್ಲ' ಎಂಬ ಕನ್ನಡ ಕಾದಂಬರಿ ಪಿತಾಮಹ ಗಳಗನಾಥರ ಮಾತನ್ನು ಉಲ್ಲೇಖಿಸುತ್ತಾ 'ಇಂತಹ ಅನ್ಯಾಯ ಬೇರೆಲ್ಲೂ ಆಗಿಲ್ಲ' ಎಂದು ಐಡಿಬಿಐ ಬ್ಯಾಂಕ್ ಪ್ರಕರಣದ ವಿಚಾರಣೆಯ ಕಾಲಕ್ಕೆ ಕೋರ್ಟ್ ಹೇಳಿರುವ ದಿಟ್ಟ ಮಾತುಗಳು ಶ್ಲಾಘನೀಯ. ಜವಾನ– ಜಾಡಮಾಲಿಯಂತಹ ಹುದ್ದೆಗಳಿಗೆ ಮಾತ್ರವಲ್ಲದೆ ಎಲ್ಲ ಹಂತದ ಹುದ್ದೆಗಳಲ್ಲೂ ಕನ್ನಡಿಗರಿಗೆ ಅವಕಾಶ ಕಲ್ಪಿಸಬೇಕು ಎಂದು ನ್ಯಾಯಾಲಯ ಸೂಚಿಸಿರುವುದು ಪ್ರಶಂಸನೀಯ.

ಕರ್ನಾಟಕದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ನೆಲೆಯೂರಿರುವ ಹಲವಾರು ಸ್ಥಳೀಯ ಮತ್ತು ಬಹುರಾಷ್ಟ್ರೀಯ ಕಂಪನಿಗಳು ಸ್ಥಳೀಯರಿಗೆ ಕೆಳಹಂತದ ಹುದ್ದೆಗಳನ್ನಷ್ಟೇ ನೀಡುತ್ತ, ಮೇಲ್ಮಟ್ಟದ ಹುದ್ದೆಗಳನ್ನು ಹೊರರಾಜ್ಯದವರಿಗೇ ಹೆಚ್ಚಾಗಿ ನೀಡುತ್ತಾ ಬಂದಿವೆ. ಕನ್ನಡಿಗರ ಸತತ ಅಳಲು ಅವುಗಳ ಕಿವಿಗೆ ಬಿದ್ದಿಲ್ಲ. ಈ ಕುರಿತು ಸರ್ಕಾರ ಕೂಡ ದೃಢ ನಿಲುವು ತಳೆಯದೇ ಇರುವಾಗ ಹೈಕೋರ್ಟ್ ನೀಡಿರುವ ಈ ಸೂಚನೆಯನ್ನು ಎಲ್ಲ ಬಹುರಾಷ್ಟ್ರೀಯ ಕಂಪನಿಗಳೂ ಅನುಸರಿಸಬೇಕು.

ವೆಂಕಟೇಶ ಮಾಚಕನೂರ, ಧಾರವಾಡ

ಕೊಬ್ಬಿದ ಬೆಕ್ಕಿಗೆ ಗಂಟೆ ಕಟ್ಟುವವರಾರು?

ಭ್ರಷ್ಟಾಚಾರದ ಬೇರು ಇರುವುದೇ ಚುನಾವಣೆಯ ಸ್ವರೂಪದಲ್ಲಿ ಎನ್ನುವ ಮಾತನ್ನು ಸತೀಶ್ ಜಿ.ಕೆ. ತೀರ್ಥಹಳ್ಳಿ ತಮ್ಮ ಲೇಖನದಲ್ಲಿ ಎಳೆಎಳೆಯಾಗಿ ವಿಶ್ಲೇಷಿಸಿದ್ದಾರೆ (ಸಂಗತ, ಏ. 25). ಗ್ರಾಮ ಪಂಚಾಯಿತಿಯಿಂದ ಹಿಡಿದು ಲೋಕಸಭೆಯವರೆಗೆ ಆಯ್ಕೆಯಾದ ಬಹುಪಾಲು ಜನಪ್ರತಿನಿಧಿಗಳು ಹಣದಿಂದ, ಹಣಕ್ಕಾಗಿ, ಹಣಕ್ಕೋಸ್ಕರವೇ ಜೀವನವೆಂಬ ತತ್ವವನ್ನು ಅಳವಡಿಸಿಕೊಂಡಿದ್ದಾರೆ. ಹೀಗಿರುವಾಗ, ಭ್ರಷ್ಟಾಚಾರವೆಂಬ ಬೆಕ್ಕಿಗೆ ಗಂಟೆ ಕಟ್ಟುವವರಾರು? ಈ ಮರಿ ಸಣ್ಣದಿದ್ದಾಗ ಅದರೊಡನೆ ಸರಸ ಸಲ್ಲಾಪ ಆಡುತ್ತಿದ್ದ ಇಲಿಮರಿಗಳು, ಇಂದು ಕೊಬ್ಬಿದ ಬೆಕ್ಕನ್ನು ನೋಡಿ ಬೆಚ್ಚಿಬೀಳುವಂತಾಗಿದೆ.

ಚುನಾವಣಾ ನೀತಿ ಸಂಹಿತೆಯ ಕಡ್ಡಾಯ ಅಳವಡಿಕೆ, ಚುನಾವಣಾ ಲೋಪದೋಷಗಳ ಸುಧಾರಣೆಗೆ ಜಾಣ ಕುರುಡುತನ ಪ್ರದರ್ಶಿಸುತ್ತಿರುವ ಜನಪ್ರತಿನಿಧಿಗಳ ಕಿವಿ ಹಿಂಡಿ ಚುನಾವಣಾ ವ್ಯವಸ್ಥೆಯನ್ನು ಸರಿಪಡಿಸುವಂತೆ ಚುನಾವಣಾ ಆಯೋಗದ ಮೇಲೆ ಒತ್ತಡ ಹೇರುವ ಹೊಣೆಗಾರಿಕೆ ಪ್ರಜ್ಞಾವಂತ ನಾಗರಿಕರದ್ದಾಗಿದೆ ಎಂಬ ಅಭಿಪ್ರಾಯವು ಚರ್ಚೆಗೆ ಗ್ರಾಸವಾಗಬೇಕಿದೆ. ಇಲ್ಲವಾದಲ್ಲಿ, ಕೊಬ್ಬಿ ನಿಂತಿರುವ ಭ್ರಷ್ಟಾಚಾರವೆಂಬ ಬೆಕ್ಕು ಪ್ರಜಾಪ್ರಭುತ್ವವನ್ನೇ ನುಂಗಿ ನೀರು ಕುಡಿಯಲು ಮುಂದಾಗಬಹುದು.

ಪ್ರಭು ಇಸುವನಹಳ್ಳಿ, ಬೆಂಗಳೂರು

ಸೌಲಭ್ಯಕ್ಕೆ ಆಗ್ರಹಿಸಬೇಕಾದರೆ...

ಗ್ರಾಮೀಣ ಪ್ರದೇಶಕ್ಕೆ ಹೋಲಿಸಿದಾಗ ಮಹಾನಗರಗಳಲ್ಲಿ ಕಡಿಮೆ ಮತದಾನ ಆಗುವುದನ್ನು ಹಿಂದಿನ ಅನೇಕ ಚುನಾವಣೆಗಳ ಸಂದರ್ಭದಲ್ಲಿ ಕಂಡಿದ್ದೇವೆ. ನಗರವಾಸಿಗಳಲ್ಲಿ ಶೇಕಡಾವಾರು ಶಿಕ್ಷಿತರ ಪ್ರಮಾಣ ಅಧಿಕ. ಎಂತಹ ಸರ್ಕಾರ ಬೇಕು, ಯಾರು ಮುಖ್ಯಮಂತ್ರಿ, ಪ್ರಧಾನಿ ಆಗಬೇಕು, ನಾಗರಿಕರಿಗೆ ಎಂತಹ ಸೌಲಭ್ಯಗಳು ಬೇಕು ಎಂದು ಹೆಚ್ಚು ಚರ್ಚೆ ಮಾಡುವವರು ನಗರವಾಸಿಗಳೇ. ಲೋಕಜ್ಞಾನದಲ್ಲೂ ಅವರೇ ಮುಂದೆ. ನಾಗರಿಕ ಸೌಕರ್ಯಗಳನ್ನು ಅನುಭವಿಸುವವರಲ್ಲಿ ಅವರಿಗೆ ಅಗ್ರಸ್ಥಾನ. ಆದರೂ ಮತದಾನದ ದಿನ ಮತಗಟ್ಟೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಮತದಾನ ಮಾಡದಿರುವುದು ನೈತಿಕವಾಗಿ ಹಾಗೂ ಸಾಂವಿಧಾನಿಕವಾಗಿ ಸಾಧುವಲ್ಲ. ಹಾಗಾಗಿ, ವಿದ್ಯಾವಂತ ನಗರವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಮತಗಟ್ಟೆಗಳಿಗೆ ಬಂದು ಅಧಿಕ ಪ್ರಮಾಣದಲ್ಲಿ ಮತದಾನ ಮಾಡುವ ಮೂಲಕ ಸಂವಿಧಾನದ ಘನತೆಯನ್ನು ಎತ್ತಿ ಹಿಡಿದು ಚುನಾವಣಾ ಹಬ್ಬವನ್ನು ಆಚರಿಸಬೇಕಿದೆ.

ಈ ಬಾರಿ ರಾಜ್ಯದಲ್ಲಿ ತೀವ್ರ ಬರ ಕಾಡುತ್ತಿರುವ ಸಂದರ್ಭದಲ್ಲಿ ಚುನಾವಣೆ ಬಂದಿದ್ದು, ಲಕ್ಷಾಂತರ ಮಂದಿ ಜೀವನ ನಿರ್ವಹಣೆಗೆ ಪರ ಊರುಗಳಿಗೆ ವಲಸೆ ಹೋಗಿದ್ದಾರೆ. ಈ ಪ್ರಯುಕ್ತ ಗ್ರಾಮೀಣ ಭಾಗದಲ್ಲೂ ಮತದಾನದ ಪ್ರಮಾಣದಲ್ಲಿ ಇಳಿಕೆ ಆಗುವ ಸಂಭವವಿದೆ. ಸಮಸ್ಯೆ ಏನೇ ಇರಲಿ, ಎಲ್ಲಾ ಮತದಾರರು ಮತಗಟ್ಟೆಗಳಿಗೆ ಬಂದು ತಮ್ಮ ಅಮೂಲ್ಯ ಮತ ಚಲಾಯಿಸುವ ಮೂಲಕ ತಮಗೆ ಬೇಕಾದ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕಿದೆ. ಆಗಮಾತ್ರ ಸರ್ಕಾರದಿಂದ ಹೆಚ್ಚಿನ ಸೌಲಭ್ಯಗಳನ್ನು ಆಗ್ರಹಪೂರ್ವಕವಾಗಿ ಕೇಳಲು ಪ್ರತಿ ಮತದಾರನಿಗೆ ನೈತಿಕ ಹಾಗೂ ಸಂವಿಧಾನಬದ್ಧ ಹಕ್ಕು ಇರಲು ಸಾಧ್ಯ.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ನೌಕರ ವರ್ಗದಲ್ಲಿ ಆಗಬೇಕಿದೆ ಸುಧಾರಣೆ

ನ್ಯಾಯಾಲಯಗಳ ಆದೇಶ ಪಾಲನೆಯಲ್ಲಿ ಸರ್ಕಾರಿ ಅಧಿಕಾರಿಗಳು ತೋರುವ ನಿರಾಸಕ್ತಿಯ ಬಗ್ಗೆ ಹೈಕೋರ್ಟ್ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿರುವುದು ಸ್ವಾಗತಾರ್ಹ. ಇದು, ನ್ಯಾಯಾಲಯದ ಆದೇಶಗಳ ಬಗೆಗಿನ ನೌಕರರ ಮನೋಧೋರಣೆಯನ್ನು ಸೂಚಿಸುತ್ತದೆ. ಇತ್ತೀಚೆಗೆ ಕೆಲ ಸರ್ಕಾರಿ ನೌಕರರು ಆಕ್ಷೇಪಗಳನ್ನು ಮಾಡುವುದೇ ತಮ್ಮ ಸೇವೆ ಎನ್ನುವಂತಹ ಮನಃಸ್ಥಿತಿಯನ್ನು ಬೆಳೆಸಿಕೊಂಡಿದ್ದಾರೆ. ಸಾರ್ವಜನಿಕ ಸೇವೆ ಸಲ್ಲಿಸಲು ನಿಯಮಗಳು ಇರುವುದನ್ನು ಇವರು ಒಪ್ಪಿಕೊಳ್ಳುವುದಿಲ್ಲ. ಹೆಚ್ಚು ಹೆಚ್ಚು ಆಕ್ಷೇಪಗಳನ್ನು ಎತ್ತುವ ನೌಕರ ಬಹು ತಿಳಿದವ ಎನ್ನುವ ಮಾತು ಕೆಲ ಇಲಾಖೆಗಳಲ್ಲಿ ಪ್ರಚಲಿತದಲ್ಲಿದೆ. ಸುಗಮ ಆಡಳಿತಕ್ಕೆ ನಿಯಮಗಳಿರುವುದು ಅನಿವಾರ್ಯ. ಆದರೆ ಇದನ್ನೇ ನೆಪ ಮಾಡಿಕೊಂಡು ಸಾರ್ವಜನಿಕರಿಗೆ, ಇತರ ನೌಕರರಿಗೆ ಮಾನಸಿಕ ಕಿರಿಕಿರಿ ಉಂಟುಮಾಡುವುದು ಅಕ್ಷಮ್ಯ.

ನ್ಯಾಯಾಲಯಗಳ ಆದೇಶಗಳಲ್ಲಿಯೂ ಅರೆಕೊರೆ ಹುಡುಕಿ ಆದೇಶಗಳ ಪಾಲನೆಯಲ್ಲಿ ಕಾಲಹರಣ, ತಾತ್ಸಾರ ಮನೋಭಾವ, ಕುಟಿಲ ಬುದ್ಧಿವಂತಿಕೆ ಪ್ರದರ್ಶಿಸುವ ನೌಕರ ವರ್ಗದ ಮನೋಭಾವದಲ್ಲಿ ಅತ್ಯಗತ್ಯವಾಗಿ ಸುಧಾರಣೆ ಆಗಬೇಕಾಗಿದೆ. ರಾಜ್ಯದಲ್ಲಿ ಇತ್ತೀಚೆಗೆ ಪಹಣಿಯೊಂದರಲ್ಲಿನ ಸಣ್ಣ ದೋಷ ಸರಿಪಡಿಸಲು ಸಹ ಹೈಕೋರ್ಟ್‌ನಿಂದ ಆದೇಶ ಮಾಡಿಸಿಕೊಂಡ ಬಗ್ಗೆ ವರದಿಯಾಗಿದೆ. ಇಲ್ಲಿ ಕೆಳ ಹಂತದ ನೌಕರರ ತಾತ್ಸಾರ ಮತ್ತು ಸಂಕುಚಿತ ಮನೋಭಾವದ ಜೊತೆಗೆ ಹಿರಿಯ ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆ ಇರುವುದನ್ನೂ ವ್ಯವಸ್ಥೆ ಅರಿಯಬೇಕಿದೆ.

ತಿಮ್ಮೇಶ ಮುಸ್ಟೂರು, ಜಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಜಾ ಮತ ಜನತಂತ್ರದ ಹಬ್ಬ

ಲೋಕಸಭಾ ಚುನಾವಣೆ - 2024

ಮಹಾರಾಷ್ಟ್ರ ಲೋಕ ಕಣ ಗೊಂದಲದ ಗೂಡು

ದೇಶದಲ್ಲಿ ಅತಿಹೆಚ್ಚು ಲೋಕಸಭಾ ಕ್ಷೇತ್ರಗಳು ಇರುವುದು ಉತ್ತರ ಪ್ರದೇಶದಲ್ಲಿ, ಆನಂತರದ ಸ್ಥಾನ ಮಹಾರಾಷ್ಟ್ರದ್ದು. ಅತ್ತ ಮಧ್ಯಭಾರತ ಮತ್ತು ಇತ್ತ ಪಶ್ಚಿಮ ಭಾರತಕ್ಕೆ ಸೇರುವ ಈ ದೊಡ್ಡ ರಾಜ್ಯವು ಲೋಕಸಭೆಗೆ 48 ಸಂಸದರನ್ನು ಚುನಾಯಿಸಿ ಕಳುಹಿಸುತ್ತದೆ. ಈ ಹಿಂದಿನ ಎರಡೂ ಚುನಾವಣೆಗಳಲ್ಲಿ ಬಿಜೆಪಿ–ಶಿವಸೇನಾ ಮೈತ್ರಿಕೂಟವು ಕ್ರಮವಾಗಿ 42 ಮತ್ತು 41 ಲೋಕಸಭಾ ಕ್ಷೇತ್ರಗಳನ್ನು ಗೆದ್ದುಕೊಂಡಿತ್ತು. ಈ ಅಂಕಿಗಳನ್ನು ನೋಡಿದರೆ ಈ ಬಾರಿಯೂ ಬಿಜೆಪಿ–ಶಿವಸೇನಾ ಮೈತ್ರಿಕೂಟವು ಏಕಪಕ್ಷೀಯವಾಗಿ ಗೆಲ್ಲುತ್ತದೆ ಎಂದೆನಿಸದೆ ಇರದು. ಆದರೆ, ಹಾಗೆ ಅಂದುಕೊಂಡರೆ ತಪ್ಪಾಗುತ್ತದೆ. ಏಕೆಂದರೆ 2019ರ ನಂತರ ಮಹಾರಾಷ್ಟ್ರದ ರಾಜಕೀಯ ಸಮೀಕರಣವೇ ಬದಲಾಗಿ ಹೋಗಿದೆ

ಕುಗ್ಗದ ಬಿಜೆಪಿ, ಶಿವಸೇನಾ ಬಲ



ಪ್ರಜಾವಾಣಿ ವಾರ್ತೆ

ಮಹಾರಾಷ್ಟ್ರದಲ್ಲಿ ಈ ಹಿಂದಿನ, ಅಂದರೆ 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಶಿವಸೇನಾ ಒಟ್ಟಿಗೇ ಕಣಕ್ಕೆ ಇಳಿದಿದ್ದವು. ಮರಾಠಾ ಮೀಸಲಾತಿಯ ಹೋರಾಟ ಮತ್ತು ತೀವ್ರ ಬರದ ಹೊರತಾಗಿಯೂ ಈ ಮೈತ್ರಿಕೂಟವು 41 ಕ್ಷೇತ್ರಗಳಲ್ಲಿ ಜಯಗಳಿಸಲು ಸಾಧ್ಯವಾಗಿತ್ತು. ಆನಂತರ 2019ರ ಅಕ್ಟೋಬರ್‌ನಲ್ಲಿ ನಡೆದಿದ್ದ ರಾಜ್ಯ ವಿಧಾನಸಭಾ ಚುನಾವಣೆಯ ಫಲಿತಾಂಶದ ನಂತರ ಶಿವಸೇನಾ ಮತ್ತು ಬಿಜೆಪಿ ಮಧ್ಯೆ ಬಿರುಕು ಮೂಡಿತ್ತು. ಮೈತ್ರಿಕೂಟಕ್ಕೆ ಬಹುಮತವಿದ್ದರೂ ಸರ್ಕಾರ ರಚಿಸುವಲ್ಲಿ ವಿಫಲವಾಯಿತು. ಬದಲಾದ ಪರಿಸ್ಥಿತಿಯಲ್ಲಿ ಶಿವಸೇನಾ–ಎನ್‌ಸಿಪಿ–ಕಾಂಗ್ರೆಸ್ ಸೇರಿ ಮೈತ್ರಿಕೂಟ ರೂಪಿಸಿ, ಸರ್ಕಾರ ರಚಿಸಿದವು. ಆ ಸರ್ಕಾರವನ್ನು ಮಹಾ ವಿಕಾಸ ಆಘಾಡಿ (ಎಂವಿಎ) ಎಂದು ಕರೆಯಲಾಯಿತು. ಅದು ಮಹಾರಾಷ್ಟ್ರದ ರಾಜಕಾರಣದಲ್ಲಿ ಹೊಸ ರಾಜಕೀಯ ಸಂಯೋಜನೆಯಾಯಿತು.

ಆನಂತರ ಶಿವಸೇನಾವನ್ನು ಛಿದ್ರಮಾಡಿದ ಬಿಜೆಪಿ ಮತ್ತೆ ಸರ್ಕಾರ ರಚಿಸಿದ್ದು ಎಲ್ಲರಿಗೂ ಗೊತ್ತೇ ಇದೆ. ಲೋಕಸಭಾ ಚುನಾವಣೆಯ ಮೇಲೆ ವರ್ಷದ ಹಿಂದೆಯೇ ಕಣ್ಣಿರಿಸಿದ್ದ ಬಿಜೆಪಿ ಶರದ್ ಪವಾರ್ ಅವರ ಎನ್‌ಸಿಪಿಯನ್ನೂ ಒಡೆಯಿತು. ಪರಿಣಾಮವಾಗಿ ಮಹಾರಾಷ್ಟ್ರದಲ್ಲಿನ ಈಗಿನ ಸರ್ಕಾರದ ಪಾಲುದಾರರು ಶಿವಸೇನಾ–ಎನ್‌ಸಿಪಿ (ಅಜಿತ್ ಬಣ)–ಬಿಜೆಪಿ. ಇದರ ಜತೆಯಲ್ಲೇ ಶಿವಸೇನಾ (ಉದ್ಧವ್ ಬಣ), ಎನ್‌ಸಿಪಿ (ಶರದ್ ಬಣ) ಎಂಬ ಎರಡು ಹೊಸ ಪಕ್ಷಗಳು ಅಸ್ತಿತ್ವಕ್ಕೆ ಬಂದಿವೆ. ಇಲ್ಲಿ ಈ ಹಿಂದೆ ಪ್ರಬಲ ಸ್ಥಾನದಲ್ಲಿದ್ದ ಕಾಂಗ್ರೆಸ್ ಈಗ ಮಿತ್ರಪಕ್ಷಗಳ ಆಣತಿಯಂತೆ ನಡೆಯುವ ಮಟ್ಟಕ್ಕೆ ಕುಸಿದಿದೆ.

ಈ ಎಲ್ಲಾ ಬೆಳವಣಿಗೆಗಳ ಕಾರಣದಿಂದಲೇ ಈ ಚುನಾವಣೆಯು ತೀರಾ ಸಂಕೀರ್ಣ ಎಂಬಂತಾಗಿದೆ. ಇಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮತ್ತು ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟಗಳು ಮಾತ್ರ ಕಣಕ್ಕೆ ಇಳಿದಿದ್ದರೂ, ಪ್ರತಿ ಲೋಕಸಭಾ ಕ್ಷೇತ್ರದ ಪರಿಸ್ಥಿತಿ–ಸಮೀಕರಣ–ಹೊಂದಾಣಿಕೆ ಪರಸ್ಪರ ಭಿನ್ನವಾಗಿಯೇ ಇದೆ. 'ಇಲ್ಲಿನ 48 ಕ್ಷೇತ್ರಗಳನ್ನೂ ಪ್ರತ್ಯೇಕವಾಗಿಯೇ ನೋಡಬೇಕಾಗುತ್ತದೆ. ಹೆಸರಿಗಷ್ಟೇ ಎರಡು ಮೈತ್ರಿಕೂಟವಿದ್ದರೂ ಒಂದೆಡೆ ಪರಸ್ಪರ ಸೆಣಸುತ್ತಿರುವ ಪಕ್ಷಗಳು, ಇನ್ನೊಂದು ಕ್ಷೇತ್ರದಲ್ಲಿ ತೆರೆಮರೆಯ ಮೈತ್ರಿ ಮಾಡಿಕೊಂಡಿವೆ. ಹೀಗಾಗಿ ಫಲಿತಾಂಶವನ್ನು ಊಹಿಸುವುದು ಕಷ್ಟ' ಎನ್ನುತ್ತಾರೆ ರಾಜಕೀಯ ವಿಶ್ಲೇಷಕರು.

ಲೋಕಸಭಾ ಚುನಾವಣೆಗೆ ಇನ್ನೂ ವರ್ಷವಿದೆ ಎನ್ನುವಾಗಲೇ ರಾಜ್ಯ ಬಿಜೆಪಿ ಘಟಕವು ಅದಕ್ಕೆ ಸಿದ್ಧತೆ ನಡೆಸಿತ್ತು. ಎನ್‌ಸಿಪಿಯ ಅಜಿತ್ ಪವಾರ್ ಅವರನ್ನು ತನ್ನತ್ತ ಸೆಳೆದುಕೊಂಡಿತು. ಆ ಮೂಲಕ ಶರದ್ ಪವಾರ್ ಅವರ ಎನ್‌ಸಿಪಿಯನ್ನು ದುರ್ಬಲಗೊಳಿಸಿತು. ಅದಕ್ಕೂ ಮೊದಲೇ ಶಿವಸೇನಾವನ್ನು ದುರ್ಬಲಗೊಳಿಸಿಯಾಗಿತ್ತು. ಇವುಗಳ ಪರಿಣಾಮವಾಗಿ ಮಹಾರಾಷ್ಟ್ರದಲ್ಲಿ ಈಗ ಬಿಜೆಪಿಯೇ ಅತ್ಯಂತ ಪ್ರಬಲ ಪಕ್ಷ ಎನಿಸಿದೆ. ಯಾವುದೇ ಮೈತ್ರಿಕೂಟ ಹೆಚ್ಚು ಸ್ಥಾನ ಗೆದ್ದರೂ, ಮಹಾರಾಷ್ಟ್ರದಲ್ಲಿ ಅತಿಹೆಚ್ಚು ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಸಾಧ್ಯತೆ ಇರುವುದು ಬಿಜೆಪಿಗೆ ಮಾತ್ರ ಎಂದು ತಜ್ಞರು ಅಂದಾಜಿಸುತ್ತಾರೆ.

ಇನ್ನೊಂದೆಡೆ ಈ ಬಾರಿಯ ಹೊಂದಾಣಿಕೆ ರಾಜಕಾರಣ ಎಷ್ಟು ಗೋಜಲು–ಗೋಜಲಾಗಿದೆ ಎಂಬುದು ಈಚಿನ ರಾಜಕೀಯ ಬೆಳವಣಿಗೆಗಳನ್ನು ಗಮನಿಸಿದರೆ ಗೊತ್ತಾಗುತ್ತದೆ. ಪ್ರಕಾಶ್ ಅಂಬೇಡ್ಕರ್ ಅವರ ವಂಚಿತ ಬಹುಜನ ಆಘಾಡಿ (ವಿಬಿಎ) ಕೆಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನೊಟ್ಟಿಗೆ ಮೈತ್ರಿ ಮಾಡಿಕೊಂಡಿದೆ. ವಿಬಿಎ ಅಭ್ಯರ್ಥಿಗಳನ್ನು ಕಾಂಗ್ರೆಸ್ ನಾಲ್ಕು ಕ್ಷೇತ್ರಗಳಲ್ಲಿ ಬೆಂಬಲಿಸಿದೆ. ಆದರೆ ಆ ಕ್ಷೇತ್ರಗಳಲ್ಲಿ ಮರಾಠಾ ಹೋರಾಟಗಾರರ ಪಕ್ಷ ಜನರಂಗದ ಜತೆಗೂ ವಿಬಿಎ ಮೈತ್ರಿಮಾಡಿಕೊಂಡಿದೆ. ಈ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿಲ್ಲ. ಆದರೆ ಈಗ ಮಹಾರಾಷ್ಟ್ರದಲ್ಲಿ ಚುನಾವಣೆ ನಡೆಯುತ್ತಿರುವುದು ಬಿಜೆಪಿ ಪರ ವರ್ಸಸ್ ಬಿಜೆಪಿ ವಿರುದ್ಧ ಎಂಬುದರ ಆಧಾರದಲ್ಲಿ. ವಿಬಿಎ ಆಗಲೀ, ಜನರಂಗವಾಗಲೀ ಬಿಜೆಪಿಯನ್ನು ಪ್ರಬಲವಾಗಿ ವಿರೋಧಿಸಿಯೇ ಇಲ್ಲ. ಅಂತಹ ಸಂದರ್ಭದಲ್ಲಿ ಯಾವುದೇ ಪ್ರಬಲ ಪಕ್ಷ ಬಿಜೆಪಿ ವಿರುದ್ಧ ಕಣಕ್ಕೆ ಇಳಿಯದೇ ಇರುವುದು, ಬಿಜೆಪಿಗೆ ಅನುಕೂಲವಾಗಲಿ. ಇದರ ಅರಿವಿದ್ದೂ ಕಾಂಗ್ರೆಸ್ ನಾಲ್ಕೂ ಕ್ಷೇತ್ರಗಳನ್ನು ಬಿಟ್ಟುಕೊಟ್ಟಿದ್ದು, ಬದಲಿಗೆ ಕಾಂಗ್ರೆಸ್ ಅನ್ನು ವಿಬಿಎ ಬೆಂಬಲಿಸುತ್ತಿರುವುದು ಒಂದು ಕ್ಷೇತ್ರದಲ್ಲಿ ಮಾತ್ರ. ಇದು ಕಾಂಗ್ರೆಸ್‌ಗೆ, ಅಂತಿಮವಾಗಿ ಇಂಡಿಯಾ ಮೈತ್ರಿಕೂಟಕ್ಕೆ ನಷ್ಟವೇ ಸರಿ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಬಿಜೆಪಿಯು ಶಿವಸೇನಾ ಮತ್ತು ಎನ್‌ಸಿಪಿ (ಅಜಿತ್ ಬಣ) ಜೊತೆಗೆ ಇನ್ನೂ ನಾಲ್ಕಾರು ಪಕ್ಷಗಳ ಒಟ್ಟಿಗೆ ಮೈತ್ರಿ ಮಾಡಿಕೊಂಡಿದೆ. ಬಿಜೆಪಿಯು ರಾಜ್ ಠಾಕ್ರೆಯ ಎಂಎನ್‌ಎಸ್ ಒಟ್ಟಿಗೆ ಮೈತ್ರಿ ಮಾಡಿಕೊಂಡಿದೆ. ಎಂಎನ್‌ಎಸ್ ಎರಡು ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಯುವುದಾಗಿ ಪಟ್ಟು ಹಿಡಿದಿದೆ. ಆದರೆ ಈ ಸಂಬಂಧ ಇನ್ನೂ ಒಪ್ಪಂದ ಅಂತಿಮವಾಗಿಲ್ಲ. ಅಲ್ಲದೆ, ದನಗಾಹಿ ಸಮುದಾಯದ ಪಕ್ಷ ಆರ್‌ಎಸ್‌ಪಿ ಒಟ್ಟಿಗೂ ಬಿಜೆಪಿ ಮೈತ್ರಿ ಮಾಡಿಕೊಂಡಿದೆ. ಶರದ್ ಪವಾರ್ ಭದ್ರಕೋಟೆಯಾದ ಬಾರಾಮತಿಯಲ್ಲಿ ಎನ್‌ಡಿಎ ಅಭ್ಯರ್ಥಿಯನ್ನು (ಅಜಿತ್ ಪತ್ನಿ ಸುನೇತ್ರಾ ಪವಾರ್) ಆರ್‌ಎಸ್‌ಪಿ ಬೆಂಬಲಿಸಿದೆ. ಆದರೆ ಬೇರೆ ಹಲವು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ವಿರುದ್ಧ ತನ್ನದೇ ಪ್ರಬಲರನ್ನು ಕಣಕ್ಕೆ ಇಳಿಸಿದೆ. ಇದು ಬಿಜೆಪಿಗೆ ಮಾರಕವಾಗಲಿದೆ ಎಂದೇ ಎಣಿಸಲಾಗಿದೆ. ಹೀಗೆ ಎರಡೂ ಮೈತ್ರಿಕೂಟಗಳಲ್ಲಿನ ಹೊಸ ಮಿತ್ರಪಕ್ಷಗಳು ಎರಡೂ ರಾಷ್ಟ್ರೀಯ ಪಕ್ಷಗಳಿಗೆ ಹಲವೆಡೆ ಮಾರಕವೇ ಆಗಿವೆ ಎನ್ನಲಾಗುತ್ತಿದೆ. ಒಟ್ಟಿನಲ್ಲಿ ಎಲ್ಲಾ ಪಕ್ಷಗಳಿಗೂ ಇದು ಹೊಸ ಸ್ವರೂಪದ ರಾಜಕೀಯ ಪರಿಸ್ಥಿತಿ ಆಗಿದೆ. ಎರಡು ಪ್ರಮುಖ ಪ್ರಾದೇಶಿಕ ಪಕ್ಷಗಳು ಒಡೆದು, ನಾಲ್ಕಾಗಿವೆ. ಬಿಜೆಪಿ ಮತ್ತು ಕಾಂಗ್ರೆಸ್ ತಮಗೆ ಪೂರಕ ವಲ್ಲದ ಮೈತ್ರಿ ಸನ್ನಿವೇಶಗಳನ್ನು ಸೃಷ್ಟಿಸಿಕೊಂಡಿವೆ. ಇಂತಹ ಗೊಂದಲಕಾರಿ ಸನ್ನಿವೇಶದಲ್ಲಿ ಮತದಾರ ತನ್ನ ನಿರ್ಣಯವನ್ನು ಹೇಗೆ ಮಾಡುತ್ತಾನೆ ಎಂಬುದನ್ನು ಫಲಿತಾಂಶವೇ ಹೇಳಬೇಕಷ್ಟೆ.

48 ಒಟ್ಟು ಕ್ಷೇತ್ರಗಳು

5	ಏಪ್ರಿಲ್ 19ರ ಮೊದಲ ಹಂತದಲ್ಲಿ ಮತದಾನ ನಡೆದ ಕ್ಷೇತ್ರಗಳ ಸಂಖ್ಯೆ
8	ಏಪ್ರಿಲ್ 26ರ ಎರಡನೇ ಹಂತದಲ್ಲಿ ಮತದಾನ ನಡೆಯುವ ಕ್ಷೇತ್ರಗಳ ಸಂಖ್ಯೆ
11	ಮೇ 7ರ ಮೂರನೇ ಹಂತದಲ್ಲಿ ಮತದಾನ ನಡೆಯುವ ಕ್ಷೇತ್ರಗಳ ಸಂಖ್ಯೆ
11	ಮೇ 13ರ ಮೂರನೇ ಹಂತದಲ್ಲಿ ಮತದಾನ ನಡೆಯುವ ಕ್ಷೇತ್ರಗಳ ಸಂಖ್ಯೆ
13	ಮೇ 20ರ ಮೂರನೇ ಹಂತದಲ್ಲಿ ಮತದಾನ ನಡೆಯುವ ಕ್ಷೇತ್ರಗಳ ಸಂಖ್ಯೆ

ಕುತೂಹಲ ಕೆರಳಿಸಿದ ಬಾರಾಮತಿ

ಶರದ್ ಪವಾರ್ ಅವರ ಎನ್‌ಸಿಪಿಯ ಭದ್ರಕೋಟೆ ಎಂದೇ ಹೇಳಲಾಗುವ ಬಾರಾಮತಿಯಲ್ಲಿ, ಪವಾರ್ ಅವರ ಮಗಳು ಸುಪ್ರಿಯಾ ಸುಳೆ ಕಣಕ್ಕೆ ಇಳಿದಿದ್ದಾರೆ. ಆದರೆ ಅವರ ವಿರುದ್ಧ ಪವಾರ್ ಕುಟುಂಬದ ಸುನೇತ್ರಾ ಪವಾರ್ ಅವರನ್ನೇ ಬಿಜೆಪಿಯು ಎನ್‌ಡಿಎ ಮೈತ್ರಿ ಅಭ್ಯರ್ಥಿಯಾಗಿ ಕಣಕ್ಕೆ ಇಳಿಸಿದೆ. ಜತೆಗೆ ಈ ಕ್ಷೇತ್ರದಲ್ಲಿ ನಿರ್ಣಾಯಕ ಪಾತ್ರ ವಹಿಸುವ ದನಗಾಹಿ ಸಮುದಾಯದ ಆರ್‌ಎಸ್‌ಪಿ ಒಟ್ಟಿಗೆ ಮೈತ್ರಿ ಮಾಡಿಕೊಂಡಿದೆ. ಇವೆಲ್ಲವೂ ಸುಪ್ರಿಯಾ ಅವರಿಗೆ ಮಾರಕವಾಗಲಿದೆ ಎಂದು ಅಂದಾಜಿಸಲಾಗಿದೆ. ಸುನೇತ್ರಾ ಅವರು ಗೆಲ್ಲುವ ಸಾಧ್ಯತೆ ಹೆಚ್ಚು ಎನ್ನುತ್ತಾರೆ ಬಿಜೆಪಿ ನಾಯಕರು.

ಆದರೆ ಇಲ್ಲಿನ ಜನರು ಶರದ್ ಪವಾರ್ ಅವರ ಕೈಬಿಡುವುದಿಲ್ಲ ಎಂಬುದು ಶರದ್ ಪವಾರ್ ಬಣದ ಎನ್‌ಸಿಪಿ ನಾಯಕರ ನಂಬಿಕೆ. ಇದರೊಟ್ಟಿಗೆ ಅಜಿತ್ ಪವಾರ್ ಅವರ ಪತ್ನಿ ಸುನೇತ್ರಾ ಪವಾರ್ ವಿರುದ್ಧ ಹಣ ಅಕ್ರಮ ವರ್ಗಾವಣೆ ಪ್ರಕರಣ ದಾಖಲಾಗಿತ್ತು. ಸ್ವತಃ ನರೇಂದ್ರ ಮೋದಿ ಅವರೇ ಅಜಿತ್ ಮತ್ತು ಸುನೇತ್ರಾ ಅವರನ್ನು ಮಹಾಭ್ರಷ್ಟರು ಎಂದು ಕರೆದಿದ್ದರು ಮತ್ತು ₹25,000 ಕೋಟಿ ಹಗರಣ ನಡೆದಿದೆ ಎಂದು ಆರೋಪಿಸಿದ್ದರು. ಅಂತಹ ಸುನೇತ್ರಾ ಅವರನ್ನೇ ಮೈತ್ರಿ ಅಭ್ಯರ್ಥಿಯಾಗಿ ಬಿಜೆಪಿ ಕಣಕ್ಕೆ ಇಳಿಸಿದ್ದು, ಹಿನ್ನಡೆಯೇ ಸರಿ ಎಂದು ಅರ್ಥೈಸಲಾಗುತ್ತಿದೆ. ಬುಧವಾರವಷ್ಟೇ ಮುಂಬೈ ಪೊಲೀಸರು ಸುನೇತ್ರಾ ಅವರಿಗೆ ಈ ಪ್ರಕರಣದಲ್ಲಿ ಕ್ಲೀನ್‌ಚಿಟ್ ನೀಡಿದ್ದಾರೆ. ಶರದ್ ಬಣದವರು ಇದನ್ನು, 'ಬಿಜೆಪಿಯ ವಾಷಿಂಗ್ ಮೆಷಿನ್ ಮತ್ತೆ ಕೆಲಸ ಮಾಡಿದೆ' ಎಂದು ಟೀಕಿಸುತ್ತಿದ್ದಾರೆ. ಇದು ಸುನೇತ್ರಾ ಅವರಿಗೆ ಮಾರಕವಾಗಲಿದೆ ಎಂದು ಅಂದಾಜಿಸಲಾಗುತ್ತಿದೆ.

ಸಿನಿ ಬಿಟ್ಸ್

ತೇಜ್ ಸಜ್ಜಾ

ತೆಲುಗಿನಲ್ಲಿ 'ಹನುಮಾನ್' ಚಿತ್ರದ ಮೂಲಕ ಮೋಡಿ ಮಾಡಿದ ನಟ ತೇಜ್ ಸಜ್ಜಾ ತಮ್ಮ ಹೊಸ ಪ್ರಾಜೆಕ್ಟ್ ಘೋಷಿಸಿದ್ದಾರೆ.

'ಕಾರ್ತಿಕೇಯ', 'ಕಾರ್ತಿಕೇಯ-2', 'ಧಮಾಕ' ಸೇರಿದಂತೆ ಹಲವು ಹಿಟ್ ಚಿತ್ರಗಳ ಸಾರಥಿ ಕಾರ್ತಿಕ್ ಗಟ್ಟಮ್ನೇನಿ ತೇಜ್ ಸಜ್ಜಾಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಇವರಿಬ್ಬರ ಕಾಂಬಿನೇಷನ್‌ನ ಮೊದಲ ಪ್ಯಾನ್ ಇಂಡಿಯಾ ಸಿನಿಮಾಗೆ 'ಮಿರಾಯ್' ಎಂಬ ಶೀರ್ಷಿಕೆ ಇಡಲಾಗಿದೆ. 'ಹನುಮಾನ್'ನಲ್ಲಿ ಸೂಪರ್ ಹೀರೊ ಆಗಿದ್ದ ತೇಜ್ ಈಗ 'ಮಿರಾಯ್'ನಲ್ಲಿ ಸೂಪರ್ ಯೋಧನಾಗಿ ಕಾಣಿಸಿಕೊಳ್ಳಲಿದ್ದಾರೆ.

'ಮಿರಾಯ್' ಎಂದರೆ ಭವಿಷ್ಯ ಎಂದರ್ಥ. ಅಶೋಕ ಚಕ್ರವರ್ತಿ ಹಾಗೂ ಆತನ 9 ರಹಸ್ಯ ಕಥೆಗಳನ್ನು ಬಿಚ್ಚಿಡುವ ಕಥೆಯನ್ನು ಸಿನಿಮಾ ಹೊಂದಿದೆ ಎಂದಿದೆ ಚಿತ್ರತಂಡ. ಗೌರ ಹರಿ ಸಂಗೀತ ಚಿತ್ರಕ್ಕಿದೆ. ಪೀಪಲ್ ಮೀಡಿಯಾ ಫ್ಯಾಕ್ಟರಿಯಡಿ ಟಿ.ಜಿ. ವಿಶ್ವಪ್ರಸಾದ್ 'ಮಿರಾಯ್' ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಸಿನಿಮಾವನ್ನು 2025ರ ಏಪ್ರಿಲ್ 18ರಂದು ತೆರೆಗೆ ತರಲು ಚಿತ್ರತಂಡ ಸಜ್ಜಾಗಿದೆ. ❖

ಸೆಟ್ಟೇರಲಿದೆ ಫಾದರ್ ಚಿತ್ರ

'ಕಬ್ಜ-2', 'ಡಾಗ್', 'ಫಾದರ್', 'ಪಿ.ಒ.ಕೆ', 'ಶ್ರೀ ರಾಮ ಬಾಣ ಚರಿತ' ಹಾಗೂ ಶಿವರಾಜ್‌ಕುಮಾರ್ ನಟನೆಯ ಹೊಸ ಸಿನಿಮಾ–ಹೀಗೆ ತಮ್ಮ 'ಆರ್.ಸಿ. ಸ್ಟುಡಿಯೊಸ್'ನಲ್ಲಿ ಏಕಕಾಲಕ್ಕೆ ಆರು ಸಿನಿಮಾಗಳ ನಿರ್ಮಾಣವನ್ನು ನಿರ್ದೇಶಕ, ನಿರ್ಮಾಪಕ ಆರ್.ಚಂದ್ರು ಘೋಷಿಸಿದ್ದರು. ಇದರಲ್ಲಿ 'ಫಾದರ್' ಎನ್ನುವ ಸಿನಿಮಾದ ಮುಹೂರ್ತ ಶನಿವಾರ(ಏ.27) ನಡೆಯಲಿದೆ.

ರಾಜಮೋಹನ್ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಸಿನಿಮಾದಲ್ಲಿ 'ಲವ್ ಮಾಕ್ಟೇಲ್' ಖ್ಯಾತಿಯ ಡಾರ್ಲಿಂಗ್ ಕೃಷ್ಣ ಹಾಗೂ ಬಹುಭಾಷಾ ನಟ ಪ್ರಕಾಶ್ ರಾಜ್ ಮುಖ್ಯಭೂಮಿಕೆಯಲ್ಲಿದ್ದಾರೆ. ತೆಲುಗಿನ ಖ್ಯಾತ ನಟ ಸುನೀಲ್ ಸೇರಿದಂತೆ ಅನೇಕ ಪರಭಾಷಾ ನಟ, ನಟಿಯರ ದಂಡೇ ಈ ಚಿತ್ರದಲ್ಲಿರಲಿದೆ ಎನ್ನುವ ಮುನ್ಸೂಚನೆಯನ್ನೂ ಚಂದ್ರು ನೀಡಿದ್ದಾರೆ.

ಸಿನಿಮಾದ ಶೀರ್ಷಿಕೆಯೇ ಹೇಳುವಂತೆ, ಇದೊಂದು ಅಪ್ಪ ಮಗನ ಬಾಂಧವ್ಯ ಕುರಿತಾದ ಕಥಾಹಂದರ ಹೊಂದಿದೆ. ಆರ್.ಸಿ. ಸ್ಟುಡಿಯೊಸ್‌ನ ಮೊದಲ ಪ್ಯಾನ್ ಇಂಡಿಯಾ ಸಿನಿಮಾ ಇದಾಗಿದೆ. 'ಜಗತ್ತಿನಲ್ಲಿ ಅಪ್ಪನ ಸ್ಥಾನ ತುಂಬುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಅಪ್ಪ ಆಕಾಶಕ್ಕಿಂತಲೂ ಮಿಗಿಲು. ಅಪ್ಪನ ಬಿಸಿಯುಸಿರು, ಅಪ್ಪನ ಅಪ್ಪುಗೆ, ಅಪ್ಪನ ನೋವು, ಅಪ್ಪನ ಬೆವರು, ಅಪ್ಪನ ಕಾತರ, ಆತುರ, ಚಡಪಡಿಕೆ, ಆಸೆ, ಜವಾಬ್ದಾರಿ ಇತ್ಯಾದಿಗಳ ರೂಪವೇ ಈ 'ಫಾದರ್'' ಎಂದಿದ್ದಾರೆ ಚಂದ್ರು.

'ಕಬ್ಜ'ದ ಹಿಂದಿ ಅವತರಣಿಕೆಯ ಹಕ್ಕುಗಳನ್ನು ಬಾಲಿವುಡ್‌ನ ಪ್ರತಿಷ್ಠಿತ ನಿರ್ಮಾಣ ಮತ್ತು ವಿತರಣಾ ಸಂಸ್ಥೆ ಆನಂದ್ ಪಂಡಿತ್ ಮೋಷನ್ ಪಿಕ್ಚರ್ಸ್ ಪಡೆದಿತ್ತು. ಇದೀಗ 'ಫಾದರ್' ಸಿನಿಮಾವನ್ನು ಆನಂದ್ ಪಂಡಿತ್ ಪ್ರಸೆಂಟ್ ಮಾಡುತ್ತಿದ್ದಾರೆ. ❖

ಡಾರ್ಲಿಂಗ್ ಕೃಷ್ಣ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಲಜ್ಜೆ ಅನ್ನುವುದು ಇರಬೇಕು...

ನುಡಿ ಬೆಳಗು



ಪ್ರೊ.ಎಂ.ಕೃಷ್ಣೇಗೌಡ

ಹುಡುಗಿ ನೋಡಲು ಬಂದಿದ್ದಾನೆ ಹುಡುಗ. ಹುಡುಗನ ಕಣ್ಣು ಒಳಕೋಣೆಯ ಕಡೆಗೇ ನೆಟ್ಟು ನಿಂತಿವೆ. ಅವು ಅಲ್ಲೇ ನಿಂತಿವೆ ಎಂದು ಅಲ್ಲಿರುವವರಿಗೆ ಗೊತ್ತಾಗಬಾರದೆಂದು ಕಳ್ಳಾಟ ಆಡುತ್ತಿವೆ...

ಆ ಕಡೆ ಕೈಬಳೆ ಸಣ್ಣಗೆ ಸದ್ದು ಮಾಡುತ್ತವೆ. ಕಳ್ಳಕಣ್ಣು ದನಿ ಬಂದ ಕಡೆಗೆ ಹೊರಳುತ್ತವೆ. ಆಹ್... ಹಗುಹಗೂರ ಹೆಜ್ಜೆಯಿಡುತ್ತಾ ಬಂದೇ ಬಿಟ್ಟಳು ಹಂಸಗಮನೆ. ಹುಡುಗ ಮೆಲ್ಲಗೆ ಕಣ್ಣೆತ್ತಿ ನೋಡಿದ. ಅದೊಂದು ಅಮೃತ ಗಳಿಗೆ. ಆ ಸಣ್ಣ ಹೊತ್ತನ್ನು ಜೀವಮಾನವಿಡೀ ಎದೆಯಲ್ಲಿ ಎತ್ತಿಟ್ಟುಕೊಳ್ಳಬೇಕು, ಅಂಥಾ ಮಧುರ ಕ್ಷಣ. ಆಗಲೇ ಅವಳೂ ಅವನ ಕಣ್ಣುಗಳನ್ನು ನೋಡಿಬಿಟ್ಟಳು. ಕಣ್ಣುಗಳು ಒಂದರೆಕ್ಷಣ ಭೇಟಿಯಾದವಷ್ಟೇ. ಆಗ ಆ ಹುಡುಗಿಯ ಚಿಗರೆ ಕಂಗಳಲ್ಲಿ ಇಣುಕಿ ಹೋದದ್ದೇನು?

ಅದು ಲಜ್ಜೆ...

ವರ ಬಂದು ಹೋದ ಮೇಲೆ ಮನೆಯ ದೊಡ್ಡವರು ಮಗಳನ್ನು ಕೇಳಿದರು- 'ಏನಂತೀಯಾ ಮಗಳೇ?' ಏನು ಮಾತಾಡಿಯಾಳು ಏಳುಮಲ್ಲಿಗೆ ಸುಕುಮಾರಿ? ತಟ್ಟನೆ ಮುಖ ಮುಚ್ಚಿಕೊಂಡು ಅಲ್ಲಿಂದ ಎದ್ದು ಓಡಿದಳು. ಅರ್ಥವಾಯಿತು ಅವರಪ್ಪ ಅಮ್ಮನಿಗೆ. ಅವಳು ಮಾತೇ ಆಡಲಿಲ್ಲ ಏಕೆ?

ಲಜ್ಜೆ...

ಹಳೇ ಕನ್ನಡ ಸಿನಿಮಾದ ಒಂದು ದೃಶ್ಯದಂತಿದೆ ಅಲ್ಲವೇ ಇದು? ಹೌದು, ಇದೆಲ್ಲಾ ಆ ಕಾಲದ್ದೇ. ನಾವೆಲ್ಲಾ ಚಿಕ್ಕವರಾಗಿದ್ದಾಗ ಈ ಲಜ್ಜೆಯ ಬಗೆಬಗೆ ವಿನ್ಯಾಸಗಳನ್ನು ನೋಡುತ್ತಿದ್ದೆವು. ಈಗ ಇಲ್ಲ, ಅಷ್ಟಿಲ್ಲ. ಶೃಂಗಾರ ರಸದ ಅವಾಙ್ಮಯ ಅಭಿವ್ಯಕ್ತಿ ಈ ಲಜ್ಜೆ. ನಾಚಿಕೆ ಅಂತಲೂ ಅನ್ನುತ್ತಾರೆ ಇದಕ್ಕೆ.

ಇದು ಹೆಣ್ಣನ್ನು ಮತ್ತಷ್ಟು ಹೆಣ್ಣಾಗಿಸುವ ಅಭೌತಿಕ ಆಭರಣ ಹಾಗೆ ಹೀಗೆ ಅಂತ ನಮ್ಮ ಕವಿಗಳು ಬೇಕಾದಷ್ಟು ವರ್ಣಿಸಿದ್ದಾರೆ. ನಾಚಿಕೆ ವೈಯಾರಗಳಿಲ್ಲದಿದ್ದರೆ ನಾಟಕ ಸಿನಿಮಾಗಳಲ್ಲಿ ಶೃಂಗಾರವೇ ಇಲ್ಲ. ಕವಿಗಳಿಗೆ ಕೆಲಸವೇ ಇಲ್ಲ.

ಈಗ ಹಾಗಿಲ್ಲ. ಈ ಲಜ್ಜೆ ಎಂಬುದು ಅಪರೂಪಕ್ಕೂ ಕಾಣಸಿಗುವುದಿಲ್ಲ. ಇರಲಿ ಬಿಡಿ. ಅದೊಂದು ಕಾಲಮಾನ. ಈಗ ಅದಿಲ್ಲ ಅಂತ ಪರಿತಪಿಸುವುದು ಬೇಡ.

ಲಜ್ಜೆ ಅಂದರೆ ಅದು ಮಾತ್ರವಲ್ಲ. ಇನ್ನೂ ಒಂದಿದೆ. ಅದೊಂದು ಸಾಮಾಜಿಕ ಶೀಲ. ಅದು ಬರೀ ಸ್ತ್ರೀಯರಿಗೆ ಮಾತ್ರವಲ್ಲ. ಸ್ತ್ರೀ ಪುರುಷರೆಲ್ಲರಿಗೂ ಇರಬೇಕಾದದ್ದು. ಆಡಬಾರದ್ದನ್ನು ಆಡಿ, ಮಾಡಬಾರದ್ದನ್ನು ಮಾಡಿ ಮತ್ತೆ ಮುಖ ತೋರಿಸಿಕೊಂಡು, ಮೀಸೆ ತಿರುಗಿಸಿಕೊಂಡು ತಿರುಗಾಡಿದರೆ ಅಲ್ಲಿ ಲಜ್ಜೆ ಇಲ್ಲ. ತಪ್ಪು ಮಾಡಿದವನು, ತಪ್ಪಿಗೆ ತೆರ ಕೊಟ್ಟವನು, ನ್ಯಾಯಸ್ಥರ ಕೈಯಲ್ಲಿ ಛೀಮಾರಿ ಹಾಕಿಸಿಕೊಂಡವನು, ಅತ್ಯಾಚಾರ, ಅನಾಚಾರ, ವ್ಯಭಿಚಾರ ಮಾಡಿದವನು, ಯೋಗ್ಯತೆ ಇಲ್ಲದೆ ಹೊಗಳಿಸಿಕೊಂಡವನು, ತನ್ನ ಮೂರ್ಖತನಕ್ಕೆ ಕೊರಗದವನು, ಶತ್ರುಗಳಿಗೆ ಬೆನ್ನು ತಿರುಗಿಸಿದವನು, ಸಾರ್ವಜನಿಕವಾಗಿ ಮೆರೆದಾಡುತ್ತಾನೆಂದರೆ ಅಲ್ಲಿ ಲಜ್ಜೆಯಿಲ್ಲ. ಇಂಥವರನ್ನು ನಿರ್ಲಜ್ಜರು, ಅಥವಾ ಲಜ್ಜಾಹೀನರು ಅನ್ನುತ್ತಾರೆ. ಇವರು ಹೆಚ್ಚಾಗಿರುವ ಕುಟುಂಬ, ಸಮಾಜ, ದೇಶಕ್ಕೆ ಗೌರವ ಬರುವುದಿಲ್ಲ.

ವ್ಯಕ್ತಿಗೆ ಶೀಲ ಅನ್ನುವುದು ಇರುವಂತೆಯೇ, ಸಮಾಜಕ್ಕೂ, ದೇಶಕ್ಕೂ, ಭಾಷೆಗೂ, ಬದುಕಿಗೂ ಶೀಲ ಅಂತ ಒಂದಿರುತ್ತದೆ. ಈ ಲಜ್ಜೆಯೂ ಕೂಡಾ ಒಂದು ಸಾಮಾಜಿಕ ಶೀಲ. ಶೀಲವೇ ಇಲ್ಲದ ಸಿರಿವಂತಿಕೆ, ಭೋಗ, ಅಧಿಕಾರ ಇವೆಲ್ಲಾ ಗೌರವಾರ್ಹವಲ್ಲ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಏಪ್ರಿಲ್ 26, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ದ್ವಿತೀಯ ಗಂ. 07-47 **ನಕ್ಷತ್ರ:** ಅನುರಾಧ ಗಂ. 27-40 **ಯೋಗ:** ವರಿಯಾನ್ ಗಂ. 28-19, **ಕರಣ :** ಗರ ಗಂ. 7-47, ಮೇಷ ಮಾಸದ 14 ನೇ ದಿನ

ಮಳೆನಕ್ಷತ್ರ: ಅಶ್ವಿನಿ 4 **ರಾಹುಕಾಲ:** ಬೆಳಿಗ್ಗೆ 10-30 - 12-00

ಸೂರ್ಯೋದಯ: 06-15 **ಸೂರ್ಯಾಸ್ತ:** 06-42

ಮುಸ್ಲಿಂ ದಿನಾಂಕ: 16 ಶವ್ವಾಲ್

ಅದೃಷ್ಟ ಸಂಖ್ಯೆ : 5, 3

ಮೇಷ: ಬಹಳವಾಗಿ ಹಚ್ಚಿಕೊಂಡ ಸಾಕುಪ್ರಾಣಿಯ ಅನಾರೋಗ್ಯವು ತೀರ ಬೇಸರ ಪಡಿಸುವ ಸಾಧ್ಯತೆ ಇದೆ. ಇಂದು ನಿಮ್ಮ ಸುತ್ತ ನಡೆಯುವ ಕೆಲವು ಸನ್ನಿವೇಶಗಳು ನಿಮ್ಮನ್ನಗಲಿದ ಹಿರಿಯರ ನೆನಪು ತರಿಸಲಿದೆ.

ವೃಷಭ: ಅನಿರೀಕ್ಷಿತವಾಗಿ ಪರಿಚಯವಾಗುವ ವ್ಯಕ್ತಿಯು ನಿಮ್ಮ ಮನಸ್ಸಿಗೆ ತುಂಬಾ ಹತ್ತಿರವಾಗುತ್ತಾರೆ. ಯೋಗ್ಯತೆಗೆ ಮೀರಿದ ಕಾರ್ಯವೊಂದು ಇಂದು ನಿಮ್ಮನ್ನು ತಲುಪಲಿದೆ. ಹತ್ತಿ ಮಾರಾಟಗಾರರಿಗೆ ಲಾಭವಿದೆ.

ಮಿಥುನ: ಮಕ್ಕಳ ಸಂತೋಷಕ್ಕಾಗಿ ರಹಸ್ಯವಾಗಿ ಅವರಿಗೆ ನೀವು ಸಹಾಯವನ್ನು ಮಾಡುತ್ತೀರಿ. ಈಶ್ವರನ ಕೃಪೆಯಿಂದಾಗಿ ಉತ್ತಮವಾಗಿ ನೆಡೆಯುತ್ತಿರುವ ನಿಮ್ಮ ಕೆಲಸಗಳಲ್ಲಿ ಔನ್ನತ್ಯವು ನಿಮಗೆ ನಿಶ್ಚಿತವಾದದ್ದು.

ಕರ್ಕಾಟಕ: ನಿಮ್ಮ ಆತ್ಮವಿಶ್ವಾಸವು ಒಳ್ಳೆಯದು. ಆದರೆ ಅತಿಯಾದ ಆತ್ಮವಿಶ್ವಾಸ ನೀವು ಮಾಡುವ ಕೆಲಸದ ಗುಣಮಟ್ಟವನ್ನು ಕುಂಠಿತಗೊಳಿಸುತ್ತದೆ. ನಿಮಗೆ ಒದಗಿಬರಲಿರುವ ಅವಕಾಶಗಳನ್ನು ಕೈತಪ್ಪಿ ಹೋಗದಂತೆ ನೋಡಿಕೊಳ್ಳಿ.

ಸಿಂಹ: ಅಧಿಕಾರಿಗಳೊಂದಿಗೆ ವಾದಿಸದೆ ಅವರು ಹೇಳುವ ಕಾರ್ಯಗಳನ್ನು ಮಾಡುವುದು ನಿಮಗೆ ಒಳ್ಳೆಯದು. ಮಗಳ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಹರಿಸಿ. ಅಂತರ್ಜಾಲದಲ್ಲಿ ಸಿಗುವ ಮಾಹಿತಿಗಳನ್ನು ನಂಬಿ ಮೋಸ ಹೋಗದಿರಿ.

ಕನ್ಯಾ: ಯಾಂತ್ರಿಕ ಬದುಕಿನ ಭಾಗವಾದ ನಿಮ್ಮ ಜೀವನದಲ್ಲಿ ಸ್ವಲ್ಪವಾದರೂ ಭರವಸೆ ಇಟ್ಟುಕೊಳ್ಳಿ. ವಿದ್ಯುತ್ ಉಪಕರಣಗಳ ಖರೀದಿ ಸಾಧ್ಯತೆ ಇದೆ. ಸಂಗಾತಿಯ ಜೊತೆ ಉತ್ತಮ ಸಮಯವನ್ನು ಕಳೆಯುತ್ತೀರಿ.

ತುಲಾ: ನಿಮ್ಮ ವ್ಯವಹಾರಗಳು ಮೋಸದ ಹಾದಿಯಲ್ಲಿ ಹೋಗುವಂತಿದ್ದಲ್ಲಿ ಅವುಗಳನ್ನು ಶೀಘ್ರ ಕೈಬಿಡುವುದು ಸೂಕ್ತ. ನಿಮ್ಮ ಕಾರ್ಯವೈಖರಿ ಲಾಭಕರವಾಗಿರಲಿದೆ. ತಾಯಿಯ ಸಂಬಂಧಿಕರ ಆಗಮನವಾಗಲಿದೆ.

ವೃಶ್ಚಿಕ: ಯುವಕ ಯುವತಿಯರಿಗೆ ಇಂದು ನಿಮ್ಮ ಸುತ್ತಮುತ್ತ ನಡೆಯುವ ಕೆಲವು ಘಟನೆಗಳಿಂದ ದೇಶಭಕ್ತಿ ಗರಿಗೆದರಬಹುದು. ವಿಶೇಷ ಕೌಶಲ ಹೊಂದಿದ ವಿಕಲಾಂಗ ಚೇತನರಿಗೆ ಪ್ರಶಸ್ತಿ ಪ್ರದಾನವಾಗಬಹುದು.

ಧನು: ಅಗತ್ಯದ ಸಂದರ್ಭದಲ್ಲಿಯೂ ವಿರಾಮ ನೀಡದೇ ದುಡಿಯುತ್ತಿದ್ದರೆ ನಿಮ್ಮ ದೇಹ ನಿಮಗೆ ಅಗತ್ಯವಿರುವ ಸಮಯದಲ್ಲಿ ಕೈಕೊಡುವ ಸಾಧ್ಯತೆಗಳಿವೆ. ಆತುರಗತಿಯಲ್ಲಿ ಓಡುವ ನಿಮ್ಮ ಯೋಚನೆಗೆ ಕಡಿವಾಣ ಹಾಕಿ.

ಮಕರ: ನಿಮ್ಮಲ್ಲಿ ವಿದ್ಯೆ ಹೇರಳವಾಗಿದ್ದರೂ ವಿನಯದ ಕೊರತೆ ಇದ್ದಲ್ಲಿ ಪಾಂಡಿತ್ಯಕ್ಕೆ ಬೆಲೆ ಸಿಗದೆ ಹೋಗಬಹುದು. ವೈರುಧ್ಯಗಳನ್ನು ಮೀರಿ ವ್ಯವಹರಿಸಿದಲ್ಲಿ ಸಂಬಂಧವು ಉಳಿಯಲಿದೆ. ಹಾಕಿದ ಯೋಜನೆಗಳು ಸಫಲವಾಗಲಿವೆ.

ಕುಂಭ: ಇಂದು ಯಾರಾದರೂ ನಿಮಗೆ ಹಿತವಲ್ಲದಿದ್ದರೂ ಸಲಹೆ ಕೊಡಲು ಬಂದರೆ ಕೋಪಿಸಿಕೊಳ್ಳದೆ ಸಮಾಧಾನದಿಂದ ಸುಮ್ಮನೆ ಕೇಳಿಸಿಕೊಳ್ಳಿ. ಇಂದು ಧಾರ್ಮಿಕ ಕಾರ್ಯಕ್ರಮದ ಕರೆ ಇದ್ದಲ್ಲಿ ತಪ್ಪದೇ ಭೇಟಿ ನೀಡಿ.

ಮೀನ: ಕಣ್ಣಿಗೆ ಹಿತವೆನ್ನಿಸುವುದ್ದೆಲ್ಲವನ್ನು ತಿನ್ನುವ ನಿಮ್ಮ ಪ್ರವೃತ್ತಿಯಿಂದ ಜೀರ್ಣಾಂಗ ವ್ಯೂಹ ಸರಿಯಾಗಿ ಕಾರ್ಯ ನಿರ್ವಹಿಸದೆ ಇರುವುದು ನಿಮ್ಮ ಗಮನಕ್ಕೆ ಬರಲಿದೆ. ನಿದ್ದೆಯನ್ನು ನಿರ್ವಹಣೆ ಮಾಡುವ ಬಗ್ಗೆ ಯೋಚಿಸಿ.

ಪದಬಂಧ 5662

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಗುರಿಯನ್ನು ಮುಟ್ಟಲು ಸಂಕಲ್ಪ ಮಾಡಿದವನು (5)
3. ಸಮಾಧಾನದಿಂದಲೇ ನಡೆದಿರುವ ರಾಜಿ (3)
6. ಲೆಕ್ಕದ ಪುಸ್ತಕ (2)
7. ವಿರಾಜಮಾನವಾಗಿ ಕುಳಿತಿರುವ ಒಡೆಯ (4)
10. ವಿದ್ಯಾರ್ಹತೆಯ ಪ್ರಶಸ್ತಿ ನೀಡುವುದು (5)
13. ಮತದೊಳಗೆ ಮೂಡಿರುವ ಅಭಿಪ್ರಾಯ (4)
16. ಅರಿವೆಯೊಳಗಡಗಿರುವ ಶತ್ರು (2)
17. ಸ್ವಚ್ಛಂದತೆಯನ್ನು ಹೀಗೆನ್ನಿ (3)
18. ಇದು ಕನ್ನಡಿಗನ ಲೈಬ್ರರಿ! (5)

ಮೇಲಿಂದ ಕೆಳಕ್ಕೆ

1. ಕ್ಷಾಮದಿಂದ ಮುಕ್ತಾಯ ಆರಂಭವಾಗಿದೆ! (4)
2. ಮಠದ ಹತ್ತಿರ ಕೂರ್ಮ ಬಂದಿದೆಯಲ್ಲಾ! (3)
4. ತುಸುವೇ ಬೀರಿದ ಮಂದಹಾಸ (4)
5. ಗಾಯಕಿಗಾದ ಪೆಟ್ಟು (2)
8. ಜನರ ನಡುವಿರುವ ಸೇವಕ (3)
9. ಈತ ಬಲು ನಿಷ್ಣಾತ (3)
10. ಹೂವಿನಲ್ಲಿನ ಹುಡಿ (3)
11. ನಿಯಮವಾಗಿಯೇ ಇದು ಮನೋಹರ (4)
12. ಈ ಪರಿ ನಡೆದಿರುವ ಲಗ್ನ (4)
14. ತರಲೆಯ ಶಿರಸ್ಸು (2)
15. ಬಲದ ವಿರುದ್ಧ ರೊಡ್ಡ ನಿಂತಿದ್ದಾನಲ್ಲಾ! (3)



5661ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಅಪಸ್ವರ 3.ವಜ್ರೋತ್ಸವ 5.ವಚನ 6.ಕಲಹ 8.ಬಾಲಕ 9.ಅಂಕುರ 10.ಕಡಗ 12.ತಿಳಿಗೆ 14.ಜಲಪಾತ 15.ಹರಿದಾರಿ

ಮೇಲಿಂದ ಕೆಳಕ್ಕೆ:

1.ಅಭ್ರಕ 2.ರವ 3.ವನ 4.ವರ್ತಕ 7.ಹರಟೆಗಾರ 8.ಬಾಲಬಡುಕ 9.ಅಂಡಜ 11.ಗಡಾರಿ 12.ತಿತ 13.ಗೆಹ

ಸುಡೊಕು 6047

	8			5				
1			6		4		7	3
	5			7			2	4
5		8	9					
	1					7	5	2
4		7			6		8	
2		5		9			3	
	6		3		5	2		7
3		9		6			4	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6046 ಸುಡೊಕು

6	2	4	5	3	9	7	1	8
8	9	5	6	7	1	2	4	3
1	3	7	2	4	8	5	9	6
3	4	1	8	2	5	9	6	7
2	8	6	3	9	7	1	5	4
7	5	9	4	1	6	8	3	2
5	1	3	7	6	2	4	8	9
4	7	8	9	5	3	6	2	1
9	6	2	1	8	4	3	7	5

ಪ್ರಜಾ ಮತ

2024 ಜನತಂತ್ರದ ಹಬ್ಬ

ಮೊದಲ ಮತದ ಸಂಭ್ರಮ

ಮೊದಲನೇ ಬಾರಿಗೆ ಲೋಕಸಭಾ ಚುನಾವಣೆಯಲ್ಲಿ ಮತದಾನ ಮಾಡುತ್ತಿರುವುದು ಬಹಳ ಹೆಮ್ಮೆ ಅನಿಸುತ್ತಿದೆ. ಹಾಗೆಯೇ, ಮತದಾನ ಪ್ರಕ್ರಿಯೆ ಹೇಗಿರುತ್ತದೆ ಎಂಬುದನ್ನು ತಿಳಿದುಕೊಳ್ಳುವ ಕುತೂಹಲವೂ ಇದೆ. ರಾಷ್ಟ್ರದ ಒಳಿತಿಗಾಗಿ ನಡೆಯುವ ಪ್ರಜಾಪ್ರಭುತ್ವದ ಹಬ್ಬದಲ್ಲಿ ಪಾಲ್ಗೊಳ್ಳಲು ಖುಷಿಯಾಗುತ್ತಿದೆ. ಪ್ರತಿಯೊಬ್ಬ ಪ್ರಜ್ಞಾವಂತ ಮತದಾರನೂ ಈ ಹಬ್ಬದ ಸಂಭ್ರಮದಲ್ಲಿ ಪಾಲ್ಗೊಂಡು ತಮ್ಮ ಅಮೂಲ್ಯವಾದ ಮತವನ್ನು ಚಲಾಯಿಸಬೇಕೆಂದು ನನ್ನ ಕೋರಿಕೆ

ಅದಿತಿ ಎನ್. ಆತ್ರೇಯ, ವಿದ್ಯಾರ್ಥಿನಿ, ಬೆಂಗಳೂರು

ಪ್ರಜಾಪ್ರಭುತ್ವ ವ್ಯವಸ್ಥೆ ನನಗೆ ಕೊಟ್ಟಿರುವ ಮತದಾನದ ಹಕ್ಕನ್ನು ಮೊದಲ ಸಲ ಚಲಾಯಿಸಲು ಕಾತರಳಾಗಿದ್ದೇನೆ. ಸೂಕ್ತ ಜನಪ್ರತಿನಿಧಿಯನ್ನು ಆಯ್ಕೆ ಮಾಡುವ ಅವಕಾಶ ಇದು. ಸಮರ್ಥ ಅಭ್ಯರ್ಥಿಯ ಪರ ಮತ ಚಲಾಯಿಸುವೆ. ಮತದಾನ ದುರ್ಬಳಕೆ ಆಗದಂತೆ ಎಚ್ಚರ ವಹಿಸುವೆ. ನಮ್ಮ ಕೈಯಲ್ಲೇ ಇರುವ ಮತದಾನ ಮಾಡುವ ಸಂಭ್ರಮ ಮತ್ತು ಅಭ್ಯರ್ಥಿಯನ್ನು ಆಯ್ಕೆ ಮಾಡುವ ಅವಕಾಶ ನಾವ್ಯಾಕೆ ಬಿಟ್ಟುಕೊಡಬೇಕು

ಅಕ್ಷತಾ ಶಾನಭಾಗ, ಕುಮಟಾ, ಉತ್ತರ ಕನ್ನಡ ಜಿಲ್ಲೆ

ಮತ ಆಮಿಷ: ಆಯೋಗದ ವಶ

₹86.66 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹80.60 ಕೋಟಿ
ಮದ್ಯ	₹178.01 ಕೋಟಿ (1.47 ಕೋಟಿ ಲೀ)
ಮಾದಕವಸ್ತು	₹11.35 ಕೋಟಿ (546.66 ಕೆ.ಜಿ.)
ಚಿನ್ನ	₹74.35 ಕೋಟಿ (132.54 ಕೆ.ಜಿ.)
ಬೆಳ್ಳಿ	₹1.18 ಕೋಟಿ (302.37ಕೆ.ಜಿ.)

ಎಂಥಾ ಮಾತು!

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ದೇಶದ ಜನರ ಪಿತ್ರಾರ್ಜಿತ ಆಸ್ತಿಯ ಮರುಹಂಚಿಕೆ ಮಾಡುತ್ತಾರೆ ಎಂದು ಪ್ರಧಾನಿ ಮೋದಿ ಅಲವತ್ತುಕೊಳ್ಳುತ್ತಿರುವ ಹಿಂದಿನ ಉದ್ದೇಶ ಜನರ ಮೇಲಿನ ಕಾಳಜಿಯಲ್ಲ. ತನ್ನ ಉದ್ಯಮ ಮಿತ್ರರ ಆಸ್ತಿಯ ದಿಢೀರ್ ಏರಿಕೆಯ ಹಿಂದಿನ ಸತ್ಯ ಎಲ್ಲಿ ಹೊರಗೆ ಬರುವುದೋ ಎಂಬ ಭೀತಿಯ ಕಾರಣಕ್ಕೆ. ಮೋದಿ ಅಧಿಕಾರಕ್ಕೆ ಬಂದ ಬಳಿಕ, ಅಂಬಾನಿ ಮತ್ತು ಅದಾನಿ ಆಸ್ತಿ 350ರಿಂದ 400 ಪಟ್ಟು ಹೆಚ್ಚಳವಾಗಿದೆ. ಮೋದಿ ಅವರು ಮತದಾರರನ್ನು ಕೈಬಿಟ್ಟರೂ ಉದ್ಯಮಿಗಳನ್ನು ಕೈಬಿಡುವವರಲ್ಲ. ಸೋಲಿನ ಭೀತಿಯಲ್ಲಿರುವ ಮೋದಿ, ಬಿಜೆಪಿ ಸಾಧನೆಯ ಬಗ್ಗೆ ಉಸಿರನ್ನೇ ಎತ್ತದೇ, ಕಾಂಗ್ರೆಸ್ ಪ್ರಣಾಳಿಕೆಯ ಬಗ್ಗೆ ಮಾತನಾಡಲು ಶುರು ಮಾಡಿದ್ದಾರೆ

ಸಿದ್ದರಾಮಯ್ಯ, ಮುಖ್ಯಮಂತ್ರಿ



ಕಾಂಗ್ರೆಸ್‌ನವರು ಸುಳ್ಳು ಗ್ಯಾರಂಟಿ ಪತ್ರ ಹಿಡಿದುಕೊಂಡು ಬರುತ್ತಿದ್ದಾರೆ. ಅದಕ್ಕೆ ರಾಹುಲ್ ಗಾಂಧಿ, ಖರ್ಗೆ ಸಹಿ ಮಾಡಿದ್ದಾರೆ. ಇವರೇನು ರಿಸರ್ವ್ ಬ್ಯಾಂಕ್ ಗವರ್ನರಾ? ಪ್ರಧಾನ ಮಂತ್ರಿನಾ? ರಾಷ್ಟ್ರಪತಿನಾ? ಗ್ಯಾರಂಟಿ ಕಾರ್ಡ್‌ಗಳನ್ನು ಹಂಚಲು ಅದೇ ಊರಿನ ಕಾಂಗ್ರೆಸ್ ಕಾರ್ಯಕರ್ತರು ಕೂಡ ಬರುತ್ತಿಲ್ಲ. ಅವರು ಆರಿಸಿ ಬರುವುದಿಲ್ಲ ಎನ್ನುವ ಸತ್ಯ ಗೊತ್ತಿದೆ. ಹೀಗಾಗಿ ಬೇರೆ ಊರಿನ ಹೆಣ್ಣುಮಕ್ಕಳು ಬಂದು ಗ್ಯಾರಂಟಿ ಕಾರ್ಡ್ ಹಂಚಿಕೆ ಮಾಡುತ್ತಿದ್ದಾರೆ. ಕಾಂಗ್ರೆಸ್‌ನವರ ಮೋಸದ ಸುಳ್ಳು ಗ್ಯಾರಂಟಿಗಳಿಗೆ ಬಲಿಯಾಗಬೇಡಿ

ಬಸವರಾಜ ಬೊಮ್ಮಾಯಿ, ಹಾವೇರಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ

ಮೋದಿ ಪ್ರಚಾರ ದಿನ ಬದಲು

ಪ್ರಜಾವಾಣಿ ವಾರ್ತೆ

ನರೇಂದ್ರ ಮೋದಿ

ಹೊಸಪೇಟೆ (ವಿಜಯನಗರ): ಪ್ರಧಾನಿ ನರೇಂದ್ರ ಮೋದಿ ಅವರು ಲೋಕಸಭಾ ಚುನಾವಣೆಯ ಪ್ರಚಾರ ನಿಮಿತ್ತ ಇದೇ 28ರ ಭಾನುವಾರ ಸಂಜೆ ನಗರಕ್ಕೆ ಬರಲಿದ್ದಾರೆ.

'ಏಪ್ರಿಲ್ 29ರಂದು ಪ್ರಧಾನಿ ಇಲ್ಲಿಗೆ ಬರಲಿದ್ದಾರೆ' ಎಂದು ಬುಧವಾರ ತಿಳಿಸಲಾಗಿತ್ತು. ಆದರೆ ಗುರುವಾರ ಅವರ ಕಾರ್ಯಕ್ರಮದಲ್ಲಿ ಬದಲಾವಣೆ ಆಗಿದ್ದು, ರಾಜ್ಯದ ಇತರ ನಾಲ್ಕು ಕಡೆಗಳಲ್ಲಿ ಪ್ರಚಾರ ಕಾರ್ಯಕ್ರಮ ಮುಗಿಸಿಕೊಂಡು ಕೊನೆಯದಾಗಿ ಸಂಜೆ 5 ಗಂಟೆಗೆ ಇಲ್ಲಿನ ಪುನೀತ್ ರಾಜ್‌ಕುಮಾರ್ ಜಿಲ್ಲಾ ಕ್ರೀಡಾಂಗಣದಲ್ಲಿ ಸಾರ್ವಜನಿಕ ಸಭೆ ನಡೆಸುವುದು ಖಚಿತವಾಗಿದೆ. ಕೊಪ್ಪಳ, ರಾಯಚೂರು ಮತ್ತು ಬಳ್ಳಾರಿ ಕ್ಷೇತ್ರಗಳ ಅಭ್ಯರ್ಥಿಗಳ ಪರವಾಗಿ ಪ್ರಧಾನಿ ಪ್ರಚಾರ ನಡೆಸಲಿದ್ದಾರೆ' ಎಂದು ಬಿಜೆಪಿ ಮೂಲಗಳು ತಿಳಿಸಿವೆ.

(ಬಾಗಲಕೋಟೆ ವರದಿ): ಪ್ರಧಾನಿ ಅವರು ಏ.29ರಂದು ಬೆಳಿಗ್ಗೆ 10ಕ್ಕೆ ಬಾಗಲಕೋಟೆಯಲ್ಲಿ ಬಾಗಲಕೋಟೆ ಹಾಗೂ ವಿಜಯಪುರ ಲೋಕಸಭಾ ಕ್ಷೇತ್ರಗಳ ಅಭ್ಯರ್ಥಿಗಳ ಪರವಾಗಿ ಪ್ರಚಾರ ಮಾಡಲಿದ್ದಾರೆ. ಈ ಮೊದಲು ಏ.28ಕ್ಕೆ ಬರಲು ನಿರ್ಧರಿಸಿದ್ದ ದಿನಾಂಕದಲ್ಲಿ ಬದಲಾವಣೆಯಾಗಿದ್ದು, ಏ.29ರಂದು ಬರಲಿದ್ದಾರೆ.

ನವನಗರದ ಎರಡನೇ ಯೂನಿಟ್‌ನ ತೋಟಗಾರಿಕೆ ವಿಶ್ವವಿದ್ಯಾಲಯ ಬಳಿ ಇರುವ ಸೆಕ್ಟರ್ ಸಂಖ್ಯೆ 110ರಲ್ಲಿ ಬಿಜೆಪಿ ಪ್ರಚಾರ ಸಮಾವೇಶದಲ್ಲಿ ಭಾಗವಹಿಸುವರು' ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಶಾಂತಗೌಡ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಇಂಡಿಯಾ' ಒಕ್ಕೂಟದ ಪ್ರಧಾನಿ ಅಭ್ಯರ್ಥಿ ರಾಹುಲ್ ಆಗಲಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ರಾಹುಲ್ ಗಾಂಧಿ ಅವರೇ ಮುಂದಿನ ಪ್ರಧಾನಿ ಆಗಬೇಕು ಎಂಬ ನಿರೀಕ್ಷೆ ನಮಗಿದೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಹೇಳಿದರು.

ರಣದೀಪಸಿಂಗ್ ಸುರ್ಜೆವಾಲಾ

ನಗರದಲ್ಲಿ ಗುರುವಾರ ಚೊಂಬು ಹಿಡಿದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇಂಡಿ' ಒಕ್ಕೂಟದ ಪ್ರಧಾನಿ ಅಭ್ಯರ್ಥಿ ಯಾರು' ಎಂಬ ಪ್ರಶ್ನೆಗೆ ಹೀಗೆ ಪ್ರತಿಕ್ರಿಯಿಸಿದರು.

ಪ್ರಧಾನಿ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ಕನ್ನಡಿಗರಿಗೆ ಅನ್ಯಾಯ ಮಾಡಿದ ಮೋದಿ ಚುನಾವಣಾ ಪ್ರವಾಸಕ್ಕೆ ಬರುವ ಅರ್ಹತೆ ಹೊಂದಿಲ್ಲ. ಆರೂವರೆ ಕೋಟಿ ಕನ್ನಡಿಗರ ಮೇಲೆ ಸೇಡು ತೀರಿಸಿಕೊಳ್ಳುತ್ತಿರುವ ಮೋದಿ ಮತ್ತು ಅಮಿತ್ ಶಾ ಅವರನ್ನು ರಾಜ್ಯದೊಳಗೆ ಬಿಡಬಾರದು' ಎಂದು ಹೇಳಿದರು. ❖

ಮೊದಲ ಹಂತದ ಕಣ ಕೌತುಕ

ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದ ಮೊದಲ ಹಂತದ ಮತದಾನಕ್ಕೆ ಅಖಾಡ ಸಿದ್ಧವಾಗಿದ್ದು, ಮೂರು ರಾಜಕೀಯ ಪಕ್ಷಗಳ ನಾಯಕರಿಗೆ ತಮ್ಮ ನೆಲೆ–ಬೆಲೆ ಏನೆಂದು ಗೊತ್ತುಪಡಿಸಿಕೊಳ್ಳುವ ಅಗ್ನಿಪರೀಕ್ಷೆಯೂ ಇದಾಗಿದೆ. 28 ಕ್ಷೇತ್ರಗಳ ಪೈಕಿ ಮೊದಲ ಹಂತದಲ್ಲಿ ನಡೆಯುತ್ತಿರುವ 14 ಕ್ಷೇತ್ರಗಳ ಮತದಾನ ಪೈಕಿ 2019ರಲ್ಲಿ ನಡೆದ ಚುನಾವಣೆಯಲ್ಲಿ ತಲಾ ಒಂದು ಸ್ಥಾನಗಳನ್ನಷ್ಟೇ ಕಾಂಗ್ರೆಸ್, ಜೆಡಿಎಸ್ ಗೆದ್ದುಕೊಂಡಿದ್ದವು. ಒಂದು ಕ್ಷೇತ್ರ ಪಕ್ಷೇತರರ ಪಾಲಾಗಿತ್ತು. ಉಳಿದ 11ರಲ್ಲಿ ಬಿಜೆಪಿಯೇ ಗೆದ್ದಿತ್ತು. ಈ ಚುನಾವಣೆ ಯಾರಿಗೆ ಸವಾಲು–ಯಾರಿಗೆಲ್ಲ ಪ್ರತಿಷ್ಠೆ ಎನ್ನುವ ಮಾಹಿತಿ ಇಲ್ಲಿಯ ಹೂರಣವಾಗಿದೆ...

ಮಂಡ್ಯ

ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಎಚ್.ಡಿ. ಕುಮಾರಸ್ವಾಮಿ ಅವರ ಸ್ಪರ್ಧೆಯಿಂದ ಮಂಡ್ಯ ಜಿದ್ದಾಜಿದ್ದಿಯ ಕಣವಾಗಿ ಮಾರ್ಪಟ್ಟಿದೆ. ಅವರು ಜೆಡಿಎಸ್ ರಾಜ್ಯ ಘಟಕದ ಹಾಲಿ ಅಧ್ಯಕ್ಷ, ಶಾಸಕಾಂಗ ಪಕ್ಷದ ನಾಯಕ ಕೂಡ. 2019ರ ಚುನಾವಣೆಯಲ್ಲಿ ಮಗ ನಿಖಿಲ್ ಕುಮಾರಸ್ವಾಮಿ ಸೋತ ಕ್ಷೇತ್ರದಲ್ಲಿ ಈ ಬಾರಿ ಅಪ್ಪನೇ ಅಭ್ಯರ್ಥಿ. ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಉದ್ಯಮಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಪ್ರಬಲ ಎದುರಾಳಿಯಾಗಿದ್ದಾರೆ. ಮಂಡ್ಯ ಜಿಲ್ಲೆಯ ಮೇಲೆ ಜೆಡಿಎಸ್ ಬಲವಾದ ಹಿಡಿತ ಹೊಂದಿತ್ತು. 2023ರ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಅಲ್ಲಿ ತೀವ್ರ ಹಿನ್ನಡೆ ಅನುಭವಿಸಿದೆ. ಈಗ ಬಿಜೆಪಿ ಜತೆಗಿನ ಮೈತ್ರಿಯ ಬಲದಲ್ಲಿ ಗೆದ್ದು ಮಂಡ್ಯದಲ್ಲಿ ಮತ್ತೆ ಹಿಡಿತ ಸಾಧಿಸುವ ಪ್ರಯತ್ನದಲ್ಲಿದ್ದಾರೆ. ಸ್ಟಾರ್ ಚಂದ್ರು ಅವರನ್ನು ಗೆಲ್ಲಿಸಿ ಮಂಡ್ಯ ಜಿಲ್ಲೆಯ ಮೇಲಿನ ಹಿಡಿತವನ್ನು ಮತ್ತಷ್ಟು ಗಟ್ಟಿಗೊಳಿಸುವ ಉಮೇದಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇದ್ದಾರೆ.

'ತಾರಾ ಪ್ರಚಾರಕ'ರ ಓಡಾಟ

ರಾಹುಲ್ ಗಾಂಧಿ	ಮಂಡ್ಯ–ಕೋಲಾರ
ಪ್ರಿಯಾಂಕಾ ಗಾಂಧಿ ವಾದ್ರಾ	ಚಿತ್ರದುರ್ಗ–ಬೆಂಗಳೂರು
ಮಲ್ಲಿಕಾರ್ಜುನ ಖರ್ಗೆ	ಕೋಲಾರ–ಚಿಕ್ಕಬಳ್ಳಾಪುರ–ಬೆಂಗಳೂರು
ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್	ಎಲ್ಲ 14 ಕ್ಷೇತ್ರಗಳಲ್ಲೂ ಪ್ರಚಾರ
ಜೆಡಿಎಸ್	
● ಎಚ್.ಡಿ. ದೇವೇಗೌಡ	ಹಾಸನ, ಬೆಂಗಳೂರು, ಮೈಸೂರು, ಮಂಡ್ಯ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು.
● ಎಚ್.ಡಿ.ಕುಮಾರಸ್ವಾಮಿ	ಮಂಡ್ಯ, ಬೆಂಗಳೂರು, ಮೈಸೂರು, ಹಾಸನ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು
ಬಿಜೆಪಿ	
ಪ್ರಧಾನಿ ನರೇಂದ್ರ ಮೋದಿ	ಮೈಸೂರು, ಮಂಗಳೂರು, ಬೆಂಗಳೂರು, ಚಿಕ್ಕಬಳ್ಳಾಪುರ
ಅಮಿತ್ ಶಾ	ಬೆಂಗಳೂರು, ಚನ್ನಪಟ್ಟಣ
ಪ್ರಮೋದ್ ಸಾವಂತ್	ಮಂಡ್ಯ
ಅಣ್ಣಾಮಲೈ	ಬೆಂಗಳೂರು, ಮಂಗಳೂರು

ಬೆಂಗಳೂರು ಗ್ರಾಮಾಂತರ

ಮೂರು ಬಾರಿ ಈ ಕ್ಷೇತ್ರದಿಂದ ಆಯ್ಕೆಯಾಗಿರುವ ಕಾಂಗ್ರೆಸ್‌ನ ಡಿ.ಕೆ. ಸುರೇಶ್ ಅವರಿಗೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಅಳಿಯ, ಹೃದ್ರೋಗ ತಜ್ಞ ಡಾ.ಸಿ.ಎನ್. ಮಂಜುನಾಥ್ ಪ್ರತಿಸ್ಪರ್ಧಿ. ಒಂದು ಕಾಲದಲ್ಲಿ ದೇವೇಗೌಡರ ಕುಟುಂಬದ ಭದ್ರಕೋಟೆಯಾಗಿದ್ದ ಬೆಂಗಳೂರು ಗ್ರಾಮಾಂತರ ಈಗ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕುಟುಂಬದ ಹಿಡಿತದಲ್ಲಿದೆ. ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಅಳಿಯನ ಮೂಲಕ ಮತ್ತೆ ಹಿಡಿತ ಸಾಧಿಸಲು ಗೌಡರ ಕುಟುಂಬ ಪ್ರಯತ್ನಿಸುತ್ತಿದೆ. ತನ್ನ ತಮ್ಮನನ್ನು ಗೆಲ್ಲಿಸಿಕೊಂಡು ಕ್ಷೇತ್ರ ಉಳಿಸಿಕೊಳ್ಳುವುದು ಶಿವಕುಮಾರ್‌ಗೆ ಪ್ರತಿಷ್ಠೆಯಾಗಿದ್ದರೆ, ಕ್ಷೇತ್ರವನ್ನು ಕಿತ್ತುಕೊಂಡು ಬಿಜೆಪಿಗೆ ಕೊಡುವ ಮೂಲಕ ಜೆಡಿಎಸ್‌ಗೆ ಇನ್ನೂ ಹಿಡಿತವಿದೆ ಎಂದು ತೋರಿಸುವುದು ಗೌಡರು ಮತ್ತು ಕುಮಾರಸ್ವಾಮಿ ಅವರಿಗೆ ಸವಾಲಾಗಿದೆ.

ಕೋಲಾರ

ಕಳೆದ ಬಾರಿ ತಾನು ಗೆದ್ದಿದ್ದ ಕೋಲಾರ (ಎಸ್‌ಸಿ) ಕ್ಷೇತ್ರವನ್ನೇ 'ಮೈತ್ರಿ'ಯ ಕಾರಣಕ್ಕಾಗಿ ಜೆಡಿಎಸ್‌ಗೆ ಬಿಜೆಪಿ ತ್ಯಾಗ ಮಾಡಿದೆ. ಹೀಗಾಗಿ, ಎಂ. ಮಲ್ಲೇಶ್ ಬಾಬು ಅವರಿಗೆ ಟಿಕೆಟ್ 'ಅದೃಷ್ಟ' ಒಲಿದಿದೆ. ಸಚಿವ ಕೆ.ಎಚ್. ಮುನಿಯಪ್ಪ ಮತ್ತು ಕೆ.ಆರ್. ರಮೇಶ್‌ಕುಮಾರ್ ಬಣದ ತಿಕ್ಕಾಟದ ಪರಿಣಾಮ ಅಚ್ಚರಿಯ ಅಭ್ಯರ್ಥಿಯಾದವರು ಕಾಂಗ್ರೆಸ್‌ನ ಕೆ.ವಿ ಗೌತಮ್. ಜೆಡಿಎಸ್ ಗೆದ್ದರೆ ತಮ್ಮ ಹಿಡಿತ ತಪ್ಪಬಹುದೆಂಬ ಆತಂಕ ಬಿಜೆಪಿಗರದ್ದು. ಏಳು ಬಾರಿ ಗೆದ್ದ ಕ್ಷೇತ್ರದಲ್ಲಿ ತನ್ನ ಮಾತು ನಡೆದಿಲ್ಲ ಎಂಬ ಮುನಿಯಪ್ಪ ಅವರ ಒಳ ಬೇಗುದಿ, ಬಣ ಹಟದ ಕಾರಣಕ್ಕೆ ಈ ಕ್ಷೇತ್ರ ಗಮನಸೆಳೆದಿದೆ. ರಮೇಶ್ ಕುಮಾರ್, ಸಚಿವ ಎಂ.ಸಿ. ಸುಧಾಕರ್, ಶಾಸಕ ಕೊತ್ತೂರು ಮಂಜುನಾಥ್, ನಜೀರ್ ಅಹಮದ್ ಬಣ ಹಾಗೂ ಮುನಿಯಪ್ಪ ಬಣದ ಮಧ್ಯೆ ಪೈಪೋಟಿ ಇದ್ದು, ಯಾರ ಬಣ ಮೇಲುಗೈ ಸಾಧಿಸಲಿದೆ ಎಂಬ ಕಾರಣಕ್ಕೆ ಕ್ಷೇತ್ರದತ್ತ ಎಲ್ಲರ ಚಿತ್ತ ಇದೆ.

ಉಡುಪಿ–ಚಿಕ್ಕಮಗಳೂರು

ಸತತ ಎರಡು ಬಾರಿ ಇಲ್ಲಿ ಗೆದ್ದು, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ ವಿರುದ್ಧ ಬಿಜೆಪಿಗರೇ 'ಗೋ ಬ್ಯಾಕ್' ಹೇಳಿದ್ದಾರೆ. ಶೋಭಾ ವಿರುದ್ಧ ಆಡಳಿತ ವಿರೋಧಿ ಅಲೆ ಇದ್ದ ಕಾರಣಕ್ಕೆ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿಗೆ ಬಿಜೆಪಿ ಟಿಕೆಟ್ ಒಲಿದಿದೆ. ಬಿಜೆಪಿಯ ಈ ದಾಳಕ್ಕೆ ಪ್ರತಿ ದಾಳ ಪ್ರಯೋಗಿಸಿರುವ ಕಾಂಗ್ರೆಸ್, ಬಿಜೆಪಿಯಲ್ಲಿದ್ದ ಕೆ. ಜಯಪ್ರಕಾಶ್ ಹೆಗ್ಡೆ ಅವರನ್ನು ಸೆಳೆದು ಟಿಕೆಟ್ ನೀಡಿದೆ. ಉಪಚುನಾವಣೆಯಲ್ಲಿ ಒಮ್ಮೆ ಸಂಸದರಾಗಿ ಇದೇ ಕ್ಷೇತ್ರದಿಂದ ಆಯ್ಕೆಯಾದವರು ಹೆಗ್ಡೆ. ಹಿಂದುತ್ವ ಮತಗಳನ್ನೇ ನೆಚ್ಚಿಕೊಂಡ ಕೋಟ ಅವರಿಗೆ ಮತದಾರರ ಮನ ಗೆಲ್ಲುವ ಉಮೇದು. ಕಾಂಗ್ರೆಸ್‌ನ ಸಾಂಪ್ರದಾಯಿಕ ಮತಗಳ ಜತೆಗೆ, ಬಂಟ ಮತ್ತು ಒಕ್ಕಲಿಗ ಮತಗಳನ್ನು ಸೆಳೆದು ಆಯ್ಕೆಯಾಗುವ ಸವಾಲು ಹೆಗ್ಡೆಯವರದ್ದು.

ಬೆಂಗಳೂರು ಉತ್ತರ

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸ್ಪರ್ಧಿಸಿರುವ ಕಾರಣಕ್ಕೆ ಕ್ಷೇತ್ರ ಗಮನ ಸೆಳೆದಿದೆ. ಈಗ ಪ್ರತಿನಿಧಿಸುತ್ತಿರುವ ಉಡುಪಿ– ಚಿಕ್ಕಮಗಳೂರು ಕ್ಷೇತ್ರದಲ್ಲಿ 'ಗೋ–ಬ್ಯಾಕ್' ಎದುರಿಸಿದ ಶೋಭಾ, ಇಲ್ಲಿಗೆ ವಲಸೆ ಬಂದಿದ್ದಾರೆ. ಇಲ್ಲಿಯೂ 'ಗೋ–ಬ್ಯಾಕ್' ಕೂಗೆದ್ದಿತ್ತು. ಈ ಕ್ಷೇತ್ರದಲ್ಲಿ ಎರಡು ಬಾರಿ ವಿಜೇತರಾಗಿದ್ದ ಡಿ.ವಿ. ಸದಾನಂದಗೌಡ, ಎರಡೂ ಬಾರಿಯೂ ಕೇಂದ್ರ ಸಚಿವರಾಗಿದ್ದರು. ಶೋಭಾಗೂ ಕ್ಷೇತ್ರ ಹೊಸದಲ್ಲ. ಇದೇ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಯಶವಂತಪುರ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಯಡಿಯೂರಪ್ಪ ಸಂಪುಟದಲ್ಲಿ ಸಚಿವರಾಗಿದ್ದವರು. ಬಿಜೆಪಿ ನಿರಂತರ ಗೆಲುವು ಈ ಬಾರಿಯೂ ವರವಾಗಲಿದೆ ಎಂಬ ನಿರೀಕ್ಷೆ ಶೋಭಾ ಅವರದ್ದು. ಇವರಿಗೆ ಕಾಂಗ್ರೆಸ್‌ನಿಂದ ಪ್ರೊ.ಎಂ.ವಿ. ರಾಜೀವ್‌ಗೌಡ ಅವರು ಪೈಪೋಟಿ ನೀಡುತ್ತಿದ್ದಾರೆ. ಯಶವಂತಪುರ ಕ್ಷೇತ್ರದ ಬಿಜೆಪಿ ಶಾಸಕ ಎಸ್.ಟಿ. ಸೋಮಶೇಖರ್, ಕಾಂಗ್ರೆಸ್ ಪರ ದುಡಿಯುತ್ತಿದ್ದಾರೆ. ಸ್ಥಳೀಯ ಮೂಲದ ಒಕ್ಕಲಿಗ ಎಂಬ 'ಕಾರ್ಡ್' ಬಿಟ್ಟಿರುವ ರಾಜೀವ್‌ಗೌಡರ ಹಿಂದೆ ಕಾಂಗ್ರೆಸ್ ದಂಡೇ ನಿಂತಿದೆ.

ಬೆಂಗಳೂರು ದಕ್ಷಿಣ



ಸಂಸದ ಹಾಗೂ ಬಿಜೆಪಿ ರಾಷ್ಟ್ರೀಯ ಯುವ ಮೋರ್ಚಾ ಅಧ್ಯಕ್ಷ ತೇಜಸ್ವಿ ಸೂರ್ಯ ಅವರು ಎರಡನೇ ಬಾರಿ ಆಯ್ಕೆ ಬಯಸಿ ಕಣದಲ್ಲಿದ್ದಾರೆ. ತೇಜಸ್ವಿ ಸೂರ್ಯ ವಿವಾದಾತ್ಮಕ ಹೇಳಿಕೆಗಳನ್ನು ನೀಡುವ ಮೂಲಕ ಸುದ್ದಿಯಲ್ಲಿದ್ದವರು. ಬಿಜೆಪಿ ಭದ್ರಕೋಟೆ ಉಳಿಸಿಕೊಂಡು, ಪಕ್ಷದ ಮಾನ ಕಾಪಾಡುವುದು ತೇಜಸ್ವಿಗೆ ಇರುವ ಸವಾಲು. ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಮಾಜಿ ಶಾಸಕಿ ಸೌಮ್ಯಾ ರೆಡ್ಡಿ ಪ್ರಬಲ ಪೈಪೋಟಿ ಒಡ್ಡಿದ್ದಾರೆ. ಇವರಿಗೆ ತಂದೆ ರಾಮಲಿಂಗಾರೆಡ್ಡಿಯೇ ಪ್ರಮುಖ ಆಸರೆ. ಮಗಳ ಗೆಲುವಿಗಾಗಿ ರಾಮಲಿಂಗಾರೆಡ್ಡಿ ಶ್ರಮ ಹಾಕುತ್ತಿದ್ದಾರೆ. ತಮ್ಮದೇ ಆದ ರಾಜಕೀಯ ಪಟ್ಟುಗಳನ್ನು ಬಳಸುತ್ತಿದ್ದು, ನಿರ್ಣಾಯಕವಾಗಿರುವ ರೆಡ್ಡಿ ಹಾಗೂ ಒಕ್ಕಲಿಗ ಸಮುದಾಯಗಳ ಮತಗಳ ಮೇಲೆ ತಮ್ಮ ಗಮನ ಕೇಂದ್ರೀಕರಿಸಿದ್ದಾರೆ. ಸಚಿವರಾಗಿರುವ ಕಾರಣಕ್ಕೆ, ಮಗಳನ್ನು ಗೆಲ್ಲಿಸಿಕೊಳ್ಳುವ ಅನಿವಾರ್ಯವೂ ಅವರಿಗೆ ಎದುರಾಗಿದೆ.

ಮೈಸೂರು



ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸ್ಪರ್ಧೆಯಿಂದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ಗಮನ ಸೆಳೆದಿದೆ. ಹಾಲಿ ಸಂಸದ ಪ್ರತಾಪ ಸಿಂಹ ಕ್ಷೇತ್ರವನ್ನು ಎರಡು ಬಾರಿ ಪ್ರತಿನಿಧಿಸಿದ್ದರೂ, ಅವರಿಗೆ ಬಿಜೆಪಿ ಟಿಕೆಟ್ ತಪ್ಪಿಸಿ ಒಡೆಯರ್ ಅವರಿಗೆ ಮಣೆ ಹಾಕಿದೆ. ರಾಜವಂಶದ ಬಗೆಗಿನ ಜನರ ಭಾವನೆಯನ್ನು ಮತವಾಗಿ ಪರಿವರ್ತಿಸಲು ಅವರನ್ನು ಕಣಕ್ಕೆ ಇಳಿಸಲಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಅವರ ತಂದೆ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಹಿಂದೆ ನಾಲ್ಕು ಬಾರಿ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಕಾಂಗ್ರೆಸ್ ತನ್ನ ಸಾಮಾನ್ಯ ಕಾರ್ಯಕರ್ತ ಎಂ. ಲಕ್ಷ್ಮಣ್ ಅವರನ್ನು ಒಡೆಯರ್ ವಿರುದ್ಧ ಕಣಕ್ಕೆ ಇಳಿಸಿದೆ. ಇಲ್ಲಿ ಲಕ್ಷ್ಮಣ ಉತ್ಸವಮೂರ್ತಿಯಾದರೆ, ಅಸಲಿಗೆ ಈ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ಸಾಮರ್ಥ್ಯವನ್ನು ಪಣಕ್ಕಿಟ್ಟಿದ್ದಾರೆ. ಮುಖ್ಯಮಂತ್ರಿಯಾಗಿ ಮುಂದುವರಿಯಬೇಕಾದರೆ, ಕ್ಷೇತ್ರ ಗೆಲ್ಲಿಸಿಕೊಡಿ ಎಂದು ಭಾವನಾತ್ಮಕ ಅಸ್ತ್ರವನ್ನೂ ಪ್ರಯೋಗಿಸಿದ್ದಾರೆ. ಮೋದಿ ಮತ್ತು ಸಿದ್ದರಾಮಯ್ಯನವರ ಜನಪ್ರಿಯತೆಗಳೇ ಚುನಾವಣೆ ಫಲಿತಾಂಶವನ್ನು ನಿರ್ಣಯಿಸುವ ಅಂಶಗಳಾಗಿವೆ.

ಹಾಸನ

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರು ತಾವು ಪ್ರತಿನಿಧಿಸುತ್ತಿದ್ದ ಹಾಸನ ಕ್ಷೇತ್ರವನ್ನು 2019ರ ಚುನಾವಣೆಯಲ್ಲಿ ಮೊಮ್ಮಗ ಪ್ರಜ್ವಲ್‌ಗೆ ಬಿಟ್ಟುಕೊಟ್ಟಿದ್ದರು. ಮೊದಲ ಪ್ರಯತ್ನದಲ್ಲೇ ಸಂಸತ್ ಪ್ರವೇಶಿಸಿದ್ದ ಪ್ರಜ್ವಲ್ ಈ ಬಾರಿಯೂ ಜೆಡಿಎಸ್ ಅಭ್ಯರ್ಥಿಯಾಗಿ ಮತ್ತೆ ಕಣಕ್ಕೆ ಇಳಿದಿದ್ದಾರೆ. ಕಳೆದ ಬಾರಿ ಅವರ ವಿರುದ್ಧ ಬಿಜೆಪಿಯಿಂದ ಸ್ಪರ್ಧಿಸಿದ್ದ ಎ.ಮಂಜು, ಬಳಿಕ ಜೆಡಿಎಸ್ ಸೇರಿ ಶಾಸಕರಾಗಿದ್ದಾರೆ. ಗೌಡರು ಮತ್ತು ಅವರ ಮಗ, ಶಾಸಕ ಎಚ್.ಡಿ. ರೇವಣ್ಣ ಅವರಿಗೆ ಕ್ಷೇತ್ರ ಉಳಿಸಿಕೊಳ್ಳುವುದು ಪ್ರತಿಷ್ಠೆಯಾಗಿದೆ. ವಿಧಾನಸಭೆ ಚುನಾವಣೆಯಲ್ಲಿ ಕಡಿಮೆ ಅಂತರದಿಂದ ಎಚ್.ಡಿ. ರೇವಣ್ಣ ವಿರುದ್ಧ ಹೊಳೆನರಸೀಪುರದಲ್ಲಿ ಸೋತಿದ್ದ ಶ್ರೇಯಸ್ ಪಟೇಲ್ ಅವರನ್ನು ಕಾಂಗ್ರೆಸ್ ಕಣಕ್ಕೆ ಇಳಿಸಿದೆ. ಕ್ಷೇತ್ರವನ್ನು ಜೆಡಿಎಸ್‌ನಿಂದ ಕಿತ್ತುಕೊಳ್ಳುವುದು ಸಿದ್ದರಾಮಯ್ಯ ಹಾಗೂ ಒಕ್ಕಲಿಗ ನಾಯಕ ಎಂದು ಬಿಂಬಿಸಿಕೊಳ್ಳುತ್ತಿರುವ ಡಿ.ಕೆ. ಶಿವಕುಮಾರ್ ಅವರಿಗೆ ಸವಾಲು. ಕ್ಷೇತ್ರ ಬಿಟ್ಟುಕೊಡುವುದರ ವಿರುದ್ಧ ಇದ್ದ ಮಾಜಿ ಶಾಸಕ ಬಿಜೆಪಿ ಪ್ರೀತಂ ಗೌಡ, ರೊಚ್ಚಿಗೆದ್ದಿದ್ದಾರೆ. ಮೇಲ್ನೋಟಕ್ಕೆ ಮೈತ್ರಿ ಇದ್ದರೂ ಗೌಡರು ಮತ್ತು ಕಾಂಗ್ರೆಸ್ ಮಧ್ಯೆ ಪೈಪೋಟಿ. ❖

ಗಣ್ಯರಿಗೆಲ್ಲ ಗೆಲುವು ಏಕೆ ಮುಖ್ಯ?

ಸಿದ್ದರಾಮಯ್ಯ

ಆಡಳಿತ ಸೂತ್ರ ಹಿಡಿದ 10 ತಿಂಗಳ ಒಳಗೆ ಎದುರಾಗಿರುವ ಲೋಕಸಭೆ ಚುನಾವಣೆಯಲ್ಲಿ 'ಕೈ' ಮತ್ತಷ್ಟು ಬಲಪಡಿಸಿಕೊಳ್ಳಬೇಕಾದ ತುರ್ತು ಅನಿವಾರ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗಿದೆ. ಮತದಾರನಿಂದ ಪಂಚ 'ಗ್ಯಾರಂಟಿ'ಗಳಿಗೆ 'ಮತ' ಪಡೆಯುವ ಜೊತೆಗೆ, ಕೇಂದ್ರದ ವಿರುದ್ಧ ಸಮರ ಸಾರುತ್ತಲೇ ಪ್ರಧಾನಿಗೆ ಸಡ್ಡು ಹೊಡೆದ ಕಾರ್ಯವೈಖರಿಯಿಂದ 'ಫಲ' ಪಡೆಯುವ, ಆ ಮೂಲಕ, ಬಿಜೆಪಿಯ ಭದ್ರಕೋಟೆಗಳಲ್ಲೂ ಬಿರುಕು ಮೂಡಿಸುವ ಸವಾಲಿದೆ. ಮುಖ್ಯವಾಗಿ, ತವರು ಕ್ಷೇತ್ರ ವರುಣವನ್ನು ಒಳಗೊಂಡ ಚಾಮರಾಜನಗರ ಮತ್ತು ಮೈಸೂರು– ಕೊಡಗು ಕ್ಷೇತ್ರವನ್ನು ಗೆಲ್ಲಿಸಿಕೊಂಡು ಬರುವ ಜವಾಬ್ದಾರಿ ಇದೆ.

ಎಚ್.ಡಿ. ದೇವೇಗೌಡ

ಜಾತ್ಯತೀತ ಪಕ್ಷಗಳ ಸಖ್ಯ ತೊರೆದು ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿರುವುದರಿಂದ ಗೆಲುವು ಅನಿವಾರ್ಯ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಒಕ್ಕಲಿಗ ಪ್ರಾಬಲ್ಯದ ಕ್ಷೇತ್ರಗಳ ಮೇಲಿನ ಹಿಡಿತವನ್ನು ಕಳೆದುಕೊಂಡಿದ್ದ ಜೆಡಿಎಸ್ 19 ಸ್ಥಾನಗಳನ್ನು ಮಾತ್ರ ಗೆದ್ದಿತ್ತು. ಹಾಸನ, ಮಂಡ್ಯ, ಕೋಲಾರದಲ್ಲಿ ಅಭ್ಯರ್ಥಿ ಗೆಲ್ಲಿಸಿ ಜೆಡಿಎಸ್‌ಗೆ ನೆಲೆ ಇದೆ ಎಂದು ತೋರಿಸಬೇಕಿದೆ. ಬೆಂಗಳೂರು ಗ್ರಾಮಾಂತರ, ತುಮಕೂರು, ಮೈಸೂರಿನಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸುವ ಸಂಕಟವೂ ಹೆಗಲೇರಿದೆ.

ಡಿ.ಕೆ. ಶಿವಕುಮಾರ್

'ಒಕ್ಕಲಿಗ ನಾಯಕ' ಸಮುದಾಯದ ನಾಯಕರಾಗುವ ಉಮೇದಿರುವ ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ಹಳೆ ಮೈಸೂರು ಭಾಗ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲೇಬೇಕಾದ ಒತ್ತಡವಿದೆ. ಬೆಂಗಳೂರು ಗ್ರಾಮಾಂತರದಲ್ಲಿ ಸಹೋದರ ಡಿ.ಕೆ. ಸುರೇಶ್ ಬೆನ್ನಿಗೆ ನಿಂತಿರುವ ಶಿವಕುಮಾರ್, ಎಚ್.ಡಿ. ಕುಮಾರಸ್ವಾಮಿ ಕಣದಲ್ಲಿರುವ ಮಂಡ್ಯವನ್ನು ಗೆದ್ದೇ ಗೆಲ್ಲುವ ಶಪಥ ತೊಟ್ಟಿದ್ದಾರೆ. ಇನ್ನು ಒಕ್ಕಲಿಗರ ಪ್ರಾಬಲ್ಯದ ಹಾಸನ, ಕೋಲಾರ, ಚಿಕ್ಕಬಳ್ಳಾಪುರದ ಜತೆಗೆ, ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿ ಮೂರು ಕ್ಷೇತ್ರಗಳನ್ನು ಗೆಲ್ಲಿಸುವುದು ಪ್ರತಿಷ್ಠೆಯಾಗಿದೆ.

ಎಚ್.ಡಿ. ಕುಮಾರಸ್ವಾಮಿ

ಎರಡು ಬಾರಿ ಮುಖ್ಯಮಂತ್ರಿ ಹುದ್ದೆಗೇರಿದ್ದರೂ, ಪಕ್ಷ ಶಾಸಕರನ್ನು ಹಿಡಿದಿಟ್ಟುಕೊಳ್ಳಲಾಗದ ಪರಿಸ್ಥಿತಿ ಇದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಪ್ರಾಬಲ್ಯದ ಕ್ಷೇತ್ರಗಳು ಬಹುತೇಕ ಕಾಂಗ್ರೆಸ್ ತೆಕ್ಕೆಗೆ ಜಾರಿವೆ. ಲೋಕಸಭಾ ಚುನಾವಣೆಯಲ್ಲಿ ಗೆದ್ದರಷ್ಟೇ ಮತ್ತೆ ಚಿಗುರಲು ಸಾಧ್ಯ. ತಾವು ಗೆಲ್ಲುವ ಜತೆಗೆ, ಉಳಿದ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವಿಗೆ ಹೆಗಲುಕೊಡಬೇಕಾದ ಒತ್ತಡ ಅವರ ಮೇಲಿದೆ.

ಡಾ.ಎಚ್.ಸಿ. ಮಹದೇವಪ್ಪ

ಚಾಮರಾಜನಗರ (ಎಸ್‌ಸಿ) ಕ್ಷೇತ್ರದಿಂದ 'ನೀವೇ ಅಖಾಡಕ್ಕಿಳಿಯಬೇಕು' ಎಂದು ವರಿಷ್ಠರು ಪಟ್ಟು ಹಿಡಿದರೂ, ಅದನ್ನು ಮೀರಿ ಮಗ ಸುನಿಲ್ ಬೋಸ್‌ಗೆ ಟಿಕೆಟ್ ಕೊಡಿಸುವಲ್ಲಿ ಯಶಸ್ವಿಯಾದವರು ಸಚಿವ ಎಚ್.ಸಿ. ಮಹದೇವಪ್ಪ. 'ಪುತ್ರನಿಗೆ ಟಿಕೆಟ್ ಕೊಟ್ಟರೆ ಗೆಲ್ಲಿಸಿಕೊಂಡು ಬರುವ ಜವಾಬ್ದಾರಿ ನನ್ನದು' ಎಂದು ಪಕ್ಷದ ನಾಯಕರಿಗೆ ವಾಗ್ದಾನ ನೀಡಿರುವ ಮಹದೇವಪ್ಪ, ಕ್ಷೇತ್ರದಲ್ಲಿ ಬೆವರು ಸುರಿಸುತ್ತಿದ್ದಾರೆ. ಪುತ್ರನನ್ನು ಗೆಲ್ಲಿಸಲೇಬೇಕಾದ ಪ್ರತಿಷ್ಠೆಯ ಜೊತೆಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆಗಿನ ವಿಶ್ವಾಸ ಉಳಿಸಿಕೊಳ್ಳಬೇಕು, ಸಚಿವ ಸ್ಥಾನವನ್ನು ಇನ್ನಷ್ಟು ಭದ್ರಪಡಿಸಿಕೊಳ್ಳಬೇಕು ಎಂಬ ಒತ್ತಡವೂ ಇದೆ.

ರಾಮಲಿಂಗಾ ರೆಡ್ಡಿ

ಹೈಕಮಾಂಡ್ ನಾಯಕರ ಒತ್ತಡಕ್ಕೆ ಮಣಿದು, ಒಲ್ಲದ ಮನಸ್ಸಿನಿಂದ ಮಗಳು ಸೌಮ್ಯಾ ರೆಡ್ಡಿ ಅವರನ್ನು ಬೆಂಗಳೂರು ದಕ್ಷಿಣಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಮಾಡಿರುವ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರಿಗೆ, ಪುತ್ರಿಯನ್ನು ದಡ ಸೇರಿಸುವ ಹೊಣೆಯಿದೆ.

ಬಿ.ಎಸ್. ಯಡಿಯೂರಪ್ಪ, ವಿಜಯೇಂದ್ರ



ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಹೀನಾಯವಾಗಿ ಸೋತ ಬಳಿಕ ಬಿ.ವೈ.ವಿಜಯೇಂದ್ರ ಅವರಿಗೆ ಅಧ್ಯಕ್ಷ ಪಟ್ಟ ಕಟ್ಟಲಾಗಿದೆ. ಈಗ ಬಿಜೆಪಿ ಪ್ರತಿನಿಧಿಸುತ್ತಿರುವ 25 ಕ್ಷೇತ್ರಗಳಲ್ಲೂ ಗೆಲ್ಲಬೇಕೆಂಬ ಗುರಿಯನ್ನು ಪಕ್ಷದ ವರಿಷ್ಠರು ನೀಡಿದ್ದಾರೆ. ಮೊದಲ ಹಂತದಲ್ಲಿ 10ಕ್ಕಿಂತ ಹೆಚ್ಚು ಸ್ಥಾನ ಗೆಲ್ಲಿಸಿಕೊಂಡರಷ್ಟೇ ಅಧ್ಯಕ್ಷಗಾದಿ ಉಳಿದೀತು ಎಂಬ ಸ್ಥಿತಿ ಇದೆ. ಕಡಿಮೆ ಸ್ಥಾನ ಗೆದ್ದರೆ, ಅಧ್ಯಕ್ಷ ಸ್ಥಾನಕ್ಕೆ ಕುತ್ತಾಗಬಹುದು. ಇದು ಬಿ.ಎಸ್. ಯಡಿಯೂರಪ್ಪ ಅವರಿಗೂ ಈ ಚುನಾವಣೆ ಸವಾಲಾಗಿದೆ. ರಾಜ್ಯದಲ್ಲಿ ಗೆಲುವಿನ ಹೊಣೆಯನ್ನು ವಹಿಸಿಕೊಂಡಿರುವ ಯಡಿಯೂರಪ್ಪ, ತಮ್ಮ ಪಕ್ಷದ ಅಭ್ಯರ್ಥಿಗಳಷ್ಟೇ ಅಲ್ಲದೇ, ಜೆಡಿಎಸ್ ಅಭ್ಯರ್ಥಿಗಳನ್ನೂ ದಡ ಸೇರಿಸಬೇಕಾಗಿದೆ. ಯಶಸ್ವಿಯಾದರಷ್ಟೇ ತಮ್ಮ ಮಗನ ಸ್ಥಾನ ಭದ್ರವಾದೀತು.

ವಿ. ಸೋಮಣ್ಣ

ಕಳೆದ ವಿಧಾನಸಭಾ ಚುನಾವಣೆಯಲ್ಲಿ ವರುಣ ಮತ್ತು ಚಾಮರಾಜನಗರ ಕ್ಷೇತ್ರಗಳಲ್ಲಿ ಸೋಲು ಅನುಭವಿಸಿದ ಬೆನ್ನಲ್ಲೇ ತುಮಕೂರು ಲೋಕಸಭಾ ಕ್ಷೇತ್ರದ ಟಿಕೆಟ್‌ಗೆ ವರಿಷ್ಠರ ಬಳಿ ದುಂಬಾಲು ಬಿದ್ದಿದ್ದರು. ವರಿಷ್ಠರು ಟಿಕೆಟ್ ನೀಡಿದ್ದಾರೆ. ತುಮಕೂರು ಕ್ಷೇತ್ರವನ್ನು ಗೆದ್ದುಕೊಳ್ಳುವ ಸವಾಲು ಇದೆ. ಯಡಿಯೂರಪ್ಪ, ಎಚ್.ಡಿ.ದೇವೇಗೌಡ ಅವರು ಸೋಮಣ್ಣ ಪರ ಪ್ರಚಾರ ಮಾಡಿದ್ದಾರೆ. ಇಲ್ಲಿ ಗೆದ್ದರಷ್ಟೇ ಅವರಿಗೆ ರಾಜಕೀಯ ಪುನರ್‌ಜನ್ಮ ಸಿಗಲಿದೆ.

ಆರ್.ಅಶೋಕ

ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರಿಗೆ ಬೆಂಗಳೂರಿನ ಮೂರು ಕ್ಷೇತ್ರಗಳು, ಬೆಂಗಳೂರು ಗ್ರಾಮಾಂತರ ಕ್ಷೇತ್ರ ಮತ್ತು ಹಳೇ ಮೈಸೂರು ಪ್ರದೇಶದ ಕ್ಷೇತ್ರಗಳನ್ನು ಗೆದ್ದುಕೊಳ್ಳುವ ಸವಾಲು ಎದುರಾಗಿದೆ. ಈ ಮೂಲಕ ತಾವೊಬ್ಬ ಪ್ರಬಲ ಒಕ್ಕಲಿಗ ರಾಜಕೀಯ ನಾಯಕ ಎಂಬುದನ್ನು ಸಾಬೀತುಪಡಿಸಬೇಕಾಗಿದೆ. ಜೆಡಿಎಸ್ ಜತೆ ಮೈತ್ರಿ ಮಾಡಿಕೊಂಡಿರುವುದು ಅಶೋಕ ಅವರ ಪಾಲಿಗೆ ವರವಾಗಿದೆ. ಜೆಡಿಎಸ್ ಮತ್ತು ಬಿಜೆಪಿ ಜಂಟಿ ಪ್ರಯತ್ನದಿಂದ ಹೆಚ್ಚಿನ ಸ್ಥಾನಗಳನ್ನು ಜೋಳಿಗೆಗೆ ಹಾಕಿಕೊಳ್ಳಬಹುದು ಎಂಬುದು ಅವರ ನಿರೀಕ್ಷೆ. ❖

ಹೊರಗುಳಿದ ಸಂಸದರ ನಡೆ?

- **ಡಿ.ವಿ. ಸದಾನಂದಗೌಡ** ಟಿಕೆಟ್ ನಿರಾಕರಿಸಿದ್ದರಿಂದ ಮೊದಲು ಅಸಮಾಧಾನ, ನಂತರ ಪಕ್ಷದ ಚಟುವಟಿಕೆಗಳಲ್ಲಿ ಭಾಗಿ. ಆದರೂ ಕ್ಷೇತ್ರದಲ್ಲಿ ಹೆಚ್ಚು ಸುತ್ತಾಡಲಿಲ್ಲ

- **ಶ್ರೀನಿವಾಸ ಪ್ರಸಾದ್** ಸ್ವಯಂ ನಿವೃತ್ತಿ, ಕಾಂಗ್ರೆಸ್‌ನತ್ತ ಒಲವು



- **ಬಿ.ಎನ್. ಬಚ್ಚೇಗೌಡ** ನಿವೃತ್ತಿ ಮತ್ತು ಕಾಂಗ್ರೆಸ್‌ಗೆ ಬೆಂಬಲ

- **ಪ್ರತಾಪ ಸಿಂಹ** ಯದುವೀರ್ ಸ್ಪರ್ಧೆಗೆ ಮೊದಲು ವಿರೋಧ, ನಂತರ ಬೆಂಬಲ



- **ನಳಿನ್ ಕುಮಾರ್ ಕಟೀಲ್** ಟಿಕೆಟ್ ನಿರಾಕರಿಸಿದ ಬಳಿಕ ಸಭೆ, ಸಮಾರಂಭಗಳಿಗೆ ಸೀಮಿತ



- **ನಾರಾಯಣಸ್ವಾಮಿ** ನಿರಾಸಕ್ತಿ ಮತ್ತು ಕ್ಷೇತ್ರದ ಕಡೆಗೆ ಮುಖ ಹಾಕಿಲ್ಲ



- **ಸುಮಲತಾ ಅಂಬರೀಷ್** ಬಿಜೆಪಿಗೆ ಬೆಂಬಲ ಸೂಚಿಸಿದ್ದರೂ ಎಚ್.ಡಿ. ಕುಮಾರಸ್ವಾಮಿ ಪರ ಪ್ರಚಾರದಿಂದ ದೂರ



- **ಜಿ.ಎಸ್. ಬಸವರಾಜು** ವಯಸ್ಸಿನ ಕಾರಣದಿಂದ ನಿವೃತ್ತಿ. ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ ಪರ ಸಕ್ರಿಯ ಪ್ರಚಾರ.



- **ಎಸ್. ಮುನಿಸ್ವಾಮಿ** ಜೆಡಿಎಸ್‌ಗೆ ಕ್ಷೇತ್ರ ಹಂಚಿಕೆ, ಜೆಡಿಎಸ್ ಅಭ್ಯರ್ಥಿ ಎಂ. ಮಲ್ಲೇಶ್ ಬಾಬು ಪರ ಸಕ್ರಿಯ ಪ್ರಚಾರ

ರಾಹುಲ್ ಗಾಂಧಿ, ಹೇಮಾಮಾಲಿನಿ, ತರೂರ್, ರಾಜೀವ್ ಚಂದ್ರಶೇಖರ್ ಭವಿಷ್ಯ ಇಂದು ನಿರ್ಧಾರ

ಎರಡನೇ ಹಂತ: ಮತದಾನಕ್ಕೆ ವೇದಿಕೆ ಸಜ್ಜು

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯ ಎರಡನೇ ಹಂತದ ಮತದಾನ ಶುಕ್ರವಾರ ನಡೆಯಲಿದ್ದು, ದೇಶದ 88 ಕ್ಷೇತ್ರಗಳ ಜನರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. 1,200ಕ್ಕೂ ಹೆಚ್ಚು ಅಭ್ಯರ್ಥಿಗಳು ಜನಾದೇಶ ಬಯಸಿದ್ದಾರೆ.

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ, ಕೇಂದ್ರ ಸಚಿವರಾದ ಗಜೇಂದ್ರ ಸಿಂಗ್ ಶೆಖಾವತ್ ಮತ್ತು ರಾಜೀವ್ ಚಂದ್ರಶೇಖರ್ ಸೇರಿದಂತೆ ಹಲವು ಪ್ರಮುಖರ ಭವಿಷ್ಯ ನಿರ್ಧಾರವಾಗಲಿದೆ.

ಚುನಾವಣಾ ಆಯೋಗದ ವೇಳಾಪಟ್ಟಿಯಂತೆ ಎರಡನೇ ಹಂತದಲ್ಲಿ 89 ಕ್ಷೇತ್ರಗಳಿಗೆ ಮತದಾನ ನಡೆಯಬೇಕಿತ್ತು. ಆದರೆ ಮಧ್ಯಪ್ರದೇಶದ ಬೇತುಲ್ ಕ್ಷೇತ್ರದ ಬಿಎಸ್‌ಪಿ ಅಭ್ಯರ್ಥಿಯ ನಿಧನದ ಕಾರಣ ಮತದಾನವನ್ನು ಮುಂದೂಡಲಾಗಿದ್ದು, ಮೂರನೇ ಹಂತದಲ್ಲಿ (ಮೇ 7) ನಡೆಸಲು ನಿರ್ಧರಿಸಲಾಗಿದೆ.

1.67 ಲಕ್ಷ ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, 16 ಲಕ್ಷಕ್ಕೂ ಅಧಿಕ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಮತದಾನಕ್ಕೆ ಚುನಾವಣಾ ಆಯೋಗ ಸಕಲ ಸಿದ್ಧತೆ ನಡೆಸಿದೆ.

ಏಳು ಹಂತಗಳ ಚುನಾವಣೆಯ ಮೊದಲ ಹಂತದಲ್ಲಿ ಏಪ್ರಿಲ್ 19ರಂದು 21 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 102 ಕ್ಷೇತ್ರಗಳಲ್ಲಿ ಮತದಾನ ನಡೆದಿತ್ತು.

ಕೇರಳದ ಎಲ್ಲ 20 ಸ್ಥಾನಗಳಿಗೆ ಶುಕ್ರವಾರ ಮತದಾನ ನಡೆಯಲಿದೆ. ಎರಡನೇ ಹಂತದೊಂದಿಗೆ ಕೇರಳ, ರಾಜಸ್ಥಾನ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಮತದಾನ ಪೂರ್ಣಗೊಳ್ಳಲಿದೆ. ಮೊದಲ ಹಂತದಲ್ಲಿ ತಮಿಳುನಾಡು (39), ಉತ್ತರಾಖಂಡ (5), ಅರುಣಾಚಲ ಪ್ರದೇಶ (2), ಮೇಘಾಲಯ (2), ಅಂಡಮಾನ್ ಮತ್ತು ನಿಕೋಬಾರ್ (1), ಮಿಜೋರಾಂ (1), ನಾಗಾಲ್ಯಾಂಡ್ (1), ಪುದುಚೇರಿ (1), ಸಿಕ್ಕಿಂ (1) ಮತ್ತು ಲಕ್ಷದ್ವೀಪದಲ್ಲಿ (1) ಮತದಾನ ಪ್ರಕ್ರಿಯೆ ಪೂರ್ಣಗೊಂಡಿತ್ತು.

ಶುಕ್ರವಾರ ಚುನಾವಣೆ ನಡೆಯಲಿರುವ 88 ಸ್ಥಾನಗಳಲ್ಲಿ ಬಿಜೆಪಿಯು ಕಳೆದ ಬಾರಿ 52ನ್ನು ಗೆದ್ದುಕೊಂಡಿತ್ತು. ಕೇರಳದಲ್ಲಿ ಈ ಬಾರಿ ಗೆಲುವಿನ ಖಾತೆ ತೆರೆಯಲು ಬಿಜೆಪಿ ಭಾರಿ ಕಸರತ್ತು ನಡೆಸಿದೆ.

ಮೊದಲ ಹಂತದ ಬಳಿಕ ನಡೆದ ಚುನಾವಣಾ ಪ್ರಚಾರ ಸಭೆಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.



* ಅಸ್ಸಾಂನಲ್ಲಿ 2023 ರಲ್ಲಿ ವಿಧಾನಸಭೆ ಮತ್ತು ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಪ್ರಕ್ರಿಯೆ ನಡೆದಿತ್ತು. ಎರಡನೇ ಹಂತದಲ್ಲಿ ಅಸ್ಸಾಂನ ಐದು ಕ್ಷೇತ್ರಗಳಲ್ಲಿ ಮತದಾನ ನಡೆಯಲಿದ್ದು, ಅವುಗಳಲ್ಲಿ ಎರಡು ಕ್ಷೇತ್ರಗಳನ್ನು ಈ ಲೆಕ್ಕಾಚಾರದಲ್ಲಿ ಸೇರಿಸಿಲ್ಲ.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಮಂಗಳಸೂತ್ರ ಸೇರಿದಂತೆ ಜನರ ಸಂಪತ್ತನ್ನು ಕಸಿದುಕೊಂಡು, 'ನುಸುಳುಕೋರ'ರಿಗೆ ಹಂಚುತ್ತದೆ ಎಂದು ಆರೋಪಿಸಿದ್ದರು. ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಹೇಳಿಕೆಯನ್ನು ಉಲ್ಲೇಖಿಸಿ ಅವರು ಕಾಂಗ್ರೆಸ್ ವಿರುದ್ಧ ಹರಿಹಾಯ್ದಿದ್ದರು.

ಪ್ರಧಾನಿಗೆ ತಿರುಗೇಟು ನೀಡಿದ್ದ ಕಾಂಗ್ರೆಸ್, 'ಸೋಲಿನ ಆತಂಕದಿಂದ ಸುಳ್ಳು ಆರೋಪಗಳನ್ನು ಮಾಡುತ್ತಿದ್ದು, ಕೋಮು ದ್ವೇಷ ಹರಡುತ್ತಿದ್ದಾರೆ' ಎಂದು ಟೀಕಿಸಿತ್ತು.

ಕಣದಲ್ಲಿರುವ ಪ್ರಮುಖರು

ರಾಹುಲ್ ಗಾಂಧಿ (ಕಾಂಗ್ರೆಸ್)

ಕ್ಷೇತ್ರ: ವಯನಾಡ್, ಕೇರಳ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕಣಕ್ಕಿಳಿದಿರುವುದರಿಂದ ಕೇರಳದ ವಯನಾಡ್ ಲೋಕಸಭಾ ಕ್ಷೇತ್ರವು ಈ ಬಾರಿಯೂ ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗಿದೆ. 2019ರಲ್ಲಿ ರಾಹುಲ್ ಅವರು 4,31,770 ಮತಗಳ ಅಂತರದಿಂದ ಸಿಪಿಐ ಅಭ್ಯರ್ಥಿ ಪಿ.ಪಿ.ಸುನೀರ್ ಅವರನ್ನು ಪರಾಭವಗೊಳಿಸಿದ್ದರು. ಈ ಬಾರಿ ರಾಹುಲ್ ಅವರಿಗೆ ಪ್ರತಿಸ್ಪರ್ಧಿಯಾಗಿ ಸಿಪಿಐನ ಆನಿ ರಾಜಾ ಹಾಗೂ ಬಿಜೆಪಿ ಅಭ್ಯರ್ಥಿಯಾಗಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಕೆ.ಸುರೇಂದ್ರನ್ ಸ್ಪರ್ಧಿಸುತ್ತಿದ್ದಾರೆ.

ಕೆ.ಸಿ.ವೇಣುಗೋಪಾಲ್ (ಕಾಂಗ್ರೆಸ್)

ಕ್ಷೇತ್ರ: ಆಲಪ್ಪುಳ, ಕೇರಳ

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನಾ) ಕೆ.ಸಿ. ವೇಣುಗೋಪಾಲ್ ಅವರು ಕೇರಳದ ಆಲಪ್ಪುಳ ಲೋಕಸಭಾ ಕ್ಷೇತ್ರದಿಂದ ಈ ಬಾರಿ ಕಣಕ್ಕಿಳಿದಿದ್ದಾರೆ. ಕಳೆದ ಬಾರಿ ಇಲ್ಲಿಂದ ಗೆದ್ದಿದ್ದ ಎ.ಎಂ. ಆರಿಫ್ ಅವರನ್ನೇ ಸಿಪಿಎಂ ಮತ್ತೆ ಅಖಾಡಕ್ಕಿಳಿಸಿದೆ. ಬಿಜೆಪಿಯು ಪಕ್ಷದ ಪ್ರಮುಖ ನಾಯಕಿ ಶೋಭಾ ಸುರೇಂದ್ರನ್ ಅವರನ್ನು ಸ್ಪರ್ಧಿಯಾಗಿಸಿದೆ.

ಹೇಮಾಮಾಲಿನಿ (ಬಿಜೆಪಿ)

ಕ್ಷೇತ್ರ: ಮಥುರಾ, ಉತ್ತರ ಪ್ರದೇಶ

ಕನಸಿನ ಕನ್ಯೆ ಎಂದೇ ಪ್ರಖ್ಯಾತರಾಗಿರುವ ಹೇಮಾಮಾಲಿನಿ ಅವರು ಮಥುರಾದಿಂದ ಮತ್ತೆ ಕಣಕ್ಕೆ ಇಳಿದಿದ್ದಾರೆ. ರಾಜ್ಯಸಭಾ ಸದಸ್ಯೆಯಾಗಿದ್ದ ಅವರು 2014ರಲ್ಲಿ ಮೊದಲ ಬಾರಿಗೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. 2014 ಹಾಗೂ 2019ರಲ್ಲಿ ಗೆದ್ದಿದ್ದರು. ಅವರು ಕಾಂಗ್ರೆಸ್‌ನ ಮುಕೇಶ್ ಧನ್ಗರ್ ವಿರುದ್ಧ ಪೈಪೋಟಿ ನಡೆಸುವರು.

ಅರುಣ್ ಗೋವಿಲ್ (ಬಿಜೆಪಿ)

ಕ್ಷೇತ್ರ: ಮೀರತ್, ಉತ್ತರ ಪ್ರದೇಶ

ಬಿಜೆಪಿಯು ಮೀರತ್ ಕ್ಷೇತ್ರದಿಂದ ಕಿರುತೆರೆ ನಟ ಅರುಣ್ ಗೋವಿಲ್ ಅವರನ್ನು ಕಣಕ್ಕೆ ಇಳಿಸಿದೆ. ಅರುಣ್ ಅವರು 1987ರಲ್ಲಿ ದೂರದರ್ಶನದಲ್ಲಿ ಪ್ರಸಾರಗೊಂಡಿದ್ದ ರಮಾನಂದ ಸಾಗರ್ ಅವರ 'ರಾಮಾಯಣ' ಧಾರಾವಾಹಿಯಲ್ಲಿ ರಾಮನ ಪಾತ್ರದಲ್ಲಿ ನಟಿಸುವ ಮೂಲಕ ಮನೆ ಮಾತಾಗಿದ್ದರು. ಅವರು 2021ರಲ್ಲಿ ಬಿಜೆಪಿಗೆ ಸೇರ್ಪಡೆಗೊಂಡಿದ್ದರು. ಇಲ್ಲಿ ಬಿಎಸ್‌ಪಿಯ ದೇವವ್ರತ್ ಕುಮಾರ್ ಮತ್ತು ಎಸ್‌ಪಿಯ ಸುನೀತಾ ವರ್ಮಾ ಕಣದಲ್ಲಿದ್ದಾರೆ.

ರಾಜೀವ್ ಚಂದ್ರಶೇಖರ್ – ಶಶಿ ತರೂರ್ ಪೈಪೋಟಿ

ಕ್ಷೇತ್ರ: ತಿರುವನಂತಪುರ, ಕೇರಳ



ತಿರುವನಂತಪುರ ಲೋಕಸಭಾ ಕ್ಷೇತ್ರದಿಂದ ಮೂರು ಬಾರಿ ಗೆದ್ದಿರುವ ಕಾಂಗ್ರೆಸ್‌ನ ಹಿರಿಯ ಮುಖಂಡ ಶಶಿ ತರೂರ್ ಅವರು ಈ ಬಾರಿಯೂ ಕಣಕ್ಕಿಳಿದಿದ್ದಾರೆ. ಯುಪಿಎ ಸರ್ಕಾರದ ಅವಧಿಯಲ್ಲಿ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವರಾಗಿಯೂ ಸೇವೆ ಸಲ್ಲಿಸಿದ್ದರು. ಕೇಂದ್ರದ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರು ಇದೇ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಅಖಾಡಕ್ಕಿಳಿದಿದ್ದಾರೆ. ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ಅವರು ಈ ಹಿಂದೆ ಬಿಜೆಪಿಯ ರಾಷ್ಟ್ರೀಯ ವಕ್ತಾರರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಸಿಪಿಎಂನಿಂದ ಪನ್ಯನ್ ರವೀಂದ್ರನ್ ಕಣದಲ್ಲಿದ್ದಾರೆ. ಕಳೆದ ಬಾರಿ ಈ ಕ್ಷೇತ್ರದಿಂದ ಶಶಿತರೂರ್ ಗೆದ್ದಿದ್ದರು.

ಪ್ರಕಾಶ್ ಅಂಬೇಡ್ಕರ್ (ವಿಬಿಎ)

ಕ್ಷೇತ್ರ: ಅಕೋಲಾ, ಮಹಾರಾಷ್ಟ್ರ

ಮಹಾರಾಷ್ಟ್ರದ ಅಕೋಲಾ ಲೋಕಸಭಾ ಕ್ಷೇತ್ರದಿಂದ ವಂಚಿತ್ ಬಹುಜನ ಆಘಾಡಿ ಮುಖ್ಯಸ್ಥ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ಮೊಮ್ಮಗ ಪ್ರಕಾಶ್ ಅಂಬೇಡ್ಕರ್ ಅಖಾಡಕ್ಕಿಳಿದಿದ್ದಾರೆ. ಪ್ರಕಾಶ್ ಅವರು ಸ್ಪರ್ಧಿಸಿರುವುದರಿಂದ ಕ್ಷೇತ್ರದ ಜಾತ್ಯತೀತ ನಿಲುವಿನ ಮತದಾರರ ಮತಗಳು ಹಂಚಿ ಹೋಗುವ ಸಾಧ್ಯತೆ ಇದೆ ಮತ್ತು ಇದರಿಂದ ಬಿಜೆಪಿ ಅಭ್ಯರ್ಥಿಗೆ ಅನುಕೂಲವಾಗಲಿದೆ ಎಂದು ವಿಶ್ಲೇಷಿಸಲಾಗಿದೆ.

ಭೂಪೇಶ್ ಬಘೇಲ್ (ಕಾಂಗ್ರೆಸ್)

ಕ್ಷೇತ್ರ: ರಾಜನಂದಗಾವ್, ಛತ್ತೀಸ್‌ಗಢ

ಛತ್ತೀಸಗಢದ ರಾಜನಂದಗಾವ್ ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರೆ, ಹಾಲಿ ಸಂಸದ ಸಂತೋಷ್ ಪಾಂಡೆ ಮರುಆಯ್ಕೆ ಬಯಸಿ ಬಿಜೆಪಿಯಿಂದ ಸ್ಪರ್ಧಿಸಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಛತ್ತೀಸಗಢದಲ್ಲಿ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರುವಲ್ಲಿ ವಿಫಲರಾಗಿರುವ 'ಕಾಕಾ' ಭೂಪೇಶ್ ಬಘೇಲ್, ಪ್ರತಿಷ್ಠಿತ ಕ್ಷೇತ್ರದಲ್ಲಿ ಪಕ್ಷಕ್ಕೆ ಜಯ ತಂದುಕೊಡುವರೇ ಎನ್ನುವ ಕುತೂಹಲ ರಾಜಕೀಯ ವಲಯದಲ್ಲಿದೆ.

ಓಂ ಬಿರ್ಲಾ (ಬಿಜೆಪಿ)

ಕ್ಷೇತ್ರ: ಕೋಟಾ, ರಾಜಸ್ಥಾನ

ಬಿಜೆಪಿ ಅಭ್ಯರ್ಥಿ, ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು 'ಹ್ಯಾಟ್ರಿಕ್' ಗೆಲುವಿನ ಕನಸಿನೊಂದಿಗೆ ಕೋಟಾ ಕ್ಷೇತ್ರದಿಂದ ಕಣಕ್ಕಿಳಿದಿದ್ದಾರೆ. ಅವರ ವಿರುದ್ಧ ಕಾಂಗ್ರೆಸ್ ಪಕ್ಷವು ಪ್ರಹ್ಲಾದ್ ಗುಂಜಲ್ ಅವರನ್ನು ಅಖಾಡಕ್ಕಿಳಿಸಿದೆ. ಬಿರ್ಲಾ ಅವರು 2014 ಮತ್ತು 2019ರಲ್ಲಿ ಇಲ್ಲಿ ಗೆದ್ದಿದ್ದರು. ಬಿರ್ಲಾ ಅವರಿಗೆ ಈ ಬಾರಿ ಕಠಿಣ ಪೈಪೋಟಿ ಎದುರಾಗಲಿದೆ ಎಂದು ವಿಶ್ಲೇಷಿಸಲಾಗಿದೆ.

ಗಜೇಂದ್ರ ಸಿಂಗ್ ಶೆಖಾವತ್ (ಬಿಜೆಪಿ)

ಕ್ಷೇತ್ರ: ಜೋಧಪುರ, ರಾಜಸ್ಥಾನ

ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರೂ ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. ಜೋಧಪುರ ಕ್ಷೇತ್ರದಿಂದ ಕಣಕ್ಕಿಳಿದಿರುವ ಅವರಿಗೆ ಕಾಂಗ್ರೆಸ್‌ನ ಕರಣ್ ಸಿಂಗ್ ಉಚಿಯಾರ್ಡ ಪೈಪೋಟಿ ನೀಡುತ್ತಿದ್ದಾರೆ. ಶೆಖಾವತ್, 2019ರ ಚುನಾವಣೆಯಲ್ಲಿ ಕಾಂಗ್ರೆಸ್ ನಾಯಕ ಅಶೋಕ್ ಗೆಹಲೋತ್ ಅವರ ಮಗ ವೈಭವ್ ಅವರನ್ನು ಪರಾಭವಗೊಳಿಸಿದ್ದರು.

'ಸಂವಿಧಾನ ರಕ್ಷಣೆಗಾಗಿ ಚುನಾವಣೆ'

ನವದೆಹಲಿ (ಪಿಟಿಐ): ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಉಳಿವಿಗಾಗಿ ಈ ಚುನಾವಣೆಯಲ್ಲಿ ತಮ್ಮ ಪಕ್ಷಕ್ಕೆ ಮತ ನೀಡಬೇಕೆಂದು ಎರಡನೇ ಹಂತದ ಮತದಾನದ ಮುನ್ನಾ ದಿನವಾದ ಗುರುವಾರ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ವಿಡಿಯೊ ಸಂದೇಶದಲ್ಲಿ ಮೂಲಕ ಮನವಿ ಮಾಡಿದ್ದಾರೆ.

ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ನಾಶಪಡಿಸಲು ಬಿಜೆಪಿ ಮತ್ತು ಆರ್‌ಎಸ್‌ಎಸ್ ಪ್ರಯತ್ನಿಸುತ್ತಿದೆ ಎಂದೂ ಅವರು ಆರೋಪಿಸಿದರು.

ನಿಮ್ಮ ಸಮಸ್ಯೆಗಳನ್ನು ಕೇಳಲು ನಾವು ಕನ್ಯಾಕುಮಾರಿಯಿಂದ ಕಾಶ್ಮೀರಕ್ಕೆ ಹಾಗೂ ಮಣಿಪುರದಿಂದ ಮಹಾರಾಷ್ಟ್ರಕ್ಕೆ ಯಾತ್ರೆ ನಡೆಸಿದ್ದೇವೆ. ಅವುಗಳನ್ನು ಪರಿಹರಿಸುವ ಭರವಸೆಯನ್ನು ಪ್ರಣಾಳಿಕೆಯಲ್ಲಿ ನೀಡಿದ್ದೇವೆ. ಅದು ನಿಮ್ಮ ಪ್ರಣಾಳಿಕೆ ಎಂದು ಹೇಳಿದರು.

'ಭಯದಿಂದಾಗಿ ಬಿಜೆಪಿ ಆರೋಪ'

ನವದೆಹಲಿ (ಪಿಟಿಐ): ಆಸ್ತಿ ಮರುಹಂಚಿಕೆ, ಪಿತ್ರಾರ್ಜಿತ ಆಸ್ತಿ ತೆರಿಗೆ ಕುರಿತ ಬಿಜೆಪಿಯ ಉತ್ಪಾದಿತ ಆರೋಪವು ಆ ಪಕ್ಷಕ್ಕೆ ಇರುವ ಆತಂಕವನ್ನು ತೋರುತ್ತಿದೆ. ಅಲ್ಲದೆ, ಸುಳ್ಳು ದೋಷಾರೋಪ ಮಾಡುವ ತಂತ್ರಕ್ಕೆ ಆ ಪಕ್ಷದವರು ಜೋತುಬಿದ್ದಿರುವುದು, 'ಮೋದಿ ಕಿ ಗ್ಯಾರಂಟಿ' ಹೇಳ ಹೆಸರಿಲ್ಲದಂತೆ ಆಗಿರುವುದಕ್ಕೂ ಸಾಕ್ಷಿಯಂತೆ ಕಾಣುತ್ತಿದೆ ಎಂದು ಕಾಂಗ್ರೆಸ್ ನಾಯಕ ಪಿ. ಚಿದಂಬರಂ ಪ್ರತಿಕ್ರಿಯಿಸಿದರು.

ಕಾಂಗ್ರೆಸ್‌ನ ಚುನಾವಣಾ ಪ್ರಣಾಳಿಕೆ ಸಮಿತಿಯ ಅಧ್ಯಕ್ಷರೂ ಆಗಿದ್ದ ಚಿದಂಬರಂ ಅವರು ಗುರುವಾರ ತಮ್ಮ ಪಕ್ಷದ ಪ್ರಣಾಳಿಕೆಯು ಧರ್ಮಾಧಾರಿತವಾಗಿಲ್ಲ, ಸಾಮಾಜಿಕ ನ್ಯಾಯಕ್ಕೆ ಒತ್ತುನೀಡಿದೆ ಎಂದು ಸ್ಪಷ್ಟನೆ ನೀಡಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಜನರಲ್ಲಿ ಕಾಂಗ್ರೆಸ್ ಪ್ರಣಾಳಿಕೆಯು ಭರವಸೆ ಮೂಡಿಸುತ್ತದೆ ಎಂದೂ ಹೇಳಿದರು.

'ಕಾಂಗ್ರೆಸ್ 1985ರಲ್ಲಿ ಆಸ್ತಿ ತೆರಿಗೆ ರದ್ದು ಮಾಡಿತ್ತು. 2015ರಲ್ಲಿ ಬಿಜೆಪಿಯು ಸಂಪತ್ತು ತೆರಿಗೆಯನ್ನು ರದ್ದುಪಡಿಸಿತ್ತು ಎನ್ನುವುದನ್ನು ನಾನು ಜನರಿಗೆ ನೆನಪಿಸಲು ಇಷ್ಟಪಡುತ್ತೇನೆ. ಆಸ್ತಿ ಮರುಹಂಚಿಕೆಯ ಪ್ರಸ್ತಾವ ನಮ್ಮ ಪ್ರಣಾಳಿಕೆಯಲ್ಲಿ ಇಲ್ಲ, ಸಾಮಾಜಿಕ–ಆರ್ಥಿಕ ದೃಷ್ಟಿಯಲ್ಲಿ ಜಾತಿ ಗಣತಿಗೆ ಒತ್ತು ನೀಡಲಾಗಿದೆ' ಎಂದು ವಿವರಿಸಿದರು.



ಮತಗಟ್ಟೆಯತ್ತ... ಕೇರಳದ ಆಲಪ್ಪುಳದ ಮತಗಟ್ಟೆಯೊಂದಕ್ಕೆ ಚುನಾವಣಾ ಸಿಬ್ಬಂದಿ ದೋಣಿ ಮೂಲಕ ಗುರುವಾರ ತೆರಳಿದರು –ಪಿಟಿಐ ಚಿತ್ರ

ಚುನಾವಣಾ ಕಣದಲ್ಲಿ...

ಅಖಿಲೇಶ್ ಯಾದವ್ ನಾಮಪತ್ರ ಸಲ್ಲಿಕೆ

ಕನೌಜ್ (ಪಿಟಿಐ): ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಉತ್ತರ ಪ್ರದೇಶದ ಕನೌಜ್ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಗುರುವಾರ ನಾಮಪತ್ರ ಸಲ್ಲಿಸಿದರು.

ರಾಮ್ ಗೋಪಾಲ್ ಯಾದವ್ ಸೇರಿದಂತೆ ಪಕ್ಷದ ಮುಖಂಡರ ಸಮ್ಮುಖದಲ್ಲಿ ಅವರು ನಾಮಪತ್ರ ಸಲ್ಲಿಸಿದರು.

'ಪಕ್ಷದ ಕಾರ್ಯಕರ್ತರ ಆಗ್ರಹದಂತೆ ಕನೌಜ್ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದೇನೆ. ಇಲ್ಲಿನ ಜನರು ಆಶೀರ್ವದಿಸುತ್ತಾರೆಂಬ ವಿಶ್ವಾಸವಿದೆ' ಎಂದು ನಾಮಪತ್ರ ಸಲ್ಲಿಸಿದ ಬಳಿಕ ಅಖಿಲೇಶ್ ತಿಳಿಸಿದರು. 'ಬಿಜೆಪಿಯ ಋಣಾತ್ಮಕ ರಾಜಕೀಯ ಮತ್ತು ಅದರ ಕಾರ್ಯವೈಖರಿಯನ್ನು ಜನರು ಇಷ್ಟಪಡುವುದಿಲ್ಲ' ಎಂದೂ ಹೇಳಿದರು.

ಸಮಾಜವಾದಿ ಪಕ್ಷವು ಈ ಕ್ಷೇತ್ರಕ್ಕೆ ಸೋಮವಾರ ತೇಜ್ ಪ್ರತಾಪ್ ಯಾದವ್ ಅವರ ಹೆಸರನ್ನು ಘೋಷಿಸಿತ್ತು. ಆದರೆ ಬುಧವಾರ ತನ್ನ ನಿರ್ಧಾರ ಬದಲಿಸಿತ್ತು.

ಜೆಡಿಯು ನಾಯಕನ ಗುಂಡಿಕ್ಕಿ ಹತ್ಯೆ

ಪಟ್ನಾ (ಪಿಟಿಐ): ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳು ಗುರುವಾರ ಇಲ್ಲಿನ ಪುನ್‌ಪುನ್ ಪ್ರದೇಶದಲ್ಲಿ ಗುಂಡಿನ ದಾಳಿ ನಡೆಸಿದ್ದು, ಜೆಡಿಯು ನಾಯಕ ಸೌರವ್ ಕುಮಾರ್ ಎಂಬವರನ್ನು ಹತ್ಯೆ ಮಾಡಿದ್ದಾರೆ.

ಇವರ ಜೊತೆಗಿದ್ದ ಮುನ್‌ಮುನ್ ಕುಮಾರ್ ಗಾಯಗೊಂಡಿದ್ದಾರೆ. ಮಧ್ಯಾಹ್ನ 12.15 ಗಂಟೆಗೆ ಈ ಇಬ್ಬರೂ ಮದುವೆ ಸಮಾರಂಭದಿಂದ ಮರಳುವಾಗ ದುಷ್ಕರ್ಮಿಗಳು ದಾಳಿ ಮಾಡಿದ್ದಾರೆ.

ಪಿತ್ರಾರ್ಜಿತ ಆಸ್ತಿ ತೆರಿಗೆ ರದ್ದತಿ: ಕಾಂಗ್ರೆಸ್ ವಿರುದ್ಧ ಮೋದಿ ಆರೋಪ

'ಆಸ್ತಿ ಉಳಿಸಿಕೊಳ್ಳಲು ಕಾಯ್ದೆ ರದ್ದು'

ಮೊರೆನಾ (ಪಿಟಿಐ): ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರು 1984ರಲ್ಲಿ ತಮ್ಮ ತಾಯಿ ಇಂದಿರಾ ನಿಧನರಾದ ನಂತರ, ಆಸ್ತಿ ಸರ್ಕಾರದ ಪಾಲಾಗುವುದನ್ನು ತಪ್ಪಿಸಲು ಪಿತ್ರಾರ್ಜಿತ ಆಸ್ತಿ ತೆರಿಗೆ ರದ್ದು ಮಾಡಿದ್ದರು ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಆರೋಪಿಸಿದ್ದಾರೆ.

ಮಧ್ಯಪ್ರದೇಶದ ಮೊರೆನಾದಲ್ಲಿ ಚುನಾವಣಾ ರ್‍ಯಾಲಿಯಲ್ಲಿ ಪಾಲ್ಗೊಂಡು ಮಾತನಾಡಿದ ಮೋದಿ, ಕಾಂಗ್ರೆಸ್ ವಿರುದ್ಧ ತಮ್ಮ ಹಳೆಯ ಆರೋಪಗಳನ್ನು ಪುನರುಚ್ಚರಿಸಿ, ತೀವ್ರ ವಾಗ್ದಾಳಿ ನಡೆಸಿದರು.

'ಇಂದಿರಾ ಗಾಂಧಿ ನಿಧನರಾದಾಗ, ಒಂದು ನಿಯಮ ಜಾರಿಯಲ್ಲಿತ್ತು. ಅದರ ಪ್ರಕಾರ ಅರ್ಧ ಆಸ್ತಿ ಸರ್ಕಾರದ ಪಾಲಾಗುತ್ತಿತ್ತು. ಇಂದಿರಾಜಿ ತಮ್ಮ ಮಗ ರಾಜೀವ್ ಗಾಂಧಿ ಹೆಸರಿಗೆ ಆಸ್ತಿ ಉಯಿಲು ಬರೆದಿದ್ದರು ಎನ್ನುವ ಮಾತುಗಳು ಕೇಳಿಬಂದಿದ್ದವು. ಆಸ್ತಿ ಸರ್ಕಾರಕ್ಕೆ ಹೋಗುವುದನ್ನು ತಪ್ಪಿಸಲು ಆಗ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಪಿತ್ರಾರ್ಜಿತ ಆಸ್ತಿ ತೆರಿಗೆ ರದ್ದು ಮಾಡಿದರು' ಎಂದು ಹೇಳಿದರು.

'ಕಾಂಗ್ರೆಸ್ ಪಕ್ಷವು, ತಮಗೆ ವರ್ಗಾವಣೆಯಾಗಿ ಬಂದ ಸಂಪತ್ತನ್ನು ನಾಲ್ಕು ತಲೆಮಾರುಗಳ ಕಾಲ ಅನುಭವಿಸಿದ ನಂತರ, ಈಗ ಪಿತ್ರಾರ್ಜಿತ ಆಸ್ತಿ ತೆರಿಗೆಯನ್ನು ಜಾರಿ ಮಾಡಲು ಹೊರಟಿದೆ. ಆದರೆ, ಅದಕ್ಕೆ ಬಿಜೆಪಿ ಆಸ್ಪದ ಕೊಡುವುದಿಲ್ಲ' ಎಂದರು.

> **ನಿಮ್ಮನ್ನು ಲೂಟಿ ಮಾಡಲು ಯೋಜಿಸಿರುವ ಕಾಂಗ್ರೆಸ್ ಹಾಗೂ ನಿಮ್ಮ ನಡುವೆ 56 ಇಂಚಿನ ಎದೆಯೊಂದಿಗೆ ಮೋದಿಯು ಗೋಡೆಯಾಗಿ ನಿಂತಿದ್ದಾರೆ**
>
> **ನರೇಂದ್ರ ಮೋದಿ,** ಪ್ರಧಾನಿ

ತನ್ನನ್ನು 'ಕಾಮ್‌ದಾರ್' (ದುಡಿಯುವ ವರ್ಗ) ಎಂದು ಕರೆದುಕೊಂಡ ಪ್ರಧಾನಿ, ರಾಹುಲ್ ಗಾಂಧಿ ಅವರನ್ನು 'ನಾಮ್‌ದಾರ್' (ವಂಶಪಾರಂಪರ್ಯ) ಎಂದು ಕರೆದರು. 'ನಾಮ್‌ದಾರ್'ಗಳ ನಿಂದನೆಗಳನ್ನು ನಾವು ಕೇಳಬೇಕು. ಆದರೂ ನಾನು 'ಭಾರತ ಮಾತೆ' ಮತ್ತು ಜನರ ಸೇವೆ ಮುಂದುವರಿಸುತ್ತೇನೆ' ಎಂದು ಹೇಳಿದರು.

'ದೋಚುವುದನ್ನು ತಡೆಯಲು 400 ಸ್ಥಾನ ಕೊಡಿ'(ಆಗ್ರಾ/ಬರೇಲಿ) (ಪಿಟಿಐ): ದಲಿತರು ಮತ್ತು ಹಿಂದುಳಿದವರಿಂದ ಮೀಸಲಾತಿ ಕಸಿಯದಂತೆ ತಡೆಯಲು 400 ಸ್ಥಾನಗಳಲ್ಲಿ ಗೆಲ್ಲಿಸಿ' ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಮತದಾರರಲ್ಲಿ ಮನವಿ ಮಾಡಿದರು.

ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶದ ರ್‍ಯಾಲಿಗಳಲ್ಲಿ ಭಾಗವಹಿಸಿ ಮಾತನಾಡಿದ ಅವರು, ತಾವು 'ತುಷ್ಟೀಕರಣ' ಅಂತ್ಯಗೊಳಿಸಿ, 'ಸಂತುಷ್ಟೀಕರಣ'ಕ್ಕಾಗಿ ಕೆಲಸ ಮಾಡುವುದಾಗಿ ತಿಳಿಸಿದರು.

'ಇಸ್ಲಾಮೀಕರಣ ಕಾರ್ಯಸೂಚಿಯ ಭಾಗ'

ಲಖನೌ (ಪಿಟಿಐ): ಕರ್ನಾಟಕದಲ್ಲಿ ಒಬಿಸಿ ಮೀಸಲಾತಿ ಕಸಿದು ಮುಸ್ಲಿಮರಿಗೆ ನೀಡುವ ಪ್ರಯತ್ನವು ದೇಶವನ್ನು ಇಸ್ಲಾಮೀಕರಣ ಮಾಡುವ, ವಿಭಜನೆ ಮಾಡುವ ಕಾರ್ಯಸೂಚಿಯ ಭಾಗವಾಗಿತ್ತು ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಆರೋಪಿಸಿದ್ದಾರೆ.

'ದೇಶದ ಸಂಪನ್ಮೂಲಗಳನ್ನು 65 ವರ್ಷಗಳ ಕಾಲ ಲೂಟಿ ಮಾಡಿದ ಪಕ್ಷವು ಎಸ್‌ಸಿ/ಎಸ್‌ಟಿ, ಒಬಿಸಿ ಮತ್ತು ಬಡವರ ಹಕ್ಕುಗಳನ್ನು ದೋಚಲು ಹೊರಟಿದೆ' ಎಂದು ಆರೋಪಿಸಿದರು.

ಚುಟುಕು

ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು

ತಿರುವನಂತಪುರ (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಬೆಂಬಲ ನೀಡಬೇಕೆಂದು ಕೋರಲು ದೆಹಲಿಯ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರು ರಾಜ್ಯದ ವಿವಿಧ ಚರ್ಚ್‌ಗಳ ಮುಖ್ಯಸ್ಥರನ್ನು ಭೇಟಿಯಾಗಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೇರಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿ.ಡಿ ಸತೀಶನ್ ಗುರುವಾರ ಚುನಾವಣಾ ಆಯೋಗವನ್ನು ಒತ್ತಾಯಿಸಿದ್ದಾರೆ.

ಕೇರಳದ ಚರ್ಚ್‌ಗಳ ಮುಖ್ಯಸ್ಥರನ್ನು ಭೇಟಿಯಾಗುವ ಮೂಲಕ ಲೆಫ್ಟಿನೆಂಟ್ ಗವರ್ನರ್ ಅವರು ನೀತಿ ಸಂಹಿತೆಯನ್ನು ಉಲ್ಲಂಘಿಸಿದ್ದಾರೆ ಎಂದು ಆಯೋಗಕ್ಕೆ ಬರೆದ ಪತ್ರದಲ್ಲಿ ಸತೀಶನ್ ಆರೋಪಿಸಿದ್ದಾರೆ.

'ಎರಡು ದಿನಗಳ ಭೇಟಿಗಾಗಿ ಕೇರಳಕ್ಕೆ ಬಂದಿರುವ ಲೆಫ್ಟಿನೆಂಟ್ ಗವರ್ನರ್ ಅವರು ಬಿಜೆಪಿಗೆ ಬೆಂಬಲ ನೀಡುವಂತೆ, ಸಿರೋ ಮಲಬಾರ್ ಚರ್ಚ್, ಜಾಕೋಬೈಟ್ ಸಿರಿಯನ್ ಆರ್ಥಡಾಕ್ಸ್ ಚರ್ಚ್, ಮಲಂಗರ ಆರ್ಥಡಾಕ್ಸ್ ಸಿರಿಯನ್ ಚರ್ಚ್‌ಗಳ ಮುಖ್ಯಸ್ಥರಲ್ಲಿ ವಿನಂತಿಸಿದ್ದಾರೆ' ಎಂದು ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಕೆಲವು ಚರ್ಚ್‌ಗಳ ಮುಖ್ಯಸ್ಥರು ಲೆಫ್ಟಿನೆಂಟ್ ಗವರ್ನರ್ ಅವರನ್ನು ಭೇಟಿಯಾಗಲು ನಿರಾಕರಿಸಿರುವುದಾಗಿಯೂ ತಿಳಿದುಬಂದಿದೆ ಎಂದು ಸತೀಶನ್ ತಿಳಿಸಿದ್ದಾರೆ.

ರಾಜ್ಯಪಾಲರು ರಾಜ್ಯಗಳ ಸಾಂವಿಧಾನಿಕ ಮುಖ್ಯಸ್ಥರಾಗಿದ್ದು ಅವರು ರಾಜಕೀಯ ಚಟುವಟಿಕೆಗಳಲ್ಲಿ ಭಾಗಿಯಾಗುವುದನ್ನು ನಿರ್ಬಂಧಿಸಲಾಗಿದೆ ಎಂದೂ ಹೇಳಿದ್ದಾರೆ.

ಜಾರ್ಖಂಡ್: ಉಪ ಚುನಾವಣೆಯಲ್ಲಿ ಕಲ್ಪನಾ ಸೊರೇನ್ ಸ್ಪರ್ಧೆ

ರಾಂಚಿ (ಪಿಟಿಐ): ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ಪತ್ನಿ ಕಲ್ಪನಾ ಅವರು ಗಾಂಡೇಯ್ ಕ್ಷೇತ್ರದಿಂದ ವಿಧಾನಸಭೆ ಉಪ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ.

ಗಿರಿಡೀಹ್ ಜಿಲ್ಲೆಯಲ್ಲಿನ ಈ ಕ್ಷೇತ್ರದ ಶಾಸಕ ಸ್ಥಾನವು ಜೆಎಂಎಂ ಶಾಸಕ ಸರ್ಫರಾಜ್ ಅಹಮದ್ ಅವರ ರಾಜೀನಾಮೆಯಿಂದಾಗಿ ತೆರವಾಗಿದೆ. ಈ ಕ್ಷೇತ್ರದಲ್ಲಿ ಮೇ 20ರಂದು ಉಪ ಚುನಾವಣೆ ನಡೆಯಲಿದೆ.

ಕಲ್ಪನಾ ಅವರು ಎಂಜಿನಿಯರಿಂಗ್ ಪದವೀಧರೆ. ಇತ್ತೀಚೆಗೆ ರಾಜಕೀಯ ಪ್ರವೇಶಿಸಿದ್ದಾರೆ. ಮಾರ್ಚ್ 4ರಂದು ನಡೆದಿದ್ದ ಜೆಎಂಎಂ ಸ್ಥಾಪನಾ ದಿನ ಕಾರ್ಯಕ್ರಮದಲ್ಲಿ, 'ಪತಿ ಬಂಧನದ ಹಿಂದೆ ದೊಡ್ಡ ಸಂಚು ನಡೆದಿದೆ. ಜಾರ್ಖಂಡ್‌ನ ಜನರು ಇದಕ್ಕೆ ತಕ್ಕ ಪ್ರತ್ಯುತ್ತರ ನೀಡಲಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದರು.

ಎಂಥಾ ಮಾತು!

ಪ್ರಧಾನಿ ನರೇಂದ್ರ ಮೋದಿ ಅವರು ಜನರ ನಡುವೆ ಬಿರುಕು ಮೂಡಿಸಲು ಪ್ರಯತ್ನಿಸುತ್ತಿದ್ದು, 'ಇಂಡಿಯಾ' ಒಕ್ಕೂಟವು ಅದರ ವಿರುದ್ಧ ಹೋರಾಡುತ್ತಿದೆ. ಅಂಬೇಡ್ಕರ್ ಅವರ ಸಂವಿಧಾನದ ರಕ್ಷಣೆಗೆ ಹಾಗೂ ದೇಶದ ಜನರನ್ನು ಒಗ್ಗೂಡಿಸಲು ವಿರೋಧ ಪಕ್ಷಗಳ ಒಕ್ಕೂಟವು ಪ್ರಯತ್ನಿಸುತ್ತಿದೆ. ಚುನಾವಣಾ ಆಯೋಗವನ್ನು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಬಿಡಬೇಕು. ಜನರಿಗೆ ನ್ಯಾಯ ಒದಗಿಸಲು ನ್ಯಾಯಾಂಗವೂ ಸ್ವತಂತ್ರವಾಗಬೇಕು

ಫಾರೂಕ್ ಅಬ್ದುಲ್ಲಾ, ನ್ಯಾಷನಲ್ ಕಾನ್ಫರೆನ್ಸ್ ಅಧ್ಯಕ್ಷ

ಕಳೆದ ಹತ್ತು ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಾಡಿರುವ ಕೆಲಸಗಳನ್ನು ಹಿಮಾಲಯದ ಎತ್ತರಕ್ಕೆ ಹೋಲಿಸಬಹುದು. ಕಾಂಗ್ರೆಸ್ ಮಾಡಿರುವ ಕೆಲಸಗಳನ್ನು ಗುಡ್ಡಕ್ಕೆ ಹೋಲಿಸಬಹುದು. ಮೋದಿ ಅವರು ಮಾಡಿರುವ ಕೆಲಸವನ್ನು ಗಮನಿಸಿದರೆ, ನಿದ್ದೆಯಲ್ಲಿರುವ ವ್ಯಕ್ತಿಯನ್ನು ಎಬ್ಬಿಸಿ ಕೇಳಿದರೂ ಪ್ರಧಾನಿಯಾಗಲು ರಾಹುಲ್ ಗಾಂಧಿಗಿಂತ ನರೇಂದ್ರ ಮೋದಿ ಅವರೇ ಉತ್ತಮ ಎಂದು ಹೇಳುತ್ತಾನೆ

ಏಕನಾಥ ಶಿಂದೆ, ಮಹಾರಾಷ್ಟ್ರ ಮುಖ್ಯಮಂತ್ರಿ

ಕ್ಷೇತ್ರ ಮಹಾತ್ಮೆ

ಕೇರಳದ ಪ್ರತಿಷ್ಠಿತ ಲೋಕಸಭಾ ಕ್ಷೇತ್ರಗಳಲ್ಲೊಂದಾದ ಆಟ್ಟಿಂಗಲ್ ಈ ಬಾರಿ ತ್ರಿಕೋನ ಸ್ಪರ್ಧೆಗೆ ಸಾಕ್ಷಿಯಾಗಲಿದೆ. ಕಳೆದ ಬಾರಿ ಇಲ್ಲಿಂದ ಗೆದ್ದಿದ್ದ ಅಡೂರ್ ಪ್ರಕಾಶ್ ಅವರನ್ನೇ ಕಾಂಗ್ರೆಸ್ ಪಕ್ಷವು ಈ ಸಲವೂ ಕಣಕ್ಕಿಳಿಸಿದೆ. ಶಾಸಕ ವಿ. ಜಾಯ್ ಅವರು ಆಡಳಿತಾರೂಢ ಸಿಪಿಎಂನ ಅಭ್ಯರ್ಥಿಯಾಗಿ ಅಖಾಡಕ್ಕಿಳಿದಿದ್ದಾರೆ. ಇವರಿಬ್ಬರಿಗೆ ಪೈಪೋಟಿ ನೀಡಲು ಬಿಜೆಪಿಯು ಕೇಂದ್ರ ಸಚಿವ ವಿ. ಮುರಳೀಧರನ್ ಅವರನ್ನು ಸ್ಪರ್ಧಿಯಾಗಿಸಿದೆ. ಸಿಪಿಎಂನ ಭದ್ರಕೋಟೆಯಾಗಿದ್ದ ಈ ಕ್ಷೇತ್ರದಿಂದ ಕಳೆದ ಬಾರಿ ಗೆಲುವು ಸಾಧಿಸುವಲ್ಲಿ ಯಶಸ್ವಿಯಾಗಿದ್ದ ಪ್ರಕಾಶ್ ಅವರು, ಈ ಬಾರಿಯೂ ಗೆಲುವಿನ ವಿಶ್ವಾಸದಲ್ಲಿದ್ದಾರೆ. ಕ್ಷೇತ್ರವನ್ನು ಮರಳಿ ಪಕ್ಷದ ತೆಕ್ಕೆಗೆ ಸೇರಿಸಬೇಕೆಂದು ಸಿಪಿಎಂನ ಮುಖಂಡರು ಅವಿರತವಾಗಿ ಶ್ರಮಿಸುತ್ತಿದ್ದಾರೆ. 2019ರ ಚುನಾವಣೆಯಲ್ಲಿ ಪ್ರಕಾಶ್ ಅವರು 38,247 ಮತಗಳ ಅಂತರದಿಂದ ಸಿಪಿಎಂನ ಅನಿರುದ್ಧನ್ ಸಂಪತ್ ಅವರನ್ನು ಪರಾಭವಗೊಳಿಸಿದ್ದರು. ಅನಿರುದ್ಧನ್ ಅವರು ಈ ಮೊದಲು ಇಲ್ಲಿಂದ ಮೂರು ಬಾರಿ ಸಂಸದರಾಗಿ ಆಯ್ಕೆಯಾಗಿದ್ದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜಾಯ್ ಅವರು ವರ್ಕಲ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ರಾಜ್ಯ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಜನರ ಮುಂದಿರಿಸಿ, ಜಾಯ್ ಅವರು ಮತಯಾಚಿಸುತ್ತಿದ್ದಾರೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದ ವಿ. ಮುರಳೀಧರನ್ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರದ ಸಾಧನೆಗಳನ್ನು ಮುಖ್ಯ ಚುನಾವಣಾ ವಿಚಾರವಾಗಿಸಿ ಜನರ ಬಳಿಗೆ ತೆರಳುತ್ತಿದ್ದಾರೆ.

ಮುಖಾಮುಖಿ

ಜಮ್ಮು



ಜುಗಲ್ ಕಿಶೋರ್ ಶರ್ಮಾ (ಬಿಜೆಪಿ)

ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರದ ಜಮ್ಮು ಲೋಕಸಭಾ ಕ್ಷೇತ್ರದಿಂದ ಬಿಜೆಪಿಯು ಈ ಬಾರಿಯೂ ಜುಗಲ್ ಕಿಶೋರ್ ಶರ್ಮಾ ಅವರನ್ನೇ ಸ್ಪರ್ಧೆಗಿಳಿಸಿದೆ. 2019ರ ಚುನಾವಣೆಯಲ್ಲಿ ಶರ್ಮಾ ಅವರು 3,02,875 ಮತಗಳ ಭಾರಿ ಅಂತರದಿಂದ ಕಾಂಗ್ರೆಸ್‌ನ ರಮಣ್ ಭಲ್ಲಾ ಅವರನ್ನು ಪರಾಭವಗೊಳಿಸಿದ್ದರು. ಶರ್ಮಾ ಅವರು ಈ ಹಿಂದೆ ಶಾಸಕರಾಗಿಯೂ ಆಯ್ಕೆಯಾಗಿದ್ದರು. ಸಂವಿಧಾನದ 370ನೇ ವಿಧಿಯ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿರುವ ಕೇಂದ್ರ ಸರ್ಕಾರದ ಕ್ರಮವನ್ನು ಮತ್ತು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಜನರ ಮುಂದಿರಿಸಿ, ಶರ್ಮಾ ಅವರು ಮತಯಾಚಿಸಿದ್ದಾರೆ. ಆರ್‌ಎಸ್‌ಎಸ್ ಹಿನ್ನೆಲೆಯ ಶರ್ಮಾ ಅವರು ಸ್ಥಳೀಯವಾಗಿಯೂ ಪ್ರಭಾವಿ ಮುಖಂಡರಾಗಿದ್ದಾರೆ.

V/S



ರಮಣ್ ಭಲ್ಲಾ (ಕಾಂಗ್ರೆಸ್)

ಜುಗಲ್ ಕಿಶೋರ್ ಶರ್ಮಾ ಅವರ ವಿರುದ್ಧ ಸೆಣಸಲು 'ಇಂಡಿಯಾ' ಒಕ್ಕೂಟವು ಕಾಂಗ್ರೆಸ್‌ನ ರಮಣ್ ಭಲ್ಲಾ ಅವರನ್ನು ಅಖಾಡಕ್ಕಿಳಿಸಿದೆ. ಜಮ್ಮು ಮತ್ತು ಕಾಶ್ಮೀರದ ಪ್ರಮುಖ ಪಕ್ಷಗಳಾದ ನ್ಯಾಷನಲ್ ಕಾನ್ಫರೆನ್ಸ್ ಮತ್ತು ಪಿಡಿಪಿಯು ಬೆಂಬಲ ಸೂಚಿಸಿರುವುದು ಭಲ್ಲಾ ಅವರ ಗೆಲುವಿನ ವಿಶ್ವಾಸವನ್ನು ಹೆಚ್ಚಿಸಿದೆ. ಭಲ್ಲಾ ಅವರು ಜಮ್ಮು ಮತ್ತು ಕಾಶ್ಮೀರ ಕಾಂಗ್ರೆಸ್ ಘಟಕದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು. ಕೇಂದ್ರ ಸರ್ಕಾರದ ಲೋಪಗಳು, ನಿರುದ್ಯೋಗ ಸಮಸ್ಯೆ ಮೊದಲಾದವುಗಳನ್ನು ಭಲ್ಲಾ ಅವರು ಪ್ರಮುಖ ಚುನಾವಣಾ ವಿಷಯವಾಗಿಸಿದ್ದಾರೆ. ಈ ಬಾರಿ ಭಲ್ಲಾ ಅವರನ್ನು ಗೆಲ್ಲಿಸಲೇಬೇಕೆಂದು ಪಣ ತೊಟ್ಟಿದ್ದ ಕಾಂಗ್ರೆಸ್ ಮುಖಂಡರು ಭಲ್ಲಾ ಪರವಾಗಿ ಕ್ಷೇತ್ರದಲ್ಲಿ ರೋಡ್ ಶೋಗಳನ್ನು ನಡೆಸಿದ್ದಾರೆ. ಗುಲಾಂ ನಬಿ ಆಜಾದ್ ಅವರ ಡೆಮಾಕ್ರಟಿಕ್ ಪ್ರೋಗ್ರೆಸಿವ್ ಆಜಾದ್ ಪಕ್ಷವು ಅಭ್ಯರ್ಥಿಯನ್ನು ಕಣಕ್ಕಿಳಿಸದಿರುವುದರಿಂದ ಭಲ್ಲಾ ಅವರಿಗೆ ಅನುಕೂಲವಾಗಲಿದೆ ಎಂದು ಚುನಾವಣಾ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಸಿನಿಮಾ ಪುರವಣಿ

ಬೇಸಿಗೆಯ ಧಗೆ, ಚುನಾವಣೆ ಕಾವು, ಐಪಿಎಲ್ ಕ್ರಿಕೆಟ್ ಭರಾಟೆಯಿಂದಾಗಿ ಬಿಡುಗಡೆಯಾಗುತ್ತಿರುವ ಕನ್ನಡ ಚಿತ್ರಗಳ ಸಂಖ್ಯೆ ಕಳೆದ ಮೂರು ವಾರಗಳಲ್ಲಿ ಗಣನೀಯವಾಗಿ ಕುಸಿದಿದೆ. ಸಿನಿಮಾ ಬಿಡುಗಡೆಗೆ ನಿರ್ಮಾಪಕರು ನಿರಾಸಕ್ತಿ ತೋರುತ್ತಿದ್ದಾರೆ...

ಕನ್ನಡ ಸಿನಿಮಾ ಬಿಡುಗಡೆಗೆ ಹಿಂದೇಟು

ವಿನಾಯಕ ಕೆ.ಎಸ್.

ಈ ವರ್ಷದ ಮೊದಲ ನಾಲ್ಕು ತಿಂಗಳು ಕನ್ನಡ ಚಿತ್ರೋದ್ಯಮದ ಮಟ್ಟಿಗೆ ಅಷ್ಟೇನೂ ಸಿಹಿಯಾಗಿಲ್ಲ. ಜನವರಿ, ಫೆಬ್ರುವರಿಯಲ್ಲಿ ವಾರಕ್ಕೆ ಆರು–ಎಂಟು ಸಿನಿಮಾಗಳು ತೆರೆಕಂಡು, ಕೆಲ ಚಿತ್ರಗಳಿಗೆ ಚಿತ್ರಮಂದಿರಗಳು ಸಿಗುವುದೇ ಕಷ್ಟ ಎಂಬಂಥ ಪರಿಸ್ಥಿತಿ ನಿರ್ಮಾಣವಾಗಿತ್ತು. ಆದರೆ ಮಾರ್ಚ್ ಕೊನೆಯ ವಾರದಿಂದ ಈ ಚಿತ್ರಣ ಸಂಪೂರ್ಣ ಬದಲಾಗಿದೆ. ಚುನಾವಣೆ, ಐಪಿಎಲ್ ಕ್ರಿಕೆಟ್ ಬಿಸಿಯಿಂದಾಗಿ ಕಳೆದ ಮೂರು ವಾರಗಳಲ್ಲಿ ಸಿನಿಮಾ ಬಿಡುಗಡೆ ಸಂಖ್ಯೆ 2–3ಕ್ಕೆ ಇಳಿದಿದೆ. ಅವುಗಳಲ್ಲಿಯೂ ದೊಡ್ಡ ಸ್ಟಾರ್ ನಟರ ಸಿನಿಮಾಗಳಿಲ್ಲ. ಭರವಸೆ ಮೂಡಿಸುವಂತಹ ಸಿನಿಮಾಗಳು ತೆರೆಗೆ ಬರಲಿಲ್ಲ. ಯಾವುದೇ ಪ್ರಚಾರವಿಲ್ಲದೆ, ನಿರ್ಮಾಣಗೊಂಡಿರುವುದಕ್ಕೆ ಬಿಡುಗಡೆ ಶಾಸ್ತ್ರ ಮುಗಿಸಬೇಕೆಂದು ಆರು ತಿಂಗಳುಗಳಿಂದ ಕಾಯುತ್ತಿದ್ದ ಚಿತ್ರಗಳು ತೆರೆಗೆ ಬಂದಿದ್ದೇ ಹೆಚ್ಚು.



ಮಾರ್ಸ್ ಸುರೇಶ್

'ಚುನಾವಣೆ ಸಮಯದಲ್ಲಿ ಸಹಜವಾಗಿ ಕಲೆಕ್ಷನ್ ಆಗುವುದಿಲ್ಲ. ಹೀಗಾಗಿ ನಿರ್ಮಾಪಕರು ಚಿತ್ರ ಬಿಡುಗಡೆಗೆ ಹಿಂದೇಟು ಹಾಕುತ್ತಾರೆ. ಮೇ 10ರಿಂದ ಬಿಡುಗಡೆಗಳು ಪ್ರಾರಂಭವಾಗುತ್ತವೆ. ಬೆಂಗಳೂರಿನಲ್ಲಿ ಸದ್ಯ 8–10 ದೊಡ್ಡ ಚಿತ್ರಮಂದಿರಗಳು ಬಾಗಿಲು ಹಾಕಿವೆ. ಬೇರೆ ಭಾಷೆಯ ದೊಡ್ಡ ಸ್ಟಾರ್‌ಗಳ ಸಿನಿಮಾಗಳೂ ಬರುತ್ತಿಲ್ಲ. ಮಲಯಾಳಂ ಚಿತ್ರಗಳಿಂದ ಕೆಲವು ಚಿತ್ರಮಂದಿರಗಳು ಬದುಕಿಕೊಂಡಿವೆ. ಕಳೆದೊಂದು ತಿಂಗಳಲ್ಲಿ 'ಮಂಜುಮಲ್ ಬಾಯ್ಸ್' ಎಂಬ ಮಲಯಾಳಂ ಚಿತ್ರ ಬೆಂಗಳೂರಿನಲ್ಲಿಯೇ ₹4 ಕೋಟಿ ಗಳಿಕೆ ಕಂಡಿದೆ. ಫಹಾದ್ ಫಾಸಿಲ್ ನಟನೆಯ 'ಆವೇಷಂ'ಗೆ ಜನರ ಪ್ರತಿಕ್ರಿಯೆ ಅತ್ಯುತ್ತಮವಾಗಿದೆ. ಮೋಹನ್‌ಲಾಲ್ ಪುತ್ರ ಪ್ರಣವ್ ಮೋಹನ್‌ಲಾಲ್ ನಟನೆಯ 'ವರ್ಷಂಗಳ್‌ಕ್ ಶೇಷಂ' ಚಿತ್ರದ ಗಳಿಕೆಯೂ ಚೆನ್ನಾಗಿದೆ. ಪೃಥ್ವಿರಾಜ್ ಅವರ 'ಆಡುಜೀವಿತಂ', ಮಮ್ಮುಟಿಯ 'ಭ್ರಮಯುಗಂ', ತೆಲುಗಿನ 'ಟಿಲ್ಲು–2' ಚಿತ್ರಗಳ ಕಲೆಕ್ಷನ್ ಜೋರಾಗಿತ್ತು. ಕನ್ನಡ, ಹಿಂದಿ, ತಮಿಳು ಸಿನಿಮಾಗಳು ಗಳಿಕೆ ದೃಷ್ಟಿಯಿಂದ ಮುಗ್ಗರಿಸಿವೆ. ಕೆಲವು ಇಂಗ್ಲಿಷ್ ಸಿನಿಮಾಗಳು ಉತ್ತಮವಾಗಿದ್ದರೂ, ಬಹಳ ದೊಡ್ಡ ಗಳಿಕೆಯಿಲ್ಲ. ಬಾಲಿವುಡ್ ಅಕ್ಷರಶಃ ಮಲಗಿದೆ. ದಕ್ಷಿಣ ಭಾರತದ ಚಿತ್ರಗಳ ಮೇಲೆ ದೇಶದ ಚಿತ್ರಮಂದಿರಗಳು ಅವಲಂಬಿತವಾಗುವ ಪರಿಸ್ಥಿತಿ ನಿರ್ಮಾಣವಾಗಿದೆ' ಎನ್ನುತ್ತಾರೆ ವಿತರಕ ಮಾರ್ಸ್ ಸುರೇಶ್.

ಕುಸಿದ ಸಂಖ್ಯೆ:

ಕಳೆದ ನಾಲ್ಕು ತಿಂಗಳಿನಲ್ಲಿ ಚಿತ್ರಮಂದಿರಗಳಲ್ಲಿ ಜನ ಮೆಚ್ಚಿದ ಕನ್ನಡ ಚಿತ್ರಗಳ ಸಂಖ್ಯೆ ಬೆರಳೆಣಿಕೆಯಷ್ಟೂ ಇಲ್ಲ. ಪ್ರೇಕ್ಷಕರ ನೀರಸ ಪ್ರತಿಕ್ರಿಯೆ ಕೂಡ ನಿರ್ಮಾಪಕರನ್ನು ಕಂಗೆಡಿಸಿದೆ. ಈ ಗಾಯಕ್ಕೆ ಚುನಾವಣೆ, ಐಪಿಎಲ್ ಬರೆ ಬಿದ್ದಿದೆ. ಮಕ್ಕಳಿಗೆ ಪರೀಕ್ಷೆ, ಬೇಸಿಗೆಯ ಧಗೆಯೂ ಜನರನ್ನು ಚಿತ್ರಮಂದಿರದಿಂದ ದೂರ ಉಳಿಯುವಂತೆ ಮಾಡಿದೆ.

'ಜನವರಿಯಲ್ಲಿ 18 ಸಿನಿಮಾಗಳು ತೆರೆಕಂಡರೆ, ಫೆಬ್ರುವರಿಯಲ್ಲಿ 25 ಚಿತ್ರಗಳು ಬಿಡುಗಡೆಗೊಂಡಿದ್ದವು. ಗಣರಾಜ್ಯೋತ್ಸದ ವಾರದಲ್ಲಿ 8 ಸಿನಿಮಾಗಳು ತೆರೆಗೆ ಬಂದು ಚಿತ್ರಮಂದಿರಗಳಿಗಾಗಿ ತೀವ್ರ ಪೈಪೋಟಿ ಎದುರಾಗಿತ್ತು. ಮಾರ್ಚ್ ಮೊದಲ ಮೂರು ವಾರಗಳಲ್ಲಿಯೂ 6ಕ್ಕಿಂತ ಹೆಚ್ಚು ಸಿನಿಮಾಗಳಿದ್ದವು. ಮಾರ್ಚ್‌ನಲ್ಲಿ ಒಟ್ಟು 25 ಸಿನಿಮಾಗಳು ತೆರೆಗೆ ಬಂದರೆ, ಏಪ್ರಿಲ್‌ನಲ್ಲಿ 17 ಕ್ಕೆ ಕುಸಿದಿದೆ. ಮೇ ಮೊದಲ ವಾರವೂ ಹೆಚ್ಚು ಚಿತ್ರಗಳಿಲ್ಲ' ಎನ್ನುತ್ತಾರೆ ಸಿನಿಮಾ ಅಂಕಿ–ಅಂಶಗಳನ್ನು ಕಲೆಹಾಕುವ ಪಿಆರ್‌ಒ ವಿಜಯಕುಮಾರ್.

'ಕನ್ನಡ ಸಿನಿಮಾಗಳಿಗೆ ಹರಸಾಹಸ ಮಾಡಿದರೂ ಜನ ಬರುತ್ತಿಲ್ಲ. ಮಾಮೂಲಿ ಪ್ರೇಮಕಥೆ, ಇಲ್ಲವಾದರೆ ಹೊಡಿಬಡಿ ಕಥೆಗಳ ಸಿನಿಮಾಗಳಿಂದ ಜನ ಬೇಸತ್ತಿದ್ದಾರೆ. ಬೇರೆ ರೀತಿಯ ಕಂಟೆಂಟ್ ಬೇಕಿದೆ. ಇತ್ತೀಚೆಗೆ ತೆರೆಕಂಡ 'ಬ್ಲಿಂಕ್' ಮತ್ತು 'ಶಾಖಾಹಾರಿ' ಸಿನಿಮಾಗಳು ಭಿನ್ನ ಕಂಟೆಂಟ್‌ನಿಂದಲೇ ತಕ್ಕಮಟ್ಟಿನ ಗಳಿಕೆಯೊಂದಿಗೆ ಜನಮನ್ನಣೆ ಪಡೆದವು. ಬಿಡುಗಡೆಗೆ ಸಿದ್ಧವಿರುವ ಸಿನಿಮಾಗಳು ಸಾಕಷ್ಟಿವೆ. ಆದರೆ ಬಿಡುಗಡೆ ಮಾಡಲು ನಿರ್ಮಾಪಕರಿಗೆ ಧೈರ್ಯ ಬರುತ್ತಿಲ್ಲ. ಇವತ್ತು ಎಲ್ಲರೂ ಕಂಟೆಂಟ್ ಕ್ರಿಯೇಟರ್‌ಗಳು. ಸಾಮಾಜಿಕ ಜಾಲತಾಣ, ಯೂಟ್ಯೂಬ್ ಸ್ಟಾರ್‌ಗಳು. ಪ್ರಚಾರಕ್ಕೆ ಕನಿಷ್ಠ ₹30–40 ಲಕ್ಷ ಬೇಕಿದೆ. ರಿಲೀಸ್‌ಗೆ ಹಾಕಿದ ಹಣ ವಾಪಸ್ ಬರುವ ಭರವಸೆಯಿಲ್ಲ. ಬಹುತೇಕ ಚಿತ್ರಗಳದ್ದು ಫೇಕ್ ಪ್ರಚಾರ ಎಂಬುದು ಜನಕ್ಕೆ ಮನದಟ್ಟಾಗಿದೆ. ಹೀಗಾಗಿ ಜನ ನಮ್ಮ ಚಿತ್ರಗಳ ಮೇಲೆ ನಂಬಿಕೆ ಕಳೆದುಕೊಂಡಿದ್ದಾರೆ. ಜನರ ನಂಬಿಕೆ ಮರುಗಳಿಸುವಂಥ ಚಿತ್ರಗಳನ್ನು ಮಾಡುವುದೊಂದೇ ಪರಿಹಾರ' ಎಂದು ಅಭಿಪ್ರಾಯಪಡುತ್ತಾರೆ ನಿರ್ಮಾಪಕ ನಾಗೇಶ್ ಕುಮಾರ್ ಯು.

> **'ಗ್ರಾಫಿಕ್ಸ್ ಕೆಲಸದಿಂದ ಉಪೇಂದ್ರ ನಿರ್ದೇಶಿಸಿ, ಅಭಿನಯಿಸಿರುವ 'ಯುಐ' ಚಿತ್ರ ಬಿಡುಗಡೆಯಾಗುವುದು ವಿಳಂಬವಾಗಿದೆ. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಏಪ್ರಿಲ್‌ನಲ್ಲಿಯೇ ಬರಬೇಕಿತ್ತು. ಜೂನ್‌ನಲ್ಲಿ ಚಿತ್ರ ತೆರೆಗೆ ಬರಲಿದೆ'**
> **ಕೆ.ಪಿ.ಶ್ರೀಕಾಂತ್,** ಚಿತ್ರದ ನಿರ್ಮಾಪಕರಲ್ಲೊಬ್ಬರು.

ಗಮನ ಸೆಳೆದ ಚಿತ್ರಗಳು:

ಈ ವರ್ಷ ಇಲ್ಲಿತನಕ ಬಿಡುಗಡೆಗೊಂಡ ಸುಮಾರು 85 ಕನ್ನಡ ಚಿತ್ರಗಳಲ್ಲಿ ಜನ ಮಾತಾಡಿದ ಚಿತ್ರಗಳ ಸಂಖ್ಯೆ ಹತ್ತು ದಾಟುವುದಿಲ್ಲ. 'ಯುವ', 'ಉಪಾಧ್ಯಕ್ಷ' ಹೊರತುಪಡಿಸಿ 'ಒಂದು ಸರಳ ಪ್ರೇಮಕಥೆ', 'ಬ್ಲಿಂಕ್', 'ಶಾಖಾಹಾರಿ', 'ಕೆರೆಬೇಟೆ', 'ಕೆಟಿಎಂ', 'ಫೋಟೊ', 'O2' ಸಿನಿಮಾಗಳ ಕುರಿತು ಪ್ರೇಕ್ಷಕರಿಂದ ಮೆಚ್ಚುಗೆ ಮಾತು ಕೇಳಿಬಂದವು. 'ಒಂದು ಸರಳ ಪ್ರೇಮಕಥೆ' ಟಿವಿ ಮತ್ತು ಒಟಿಟಿ ಎರಡರಲ್ಲಿಯೂ ಪ್ರಸಾರಗೊಂಡಿದೆ.

ಹಕ್ಕುಗಳು ಮಾರಾಟವಾಗುತ್ತಿಲ್ಲ

'ಎಲೆಕ್ಷನ್, ಐಪಿಎಲ್‌ನಿಂದಾಗಿ ಚಿತ್ರ ಬಿಡುಗಡೆ ಕಡಿಮೆಯಾಗಿರುವುದು ನಿಜ. ಆದರೆ ಸ್ಟಾರ್ ನಟರ ಸಿನಿಮಾಗಳ ಟಿವಿ, ಡಿಜಿಟಲ್ ಹಕ್ಕುಗಳು ಮಾರಾಟವಾಗದೇ ಇರುವುದು ದೊಡ್ಡ ನಾಯಕರ ಸಿನಿಮಾಗಳು ತೆರೆ ಕಾಣದಿರಲು ಮುಖ್ಯ ಕಾರಣ. ಚಿತ್ರಮಂದಿರಕ್ಕೆ ಬಂದ ನಂತರ ಮಾಮೂಲಿ ಎನ್ನಿಸಿಕೊಂಡರೆ ಹಕ್ಕುಗಳು ಉತ್ತಮ ಮೊತ್ತಕ್ಕೆ ಹೋಗುವುದಿಲ್ಲ. ಹಾಕಿದ ಬಂಡವಾಳ ಮರುಗಳಿಕೆ ಕಷ್ಟ. ಸೂಪರ್ ಹಿಟ್ ಆದರೆ ಮಾತ್ರ ಲಾಭ ನೋಡಬಹುದು. ಹೀಗಾಗಿ ಬಿಡುಗಡೆಗೆ ಮೊದಲೇ ಹಕ್ಕುಗಳನ್ನು ಮಾರಿಕೊಳ್ಳುವುದು ಅನಿವಾರ್ಯವಾಗಿದೆ. ನಮ್ಮದೇ ನಿರ್ಮಾಣ ಸಂಸ್ಥೆಯ ಎರಡು ಸಿನಿಮಾಗಳು ಬಿಡುಗಡೆಗಾಗಿ ಕಾಯುತ್ತಿವೆ' ಎನ್ನುತ್ತಾರೆ ನಿರ್ಮಾಪಕ, ವಿತರಕ ಜಯಣ್ಣ.



ಮಲಯಾಳಂಗೆ ಅಗ್ರಸ್ಥಾನ

'ಸ್ವಂತದ್ದು, ಭೋಗ್ಯದ್ದು ಸೇರಿ 25ಕ್ಕೂ ಹೆಚ್ಚು ಚಿತ್ರಮಂದಿರಗಳಿವೆ. ಈ ವಾರ ಕೆ.ಜಿ ರಸ್ತೆಯ ಪ್ರಮುಖ ಚಿತ್ರಮಂದಿರದಲ್ಲಿಯೇ ಚಿತ್ರ ಇಲ್ಲದಂತಾಗಿದೆ. ಬೆಳಿಗ್ಗೆ ಬಿಡುಗಡೆಯಾದ ಚಿತ್ರ ಸಂಜೆ ವೇಳೆಗೆ ಆಟ ಮುಗಿಸಿರುತ್ತದೆ. ಕನ್ನಡದಲ್ಲಿ 'ಉಪಾಧ್ಯಕ್ಷ', 'ಯುವ' ಸಿನಿಮಾಗಳು ತಕ್ಕಮಟ್ಟಿಗೆ ಗಳಿಕೆ ಕಂಡವು. ಉಳಿದಂತೆ ಕಳೆದ 4 ತಿಂಗಳಲ್ಲಿ ಯಾವ ಚಿತ್ರಗಳಿಂದಲೂ ಆದಾಯ ಬಂದಿಲ್ಲ. ವಾರಕ್ಕೆ ₹2 ಲಕ್ಷ ಖರ್ಚಿದೆ. ಆದರೆ ಗಳಿಕೆ ಮಾತ್ರ ಶೂನ್ಯ. ಈ ಅವಧಿಯಲ್ಲಿ 12 ಮಲಯಾಳಂ ಸಿನಿಮಾಗಳು ಹಿಟ್ ಆಗಿವೆ. ಅದರಲ್ಲಿ 6 ಸೂಪರ್ ಹಿಟ್. ಅವರದ್ದು ವಾರಕ್ಕೆ 2 ಸಿನಿಮಾ ಹಿಟ್ ಆಗುತ್ತಿದೆ. ಬೆಂಗಳೂರಿನಲ್ಲಿ ಮಲಯಾಳಂಗೆ ಅಗ್ರಸ್ಥಾನ' ಎಂದರು ವಿತರಕ, ಚಿತ್ರಮಂದಿರ ಮಾಲೀಕ ಜಯಣ್ಣ.

ಡಾ.ಸೌಮ್ಯ

ತೆರೆಗೆ ಬರಲು ಸಜ್ಜಾದ 'ಇತ್ಯಾದಿ'

ಮರ್ಡರ್ ಮಿಸ್ಟ್ರಿ ಕಥೆ ಹೊಂದಿರುವ ಹೊಸಬರ 'ಇತ್ಯಾದಿ' ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ಡಿ.ಯೋಗರಾಜ್ ನಿರ್ದೇಶನದ ಚಿತ್ರಕ್ಕೆ ಮಹೇಂದ್ರನ್, ಶ್ರೀನಿವಾಸ್ ಮತ್ತು ನೀಲಕಂಠನ್ ಬಂಡವಾಳ ಹೂಡಿದ್ದಾರೆ.

'ಮರ್ಡರ್ ಮಿಸ್ಟ್ರಿ, ಕ್ರೈಂ, ಥ್ರಿಲ್ಲರ್ ಕಥೆಯನ್ನು ಒಳಗೊಂಡಿದೆ. ಶೇಕಡ 75ರಷ್ಟು ಕಾಲ್ಪನಿಕ ಕಥೆಯಾಗಿದ್ದು, ಮಿಕ್ಕಿದ್ದು ಸತ್ಯ ಘಟನೆ. ಶೃಂಗೇರಿ ಬಳಿ ಇರುವ ಬಿಳಿಗದ್ದೆ ಎಂಬ ಊರಿನಲ್ಲಿ ಕಲ್ಲು ದೇವರು ಇರುತ್ತದೆ. ಅದಕ್ಕೆ ತಾಯಿ ಹೊಟ್ಟೆಯಲ್ಲಿ ಹುಟ್ಟಬೇಕೆಂಬ ಆಸೆಯಾಗಿರುತ್ತದೆ. ಅದು ಕೊನೆಗೂ ಕಲ್ಲಾಗೇ ಹುಟ್ಟುತ್ತದೆ. ಊರಿನಲ್ಲಿರುವ ಗರ್ಭಿಣಿಯರು ಆ ಜಾಗಕ್ಕೆ ಹೋಗಿ ಪೂಜೆ ಮಾಡಿಕೊಂಡು ಬಂದರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ. ಆದರೆ ಅಲ್ಲಿಗೆ ಹೋದವರೆಲ್ಲಾ ಕೊಲೆಯಾಗುತ್ತಿರುತ್ತಾರೆ. ಇದನ್ನು ಮಾಡುವವರು ಯಾರು? ಯಾಕೆ? ಎಂಬುದನ್ನು ಕುತೂಹಲಕಾರಿಯಾಗಿ ತೋರಿಸಲಾಗಿದೆ' ಎಂದರು ನಿರ್ದೇಶಕರು.

ನಾಯಕ ಸಚಿನ್‌ಗೆ ಡಾ.ಸೌಮ್ಯ ಜೋಡಿಯಾಗಿದ್ದಾರೆ. ಮಹೇಶ್.ಬಿ, ಅರ್ಚನಾ ಉದಯಕುಮಾರ್ ಮುಂತಾದವರು ನಟಿಸಿದ್ದಾರೆ. ಶೃಂಗೇರಿ, ಚಿಕ್ಕಮಗಳೂರು, ಆಗುಂಬೆ ಸುತ್ತಮುತ್ತಲು ಚಿತ್ರೀಕರಣಗೊಂಡಿದೆ. ಎರಡು ಹಾಡುಗಳಿಗೆ ಪುಣ್ಯೇಶ್ ಸಂಗೀತ ಸಂಯೋಜಿಸಿದ್ದು, ಭರಣಿ ಡಿ.ಯೋಗರಾಜ್-ಲಕ್ಷೀಕಾಂತ್ ಛಾಯಾಚಿತ್ರಗ್ರಹಣವಿದೆ.

ಮೇ 10ಕ್ಕೆ 'ಗ್ರೇ ಗೇಮ್ಸ್' ಬಿಡುಗಡೆ

ಗೋವಾದಲ್ಲಿ ನಡೆದ 54ನೇ ಭಾರತದ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಪ್ರದರ್ಶನ ಕಂಡು ಮೆಚ್ಚುಗೆ ಪಡೆದಿದ್ದ ಗಂಗಾಧರ್ ಸಾಲಿಮಠ ನಿರ್ದೇಶನದ 'ಗ್ರೇ ಗೇಮ್ಸ್' ಬಿಡುಗಡೆಗೆ ದಿನಾಂಕ ನಿಗದಿಯಾಗಿದೆ.

ವಿಜಯ ರಾಘವೇಂದ್ರ ನಟನೆಯ ಸಸ್ಪೆನ್ಸ್ ಡ್ರಾಮಾ ಶೈಲಿಯ ಈ ಸಿನಿಮಾ ಮೇ 10ರಂದು ರಿಲೀಸ್ ಆಗಲಿದೆ. 'ಇಲ್ಲಿ ಚಿಂತನೆಗಳ ಪ್ರಚೋದನೆ ನಡೆಯುತ್ತದೆ. ಸರಿ ತಪ್ಪುಗಳ ಗ್ರಹಿಕೆಗಳಿಗೂ ಸವಾಲೆಸೆಯಲಾಗುತ್ತದೆ. ಇದೆಲ್ಲದಕ್ಕಿಂತ ಹೆಚ್ಚಾಗಿ ಆನ್‌ಲೈನ್ ಗೇಮಿಂಗ್ ಪೈಪೋಟಿ ಜೊತೆಗೆ ಮೆಟಾವರ್ಸ್‌ನ ಸಂಕೀರ್ಣತೆಗಳ ಬೆಸುಗೆ ಗ್ರೇ ಗೇಮ್ಸ್' ಎಂದಿದೆ ಚಿತ್ರತಂಡ. ಸೆನ್ಸಾರ್ ಮಂಡಳಿಯಿಂದ ಚಿತ್ರಕ್ಕೆ ಯು/ಎ ಪ್ರಮಾಣ ಪತ್ರ ದೊರಕಿದ್ದು, ಚಿತ್ರದಲ್ಲಿ ವಿಜಯ ರಾಘವೇಂದ್ರ ಜೊತೆಗೆ ಭಾವನಾ ರಾವ್, ಶ್ರುತಿ ಪ್ರಕಾಶ್, ಅಪರ್ಣಾ, ರವಿ ಭಟ್ ಮುಖ್ಯಭೂಮಿಕೆಯಲ್ಲಿದ್ದಾರೆ.

ಆನ್‌ಲೈನ್ ಗೇಮಿಂಗ್ ಹಿನ್ನೆಲೆಯಲ್ಲಿ ಸಾಗುವ ಈ ಸಿನಿಮಾದಲ್ಲಿ ಸೈಕಾಲಜಿಸ್ಟ್ ಆಗಿ ವಿಜಯ ರಾಘವೇಂದ್ರ ನಟಿಸಿದರೆ, ಸೈಬರ್ ಕ್ರೈಂ ತನಿಖಾಧಿಕಾರಿಯಾಗಿ ಭಾವನಾ ರಾವ್ ಕಾಣಿಸಿಕೊಂಡಿದ್ದಾರೆ. ವೃತ್ತಿಪರ ಗೇಮರ್ ಆಗಿ ಜೈ, ಚಿತ್ರನಟಿಯಾಗಿ ಶ್ರುತಿ ಪ್ರಕಾಶ್ ಸಿನಿಮಾದಲ್ಲಿದ್ದಾರೆ.

ಚಿತ್ರದ ಪೋಸ್ಟರ್

ಆನಂದ್ ಮುಗದ್ ಈ ಸಿನಿಮಾ ನಿರ್ಮಾಣ ಮಾಡಿದ್ದು, ವರುಣ್ ಡಿಕೆ ಛಾಯಾಚಿತ್ರಗ್ರಹಣ, ಜಗದೀಶ್ ಎನ್. ಸಂಕಲನ ಚಿತ್ರಕ್ಕಿದೆ.

'ವಾಸ್ತವ ಮತ್ತು ವರ್ಚ್ಯುವಾಲಿಟಿ ಹೆಣೆದುಕೊಂಡಿರುವ ಜಗತ್ತಿನಲ್ಲಿ ಸರಿ ಮತ್ತು ತಪ್ಪುಗಳು ನಮ್ಮ ಗ್ರಹಿಕೆಗೆ ಸವಾಲು ಹಾಕುತ್ತವೆ. ಆನ್‌ಲೈನ್ ಗೇಮಿಂಗ್ ಜೊತೆಗೆ ಮಾನಸಿಕ ಆರೋಗ್ಯ, ತಂತ್ರಜ್ಞಾನದ ವಿಚಾರವೂ ಸಿನಿಮಾದಲ್ಲಿರಲಿದೆ. ನೋಡುಗನನ್ನು ಭಾವನಾತ್ಮಕವಾಗಿಯೂ ಯೋಚನೆಗೆ ಇಳಿಸುವ ಶಕ್ತಿ ಈ ಚಿತ್ರಕ್ಕಿದೆ. ಖಂಡಿತವಾಗಿಯೂ ಪ್ರೇಕ್ಷಕರಿಗೆ ಇಷ್ಟವಾಗುವ ಚಿತ್ರ. ಜೊತೆಗೆ ಮನಸ್ಸಿನ ಮೇಲೆ ಅಷ್ಟೇ ಪರಿಣಾಮ ಬೀರಲಿದೆ' ಎನ್ನುತ್ತಾರೆ ನಿರ್ದೇಶಕರು.

ಎರಡು ಚಿತ್ರಗಳು ತೆರೆಗೆ

ಎರಡು ಸಿನಿಮಾಗಳು ಇಂದು (ಏ.26) ಬಿಡುಗಡೆಯಾಗುತ್ತಿವೆ. ಹಾರರ್, ಥ್ರಿಲ್ಲರ್ ಕಥಾವಸ್ತು ಹೊಂದಿರುವ 'ಆತ್ಮ' ಚಿತ್ರ ತೆರೆ ಕಾಣುತ್ತಿದೆ. ಎಸ್.ಆರ್.ಪ್ರಮೋದ್ ನಿರ್ದೇಶನದ ಚಿತ್ರಕ್ಕೆ ಅನಿಲ್.ಸಿ.ಆರ್ ಬಂಡವಾಳ ಹೂಡಿದ್ದಾರೆ. ಜೊತೆಗೆ ಇವರೇ ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ. ಕಾವ್ಯ ಚಿತ್ರದ ನಾಯಕಿ. ಬಹುತೇಕ ಹೊಸಬರೇ ತಾರಾಗಣದಲ್ಲಿದ್ದಾರೆ. ಎರಡು ಹಾಡುಗಳಿಗೆ ನಿತಿನ್‌ರಾಜ್ ಸಂಗೀತ ಸಂಯೋಜಿಸಿದ್ದಾರೆ. ರಣಧೀರ್ ನಾಯಕ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

'ರಾಮ ಮತ್ತು ರಾಮು' ಎಂಬ ಮತ್ತೊಂದು ಚಿತ್ರ ಬಿಡುಗಡೆ ಆಗುತ್ತಿದೆ. ನಿರ್ದೇಶಕ, ನಿರ್ಮಾಪಕ ಸೇರಿದಂತೆ ಬಹುತೇಕ ವಿಭಾಗಗಳಲ್ಲಿ ಚಂದ್ರು ಓಬಯ್ಯ ಕಾಣಿಸಿಕೊಂಡಿದ್ದಾರೆ.

ಕಾವ್ಯ

'ದ ಜಡ್ಜ್‌ಮೆಂಟ್' ಚಿತ್ರೀಕರಣ ಪೂರ್ಣ

ಮೇಘನಾ ಗಾಂವ್ಕರ್

ಕ್ರೇಜಿಸ್ಟಾರ್ ರವಿಚಂದ್ರನ್ ಪ್ರಮುಖ ಪಾತ್ರದಲ್ಲಿ ನಟಿಸಿರುವ 'ದ ಜಡ್ಜ್‌ಮೆಂಟ್' ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದೆ.

ಜಿ9 ಕಮ್ಯೂನಿಕೇಷನ್ ಮೀಡಿಯಾ ಆ್ಯಂಡ್ ಎಂಟರ್‌ಟೈನ್ಮೆಂಟ್ ಲಾಂಛನದಲ್ಲಿ ಈ ಚಿತ್ರ ನಿರ್ಮಾಣವಾಗಿದ್ದು, ಶೀಘ್ರದಲ್ಲೇ ತೆರೆಗೆ ಬರಲಿದೆ ಎಂದಿದ್ದಾರೆ ನಿರ್ದೇಶಕ ಗುರುರಾಜ ಕುಲಕರ್ಣಿ. ಈ ಹಿಂದೆ 'ಆಕ್ಸಿಡೆಂಟ್', 'ಲಾಸ್ಟ್ ಬಸ್', 'ಅಮೃತ ಅಪಾರ್ಟ್‌ಮೆಂಟ್ಸ್' ಚಿತ್ರಕ್ಕೆ ಗುರುರಾಜ ಆ್ಯಕ್ಷನ್ ಕಟ್ ಹೇಳಿದ್ದರು. 'ಈ ಚಿತ್ರವನ್ನು ನಾನು ಸೇರಿದಂತೆ ಐವರು ನಿರ್ಮಾಪಕರು ನಿರ್ಮಿಸಿದ್ದೇವೆ. ಚಿತ್ರವು ಕೋರ್ಟ್ ರೂಮ್ ಥ್ರಿಲ್ಲರ್ ಕಥಾಹಂದರ ಹೊಂದಿದೆ' ಎಂದಿದ್ದಾರೆ ಗುರುರಾಜ.

ಚಿತ್ರೀಕರಣದ ಕೊನೆಯ ಹಂತದಲ್ಲಿ ನಟಿ ಮೇಘನಾ ಗಾಂವ್ಕರ್ ಚಿತ್ರತಂಡ ಸೇರಿಕೊಂಡಿದ್ದು, ರವಿಚಂದ್ರನ್ ಜೊತೆಗೆ ತೆರೆಹಂಚಿಕೊಂಡಿದ್ದಾರೆ. ಉಳಿದಂತೆ ದಿಗಂತ್ , ಧನ್ಯಾ ರಾಮ್‌ಕುಮಾರ್, ಲಕ್ಷ್ಮೀ ಗೋಪಾಲಸ್ವಾಮಿ, ಟಿ.ಎಸ್. ನಾಗಾಭರಣ, ಪ್ರಕಾಶ್ ಬೆಳವಾಡಿ, ರಂಗಾಯಣ ರಘು, ರವಿಶಂಕರ್ ಗೌಡ, ಸುಜಯ್ ಶಾಸ್ತ್ರಿ, ಕೃಷ್ಣ ಹೆಬ್ಬಾಳೆ, ರೇಖಾ ಕೂಡ್ಲಿಗಿ, ನವಿಲ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ಪಿ.ಕೆ.ಎಚ್. ದಾಸ್ ಛಾಯಾಚಿತ್ರಗ್ರಹಣ, ಕೆಂಪರಾಜ್ ಸಂಕಲನ ಚಿತ್ರಕ್ಕಿದೆ. ಅನೂಪ್ ಸೀಳಿನ್ ಸಂಗೀತ ನೀಡಿದ್ದಾರೆ.

ಪೃಥ್ವಿಗೆ 'ರಥಾವರ' ಸಾರಥಿಯ ಆ್ಯಕ್ಷನ್ ಕಟ್

'ದಿಯಾ' ಖ್ಯಾತಿಯ ಪೃಥ್ವಿ ಅಂಬಾರ್ ಚಂದನವನದಲ್ಲಿ ಸಾಲು ಸಾಲು ಸಿನಿಮಾಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಈ ವರ್ಷ ಇಲ್ಲಿಯವರೆಗೆ ಪೃಥ್ವಿ ನಟನೆಯ 'ಜೂನಿ', 'ಫಾರ್ ರಿಜಿಸ್ಟ್ರೇಷನ್' ಹಾಗೂ 'ಮತ್ಸ್ಯಗಂಧ' ಸಿನಿಮಾಗಳು ಬಿಡುಗಡೆಯಾಗಿದ್ದು, 'ಭುವನಂ ಗಗನಂ' ಚಿತ್ರ ತೆರೆಗೆ ಬರಲು ಸಜ್ಜಾಗುತ್ತಿದೆ. ಇದೇ ಸಂದರ್ಭದಲ್ಲಿ ಹೊಸ ಪ್ರಾಜೆಕ್ಟ್‌ಗೆ ಹಸಿರು ನಿಶಾನೆ ನೀಡಿದ್ದಾರೆ ಪೃಥ್ವಿ.

ಶ್ರೀಮುರಳಿ ನಟನೆಯ 'ರಥಾವರ' ಸಿನಿಮಾ ನಿರ್ದೇಶಿಸಿದ್ದ ಚಂದ್ರಶೇಖರ್ ಬಂಡಿಯಪ್ಪ ಇದೀಗ ಪೃಥ್ವಿಗೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ. 'ಆನೆ ಪಟಾಕಿ' ಮೂಲಕ ಚಂದನವನಕ್ಕೆ ಹೆಜ್ಜೆ ಇಟ್ಟಿದ್ದ ಚಂದ್ರಶೇಖರ್ ನಂತರ 'ರಥಾವರ', 'ತಾರಕಾಸುರ' ಸಿನಿಮಾ ಮಾಡಿದರು. ಗುರುದತ್ ಗಾಣಿಗ ನಿರ್ದೇಶನದ 'ಕರಾವಳಿ' ಚಿತ್ರಕ್ಕೂ ಚಂದ್ರಶೇಖರ್ ಕಥೆ ಬರೆದಿದ್ದು, ಇದೀಗ ಹೊಸ ಕಥೆಯೊಂದನ್ನು ಹೊತ್ತು ಬಂದಿದ್ದಾರೆ. ಆ್ಯಕ್ಷನ್ ಜಾನರ್‌ನಿಂದ ಕೌಟುಂಬಿಕ ಕಥೆಗಳತ್ತ ಚಂದ್ರಶೇಖರ್ ಹೊರಳಿದ್ದು, ಇದೊಂದು ಫ್ಯಾಮಿಲಿ ಎಂಟರ್‌ಟೇನರ್ ಎಂದಿದ್ದಾರೆ. ಪೃಥ್ವಿ-ಚಂದ್ರಶೇಖರ್ ಬಂಡಿಯಪ್ಪ ಕಾಂಬಿನೇಷನ್‌ನ ಸಿನಿಮಾವನ್ನು ವಿದ್ಯಾ ಶೇಖರ್ ಎಂಟರ್‌ಪ್ರೈಸಸ್ ಬ್ಯಾನರ್ ಅಡಿಯಲ್ಲಿ ಕಲ್ಲಹಳ್ಳಿ ಚಂದ್ರಶೇಖರ್ ನಿರ್ಮಾಣ ಮಾಡುತ್ತಿದ್ದಾರೆ. ಸಚಿನ್ ಬಸ್ರೂರ್ ಈ ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡುತ್ತಿದ್ದಾರೆ. 'ಚಿತ್ರದ ಶೀರ್ಷಿಕೆ ಇನ್ನಷ್ಟೇ ಘೋಷಣೆಯಾಗಬೇಕಿದ್ದು, ತಾರಾಬಳಗ ಹಾಗೂ ತಾಂತ್ರಿಕ ಬಳಗವನ್ನು ಶೀಘ್ರದಲ್ಲೇ ಘೋಷಿಸಲಾಗುವುದು' ಎಂದಿದ್ದಾರೆ ಚಂದ್ರಶೇಖರ್.



ಪೃಥ್ವಿ ಅಂಬಾರ್

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,402
ಇಂದಿನ ಅಂತ್ಯ	22,570
▲	167
ದಿನದ ಗರಿಷ್ಠ	22,625

ವಿನಿಮಯ ದರ

$ ಡಾಲರ್	83.28
£ ಪೌಂಡ್	104.25
€ ಯೂರೊ	89.36
¥ ಯೆನ್ (100ಕ್ಕೆ)	54

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹435
12 ಕ್ಕೆ	₹60
ಮೈಸೂರು	
100ಕ್ಕೆ	₹438

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1490 (1510)
ಸೋಯಾ (ರಿಫೈನ್ಡ್)	₹925 (930)
ಸೂರ್ಯಕಾಂತಿ (ರಿಫೈನ್ಡ್)	₹917 (930)
ಪಾಮೊಲಿನ್	₹913 (925)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹208-468
ದ್ವಿತಳಿ (ಬಿ.ವಿ)	₹268-588

ಎನ್.ಆರ್.ಪುರ ರಬ್ಬರ್ (ಪ್ರತಿ ಕೆಜಿಗೆ)

ಆರ್‌ಎಸ್‌ಎಸ್-4	₹176
ಆರ್‌ಎಸ್‌ಎಸ್-5	₹170
ಲಾಟ್	₹160

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7800-9200
ಬೆಂಗಳೂರು	₹9500-11500
ಕೆ.ಆರ್.ಪೇಟೆ	₹9550-9550
ತಿಪಟೂರು	₹8300-9250

ಈರುಳ್ಳಿ ದರ ತೀವ್ರ ಕುಸಿತ

ಸಾರ್ವಜನಿಕರಿಗೆ ಉಚಿತವಾಗಿ ವಿತರಿಸಿ ರೈತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಈರುಳ್ಳಿ ಬೆಲೆ ಕುಸಿತ ಖಂಡಿಸಿ, ಹೊಸಪೇಟೆಯಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ವಿತರಿಸುವ ಮೂಲಕ ಪ್ರತಿಭಟಿಸಲಾಯಿತು –ಪ್ರಜಾವಾಣಿ ಚಿತ್ರ

ಹೊಸಪೇಟೆ (ವಿಜಯನಗರ ಜಿಲ್ಲೆ): ಈರುಳ್ಳಿ ಬೆಲೆ ತೀವ್ರವಾಗಿ ಕುಸಿದಿದೆ. ಆದರೆ, ಕೇಂದ್ರ ಸರ್ಕಾರವು ನೆರವಿಗೆ ಬರುತ್ತಿಲ್ಲ ಎಂದು ಆರೋಪಿಸಿ ನಗರದಲ್ಲಿ ಗುರುವಾರ ರೈತರು, ಸಾರ್ವಜನಿಕರಿಗೆ ಉಚಿತವಾಗಿ ಈರುಳ್ಳಿ ಹಂಚುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಾಧ್ಯಕ್ಷ ಜೆ.ಎಂ. ವೀರಸಂಗಯ್ಯ ಅವರ ನೇತೃತ್ವದಲ್ಲಿ ಇಲ್ಲಿನ ಪುನೀತ್ ರಾಜ್‌ಕುಮಾರ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಈರುಳ್ಳಿ ಬೆಳೆಗಾರರು, ಕೇಂದ್ರದ ವಿರುದ್ಧ ಘೋಷಣೆ ಕೂಗಿದರು.

'ಎಪಿಎಂಸಿಯಲ್ಲಿ ಕಳೆದ ವಾರ ಒಂದು ಕ್ವಿಂಟಲ್‌ಗೆ ₹1,200 ಇದ್ದ ದರವು ಈಗ ₹600ಕ್ಕೆ ಇಳಿದಿದೆ. ಈರುಳ್ಳಿ ಬೆಲೆ ಹೆಚ್ಚಾದಾಗ ಬೇರೆ ದೇಶಗಳಿಂದ ಈರುಳ್ಳಿ ತರಿಸಲು ಮುಂದಾಗುವ ಸರ್ಕಾರವು ಬೆಲೆ ಕುಸಿದಾಗ ರೈತರ ನೆರವಿಗೆ ಏಕೆ ಬರುತ್ತಿಲ್ಲ' ಎಂದು ವೀರಸಂಗಯ್ಯ ಪ್ರಶ್ನಿಸಿದರು.

'ಹೊಸಪೇಟೆ ಎಪಿಎಂಸಿಯಲ್ಲಿ ಮೂರು ಮೂಟೆ ಈರುಳ್ಳಿ ತಂದು ಇಟ್ಟರೂ ಇದುವರೆಗೂ ಖರೀದಿಯೇ ಆಗಿಲ್ಲ. ಒಂದು ಎಕರೆಗೆ ಈರುಳ್ಳಿ ಬೆಳೆಯಲು ₹80 ಸಾವಿರ ಖರ್ಚು ಬರುತ್ತದೆ. ಹೀಗಾಗಿ ಈರುಳ್ಳಿಯನ್ನು ಚರಂಡಿಗೆ ಎಸೆದು ಪ್ರತಿಭಟಿಸಲು ನಿರ್ಧರಿಸಿದ್ದ, ತಿನ್ನುವ ಪದಾರ್ಥವನ್ನು ಎಸೆಯುವುದು ಬೇಡ ಎಂಬ ಕಾರಣಕ್ಕೆ ಅದನ್ನು ಉಚಿತವಾಗಿ ಹಂಚಿ ಸರ್ಕಾರದ ಧೋರಣೆ ಖಂಡಿಸಿದ್ದೇನೆ' ಎಂದು ರೈತ ಸಂಘದ ಜಿಲ್ಲಾ ಕಾರ್ಯದರ್ಶಿಯೂ ಆಗಿರುವ ಈರುಳ್ಳಿ ಬೆಳೆಗಾರ ಗೋಣಿಬಸಪ್ಪ ಹೇಳಿದರು.

ನೆಸ್ಲೆ ಉತ್ಪನ್ನದ ಮಾದರಿ ಸಂಗ್ರಹ ಆರಂಭ

ನವದೆಹಲಿ (ಪಿಟಿಐ): 'ದೇಶದ ವಿವಿಧೆಡೆ ನೆಸ್ಲೆ ಇಂಡಿಯಾ ಕಂಪನಿಯ ಶಿಶು ಆಹಾರವಾದ 'ಸೆರೆಲಾಕ್'ನ ಮಾದರಿಯನ್ನು ಸಂಗ್ರಹಿಸಲಾಗುತ್ತಿದೆ' ಎಂದು ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ (ಎಫ್‌ಎಸ್‌ಎಸ್‌ಎಐ) ಸಿಇಒ ಜಿ. ಕಮಲ ವರ್ಧನ ರಾವ್ ತಿಳಿಸಿದ್ದಾರೆ.

ಭಾರತೀಯ ವಾಣಿಜ್ಯೋದ್ಯಮ ಮಹಾಸಂಘವು ಆಯೋಜಿಸಿದ್ದ ಸಂವಾದದಲ್ಲಿ ಈ ಕುರಿತು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಇನ್ನು 15ರಿಂದ 20 ದಿನದೊಳಗೆ ಮಾದರಿ ಸಂಗ್ರಹಿಸುವ ಪ್ರಕ್ರಿಯೆಯು ಪೂರ್ಣಗೊಳ್ಳಲಿದೆ' ಎಂದು ಹೇಳಿದರು.

ನೆಸ್ಲೆ ಕಂಪನಿಯು ಭಾರತದಲ್ಲಿ ಮಾರಾಟ ಮಾಡುವ ಶಿಶು ಆಹಾರದ ಉತ್ಪನ್ನಗಳಲ್ಲಿ ಹೆಚ್ಚುವರಿ ಸಕ್ಕರೆಯನ್ನು ಬೆರೆಸುತ್ತಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರವು ತನಿಖೆ ಕೈಗೊಂಡಿದೆ.

ಕೇಂದ್ರ ಹಣಕಾಸು ಸಚಿವಾಲಯದ ವರದಿಯಲ್ಲಿ ಉಲ್ಲೇಖ

ಬೆಲೆ ಸ್ಥಿರತೆ: ಸರ್ಕಾರಕ್ಕೆ ಸವಾಲು

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರಕ್ಕೆ ಆಹಾರ ಪದಾರ್ಥಗಳ ಬೆಲೆ ಏರಿಕೆಯೇ ಪ್ರಮುಖ ಸವಾಲಾಗಿ ಪರಿಣಮಿಸಿದೆ. ವಿಶ್ವದ ಹಲವು ರಾಷ್ಟ್ರಗಳ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ ಎಂದು ಕೇಂದ್ರ ಹಣಕಾಸು ಸಚಿವಾಲಯವು ಹೇಳಿದೆ.

ಗುರುವಾರ ಬಿಡುಗಡೆ ಮಾಡಿರುವ ಮಾಸಿಕ ವರದಿಯಲ್ಲಿ ಆಹಾರ ಹಣದುಬ್ಬರದ ಏರಿಕೆ ಕುರಿತು ಪ್ರಸ್ತಾಪಿಸಿದೆ. ತರಕಾರಿಗಳು ಮತ್ತು ಬೇಳೆಕಾಳುಗಳ ಬೆಲೆ ಹೆಚ್ಚಳವನ್ನು ಉಲ್ಲೇಖಿಸಿದೆ. ಜತೆಗೆ, ದರ ನಿಯಂತ್ರಣಕ್ಕೆ ಕೇಂದ್ರ ಕೈಗೊಂಡಿರುವ ಕ್ರಮಗಳನ್ನೂ ನಮೂದಿಸಿದೆ.

ಸರ್ಕಾರವು ಆಹಾರ ಪದಾರ್ಥಗಳನ್ನು ಕಾಪು ದಾಸ್ತಾನು ಮಾಡುತ್ತದೆ. ಧಾರಣೆ ಏರಿಕೆಯಾದಾಗ ಚಿಲ್ಲರೆ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಮೂಲಕ ಬೆಲೆ ನಿಯಂತ್ರಿಸುತ್ತಿದೆ ಎಂದು ವರದಿ ಹೇಳಿದೆ.

ಸದ್ಯ ದೇಶದಲ್ಲಿ ಬೆಲೆ ಸ್ಥಿರತೆಯಿದೆ.

ಮುಖ್ಯಾಂಶಗಳು

- ದೇಶದ ಸಾಫ್ಟ್‌ವೇರ್ ರಫ್ತು ಪ್ರಮಾಣ ಹೆಚ್ಚಳ
- ಹರಳು ಮತ್ತು ಚಿನ್ನಾಭರಣ ರಫ್ತಿನಲ್ಲಿ ಚೇತರಿಕೆ
- ಲಯಕ್ಕೆ ಮರಳುತ್ತಿರುವ ಜಾಗತಿಕ ಆರ್ಥಿಕತೆ

ಖಾಸಗಿ ಮತ್ತು ಸಾರ್ವಜನಿಕ ವಲಯದ ಬೆಳವಣಿಗೆ ಸದೃಢವಾಗಿದೆ. ಹಾಗಾಗಿ, ಜಾಗತಿಕ ಬಿಕ್ಕಟ್ಟಿನ ನಡುವೆಯೂ ಭಾರತದ ಆರ್ಥಿಕತೆಯು ಉತ್ತಮ ಬೆಳವಣಿಗೆ ಕಾಣುವ ಭರವಸೆ ಮೂಡಿಸಿದೆ ಎಂದು ವಿವರಿಸಿದೆ.

ದೇಶದ ಆರ್ಥಿಕತೆಯು ವೇಗವಾಗಿ ಬೆಳೆಯುತ್ತಿದೆ. 2024–25ರಲ್ಲಿ ಜಿಡಿಪಿ ಬೆಳವಣಿಗೆ ಕುರಿತು ಆರ್‌ಬಿಐ ಸೇರಿ ಅಂತರರಾಷ್ಟ್ರೀಯ ಸಂಘಟನೆಗಳು ಪ್ರಕಟಿಸಿರುವ ವರದಿಗಳು ಸಕಾರಾತ್ಮಕವಾಗಿವೆ ಎಂದು ಹೇಳಿದೆ.

ಅಂತರರಾಷ್ಟ್ರೀಯ ಹಣಕಾಸು ನಿಧಿಯು ದೇಶದ ಜಿಡಿಪಿ ಬೆಳವಣಿಗೆಯನ್ನು ಪರಿಷ್ಕರಿಸಿದ್ದು, ಶೇ 7.8ರಷ್ಟು ಪ್ರಗತಿ ಕಾಣಲಿದೆ ಎಂದು ಅಂದಾಜಿಸಿದೆ.

ವಿಶ್ವದಲ್ಲಿ ಆರ್ಥಿಕ ಹಿಂಜರಿಕೆಯ ಭೀತಿ ಕ್ಷೀಣಿಸುತ್ತಿದೆ. ಅತಿದೊಡ್ಡ ಆರ್ಥಿಕತೆ ಹೊಂದಿರುವ ರಾಷ್ಟ್ರಗಳು ಚೇತರಿಸಿಕೊಳ್ಳುತ್ತಿವೆ. ಇದರಿಂದ ಜಾಗತಿಕ ಆರ್ಥಿಕತೆ ಬೆಳವಣಿಗೆಯು ನಿಧಾನವಾಗಿ ಲಯಕ್ಕೆ ಮರಳುತ್ತಿದೆ ಎಂದು ವರದಿ ಹೇಳಿದೆ.

ಆದರೆ, ಜಾಗತಿಕ ಬಿಕ್ಕಟ್ಟು ಮುಂದುವರಿದಿದೆ. ಇಸ್ರೇಲ್ ಮತ್ತು ಇರಾನ್ ನಡುವೆ ತಲೆದೋರಿದ್ದ ಸಂಘರ್ಷವು ಉಲ್ಬಣಿಸುವ ಮುನ್ಸೂಚನೆ ನೀಡಿತ್ತು. ಸದ್ಯ ಉದ್ವಿಗ್ನತೆಯ ತೀವ್ರತೆ ತಗ್ಗಿದೆ. ಇದು ಆರ್ಥಿಕ ಚಟುವಟಿಕೆಗಳ ಹೆಚ್ಚಳಕ್ಕೆ ಸೂಚಕವಾಗಿದೆ. ದೇಶದಲ್ಲಿ ಎಲ್ಲಾ ವಲಯಗಳ ಬೆಳವಣಿಗೆ ಸದೃಢವಾಗಿದೆ. ಆರ್ಥಿಕತೆ ಬೆಳವಣಿಗೆಯೂ ದೃಢವಾಗಿರುವುದರಿಂದ ಜಾಗತಿಕ ಬೆಳವಣಿಗೆಗೂ ಸಹಕಾರಿಯಾಗಲಿದೆ ಎಂದು ವಿವರಿಸಿದೆ.

2023–24ನೇ ಸಾಲಿನಲ್ಲಿ ಜಾಗತಿಕ ಆರ್ಥಿಕತೆ ಪ್ರಗತಿಯು ಮಂದಗತಿಯಲ್ಲಿತ್ತು. ಇದು ದೇಶದ ವಾಣಿಜ್ಯ ಸರಕಿನ ರಫ್ತು ಮತ್ತು ಆಮದಿನ ಮೇಲೂ ಪರಿಣಾಮ ಬೀರಿತ್ತು. ರಫ್ತು ಪ್ರಮಾಣ ಕುಸಿದಿತ್ತು. ಆದಾಗ್ಯೂ ಪೆಟ್ರೋಲಿಯಂಯೇತರ ಉತ್ಪನ್ನಗಳು, ಹರಳು ಮತ್ತು ಚಿನ್ನಾಭರಣ ರಫ್ತಿನಲ್ಲಿ ಚೇತರಿಕೆ ಕಂಡಿದೆ. ಸಾಫ್ಟ್‌ವೇರ್ ರಫ್ತಿನ ಹೆಚ್ಚಳದಿಂದಾಗಿ ಸೇವಾ ವಲಯದ ರಫ್ತು ಏರಿಕೆಯಾಗಿದೆ ಎಂದು ಹೇಳಿದೆ.

ಮುಂಬೈ ಧಾರಣೆ

ಶೇಂಗಾ

25-4-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1520)
ಒಂದು ವಾರದ ಡೆಲಿವರಿ	1495 (1515)
ಸೋಯಾ ಕಚ್ಚಾ	875 (890)
ಪಾಮ್ ವಾರದ ಡೆಲಿವರಿ	911 (923)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (870)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ **₹71,650** (71,650)

ಬೆಳ್ಳಿ ಕೆ.ಜಿ **₹80,700** (80,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಬಿಎಸ್‌ಇ ಕಂಪನಿಗಳ ಒಟ್ಟು ಎಂ–ಕ್ಯಾಪ್ ₹404 ಲಕ್ಷ ಕೋಟಿ

ಸತತ ಐದನೇ ದಿನವೂ ಗೂಳಿ ಓಟ

ಮುಂಬೈ (ಪಿಟಿಐ): ದೇಶದ ಷೇರು ಪೇಟೆಯಲ್ಲಿ ಸತತ ಐದನೇ ದಿನವಾದ ಗುರುವಾರವೂ ಗೂಳಿಯ ಓಟ ಮುಂದುವರಿಯಿತು.

ಬ್ಯಾಂಕಿಂಗ್, ಹಣಕಾಸು ಮತ್ತು ಲೋಹದ ಷೇರುಗಳ ಮಾರಾಟದ ಹೆಚ್ಚಳದಿಂದ ಸೂಚ್ಯಂಕಗಳು ಏರಿಕೆ ಕಂಡಿವೆ.

ದಿನದ ಆರಂಭಿಕ ವಹಿವಾಟಿನಲ್ಲಿ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 296 ಅಂಶ ಕುಸಿದಿತ್ತು. ನಂತರ ಚೇತರಿಕೆ ಕಂಡಿತು. 486 ಅಂಶ ಜಿಗಿದು 74,339ಕ್ಕೆ ಸ್ಥಿರಗೊಂಡಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಕೂಡ 99 ಅಂಶ ಇಳಿಕೆಯಾಗಿತ್ತು. ನಂತರದ ವಹಿವಾಟಿನಲ್ಲಿ 167 ಅಂಶ ಏರಿಕೆಯಾಗಿ 22,570ಕ್ಕೆ ಕೊನೆಗೊಂಡಿತು.

ಐದು ದಿನಗಳಿಂದ ಸೂಚ್ಯಂಕಗಳು ಏರಿಕೆ ಹಾದಿಯಲ್ಲಿದ್ದು, ಹೂಡಿಕೆದಾರರ ಸಂಪತ್ತು ₹11.29 ಲಕ್ಷ ಕೋಟಿಗೆ ಏರಿಕೆಯಾಗಿದೆ. ಒಟ್ಟು ಬಿಎಸ್‌ಇ ಕಂಪನಿಗಳ ಮಾರುಕಟ್ಟೆ ಮೌಲ್ಯವು (ಎಂ–ಕ್ಯಾಪ್) ₹404 ಲಕ್ಷ ಕೋಟಿಗೆ ಮುಟ್ಟಿದೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸನ್‌ಫಾರ್ಮಾ, ಜೆಎಸ್‌ಡಬ್ಲ್ಯು ಸ್ಟೀಲ್, ಐಟಿಸಿ, ಮಹೀಂದ್ರ ಆ್ಯಂಡ್ ಮಹೀಂದ್ರ ಮತ್ತು ಎಚ್‌ಸಿಎಲ್ ಟೆಕ್ನಾಲಜೀಸ್ ಕಂಪನಿಗಳ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಹಿಂದುಸ್ತಾನ್ ಯೂನಿಲಿವರ್, ಟೈಟನ್, ಬಜಾಜ್ ಫೈನಾನ್ಸ್, ಮಾರುತಿ ಸುಜುಕಿ ಮತ್ತು ಏಷ್ಯನ್ ಪೇಂಟ್ಸ್ ಷೇರಿನ ಮೌಲ್ಯ ಇಳಿಕೆಯಾಗಿದೆ.

ಎಕ್ಸಿಸ್ ಬ್ಯಾಂಕ್‌ನ ಷೇರು ಏರಿಕೆ

ನವದೆಹಲಿ (ಪಿಟಿಐ): ಎಕ್ಸಿಸ್ ಬ್ಯಾಂಕ್‌ನ ಷೇರಿನ ಮೌಲ್ಯವು ಶೇ 6ರಷ್ಟು ಏರಿಕೆಯಾಗಿದ್ದು, ಬ್ಯಾಂಕ್‌ನ ಎಂ–ಕ್ಯಾಪ್‌ಗೆ ಒಂದೇ ದಿನ ₹19,695 ಕೋಟಿ ಸೇರ್ಪಡೆಯಾಗಿದೆ.

ಬಿಎಸ್‌ಇಯಲ್ಲಿ ಷೇರಿನ ಮೌಲ್ಯವು ಶೇ 5.98ರಷ್ಟು ಏರಿಕೆ ಕಂಡಿದೆ. ಪ್ರತಿ ಷೇರಿನ ಬೆಲೆಯು ₹1,127.25 ಆಗಿದೆ. ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯವು ಶೇ 6ರಷ್ಟು ಏರಿಕೆ ಕಂಡಿದ್ದು, ಪ್ರತಿ ಷೇರಿನ ಬೆಲೆ ₹1,127.45ಕ್ಕೆ ತಲುಪಿದೆ.

ನೆಸ್ಲೆ ಇಂಡಿಯಾ ಷೇರಿನ ಮೌಲ್ಯವು ಶೇ 2ರಷ್ಟಕ್ಕೂ ಹೆಚ್ಚು ಏರಿಕೆಯಾಗಿದೆ. ಒಂದೇ ದಿನ ಕಂಪನಿಯ ಎಂ–ಕ್ಯಾಪ್‌ಗೆ ₹5,765 ಕೋಟಿ ಸೇರ್ಪಡೆಯಾಗಿದೆ.

ಸೇವಾ ರಫ್ತು ಶೇ 11ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಜಾಗತಿಕ ಆರ್ಥಿಕ ಅನಿಶ್ಚಿತತೆಯ ನಡುವೆಯೂ 2023ನೇ ಸಾಲಿನಡಿ ದೇಶದ ಸೇವಾ ವಲಯದ ರಫ್ತು ವಹಿವಾಟಿನ ಮೌಲ್ಯವು ₹28.74 ಲಕ್ಷ ಕೋಟಿಗೆ ಮುಟ್ಟಿದೆ.

'ಇದರ ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ11.4ರಷ್ಟು ಹೆಚ್ಚಳವಾಗಿದೆ' ಎಂದು ವಿಶ್ವಸಂಸ್ಥೆಯ ವಿಶ್ವ ವಾಣಿಜ್ಯ ಮತ್ತು ಅಭಿವೃದ್ಧಿ ಸಮ್ಮೇಳನದ (ಯುಎನ್‌ಸಿಟಿಎಡಿ) ತ್ರೈಮಾಸಿಕ ವರದಿ ತಿಳಿಸಿದೆ.

2022ಕ್ಕೆ ಹೋಲಿಸಿದರೆ ಚೀನಾದ ರಫ್ತು ವಹಿವಾಟಿನ ಮೌಲ್ಯವು ಶೇ 10.1ರಷ್ಟು ಕುಸಿದಿದ್ದು, ₹31.74 ಲಕ್ಷ ಕೋಟಿ ಆಗಿದೆ. ಡಾಲರ್ ಮೌಲ್ಯದಲ್ಲಿ ವಾರ್ಷಿಕ ಏರಿಕೆಯು ಶೇ 8.9ರಷ್ಟು ಹೆಚ್ಚಳವಾಗಿದ್ದು, ಜಗತ್ತಿನ ಸೇವಾ ರಫ್ತು ವಹಿವಾಟಿನ ಮೌಲ್ಯವು ₹658 ಲಕ್ಷ ಕೋಟಿಗೆ ತಲುಪಿದೆ ಎಂದು ವಿವರಿಸಿದೆ.

ಪ್ರಯಾಣ, ಸಾರಿಗೆ, ವೈದ್ಯಕೀಯ ಮತ್ತು ಆತಿಥ್ಯ ವಲಯವು ಈ ರಫ್ತು ಬೆಳವಣಿಗೆಗೆ ಕೊಡುಗೆ ನೀಡಿವೆ. ಸೇವಾ ವಲಯದ ರಫ್ತಿನಲ್ಲಿ ಭಾರತ, ಚೀನಾ, ಸಿಂಗಪುರ, ಟರ್ಕಿ, ಥಾಯ್ಲೆಂಡ್, ಮೆಕ್ಸಿಕೊ ಮತ್ತು ಸೌದಿ ಅರೇಬಿಯಾ ಮುಂದಿವೆ ಎಂದು ತಿಳಿಸಿದೆ.

ಆದರೆ, 2022ರಲ್ಲಿ ಭಾರತದ ಸೇವಾ ವಲಯದ ಆಮದು ಪ್ರಮಾಣ ಶೇ 0.4ರಷ್ಟು ಕಡಿಮೆಯಾಗಿದೆ. ಒಟ್ಟು ₹20.66 ಲಕ್ಷ ಕೋಟಿ ಮೌಲ್ಯದ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳಲಾಗಿದೆ.

'ದೇಶದಲ್ಲಿ ಐ.ಟಿ ಮತ್ತು ಐ.ಟಿ ಆಧಾರಿತ ಸೇವೆ ಮತ್ತು ಪ್ರಯಾಣ ವಲಯವು ದೃಢವಾಗಿದೆ' ಎಂದು ಕೈಗಾರಿಕಾ ತಜ್ಞರು ಹೇಳಿದ್ದಾರೆ.

ಎಂಜಿನಿಯರಿಂಗ್, ವಾಸ್ತುಶಿಲ್ಪ, ಕಾನೂನು, ಲೆಕ್ಕಪತ್ರ ಸೇವೆ, ಸಂಶೋಧನೆ ಮತ್ತು ನಿರ್ವಹಣಾ ಸೇವಾ ವಲಯವು ಸರ್ಕಾರ ಒದಗಿಸುವ ಸವಲತ್ತನ್ನು ಸದ್ಬಳಕೆ ಮಾಡಿಕೊಳ್ಳುತ್ತಿವೆ ಎಂದು ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

16ನೇ ವರ್ಷದ ಸವಿನೆನಪು

ಶ್ರೀ ಎನ್. ರಮೇಶ್
ಜನನ: 22-11-1966 ಮರಣ: 26-04-2008
ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಹಚ್ಚ ಹಸಿರಾಗುಳಿದಿರುವುದು.
ಇಂತಿ ದುಃಖತಪ್ತರು: ಶ್ರೀಮತಿ ಪಾಪಮ್ಮ ಮತ್ತು ನಂಜಪ್ಪರೆಡ್ಡಿಯವರ ಕುಟುಂಬದವರು ಮಾರತ್ತಹಳ್ಳಿ, ಬೆಂಗಳೂರು–37

ಕೋಟಕ್‌ಗೆ ಒಂದೇ ದಿನ ₹39 ಸಾವಿರ ಕೋಟಿ ನಷ್ಟ

ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ ನಿರ್ಬಂಧ ಹೇರಿರುವ ಬೆನ್ನಲ್ಲೇ ಕೋಟಕ್ ಮಹೀಂದ್ರ ಬ್ಯಾಂಕ್‌ನ ಷೇರಿನ ಮೌಲ್ಯವು ಗುರುವಾರ ಶೇ 12ರಷ್ಟು ಕುಸಿದಿದೆ.

ಒಂದೇ ದಿನ ಕಂಪನಿಯ ಮಾರುಕಟ್ಟೆ ಮೌಲ್ಯವು ₹39,768 ಕೋಟಿಯಷ್ಟು ಕರಗಿದೆ. ಬಿಎಸ್‌ಇಯಲ್ಲಿ ಷೇರಿನ ಮೌಲ್ಯವು ಶೇ 10.85ರಷ್ಟು ಕುಸಿತ ಕಂಡಿದ್ದು, ಪ್ರತಿ ಷೇರಿನ ಬೆಲೆ ₹1,643 ಆಗಿದೆ. ದಿನದ ವಹಿವಾಟಿನ ಒಂದು ಸಂದರ್ಭದಲ್ಲಿ ಶೇ 12.10ರಷ್ಟು ಕುಸಿತ ಕಂಡಿತ್ತು. ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯವು ಶೇ 10.73ರಷ್ಟು ಕುಸಿತ ಕಂಡಿದ್ದು, ಪ್ರತಿ ಷೇರಿನ ಬೆಲೆಯು ₹1,645 ಆಗಿದೆ. ಒಂದು ಹಂತದಲ್ಲಿ ಶೇ 13ರಷ್ಟು ಕುಸಿತ ಕಂಡಿತ್ತು. ಸದ್ಯ ಕಂಪನಿಯ ಒಟ್ಟು ಎಂ–ಕ್ಯಾಪ್ ₹3.26 ಲಕ್ಷ ಕೋಟಿ ಆಗಿದೆ.

4ನೇ ಸ್ಥಾನಕ್ಕೆ ಜಿಗಿದ ಎಕ್ಸಿಸ್ ಬ್ಯಾಂಕ್: ಕೋಟಕ್ ಬ್ಯಾಂಕ್‌ನ ಷೇರುಗಳ ಕುಸಿತವು ಎಕ್ಸಿಕ್ ಬ್ಯಾಂಕ್ ಪಾಲಿಗೆ ವರದಾನವಾಗಿದ್ದು, ದೇಶದಲ್ಲಿ ಅತಿಹೆಚ್ಚು ಎಂ–ಕ್ಯಾಪ್ ಹೊಂದಿದ ನಾಲ್ಕನೇ ಬ್ಯಾಂಕ್ ಆಗಿ ಹೊರಹೊಮ್ಮಿದೆ. ಎಕ್ಸಿಸ್ ಬ್ಯಾಂಕ್‌ನ ಒಟ್ಟು ಎಂ–ಕ್ಯಾಪ್ ₹3.38 ಲಕ್ಷ ಕೋಟಿ ಆಗಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ಅತಿಹೆಚ್ಚು ಮಾರುಕಟ್ಟೆ ಮೌಲ್ಯ ಹೊಂದಿದ್ದು, ಪ್ರಥಮ ಸ್ಥಾನದಲ್ಲಿದೆ. ಐಸಿಐಸಿಐ ಬ್ಯಾಂಕ್ ದ್ವಿತೀಯ, ಎಸ್‌ಬಿಐ ಮೂರನೇ ಸ್ಥಾನದಲ್ಲಿದೆ.

ಟೆಕ್ ಮಹೀಂದ್ರ ಲಾಭ ಇಳಿಕೆ

ನವದೆಹಲಿ (ಪಿಟಿಐ): ಐ.ಟಿ ವಲ ಯದ ಟೆಕ್ ಮಹೀಂದ್ರ ಕಂಪನಿಯು 2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹661 ಕೋಟಿ ಲಾಭ ಗಳಿಸಿದೆ.

ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹1,117 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 41ರಷ್ಟು ಇಳಿಕೆಯಾಗಿದೆ. ವರಮಾನದಲ್ಲಿಯೂ ಶೇ 6.2ರಷ್ಟು ಇಳಿಕೆಯಾಗಿದ್ದು, ₹12,871 ಕೋಟಿ ಆಗಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

2023–24ನೇ ಪೂರ್ಣ ಹಣಕಾಸು ವರ್ಷದ ಲಾಭದಲ್ಲಿ ಶೇ 51ರಷ್ಟು ಕುಸಿತವಾಗಿದ್ದು, ₹2,358 ಕೋಟಿ ಆಗಿದೆ. ವರಮಾನವು ₹51,996 ಕೋಟಿಗೆ ಮುಟ್ಟಿದೆ. ಒಟ್ಟಾರೆ ಶೇ2.4ರಷ್ಟು ಇಳಿಕೆಯಾಗಿದೆ.

'2023–24ನೇ ಹಣಕಾಸು ವರ್ಷವು ಐ.ಟಿ ವಲಯದ ಪಾಲಿಗೆ ಸವಾಲುಗಳಿಂದ ಕೂಡಿತ್ತು. ಆದರೂ, ಜಾಗತಿಕಮಟ್ಟದ ಆರ್ಥಿಕ ಬಿಕ್ಕಟ್ಟಿನ ನಡುವೆಯೂ ಡಿಜಿಟಲ್ ತಂತ್ರಜ್ಞಾನಕ್ಕೆ ಒತ್ತು ನೀಡಿದ್ದೇವೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಗ್ರಾಹಕರ ವೆಚ್ಚದಲ್ಲಿ ಸುಧಾರಣೆ ಕಾಣಲಿದೆ. ಇದರಿಂದ ವರಮಾನ ಏರಿಕೆಯಾಗುವ ಆಶಾಭಾವ ಹೊಂದಿದ್ದೇವೆ' ಎಂದು ಕಂಪನಿಯ ಸಿಇಒ ಮೋಹಿತ್ ಜೋಶಿ ಹೇಳಿದ್ದಾರೆ.

ಕಂಪನಿಯಲ್ಲಿನ 1,45,455 ಸಿಬ್ಬಂದಿ ಪೈಕಿ ಮಾರ್ಚ್ ತ್ರೈಮಾಸಿಕದಲ್ಲಿ 795 ನೌಕರರು ಹೊರಹೋಗಿದ್ದಾರೆ.

ಸಂಕ್ಷಿಪ್ತ ಸುದ್ದಿ

ಔಡಿ ಕಾರಿನ ಬೆಲೆ ಶೇ 2ರಷ್ಟು ಏರಿಕೆ

ನವದೆಹಲಿ (ಪಿಟಿಐ): ಜರ್ಮನಿಯ ವಾಹನ ತಯಾರಿಕಾ ಕಂಪನಿ ಔಡಿ, ಜೂನ್ 1ರಿಂದ ತನ್ನ ಕಾರುಗಳ ಬೆಲೆಯನ್ನು ಶೇ 2ರಷ್ಟು ಹೆಚ್ಚಿಸಲು ನಿರ್ಧರಿಸಿದೆ.

ಉತ್ಪಾದನೆ ಮತ್ತು ಸಾಗಣೆ ವೆಚ್ಚ ಹೆಚ್ಚಳವನ್ನು ಸರಿದೂಗಿಸಲು ಈ ನಿರ್ಧಾರಕೈಗೊಳ್ಳಲಾಗಿದೆ ಎಂದು ಔಡಿ ಇಂಡಿಯಾ ಮುಖ್ಯಸ್ಥ ಬಲ್ಬೀರ್ ಸಿಂಗ್ ಧಿಲ್ಲೋನ್ ಹೇಳಿದ್ದಾರೆ.

2023–24ರಲ್ಲಿ ಭಾರತದಲ್ಲಿ ಕಂಪನಿಯ 7,207 ಕಾರುಗಳು ಮಾರಾಟವಾಗಿವೆ. ಹಿಂದಿನ ಇದೇ ಅವಧಿಗೆ ಹೋಲಿಸಿದರೆ ಶೇ 33ರಷ್ಟು ಏರಿಕೆಯಾಗಿದೆ. ಕಂಪನಿಯು ದೇಶದಲ್ಲಿ ಎ4, ಕ್ಯು3, ಕ್ಯು5, ಆರ್‌ಎಸ್ ಕ್ಯು8 ಕಾರುಗಳನ್ನು ಮಾರಾಟ ಮಾಡುತ್ತದೆ.

ನೆಸ್ಲೆ ಇಂಡಿಯಾಗೆ ₹934 ಕೋಟಿ ಲಾಭ

ನವದೆಹಲಿ (ಪಿಟಿಐ): ತ್ವರಿತವಾಗಿ ಮಾರಾಟವಾಗುವ ಗ್ರಾಹಕ ಉತ್ಪನ್ನಗಳ (ಎಫ್‌ಎಂಸಿಜಿ) ತಯಾರಿಕಾ ಕಂಪನಿಯಾದ ನೆಸ್ಲೆ ಇಂಡಿಯಾವು, 2023–24ನೇ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹934 ಕೋಟಿ ನಿವ್ವಳ ಲಾಭ ಗಳಿಸಿದೆ.

2022–23ರಲ್ಲಿ ಇದೇ ಅವಧಿಯಲ್ಲಿ ₹737 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಶೇ 27ರಷ್ಟು ಏರಿಕೆಯಾಗಿದೆ. ವರಮಾನವು ₹4,830 ಕೋಟಿಯಿಂದ ₹5,627 ಕೋಟಿಗೆ ಹೆಚ್ಚಳವಾಗಿದೆ ಎಂದು ಕಂಪನಿಯು ಗುರುವಾರ ಷೇರುಪೇಟೆಗೆ ತಿಳಿಸಿದೆ.

'ಮಾರುಕಟ್ಟೆಯಲ್ಲಿ ಕಂಪನಿಯ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಿದೆ. ಹಾಗಾಗಿ, ಆಹಾರ ಹಣದುಬ್ಬರ ಮತ್ತು ಸರಕುಗಳ ಬೆಲೆ ಏರಿಕೆ ನಡುವೆಯೂ ಲಾಭದಲ್ಲಿ ಎರಡಂಕಿ ದಾಟಲು ಸಾಧ್ಯವಾಗಿದೆ' ಎಂದು ನೆಸ್ಲೆ ಇಂಡಿಯಾ ಅಧ್ಯಕ್ಷ ಸುರೇಶ್ ನಾರಾಯಣನ್ ಹೇಳಿದ್ದಾರೆ.

ಡಾ.ರೆಡ್ಡೀಸ್ ಲ್ಯಾಬೊರೇಟರೀಸ್‌ನೊಂದಿಗೆ ಜಂಟಿಯಾಗಿ ಪೋಷಣ ಖಾದ್ಯಭರಿತ ಆಹಾರ ಪದಾರ್ಥಗಳ (ನ್ಯೂಟ್ರಾಸ್ಯುಟಿಕಲ್) ಮಾರಾಟಕ್ಕೆ ನೆಸ್ಲೆ ಕಂಪನಿಯ ಆಡಳಿತ ಮಂಡಳಿಯು ಅನುಮೋದನೆ ನೀಡಿದೆ. ಮಾರ್ಚ್ ತ್ರೈಮಾಸಿಕದಲ್ಲಿ ದೇಶೀಯ ಮಾರಾಟವು ₹5 ಸಾವಿರ ಕೋಟಿ ದಾಟಿದ್ದು,ಹೊಸ ಮೈಲಿಗಲ್ಲು ಸ್ಥಾಪಿಸಿದೆ ಎಂದಿದ್ದಾರೆ.

ಚೀನಾ–ಭಾರತ ಗಡಿ ಪರಿಸ್ಥಿತಿ ಬಹುತೇಕ ಸ್ಥಿರ– ಚೀನಾ ಸೇನೆ

ಬೀಜಿಂಗ್ (ಪಿಟಿಐ): 'ಭಾರತ ಮತ್ತು ಚೀನಾ ನಡುವಣ ಗಡಿಯಲ್ಲಿನ ಪರಿಸ್ಥಿತಿಯು ಬಹುತೇಕ ಸ್ಥಿರವಾಗಿದೆ. ಪೂರ್ವ ಲಡಾಖ್‌ನಲ್ಲಿ ಮೂಡಿರುವ ಅನಿಶ್ಚಿತತೆಯನ್ನು ಬಗೆಹರಿಸಲು ಉಭಯ ಕಡೆಗಳಿಂದಲೂ 'ಪರಿಣಾಮಕಾರಿ'ಯಾದ ಸಂವಹನವೂ ನಡೆದಿದೆ ಎಂದು ಚೀನಾದ ಸೇನೆ ಪ್ರತಿಕ್ರಿಯಿಸಿದೆ.

ನ್ಯೂಸ್‌ವೀಕ್ ನಿಯತಕಾಲಿಕಕ್ಕೆ ನೀಡಿದ್ದ ಸಂದರ್ಶನದಲ್ಲಿ ಪ್ರಧಾನಿ ನರೇಂದ್ರ ಮೋದಿ ವ್ಯಕ್ತಪಡಿಸಿದ್ದ ಅಭಿಪ್ರಾಯಕ್ಕೆ, ಚೀನಾ ಸೇನೆಯ ವಕ್ತಾರ ಹಿರಿಯ ಕರ್ನಲ್ ವು ಕ್ವಿಯಾನ್ ಅವರು ಹೀಗೆ ಪ್ರತಿಕ್ರಿಯಿಸಿದ್ದಾರೆ.

ರಾಜತಾಂತ್ರಿಕ ಮತ್ತು ಸೇನಾ ಹಂತದಲ್ಲಿ ಸಕಾರಾತ್ಮಕ ಮತ್ತು ರಚನಾತ್ಮಕವಾದ ದ್ವಿಪಕ್ಷೀಯ ಮಾತುಕತೆ ಮೂಲಕ ಈ ಅನಿಶ್ಚಿತತೆ ಬಗೆಹರಿಯುವ ವಿಶ್ವಾಸವಿದೆ ಎಂದು ಪ್ರಧಾನಿ ಹೇಳಿದ್ದರು. 'ಉಭಯ ದೇಶಗಳ ಗಡಿಯಲ್ಲಿ ಪ್ರಸ್ತುತ ಸ್ಥಿತಿ ಬಹುತೇಕ ಸ್ಥಿರವಾಗಿದೆ. ಅನಿಶ್ಚಿತತೆ ಬಗೆಹರಿಸಲು ಶೀಘ್ರವೇ ಪರಸ್ಪರ ಸ್ವೀಕಾರವಾದ ಒಪ್ಪಂದಕ್ಕೆ ಉಭಯ ರಾಷ್ಟ್ರಗಳು ಬರಲಿವೆ' ಎಂದು ವು ಪ್ರತಿಕ್ರಿಯಿಸಿದರು.

ಪ್ರಧಾನಿಯ ಮಾತು: ಬಿಜೆಪಿಗೆ ನೋಟಿಸ್

ಒಂದನೇ ಪುಟದಿಂದ...

ಘನತೆಯುಳ್ಳ ರಾಜಕೀಯ ಭಾಷೆಯನ್ನು ಅಳವಡಿಸಿಕೊಳ್ಳುವುದನ್ನು ಮತ್ತು ಮಾದರಿ ನೀತಿ ಸಂಹಿತೆಯ ನಿಬಂಧನೆಗಳ ಉದ್ದೇಶವನ್ನು ಅರಿತು ವರ್ತಿಸಬೇಕು ಎನ್ನುವುದನ್ನು ತಾರಾ ಪ್ರಚಾರಕರ ಗಮನಕ್ಕೆ ತರುವಂತೆ ಚುನಾವಣಾ ಆಯೋಗವು ನಡ್ಡಾ ಅವರಿಗೆ ಸೂಚಿಸಿದೆ.

ಅತ್ಯುನ್ನತ ಸ್ಥಾನಗಳಲ್ಲಿರುವವರ ಪ್ರಚಾರ ಭಾಷಣಗಳು ಗಂಭೀರ ಪರಿಣಾಮಗಳನ್ನು ಉಂಟು ಮಾಡುತ್ತವೆ ಎಂದು ಆಯೋಗವು ಅಭಿಪ್ರಾಯಪಟ್ಟಿದೆ. ದೇಶದಲ್ಲಿ ಇದೇ ಮೊದಲ ಬಾರಿಗೆ ಪ್ರಧಾನಿಯೊಬ್ಬರ ವಿರುದ್ಧದ ದೂರುಗಳಿಗೆ ಸಂಬಂಧಿಸಿದಂತೆ ಆಯೋಗವು ಪ್ರತಿಕ್ರಿಯಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2019ರ ಲೋಕಸಭಾ ಚುನಾವಣೆಯಲ್ಲಿ ವಿರೋಧ ಪಕ್ಷಗಳು ನೀಡಿದ್ದ ದೂರುಗಳಿಗೆ ಸಂಬಂಧಿಸಿ ಪ್ರಧಾನಿ ಮೋದಿ ಅವರನ್ನು ಆಯೋಗವು ಆರೋಪ ಮುಕ್ತಗೊಳಿಸಿತ್ತು. ಆಗಿನ ಚುನಾವಣಾ ಆಯುಕ್ತ ಅಶೋಕ್ ಲವಾಸಾ, ಪ್ರಧಾನಿ ವಿರುದ್ಧದ ದೂರುಗಳ ಸಂಬಂಧ ಆಯೋಗವು ತೆಗೆದುಕೊಂಡಿದ್ದ ಕೆಲವು ತೀರ್ಮಾನಗಳಿಗೆ ಭಿನ್ನಮತ ವ್ಯಕ್ತಪಡಿಸಿದ್ದರು.

ಪ್ರಜಾ ಪ್ರತಿನಿಧಿ ಕಾಯ್ದೆಯ ನಿಬಂಧನೆಗಳನ್ನು ಉಲ್ಲೇಖಿಸಿ, ತಾರಾ ಪ್ರಚಾರಕರನ್ನು ನಿಯಂತ್ರಿಸುವ ಮೊದಲ ಹೆಜ್ಜೆಯಾಗಿ ಆಯೋಗವು ಪಕ್ಷದ ಅಧ್ಯಕ್ಷರಿಗೆ ನೋಟಿಸ್ ಜಾರಿ ಮಾಡಿದೆ. ವೈಯಕ್ತಿಕವಾಗಿ ತಾರಾ ಪ್ರಚಾರಕರು ಮಾಡುವ ಭಾಷಣಕ್ಕೆ ಅವರೇ ಜವಾಬ್ದಾರರಾಗಿದ್ದರೂ ಆಯೋಗವು ಆಯಾ ಪ್ರಕರಣ ಆಧರಿಸಿ ಪಕ್ಷದ ಅಧ್ಯಕ್ಷರೊಂದಿಗೆ ವ್ಯವಹರಿಸುತ್ತದೆ.

ಇತ್ತೀಚೆಗೆ ಕಾಂಗ್ರೆಸ್‌ನ ಇಬ್ಬರು ಮುಖಂಡರು ಮಹಿಳೆಯರ ವಿರುದ್ಧ ವಿವಾದಾತ್ಮಕ ಹೇಳಿಕೆ ನೀಡಿದ್ದ ಸಂಬಂಧ ಆಯೋಗವು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಂದ ವಿವರಣೆ ಕೇಳಿತ್ತು.

ಇದೇ ರೀತಿ ಚುನಾವಣಾ ಆಯೋಗವು ಈಗ ರಾಹುಲ್ ಗಾಂಧಿ ಹಾಗೂ ಖರ್ಗೆ ಅವರ ಹೇಳಿಕೆಗಳ ವಿರುದ್ಧ ಬಿಜೆಪಿ ನೀಡಿರುವ ದೂರಿನ ಆಧಾರದ ಮೇಲೆ ಎಐಸಿಸಿ ಅಧ್ಯಕ್ಷರಿಗೆ ನೋಟಿಸ್ ಜಾರಿ ಮಾಡಿದೆ. ರಾಹುಲ್ ಅವರು ಕೇರಳದ ಕೊಟ್ಟಾಯಂನಲ್ಲಿ ಪ್ರಧಾನಿ ಮೋದಿ ಅವರು ಒಂದು ದೇಶ, ಒಂದು ಭಾಷೆ, ಒಂದು ಧರ್ಮ ಜಾರಿಗಾಗಿ ಪ್ರಯತ್ನಿಸುತ್ತಿದ್ದಾರೆ ಎಂದು ದುರುದ್ದೇಶದಿಂದ ಅತ್ಯಂತ ಹಾನಿಕಾರಕ ಹೇಳಿಕೆ ನೀಡಿದ್ದಾರೆ ಎಂದು ಬಿಜೆಪಿಯು ಚುನಾವಣಾ ಆಯೋಗಕ್ಕೆ ದೂರು ನೀಡಿತ್ತು.

ರಾಹುಲ್ ಅವರು ತಮಿಳುನಾಡಿನ ಕೊಯಮತ್ತೂರಿನಲ್ಲಿ ಪ್ರಧಾನಿಯು ನಮ್ಮ ಭಾಷೆ, ಚರಿತ್ರೆ ಮತ್ತು ಪರಂಪರೆಯ ಮೇಲೆ ದಾಳಿ ನಡೆಸುತ್ತಿದ್ದಾರೆ ಎಂದು ಹೇಳಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಿತ್ತು.

ಮಲ್ಲಿಕಾರ್ಜುನ ಖರ್ಗೆ ಅವರು ಎಸ್‌ಸಿ, ಎಸ್‌ಟಿ ಕುರಿತ ತಾರತಮ್ಯದಿಂದಾಗಿ ತಮ್ಮನ್ನು ಅಯೋಧ್ಯೆಯ ಬಾಲರಾಮನ ಪ್ರಾಣ ಪ್ರತಿಷ್ಠಾಪನೆಗೆ ಆಹ್ವಾನಿಸಿರಲಿಲ್ಲ ಎಂದು ಹೇಳುವ ಮೂಲಕ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂದು ಬಿಜೆಪಿ ದೂರು ನೀಡಿತ್ತು.

ಎರಡೂ ಪಕ್ಷಗಳ ಅಧ್ಯಕ್ಷರಿಗೆ ನೀಡಿರುವ ನೋಟಿಸ್‌ಗಳಲ್ಲಿ ನೇರವಾಗಿ ಮೋದಿ, ರಾಹುಲ್ ಅಥವಾ ಖರ್ಗೆ ಅವರ ಹೆಸರುಗಳನ್ನು ಪ್ರಸ್ತಾಪಿಸಿಲ್ಲ.

ಆದರೆ, ಆಯೋಗಕ್ಕೆ ಸಲ್ಲಿಸಲಾಗಿದ್ದ ದೂರಿನ ಪ್ರತಿಗಳನ್ನು ನೋಟಿಸ್‌ನೊಂದಿಗೆ ಲಗತ್ತಿಸಲಾಗಿದ್ದು, ಅದರಲ್ಲಿ ಆರೋಪದ ವಿವರಗಳಿವೆ.

ವಾಟ್ಸ್‌ಆ್ಯಪ್‌ನಲ್ಲಿ ವಿಚಾರಣೆ ಮಾಹಿತಿ

ಒಂದನೇ ಪುಟದಿಂದ...

'ಈ ಚಿಕ್ಕ ಉಪಕ್ರಮವು ಭವಿಷ್ಯದಲ್ಲಿ ಗುರುತರ ಪರಿಣಾಮವನ್ನು ಬೀರಲಿದೆ. ವಾಟ್ಸ್‌ಆ್ಯಪ್ ಸಂದೇಶ ಸೇವೆಯು ನಮ್ಮ ದೈನಂದಿನ ಜೀವನದಲ್ಲಿ ಸರ್ವವ್ಯಾಪಿಯಾಗಿದೆ. ನ್ಯಾಯ ಪಡೆಯುವ ಹಕ್ಕನ್ನು ಬಲಪಡಿಸುವ ನಿಟ್ಟಿನಲ್ಲಿ ಮತ್ತು ನ್ಯಾಯಾಂಗ ವ್ಯವಸ್ಥೆಯಲ್ಲಿನ ಪಾರದರ್ಶಕತೆಯನ್ನು ಮತ್ತಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ತನ್ನ ಐಟಿ ಸೇವೆಗಳಲ್ಲಿ ವಾಟ್ಸ್‌ಆ್ಯಪ್ ಸೇವೆಯನ್ನೂ ಕೋರ್ಟ್ ಮಿಳಿತಗೊಳಿಸಿದೆ' ಎಂದು ಚಂದ್ರಚೂಡ್ ತಿಳಿಸಿದರು.

ಸುಪ್ರೀಂ ಕೋರ್ಟ್‌ನಲ್ಲಿ ನೋಂದಣಿ ಮಾಡಿಕೊಂಡಿರುವ ವಕೀಲರು, ಕಕ್ಷಿದಾರರಿಗೆ ಪ್ರಕರಣಗಳ ದಾಖಲಾತಿ, ವಿಚಾರಣೆಗೆ ಬಾಕಿ ಇರುವ, ಆದೇಶ ಮತ್ತು ತೀರ್ಪಿನ ಕುರಿತು ಸಂದೇಶ ರವಾನೆಯಾಗುತ್ತದೆ ಎಂದರು.

ಎಲ್ ಆ್ಯಂಡ್ ಟಿ ಕಂಪನಿಯ ಮೇಲ್ಮನವಿ ವಜಾ

ಶರಾವತಿ ವಿದ್ಯುತ್ ಯೋಜನೆ ಟೆಂಡರ್ ಪ್ರಕ್ರಿಯೆ ಊರ್ಜಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂದಾಜು ₹8,300 ಕೋಟಿಯ ಬೃಹತ್ ಮೊತ್ತದ ಶರಾವತಿ ಪಂಪ್ಡ್ ಸ್ಟೋರೇಜ್ ವಿದ್ಯುತ್ ಯೋಜನೆಯ ಟೆಂಡರ್ ಪ್ರಕ್ರಿಯೆಯನ್ನು ಹೈಕೋರ್ಟ್ ಊರ್ಜಿತಗೊಳಿಸಿದ್ದು, ಈ ಸಂಬಂಧ ಎಲ್ ಆ್ಯಂಡ್ ಟಿ ಸಲ್ಲಿಸಿದ್ದ ಮೇಲ್ಮನವಿಯನ್ನು ವಜಾಗೊಳಿಸಿದೆ.

ವಿದ್ಯುತ್ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕರ್ನಾಟಕ ವಿದ್ಯುತ್ ನಿಗಮ (ಕೆಪಿಸಿಎಲ್) ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಜಾರಿಗೆ ಮುಂದಾಗಿತ್ತು. ಈ ಸಂಬಂಧ ಟೆಂಡರ್ ಕರೆಯಲಾಗಿತ್ತು. ಕಾಮಗಾರಿ ಆರಂಭಿಸುವ ಪ್ರಕ್ರಿಯೆಯಲ್ಲಿದ್ದ ಸಂದರ್ಭದಲ್ಲಿ ಟೆಂಡರ್ ಪ್ರಕ್ರಿಯೆಯಿಂದ ದೂರ ಉಳಿದಿದ್ದ ಎಲ್ ಆ್ಯಂಡ್ ಟಿ ಕಂಪನಿ, 'ಟೆಂಡರ್ ಪ್ರಕ್ರಿಯೆಯನ್ನು ತರಾತುರಿಯಲ್ಲಿ ನಡೆಸಲಾಗಿದೆ' ಎಂದು ಆಕ್ಷೇಪಿಸಿ ಹೈಕೋರ್ಟ್ ಮೆಟ್ಟಿಲೇರಿತ್ತು.

ರಿಟ್ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಟೆಂಡರ್‌ನಲ್ಲಿ ಪಾಲ್ಗೊಳ್ಳದ ಅರ್ಜಿದಾರರು ಟೆಂಡರ್ ಪ್ರಕ್ರಿಯೆ ತಡೆಯುವಂತೆ ಮನವಿ ಮಾಡುವುದು ಸೂಕ್ತವಲ್ಲ' ಎಂಬ ಅಭಿಪ್ರಾಯದೊಂದಿಗೆ ಅರ್ಜಿಯನ್ನು ವಜಾಗೊಳಿಸಿತ್ತು.

ಈ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದ ಎಲ್ ಆ್ಯಂಡ್ ಟಿ, 'ಟೆಂಡರ್ ಪ್ರಕ್ರಿಯೆಯನ್ನು ಕೇವಲ 21 ದಿನಗಳಲ್ಲಿ ತರಾತುರಿಯಲ್ಲಿ ಮುಗಿಸಲಾಗಿದೆ. ಬೇರೆ ರಾಜ್ಯಗಳಲ್ಲಿ ಇಂತಹುದೇ ಟೆಂಡರ್ ಪ್ರಕ್ರಿಯೆಗೆ ವಿಪುಲ ಕಾಲಾವಕಾಶ ನೀಡಲಾಗಿದೆ' ಎಂದು ಪ್ರತಿಪಾದಿಸಿತ್ತು.

ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಕಾಯ್ದಿರಿಸಿದ್ದ ಆದೇಶವನ್ನು ಗುರುವಾರ ಪ್ರಕಟಿಸಿದೆ.

'ಟೆಂಡರ್ ಪ್ರಕ್ರಿಯೆಯ ಅವಧಿಯನ್ನು ನಿಗದಿಪಡಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ಗೆ (ಕೆಪಿಪಿ) ಸಂಪೂರ್ಣ ಅಧಿಕಾರವಿದೆ. ವಿಶೇಷ ಕಾರಣಕ್ಕಾಗಿ ಟೆಂಡರ್ ಅವಧಿಯನ್ನು ಕಡಿಮೆ ಮಾಡಲು ಅದು ತನ್ನದೇ ಆದ ಸ್ವಯಮಾಧಿಕಾರ ಹೊಂದಿದೆ. ಮೇಲ್ಮನವಿದಾರರು ಪ್ರೀ ಬಿಡ್ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು. ಈಗ ತಕರಾರು ವ್ಯಕ್ತಪಡಿಸಿರುವುದು ನೆಪಮಾತ್ರ' ಎಂಬ ಅಭಿಪ್ರಾಯದೊಂದಿಗೆ ಎಲ್ ಆ್ಯಂಡ್ ಟಿ ವಾದವನ್ನು ತಳ್ಳಿ ಹಾಕಿದೆ. ಕೆಪಿಸಿಎಲ್ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ವಾದ ಮಂಡಿಸಿದ್ದರು.

ಇದರಿಂದಾಗಿ ಪ್ರಸ್ತುತ ಕೆಪಿಸಿಎಲ್ ನಡೆಸಿರುವ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಟೆಂಡರ್ ಅನ್ನು ಕಡಿಮೆ ದರ ನಮೂದಿಸಿದ್ದ ಮೇಘ ಎಂಜಿನಿಯರಿಂಗ್ ಮತ್ತು ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಎಂಇಐಎಲ್) ಕಂಪನಿ ತನ್ನದಾಗಿಸಿಕೊಂಡಂತಾಗಿದೆ.

ಮಾರುಕಟ್ಟೆ ಧಾರಣೆ

ಅಡಿಕೆ (ಬಂಟ್ವಾಳ)	
ಕೋಕ	18000-28500
ಹೊಸತು	28500-36500
ಹಳತು	36500-44500
ಚಿತ್ರದುರ್ಗ	
ಅಪಿ	52600-53000
ಬೆಟ್ಟೆ	36100-36500
ಕೆಂಪುಗೋಟು	30600-31000
ರಾಶಿ	52100-52500
ಕಾರ್ಕಳ	
ಹೊಸತು	25000-36500
ಹಳತು	30000-43500
ಕುಮಟ	
ಚಿಪ್ಪು	21599-30789
ಕೋಕ	12660-28299
ಹಳೆಚಾಲಿ	32599-39000
ಹೊಸಚಾಲಿ	30399-34799
ಸಾಗರ	
ಬಿಳಿಗೋಟು	20199-28100
ಚಾಲಿ	30099-34829
ಕೋಕ	20119-31309
ಕೆಂಪುಗೋಟು	23899-38011
ರಾಶಿ	28899-53499
ಸಿಪ್ಪೆಗೋಟು	10786-19599
ಶಿವಮೊಗ್ಗ	
ಬೆಟ್ಟೆ	45274-56669
ಗೊರಬಲು	20009-40869
ರಾಶಿ	33069-53599
ಸರಕು	53330-84410
ಸಿದ್ದಾಪುರ	
ಬಿಳಿಗೋಟು	26799-30099
ಚಾಲಿ	33599-36399
ಕೋಕ	25099-30099
ಹಳೆಚಾಲಿ	35599-36599
ಕೆಂಪುಗೋಟು	28119-31090
ರಾಶಿ	43099-49699
ತಟ್ಟಿಬೆಟ್ಟೆ	36499-49239
ಶಿರಸಿ	
ಬೆಟ್ಟೆ	34699-45299
ಬಿಳಿಗೋಟು	23099-30018
ಚಾಲಿ	32218-36409
ಕೆಂಪುಗೋಟು	22450-31499
ರಾಶಿ	44011-49891
ಯಲ್ಲಾಪುರ	
ಅಪಿ	55689-56899
ಬಿಳಿಗೋಟು	22199-32099
ಕೋಕ	14699-30499
ಹಳೆಚಾಲಿ	36020-39510
ಹೊಸಚಾಲಿ	32212-35999
ಕೆಂಪುಗೋಟು	26699-34899
ರಾಶಿ	43560-54992
ತಟ್ಟಿಬೆಟ್ಟೆ	36919-43199

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹15900
ಎಸಿ	₹9520
ಆರ್‌ಪಿ	₹16500
ಆರ್‌ಸಿ	₹10375

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1700-2100
ಮಧ್ಯಮ	₹1200-1700
ಸಣ್ಣ	₹500-1200

KARNATAKA ELECTRICITY REGULATORY COMMISSION
No.16 C-1, Millers Tank Bed Area, Vasanthanagara,
Bengaluru - 560052. Phone: 080-22268677/78/79 Fax: 080-22268667
E-mail: kerc-ka@nic.in Website: https://kerc.karnataka.gov.in
No: S/03/01/65 Date: 17-04-2024
PUBLIC NOTICE
Sub: Issue of Karnataka Electricity Regulatory Commission (Smart Modules for Existing Digital / Static Meters) Guidelines, 2024 - Invitation to public for filing Views/Comments/ Objections/Suggestions if any-reg.
The Commission has issued a Karnataka Electricity Regulatory Commission (Smart Modules for Existing Digital / Static Meters) Guidelines, 2024 for eliciting Views/ Comments/Objections/Suggestions from the Stakeholders /Interested Persons/Public.
The Guidelines are available on KERC Website: **https://kerc.karnataka.gov.in.** Written Views / Comments/ Objections / Suggestions, if any, may be submitted to the **Secretary, KERC on or before 15-05-2024.**
Sd/- Secretary
for Karnataka Electricity Regulatory Commission
DIPR/CP/41/ 2024-25
ಚುನಾವಣಾ ಆಯೋಗದ ಅನುಮತಿ ಪತ್ರ
ಸಂಖ್ಯೆ: ಸಿಆಸುಇ 92 ಎಂಸಿಸಿ (ಅಮುಚುಅ–1) 2024, ದಿನಾಂಕ: 22–03–2024

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಉದ್ಯೋಗಾವಕಾಶ
Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.
ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳೆಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516, ಶಿಮ್ಮೊಗ 8095555517
ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
*Conditions apply
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9731810277
9886213331
9845114560
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರಜತ್, ವಿರಾಟ್ ಜೊತೆಯಾಟದ ಮಿಂಚು • ಗೆಲುವಿನ ರೂವಾರಿಗಳಾದ ಬೌಲರ್‌ಗಳು • ಫಫ್ ಬಳಗಕ್ಕೆ 2ನೇ ಜಯ

ಬೆಂಗಳೂರು ವಿನ್: ಸೋತ 'ಸನ್'

ಹೈದರಾಬಾದ್ (ಪಿಟಿಐ): ಈ ಐಪಿಎಲ್ ಟೂರ್ನಿಯಲ್ಲಿ ಇದೇ ಮೊದಲ ಬಾರಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬೌಲರ್‌ಗಳು ಗೆಲುವಿನ ಕಾಣಿಕೆ ನೀಡಿದರು.

ಗುರುವಾರ ಉಪ್ಪಳದ ರಾಜೀವ ಗಾಂಧಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಫಫ್ ಡುಪ್ಲೆಸಿ ಬಳಗವು 35 ರನ್‌ಗಳಿಂದ ಜಯಿಸಿತು. ಟೂರ್ನಿಯಲ್ಲಿ ತಂಡಕ್ಕೆ ಇದು ಎರಡನೇ ಜಯ. ಸತತ ಆರು ಪಂದ್ಯಗಳ ಸೋಲಿನ ನಂತರ ಈ ಗೆಲುವು ಒಲಿಯಿತು.

ಟಾಸ್ ಗೆದ್ದ ಬೆಂಗಳೂರು ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ರಜತ್ ಪಾಟೀದಾರ್ (50; 20ಎ) ಮತ್ತು ವಿರಾಟ್ ಕೊಹ್ಲಿ (51; 43ಎ) ಅವರಿಬ್ಬರೂ 3ನೇ ವಿಕೆಟ್ ಜೊತೆಯಾಟದಲ್ಲಿ 65 ರನ್ ಸೇರಿಸಿದರು. ಇದರಿಂದಾಗಿ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 206 ರನ್ ಗಳಿಸಿತು. ಗುರಿ ಬೆನ್ನತ್ತಿದ ಹೈದರಾಬಾದ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 171 ರನ್ ಗಳಿಸಿತು.

ಈ ಬಾರಿಯ ಟೂರ್ನಿಯ 3 ಪಂದ್ಯಗಳಲ್ಲಿ ಸನ್‌ರೈಸರ್ಸ್ ತಂಡವು 250ಕ್ಕಿಂತ ಹೆಚ್ಚಿನ ಮೊತ್ತ ಗಳಿಸಿತ್ತು. ಆದ್ದರಿಂದ ಆತಿಥೇಯ ತಂಡವು ಈ ಗುರಿಯನ್ನೂ ತಂಡವು ಸುಲಭವಾಗಿ ಮುಟ್ಟುವ ನಿರೀಕ್ಷೆ ಇತ್ತು. ಮೊದಲ ಸುತ್ತಿನಲ್ಲಿ ಬೆಂಗಳೂರಿನಲ್ಲಿ ನಡೆದಿದ್ದ ಪಂದ್ಯದಲ್ಲಿ ಉಭಯ ತಂಡಗಳು ಮುಖಾಮುಖಿಯಾಗಿದ್ದಾಗ ಸನ್‌ರೈಸರ್ಸ್ ದಾಖಲೆಯ 287 ರನ್ ಗಳಿಸಿತ್ತು. ಆದರೆ ಪ್ಯಾಟ್ ಕಮಿನ್ಸ್ ಬಳಗವನ್ನು ಅದರದ್ದೇ ತವರಿನಲ್ಲಿ ಮಣಿಸಿದ ಬೆಂಗಳೂರು ಬೌಲರ್‌ಗಳು ಮುಯ್ಯಿ ತೀರಿಸಿಕೊಂಡರು.

ಕ್ಯಾಮರಾನ್ ಗ್ರೀನ್ (12ಕ್ಕೆ2), ಕರ್ಣ ಶರ್ಮಾ (29ಕ್ಕೆ2) ಹಾಗೂ ಸ್ವಪ್ನಿಲ್ ಸಿಂಗ್ (40ಕ್ಕೆ2) ಕಮಿನ್ಸ್ ಬಳಗವನ್ನು ಕಟ್ಟಿಹಾಕಿದರು. ಹೈದರಾಬಾದ್ ತಂಡದ ಯಾವುದೇ ಬ್ಯಾಟರ್ ಕೂಡ ಈ ಪಂದ್ಯದಲ್ಲಿ ಅರ್ಧಶತಕವನ್ನೂ ಗಳಿಸಲಿಲ್ಲ. ವಿಲ್ ಜ್ಯಾಕ್ಸ್ ಮೊದಲ ಓವರ್‌ನಲ್ಲಿಯೇ ಟ್ರಾವಿಸ್ ಹೆಡ್ ವಿಕೆಟ್ ಗಳಿಸುವುದರೊಂದಿಗೆ ಮೊದಲ ಪೆಟ್ಟುಕೊಟ್ಟರು. ನಂತರದ ಆಟದಲ್ಲಿ ಉಳಿದ ಬೌಲರ್‌ಗಳು ಬಿಗಿಹಿಡಿತ ಸಾಧಿಸಿದರು. ಈ ನಡುವೆ ಅಭಿಷೇಕ್ ಶರ್ಮಾ (31; 13ಎ), ಶಾಬಾಜ್ ಅಹಮದ್ (ಔಟಾಗದೆ 40) ಹಾಗೂ ಕಮಿನ್ಸ್ (31; 15ಎ) ಮಾಡಿದ ಪ್ರಯತ್ನಕ್ಕೆ ಜಯ ಒಲಿಯಲಿಲ್ಲ.

ವಿರಾಟ್–ರಜತ್ ಜೊತೆಯಾಟ: ವಿರಾಟ್ ಮತ್ತು ನಾಯಕ ಫಫ್ ಡುಪ್ಲೆಸಿ (25; 12ಎ) ಅವರು ಮಿಂಚಿನ ಆರಂಭ ನೀಡಿದರು. 3.5 ಓವರ್‌ಗಳಲ್ಲಿ 48 ರನ್ ಸೇರಿಸಿದರು. ಅದರಲ್ಲೂ ಡುಪ್ಲೆಸಿ 3 ಬೌಂಡರಿ ಹಾಗೂ 1 ಸಿಕ್ಸರ್ ಹೊಡೆದು ಮಿಂಚಿದರು. ನಟರಾಜನ್ ಎಸೆತದಲ್ಲಿ ಡುಪ್ಲೆಸಿ ಔಟಾದರು. ವಿಲ್ ಜ್ಯಾಕ್ಸ್ ಆರು ರನ್ ಗಳಿಸಿ ಔಟಾದರು.

ಇದರಿಂದಾಗಿ ವಿರಾಟ್ ತಮ್ಮ ಆಟದ ವೇಗ ತಗ್ಗಿಸಿ ಇನಿಂಗ್ಸ್‌ಗೆ ಸ್ಥಿರತೆ ತರುವ ಪ್ರಯತ್ನ ಮಾಡಿದರು. ಆದರೆ ರಜತ್ ಮಾತ್ರ ಬೀಡುಬೀಸಾದ ಆಟವಾಡಿದರು. 250ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದ ಅವರು ಐದು ಸಿಕ್ಸರ್‌ಗಳ ಚಿತ್ತಾರ ಬಿಡಿಸಿದರು. ಪ್ಯಾಟ್ ಕಮಿನ್ಸ್ ಸೇರಿದಂತೆ ಎಲ್ಲ ಬೌಲರ್‌ಗಳಿಗೂ ಬಿಸಿ ಮುಟ್ಟಿಸಿದರು. ಇದರಿಂದಾಗಿ ಮೊತ್ತ ಹೆಚ್ಚಿತು. 13ನೇ ಓವರ್‌ನಲ್ಲಿ ಜಯದೇವ್ ಉನದ್ಕತ್ ಎಸೆತವನ್ನು ಆಡುವ ಪ್ರಯತ್ನದಲ್ಲಿ ರಜತ್ ಅವರು ಅಬ್ದುಲ್ ಸಮದ್‌ಗೆ ಕ್ಯಾಚಿತ್ತರು. ಉನದ್ಕತ್ ಹಾಕಿದ ಇನ್ನೊಂದು ಓವರ್‌ನಲ್ಲಿ ವಿರಾಟ್ ಕೂಡ ಡಗ್‌ಔಟ್ ಸೇರಿದರು.

ಪ್ಯಾಟ್ ಕಮಿನ್ಸ್ ವಿಕೆಟ್ ಪಡೆದ ಸಂಭ್ರಮದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರರು –ಎಎಫ್‌ಪಿ ಚಿತ್ರ

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	8	7	1	14	0.698
ಕೋಲ್ಕತ್ತ ನೈಟ್ ರೈಡರ್ಸ್	7	5	2	10	1.206
ಸನ್‌ರೈಸರ್ಸ್ ಹೈದರಾಬಾದ್	8	5	3	10	0.577
ಲಖನೌ ಸೂಪರ್ ಜೈಂಟ್ಸ್	8	5	3	10	0.148
ಚೆನ್ನೈ ಸೂಪರ್ ಕಿಂಗ್ಸ್	8	4	4	8	0.415
ಡೆಲ್ಲಿ ಕ್ಯಾಪಿಟಲ್ಸ್	9	4	5	8	-0.386
ಗುಜರಾತ್ ಟೈಟನ್ಸ್	9	4	5	8	-0.974
ಮುಂಬೈ ಇಂಡಿಯನ್ಸ್	8	3	5	6	-0.277
ಪಂಜಾಬ್ ಕಿಂಗ್ಸ್	8	2	6	4	-0.292
ಆರ್‌ಸಿಬಿ (ಬೆಂಗಳೂರು)	9	2	7	4	-0.721

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (430 ರನ್)

ಪರ್ಪಲ್ ಕ್ಯಾಪ್: ಜಸ್‌ಪ್ರೀತ್ ಬೂಮ್ರಾ, ಯಜುವೇಂದ್ರ ಚಾಹಲ್, ಹರ್ಷಲ್ ಪಟೇಲ್ (13 ವಿಕೆಟ್)

ಒಂದು ತಿಂಗಳ ನಂತರ ಗೆಲುವು

ಆರ್‌ಸಿಬಿ ತಂಡವು ಬರೋಬ್ಬರಿ ಒಂದು ತಿಂಗಳ ನಂತರ ಗೆಲುವಿನ ಮುಖ ನೋಡಿತು. ಈ ಟೂರ್ನಿಯಲ್ಲಿ ತಂಡವು ಮಾರ್ಚ್ 25ರಂದು ಪಂಜಾಬ್ ಕಿಂಗ್ಸ್ ಎದುರು ಜಯಿಸಿತ್ತು. ನಂತರದ ಆರು ಪಂದ್ಯಗಳಲ್ಲಿಯೂ ಸೋತಿತ್ತು. ಗುರುವಾರ ನಡೆದ ಪಂದ್ಯದಲ್ಲಿ ಗೆದ್ದು, ಸೋಲಿನ ಸರಪಳಿ ಕಳಚಿಕೊಂಡಿತು. ಟೂರ್ನಿಯ ಮೊದಲ ಪಂದ್ಯದಲ್ಲಿ ಚೆನ್ನೈ ಎದುರು ಕೂಡ ತಂಡವು ಸೋತಿತ್ತು. ಇದರೊಂದಿಗೆ ಒಟ್ಟು 9 ಪಂದ್ಯಗಳನ್ನಾಡಿ ಏಳು ಸೋಲುಗಳ ಕಹಿ ಅನುಭವಿದೆ.

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು: 7ಕ್ಕೆ 206 (20 ಓವರುಗಳಲ್ಲಿ)
ಕೊಹ್ಲಿ ಸಿ ಸಮದ್ ಬಿ ಉನದ್ಕತ್ 51 (43ಎ, 4x4, 6x1)
ಡುಪ್ಲೆಸಿ ಸಿ ಮರ್ಕರಂ ಬಿ ನಟರಾಜನ್ 25 (12ಎ, 4x3, 6x1)
ಜಾಕ್ಸ್ ಬಿ ಮಾರ್ಕಂಡೆ 6 (9ಎ)
ರಜತ್ ಸಿ ಸಮದ್ ಬಿ ಉನದ್ಕತ್ 50 (20ಎ, 4x2, 6x5)
ಗ್ರೀನ್ ಔಟಾಗದೇ 37 (20ಎ, 4x5)
ಲೊಮ್ರೋರ್ ಸಿ ಕಮಿನ್ಸ್ ಬಿ ಉನದ್ಕತ್ 7 (4ಎ, 4x1)
ಕಾರ್ತಿಕ್ ಸಿ ಸಮದ್ ಬಿ ಕಮಿನ್ಸ್ 11 (6ಎ, 4x2)
ಸ್ವಪ್ನಿಲ್ ಸಿ ಅಭಿಷೇಕ್ ಬಿ ನಟರಾಜನ್ 12 (6ಎ, 4x1, 6x1)
ಇತರೆ: 7 (ಲೆಗ್‌ಬೈ 2, ವೈಡ್ 5)
ವಿಕೆಟ್ ಪತನ: 1–48 (ಫಫ್ ಡುಪ್ಲೆಸಿ, 3.5), 2–65 (ವಿಲ್ ಜಾಕ್ಸ್, 6.6), 3–130 (ರಜತ್ ಪಾಟೀದಾರ್, 12.4), 4–140 (ವಿರಾಟ್ ಕೊಹ್ಲಿ, 14.5), 5–161 (ಮಹಿಪಾಲ್ ಲೊಮ್ರೋರ್, 16.3), 6–193 (ದಿನೇಶ್ ಕಾರ್ತಿಕ್ 18.5).
ಬೌಲಿಂಗ್: ಅಭಿಷೇಕ್ ಶರ್ಮಾ 1–0–10–0; ಭುವನೇಶ್ವರ ಕುಮಾರ್ 1–0–14–0; ಪ್ಯಾಟ್ ಕಮಿನ್ಸ್ 4–0–55–1; ಟಿ.ನಟರಾಜನ್ 4–0–39–2; ಶಾಬಾಜ್ ಅಹ್ಮದ್ 3–0–14–0; ಮಯಂಕ್ ಮಾರ್ಕಂಡೆ 3–0–42–1; ಜಯದೇವ್ ಉನದ್ಕತ್ 4–0–30–3.

ಸನ್‌ರೈಸರ್ಸ್ ಹೈದರಾಬಾದ್: 8ಕ್ಕೆ 171 (20 ಓವರ್‌ಗಳಲ್ಲಿ)
ಅಭಿಷೇಕ್ ಸಿ ಕಾರ್ತಿಕ್ ಬಿ ದಯಾಳ್ 31 (13ಎ, 4x2, 6x3)
ಹೆಡ್ ಸಿ ಶರ್ಮಾ ಬಿ ಜಾಕ್ಸ್ 1 (3ಎ)
ಮರ್ಕರಂ ಎಲ್‌ಬಿಡಬ್ಲ್ಯು ಬಿ ಸ್ವಪ್ನಿಲ್ 7 (8ಎ, 4x1)
ನಿತೀಶ್ ಕುಮಾರ್ ಬಿ ಶರ್ಮಾ 13 (13ಎ, 6x1)
ಕ್ಲಾಸೆನ್ ಸಿ ಗ್ರೀನ್ ಬಿ ಸ್ವಪ್ನಿಲ್ 7 (3ಎ, 6x1)
ಶಾಬಾಜ್ ಅಹಮ್ಮದ್ ಔಟಾಗದೇ 40 (17ಎ, 4x1, 6x1)
ಸಮದ್ ಸಿ ಮತ್ತು ಬಿ ಶರ್ಮಾ 10 (6ಎ, 1x6)
ಕಮಿನ್ಸ್ ಸಿ ಸಿರಾಜ್ ಬಿ ಗ್ರೀನ್ 31 (15ಎ, 4x1, 6x3)
ಭುವನೇಶ್ವರ್ ಸಿ ಸಿರಾಜ್ ಬಿ ಗ್ರೀನ್ 13 (13ಎ, 4x3)
ಜಯದೇವ್ ಉನದ್ಕತ್ ಔಟಾಗದೇ 8 (10ಎ, 4x1)
ಇತರೆ: 10 (ಲೆಗ್‌ಬೈ 1, ನೋಬಾಲ್ 1, ವೈಡ್ 8)
ವಿಕೆಟ್ ಪತನ: 1–3 (ಟ್ರಾವಿಸ್ ಹೆಡ್, 0.6), 2–37 (ಅಭಿಷೇಕ್ ಶರ್ಮಾ, 3.4), 3–41 (ಏಡನ್ ಮರ್ಕರಂ, 4.2), 5–56 (ಹೆನ್ರಿಚ್ ಕ್ಲಾಸೆನ್, 4.6), 5–69 (ನಿತೀಶ್ ಕುಮಾರ್ ರೆಡ್ಡಿ, 7.2), 6–85 (ಅಬ್ದುಲ್ ಸಮದ್, 9.1), 7–124 (ಪ್ಯಾಟ್ ಕಮಿನ್ಸ್, 13.1), 8–141 (ಭುವನೇಶ್ವರ್ ಕುಮಾರ್, 15.5).
ಬೌಲಿಂಗ್: ವಿಲ್ ಜ್ಯಾಕ್ಸ್ 2–0–23–1, ಮೊಹಮ್ಮದ್ ಸಿರಾಜ್ 4–0–20–0, ಯಶ್ ದಯಾಳ್ 3–0–18–1, ಸ್ವಪ್ನಿಲ್ ಸಿಂಗ್ 3–0–40–2, ಕರ್ಣ ಶರ್ಮಾ 4–0–39–2, ಲಾಕಿ ಫರ್ಗ್ಯುಸನ್ 2–0–28–0, ಕ್ಯಾಮರಾನ್ ಗ್ರೀನ್ 2–0–12–2
ಪಂದ್ಯದ ಆಟಗಾರ: ರಜತ್ ಪಾಟೀದಾರ್

ಫಲಿತಾಂಶ: ಆರ್‌ಸಿಬಿ ತಂಡಕ್ಕೆ 35 ರನ್‌ಗಳ ಜಯ

2024 ರ ಎರಡನೆಯ ಹಂತದ ಲೋಕಸಭೆ ಚುನಾವಣೆ ಏಪ್ರಿಲ್ 26 ರಿಂದ ಆರಂಭ

ಟಿ20 ವಿಶ್ವಕಪ್: ಎರಡನೇ ಕೀಪರ್ ಸ್ಥಾನಕ್ಕೆ ರಾಹುಲ್?

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿ ಯಲ್ಲಿ ಅಮೋಘವಾಗಿ ಆಡುತ್ತಿರುವ ರಿಷಭ್ ಪಂತ್ ಅವರು ಮುಂಬರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡದಲ್ಲಿ ಆಡುವುದು ಬಹುತೇಕ ಖಚಿತವಾಗಿದೆ.

ಇದರಿಂದಾಗಿ ಎರಡನೇ ವಿಕೆಟ್ ಕೀಪರ್ ಸ್ಥಾನಕ್ಕೆ ಪೈಪೋಟಿ ಆರಂಭ ವಾಗಿದೆ. ಕನ್ನಡಿಗ ಕೆ.ಎಲ್. ರಾಹುಲ್ ಮತ್ತು ಕೇರಳದ ಸಂಜು ಸ್ಯಾಮ್ಸನ್ ಈ ಸ್ಪರ್ಧೆಯಲ್ಲಿರುವ ಪ್ರಮುಖರು.

ಮೇ 1ರೊಳಗೆ ತಂಡದ ಪಟ್ಟಿಯನ್ನು ನೀಡಬೇಕು ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಸೂಚಿಸಿದೆ. ಇದರಿಂದಾಗಿ 15 ಆಟಗಾರರ ತಂಡವನ್ನು ಬಿಸಿಸಿಐ ಶೀಘ್ರದಲ್ಲಿಯೇ ಪ್ರಕಟಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ರಿಷಭ್ ಅವರು 161ರ ಸ್ಟ್ರೈಕ್‌ರೇಟ್‌ನಲ್ಲಿ 342 ರನ್ ಗಳಿಸಿದ್ದಾರೆ. ಕೀಪಿಂಗ್‌ನಲ್ಲಿಯೂ ಮಿಂಚಿದ್ದಾರೆ. ಅವರ ಫಿಟ್‌ನೆಸ್ ಮಟ್ಟವೂ ಉತ್ತಮವಾಗಿದೆ. ಇದರಿಂದಾಗಿ ಎರಡನೇ ಕೀಪರ್ ಅವಕಾಶ ಮಾತ್ರ ಈಗ ಲಭ್ಯವಿದೆ. ಅದಕ್ಕಾಗಿ ರಾಹುಲ್ (302 ರನ್, 141 ಸ್ಟ್ರೈಕ್‌ರೇಟ್) ಮುಂಚೂಣಿಯಲ್ಲಿದ್ದಾರೆ. ಆದರೆ ಅವರು ಈ ಟೂರ್ನಿಯಲ್ಲಿ ಆರಂಭಿಕ ಬ್ಯಾಟರ್ ಮಾತ್ರ ಆಗಿ ಆಡಿದ್ದಾರೆ. ಮಧ್ಯಮಕ್ರಮಾಂಕದಲ್ಲಿ ಆಡಿಲ್ಲ. ಸಂಜು ಸ್ಯಾಮ್ಸನ್ (314 ರನ್, 152 ಸ್ಟ್ರೈಕ್‌ರೇಟ್) ಅವರು ಕೂಡ ಅಗ್ರಕ್ರಮಾಂಕದಲ್ಲಿಯೇ ಆಡಿದ್ದಾರೆ. ಮುಂಬೈ ಇಂಡಿಯನ್ಸ್ ತಂಡದ ನಾಯಕ ಹಾರ್ದಿಕ್ ಪಂಡ್ಯ ಅವರ ಆಯ್ಕೆಯು ಅನುಮಾನವೆನ್ನಲಾಗುತ್ತಿದೆ.

ಅಥ್ಲೆಟಿಕ್ಸ್: ಪಾವನಾಗೆ ಚಿನ್ನದ ಪದಕ

ನವದೆಹಲಿ (ಪಿಟಿಐ): ಕರ್ನಾಟಕದ ಪಾವನಾ ನಾಗರಾಜ್ ಅವರು ದುಬೈನಲ್ಲಿ ನಡೆಯುತ್ತಿರುವ ಏಷ್ಯನ್ 20 ವರ್ಷದೊಳಗಿನವರ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ. ಭಾರತವನ್ನು ಪ್ರತಿನಿಧಿಸಿದ್ದ ಅವರು 6.32 ಮೀ. ಸಾಧನೆ ಮಾಡಿದರು.

ಭಾರತದ ರಣವೀರ್ (9 ನಿ.22.62 ಸೆ) ಮತ್ತು ಏಕ್ತಾ ಡೇ (10 ನಿ. 31.92 ಸೆ.) ಅವರು ಕ್ರಮವಾಗಿ ಪುರುಷರ ಮತ್ತು ಮಹಿಳೆಯರ 3000 ಮೀ. ಸ್ಟೀಪಲ್ ಚೇಸ್‌ನಲ್ಲಿ ಚಿನ್ನದ ಸಾಧನೆ ಮಾಡಿದರು. ಈ ಮೂಲಕ ಭಾರತದ ಚಿನ್ನದ ಪದಕಗಳ ಸಂಖ್ಯೆ ನಾಲ್ಕಕ್ಕೆ ಏರಿಕೆಯಾಗಿದೆ. ಬುಧವಾರ ಅನುರಾಗ್ ಸಿಂಗ್ ಶಾಟ್‌ಪಟ್‌ನಲ್ಲಿ ಚಿನ್ನ ಗೆದ್ದಿದ್ದರು.

ಪಾವನಾ ನಾಗರಾಜ್

ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಪಂದ್ಯ ಇಂದು

ಪಂಜಾಬ್ ಕಿಂಗ್ಸ್‌ಗೆ ಗೆಲುವು ಅನಿವಾರ್ಯ

ಕೋಲ್ಕತ್ತ (ಪಿಟಿಐ): ಈ ಋತುವಿನಲ್ಲಿ ನಿರೀಕ್ಷಿತ ಮಟ್ಟದಲ್ಲಿ ಆಡಲು ವಿಫಲವಾಗಿರುವ ಪಂಜಾಬ್ ಕಿಂಗ್ಸ್ ತಂಡ ಶುಕ್ರವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಪ್ರಬಲ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಎದುರಿಸಲಿದೆ. ದುಬಾರಿ ಮೊತ್ತಕ್ಕೆ ಬಿಡ್ ಆಗಿರುವ ಮಿಚೆಲ್ ಸ್ಟಾರ್ಕ್ ಬೌಲಿಂಗ್‌ನಲ್ಲೂ ದುಬಾರಿ ಆಗಿದ್ದು, ಸುಧಾರಿತ ಪ್ರದರ್ಶನಕ್ಕೆ ಸರ್ವಪ್ರಯತ್ನ ನಡೆಸುವ ನಿರೀಕ್ಷೆ ಇದೆ.

ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ಕೆಕೆಆರ್ 10 ಪಾಯಿಂಟ್ಸ್ ಹೊಂದಿದೆ. ಅಗ್ರ ಬ್ಯಾಟರ್‌ಗಳ ಅಮೋಘ ಪ್ರದರ್ಶನದಿಂದಷ್ಟೇ ಅದು ಹೆಚ್ಚಿನ ಪಂದ್ಯಗಳನ್ನು ಗೆದ್ದುಕೊಂಡಿದೆ.

ಪಂಜಾಬ್ ಕಿಂಗ್ಸ್ ಆರಂಭದಿಂದಲೇ ಅಸ್ಥಿರ ಪ್ರದರ್ಶನ ನೀಡುತ್ತಿದ್ದು, ಪ್ಲೇ ಆಫ್ ಪೈಪೋಟಿಯಿಂದ ಹೊರಬೀಳುವ ಅಪಾಯದಲ್ಲಿದೆ. ಈ ತಂಡದಲ್ಲಿ ಶಶಾಂಕ್ ಸಿಂಗ್ ಮತ್ತು ಅಶುತೋಷ್ ಶರ್ಮಾ ಮಾತ್ರ ಉತ್ತಮ ನಿರ್ವಹಣೆಯಿಂದ ಗಮನ ಸೆಳೆದಿದ್ದಾರೆ.

ಸುನಿಲ್ ನಾರಾಯಣ್ (286 ರನ್) ಫಿಲ್ ಸಾಲ್ಟ್ (249 ರನ್) ಉತ್ತಮ ಸ್ಟ್ರೈಕ್ ರೇಟ್‌ನಲ್ಲಿ ರನ್ ಗಳಿಸುತ್ತಿದ್ದಾರೆ. ಆಂಡ್ರೆ ರಸೆಲ್ (155) ಮತ್ತು ನಾಯಕ ಶ್ರೇಯಸ್ ಅಯ್ಯರ್ (190) ಮಧ್ಯಮ ಕ್ರಮಾಂಕಕ್ಕೆ ಬಲ ನೀಡಿದ್ದಾರೆ. ರಿಂಕು ಸಿಂಗ್ ಮಾತ್ರ ವಿಫಲರಾಗಿದ್ದಾರೆ. ಆದರೆ ಬ್ಯಾಟರ್‌ಗಳ ಕೊಡುಗೆಯಿಂದ ಶಾರೂಕ್ ಖಾನ್ ಒಡೆತನದ ತಂಡ ನಾಲ್ಕು ಬಾರಿ 200ಕ್ಕಿಂತ ಹೆಚ್ಚಿನ ಮೊತ್ತ ದಾಖಲಿಸಿದೆ. ವೆಂಕಟೇಶ್ ಅಯ್ಯರ್ ಮಾತ್ರ ಲಯಕಂಡುಕೊಂಡಿಲ್ಲ.

ಆದರೆ ಬೌಲಿಂಗ್ ಪಡೆಯ ಬಗ್ಗೆ ಇದೇ ಮಾತು ಹೇಳುವಹಾಗಿಲ್ಲ. ಸುನಿಲ್ ನಾರಾಯಣ್ ಮಾತ್ರ ರನ್ ಬಿಚ್ಚುತ್ತಿಲ್ಲ. ಇಕಾನಮಿ ದರ 7.10 ಇದೆ. ಆದರೆ ಟ್ರಿನಿಡಾಡಿನ ಬೌಲರ್‌ಗೆ ಈ ಹಿಂದಿನ ಪಂದ್ಯದಲ್ಲಿ ರಜತ್ ಪಾಟೀದಾರ್ ಎರಡು ಸಿಕ್ಸರ್ ಎತ್ತಿದ್ದರು. ಇದು ಪಂಜಾಬಿನ ಯಶಸ್ವಿ ಆಟಗಾರರಾದ ಅಶುತೋಷ್, ಶಶಾಂಕ್ ಅವರಿಗೆ ಧೈರ್ಯ ನೀಡುವ ಅಂಶವಾಗಬಹುದು.

ಆದರೆ ಸ್ಟಾರ್ಕ್ ಅವರು ನಿರೀಕ್ಷಿತ ಮಟ್ಟ ಮುಟ್ಟಿಲ್ಲ. ವೇಗಕ್ಕೆ ಹೆಚ್ಚು ಆದ್ಯತೆ ನೀಡಿದಂತೆ ಕಾಣುತ್ತಿದೆ. ಅವರು ಆರು ವಿಕೆಟ್ ಅಷ್ಟೇ ಪಡೆದಿದ್ದಾರೆ. ಅವರ ಇಕಾನಮಿ ದರ (11.48) ತಂಡದ ಬೌಲರ್‌ಗಳ ಪೈಕಿ ಅತ್ಯಧಿಕವಾಗಿದೆ. ₹24.75 ಕೋಟಿಗೆ ಬಿಡ್ ಆದ ಸ್ಟಾರ್ಕ್ ಅವರಿಗೆ ಹೋಲಿಸಿದರೆ ಹರ್ಷಿತ್ ರಾಣಾ, ವೈಭವ್ ಆರೋರಾ ಸುಧಾರಿತ ಪ್ರದರ್ಶನ ನೀಡಿದ್ದಾರೆ.

ಗೆಲುವಿನ ಹಳಿಗೆ ಮರಳಲು ಪಂಜಾಬ್ ಕಿಂಗ್ಸ್ ತಂಡವು, ಎದುರಾಳಿಗಳ ಬೌಲಿಂಗ್ ದೌರ್ಬಲ್ಯ ಬಳಸಿಕೊಳ್ಳಬೇಕಾಗಿದೆ. ಕೆಕೆಆರ್‌ಗೆ ಅಗ್ರ ಆಟಗಾರರು ಕೊಡುಗೆ ನೀಡಿದರೆ, ಪಂಜಾಬ್‌ಗೆ ಕೆಳಕ್ರಮಾಂಕದ ಆಟಗಾರರಿಂದಲೇ ಹೆಚ್ಚು ರನ್ ಬರುತ್ತಿದೆ. ಅದರ ಪ್ರಮುಖ ಬ್ಯಾಟರ್‌ಗಳಾದ ಪ್ರಭಸಿಮ್ರನ್ ಸಿಂಗ್, ಲಿವಿಂಗ್‌ಸ್ಟೋನ್, ರೀಲಿ ರೊಸೊ ಮತ್ತು ಜಾನಿ ಬೇಸ್ಟೊ ರನ್ ಬರ ಎದುರಿಸುತ್ತಿದ್ದಾರೆ. ಮೂರು ಪಂದ್ಯಗಳನ್ನು ಕಳೆದುಕೊಂಡಿರುವ ಶಿಖರ್ ಧವನ್ ಬುಧವಾರ ತಂಡದ ಅಭ್ಯಾಸದ ವೇಳೆ ಕಾಣಿಸಿದ್ದು, ಅವರು ಆಡುವ ಬಳಗಕ್ಕೆ ಸೇರ್ಪಡೆಯಾದರೆ ತಂಡದ ಮನೋಸ್ಥೈರ್ಯ ವೃದ್ಧಿಯಾಗಬಹುದು.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಜಿಯೊ ಸಿನಿಮಾ ಆ್ಯಪ್

ಮಿಚೆಲ್ ಸ್ಟಾರ್ಕ್

ಮುಖಾಮುಖಿ

32	ಆಡಿದ ಪಂದ್ಯಗಳು
21	ಕೆಕೆಆರ್ ಗೆಲುವು
11	ಪಂಜಾಬ್ ಗೆಲುವು

ಅಶುತೋಷ್ ಶರ್ಮಾ –ಪಿಟಿಐ ಚಿತ್ರ

ಸಲಾಂಗೆ ವಾಗ್ದಂಡನೆ

ನವದೆಹಲಿ (ಪಿಟಿಐ): ಗುಜರಾತ್ ಟೈಟನ್ಸ್ ವಿರುದ್ಧದ ಪಂದ್ಯದಲ್ಲಿ ವಿಕೆಟ್ ಪಡೆದ ನಂತರ ಅತಿಯಾಗಿ ಸಂಭ್ರಮಿಸಿ ಐಪಿಎಲ್ ನೀತಿ ಸಂಹಿತೆ ಉಲ್ಲಂಘಿಸಿದ್ದಕ್ಕೆ ಡೆಲ್ಲಿ ಕ್ಯಾಪಿಟಲ್ಸ್ ಪೇಸ್ ಬೌಲರ್ ರಾಸಿಖ್ ಸಲಾಂ ದರ್ ಅವರಿಗೆ ಗುರುವಾರ ವಾಗ್ದಂಡನೆ ವಿಧಿಸಲಾಗಿದೆ.

24 ವರ್ಷ ವಯಸ್ಸಿನ ರಾಸಿಖ್ ಉತ್ತಮ ಪ್ರದರ್ಶನ ನೀಡಿ 44 ರನ್ನಿಗೆ 3 ವಿಕೆಟ್ ಪಡೆದಿದ್ದರು. ರೋಚಕವಾಗಿ ಸಾಗಿದ ಪಂದ್ಯದಲ್ಲಿ ಡೆಲ್ಲಿ 4 ರನ್‌ಗಳಿಂದ ಜಯಗಳಿಸಿತ್ತು.

ಟಿಸಿಎಸ್ ಟೆನ್‌ಕೆ ರಾಯಭಾರಿ ವಲೆರೀ ಮನದ ಮಾತು

ಡೋಪಿಂಗ್ ಅಪರಾಧಿಗಳಿಗೆ ಕಡುಶಿಕ್ಷೆ ಕೊಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯೂಜಿಲೆಂಡ್‌ನ ಶಾಟ್‌ಪಟ್ ಅಥ್ಲೀಟ್ ವಲೆರೀ ಆ್ಯಡಮ್ಸ್ ಅವರಿಗೆ ಕಠಿಣ ಸವಾಲುಗಳನ್ನು ಎದುರಿಸುವುದು ರಕ್ತಗತವೇ ಆಗಿಬಿಟ್ಟಿದೆ.

15 ವರ್ಷದ ಬಾಲಕಿಯಾಗಿದ್ದಾಗಲೇ ತಾಯಿಯನ್ನು ಕಳೆದುಕೊಂಡ ವಲೆರೀ ಎದುರಿಸಿದ ಸಂಕಷ್ಟಗಳು ಒಂದೆರಡಲ್ಲ. ತಮ್ಮ ಅಜಾನುಬಾಹು ಶರೀರದ ಕುರಿತು ಕೇಳಿದ ವ್ಯಂಗ್ಯಗಳಿಗೂ ಲೆಕ್ಕವಿಲ್ಲ. ಆದರೆ ಅದೇ ದೇಹಬಲದಿಂದ ವಿಶ್ವದ ಅಗ್ರಮಾನ್ಯ ಶಾಟ್‌ಪಟ್ ಅಥ್ಲೀಟ್ ಆಗಿ ಬೆಳೆದರು. ಬೀಜಿಂಗ್ (2008), ಲಂಡನ್ (2012) ಒಲಿಂಪಿಕ್ಸ್‌ಗಳಲ್ಲಿ ಚಿನ್ನ, ರಿಯೊ (2016) ಮತ್ತು ಟೋಕಿಯೊ (2020) ಒಲಿಂಪಿಕ್ಸ್‌ಗಳಲ್ಲಿ ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಜಯಿಸಿದರು. ವಿಶ್ವ ಹೊರಾಂಗಣ ಅಥ್ಲೆಟಿಕ್ಸ್‌ನಲ್ಲಿ ನಾಲ್ಕು ಮತ್ತು ಒಳಾಂಗಣ ಅಥ್ಲೆಟಿಕ್ಸ್‌ನಲ್ಲಿ ನಾಲ್ಕು ಚಿನ್ನ ಗೆದ್ದರು. 6.4 ಅಡಿ ಎತ್ತರದ ವಲೆರೀ ಅವರ ತಮ್ಮ ಸ್ಟೀವನ್ ಆಡಮ್ಸ್ (ಎನ್‌ಬಿಎ ಆಟಗಾರ) ಹಾಗೂ ಸಹೋದರಿ ಲೀಸಾ ಆ್ಯಡಮ್ಸ್ ಪ್ಯಾರಾ ಶಾಟ್‌ಪಟ್ ಅಥ್ಲೀಟ್ ಆಗಿದ್ದಾರೆ.

ನಿವೃತ್ತರಾದ ನಂತರವೂ ತಮ್ಮ ದೇಶದ ಕ್ರೀಡಾ ಆಡಳಿತದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ 39 ವರ್ಷದ ವಲೆರೀ ಈಗ ಬೆಂಗಳೂರಿಗೆ ಬಂದಿದ್ದಾರೆ. ಇದೇ 28ರಂದು ನಡೆಯಲಿರುವ ಟಿಸಿಎಸ್ ವಿಶ್ವ ಟೆನ್ ಕೆ ಓಟದ ಪ್ರಚಾರ ರಾಯಭಾರಿಯಾಗಿದ್ದಾರೆ.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪ್ಯಾರಿಸ್ ಅಥ್ಲೆಟಿಕ್ಸ್‌ನಲ್ಲಿ ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಗಳಲ್ಲಿ ಚಿನ್ನ ಗೆದ್ದವರಿಗೆ ನಗದು ಪುರಸ್ಕಾರ ನೀಡುವ ನಿರ್ಧಾರವು ಸ್ವಾಗತಾರ್ಹ. ಕ್ರಿಕೆಟ್ ಅಥವಾ ರಗ್ಬಿಯಲ್ಲಿ ಆಟಗಾರರು ಬಹಳಷ್ಟು ಹಣ ಗಳಿಸುತ್ತಾರೆ. ಆದರೆ ಬೇರೆ ಕ್ರೀಡೆಗಳಲ್ಲಿ ಅಷ್ಟು ಹಣವಿಲ್ಲ. ವಿಶ್ವ ಅಥ್ಲೆಟಿಕ್ಸ್ (ಡಬ್ಲ್ಯುಎ) ಈ ನಡೆಯು ಉತ್ತಮವಾಗಿವೆ. ಬೇರೆಲ್ಲ ಫೆಡರೇಷನ್‌ಗಳೂ ಇದನ್ನು ಅನುಕರಿಸುವ ವಿಶ್ವಾಸವಿದೆ' ಎಂದರು.

ಉದ್ದೀಪನ ಮದ್ದು ಸೇವನೆ ಪಿಡುಗು ಕುರಿತು ಪ್ರತಿಕ್ರಿಯಿಸಿದ ಅವರು, 'ಡೋಪಿಂಗ್ ಹಾವಳಿಯ ಬಿಸಿಯನ್ನು ನಾನು ಅನುಭವಿಸಿದ್ದೇನೆ. 2012ರ ಒಲಿಂಪಿಕ್ ಕೂಟದಲ್ಲಿ ನಾನು ಎರಡನೇ ಸ್ಥಾನ ಗಳಿಸಿದ್ದೆ. ಮೊದಲ ಸ್ಥಾನ ಜಯಿಸಿದ್ದ ಬೆಲಾರೂಸ್ ಅಥ್ಲೀಟ್ (ನಾದೇದಾ ಅಸ್ಟೆಪ್‌ಚುಕ್) ಉದ್ದೀಪನ ಮದ್ದು ಸೇವನೆ ಮಾಡಿದ್ದು ಸಾಬೀತಾಯಿತು. ಅವರನ್ನು ನಿಷೇಧಿಸಿ ಚಿನ್ನದ ಪದಕ ಮರಳಿ ಪಡೆಯಲಾಯಿತು. ನಂತರ ನನಗೆ ಚಿನ್ನ ಲಭಿಸಿತು. ಪ್ರಸ್ತುತ ಡೋಪಿಂಗ್ ನಿಯಂತ್ರಣಕ್ಕೆ ವಾಡಾ (ವಿಶ್ವ ಉದ್ದೀಪನ ಮದ್ದು ನಿಯಂತ್ರಣ ಸಂಸ್ಥೆ) ಸರಿಯಾದ ದಿಶೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ತಪ್ಪಿತಸ್ಥರಿಗೆ ಯಾವುದೇ ರೀತಿಯ ಕರುಣೆ ತೋರಿಸಲೇಬಾರದು. ಕಠಿಣ ಶಿಕ್ಷೆ ನೀಡಬೇಕು. ಕ್ರೀಡೆಯಿಂದಲೇ ಹೊರಹಾಕಬೇಕು' ಎಂದರು.

ಟೋಕಿಯೊ ಒಲಿಂಪಿಕ್ ಕಂಚಿನ ಪದಕ ಜಯದ ಕುರಿತು ಪ್ರತಿಕ್ರಿಯಿಸಿದ ಅವರು, 'ಒಲಿಂಪಿಕ್ಸ್‌ನಲ್ಲಿ ಈ ಮೊದಲು ಜಯಿಸಿದ ಎರಡು ಚಿನ್ನ, ಒಂದು ಬೆಳ್ಳಿಗಿಂತಲೂ ಟೋಕಿಯೊದ ಕಂಚಿನ ಪದಕವು ನನ್ನ ಪಾಲಿಗೆ ಹೆಚ್ಚು ಮೌಲ್ಯವುಳ್ಳದ್ದು. ಏಕೆಂದರೆ ಆ ಹೊತ್ತಿಗೆ ನಾನು ಎರಡು ಮಕ್ಕಳ ತಾಯಿಯಾಗಿದ್ದೆ. ಅದರಲ್ಲೂ ಒಂದು ಸಲ ಹೆರಿಗೆಯ ಹೊತ್ತಿನಲ್ಲಿ ಜೀವನ್ಮರಣದ ಹೋರಾಟ ಮಾಡಿ ಬದುಕಿದ್ದೆ. ಮಕ್ಕಳನ್ನು ಹೆತ್ತ ನಂತರ ಕ್ರೀಡಾಪಟುವಾಗಿ ಮುಂದುವರಿಯುವುದು ಬಹಳ ಕಷ್ಟ. ಎರಡು ದೊಡ್ಡ ಶಸ್ತ್ರಚಿಕಿತ್ಸೆಯ ನಂತರದ 10 ತಿಂಗಳು ಅಭ್ಯಾಸ ನಡೆಸಿದ್ದೆ. ಟೋಕಿಯೊದ ಪ್ರೇಕ್ಷಕರ ಗ್ಯಾಲರಿಯಲ್ಲಿ ನನ್ನ ಆ ಇಬ್ಬರೂ ಮಕ್ಕಳಿದ್ದರು. ಅವರ ಮುಂದೆ ಪದಕ ಜಯಿಸಿದ್ದು ಅವಿಸ್ಮರಣೀಯ' ಎಂದರು. ತಮ್ಮ ಕೈ ಮೇಲೆ ಮಕ್ಕಳ ಟ್ಯಾಟೂ ಹಾಕಿಸಿಕೊಂಡಿದ್ದಾರೆ.

ಭಾರತದ ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ಕುರಿತು ಮಾತನಾಡಿದ ಅವರು, 'ಹೋದ ಒಲಿಂಪಿಕ್ಸ್‌ನಲ್ಲಿ ಅವರು ಚಾಂಪಿಯನ್ ಆಗಿದ್ದಾರೆ. ಆದ್ದರಿಂದ ಈ ಬಾರಿ ಅವರ ಮೇಲೆ ಅಪಾರ ನಿರೀಕ್ಷೆ ಇರುತ್ತದೆ. ಅದರಿಂದ ಅವರು ಒತ್ತಡಕ್ಕೊಳಗಾಗಬಾರದು. ದೇಶಕ್ಕಾಗಿ ಆಡುವ ಹೆಮ್ಮೆಯೊಂದಿಗೆ ಕಣಕ್ಕಿಳಿಯಬೇಕು. ಉತ್ತಮ ಸಿದ್ಧತೆಗಳನ್ನು ಮಾಡಿಕೊಂಡು ಸ್ಪರ್ಧಿಸಬೇಕು' ಎಂದರು.

ಡೇಮ್ ವಲೆರೀ ಆ್ಯಡಮ್ಸ್

ಸಂಕ್ಷಿಪ್ತ ಸುದ್ದಿ

ಫೈನಲ್‌ಗೆ ಪುರುಷರ ರಿಕರ್ವ್ ತಂಡ

ಶಾಂಘೈ (ಪಿಟಿಐ): ತರುಣದೀಪ್ ರೈ, ಧೀರಜ್ ಬೊಮ್ಮದೇವರ ಮತ್ತು ಪ್ರವೀಣ್ ಜಾಧವ್ ಅವರನ್ನು ಒಳಗೊಂಡ, ಆರ್ಚರಿ ವಿಶ್ವಕಪ್‌ನ (ಸ್ಟೇಜ್ 1) ಪುರುಷರ ರಿಕರ್ವ್ ವಿಭಾಗದಲ್ಲಿ ಚಿನ್ನದ ಪದಕಕ್ಕಾಗಿ ಒಲಿಂಪಿಕ್ ಚಾಂಪಿಯನ್ ಕೊರಿಯಾ ತಂಡವನ್ನು ಎದುರಿಸಲಿದೆ.

ಕಾಂಪೌಂಡ್ ವಿಭಾಗದ ಸ್ಪರ್ಧೆಯಲ್ಲಿ ಭಾರತ ಪುರುಷರ ಮತ್ತು ಮಹಿಳಾ ತಂಡಗಳು ಫೈನಲ್ ತಲುಪಿ ಕಡೇಪಕ್ಷ ಎರಡು ಪದಕಗಳು ಖಚಿತವಾದ ಮರುದಿನವೇ ಭಾರತಕ್ಕೆ ಇನ್ನೊಂದು ಪದಕ ಗ್ಯಾರಂಟಿ ಆಗಿದೆ.

ಟೆನಿಸ್: ಶ್ರೀಕರ್, ಅನುರಾಗ್ ಫೈನಲ್‌ಗೆ

ಬೆಂಗಳೂರು: ಶ್ರೀಕರ್ ದೋನಿ ಮತ್ತು ಅನುರಾಗ್ ಶೌರ್ಯ ಏಷ್ಯನ್ ರ‍್ಯಾಂಕಿಂಗ್ 16 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಫೈನಲ್ ಪ್ರವೇಶಿಸಿದರು.

ಇಲ್ಲಿನ ಟಾಪ್‌ಸ್ಪಿನ್ ಟೆನಿಸ್ ಅಕಾಡೆಮಿ ಅಂಗಣದಲ್ಲಿ ಗುರುವಾರ ನಡೆದ ಬಾಲಕರ ಸಿಂಗಲ್ಸ್‌ನಲ್ಲಿ ಅನುರಾಗ್ 7–5, 6–1ರಿಂದ ಎರಡನೇ ಶ್ರೇಯಾಂಕದ ತೇಜಸ್ ರವಿ ಅವರಿಗೆ ಆಘಾತ ನೀಡಿದರು. ಶ್ರೀಕರ್ 6-4, 6-7(3), 6-4ರಿಂದ ಪ್ರಕಾಶ್ ಸರ್ರನ್ ಅವರನ್ನು ಮಣಿಸಿದರು.

ಬಾಲಕಿಯರ ಸಿಂಗಲ್ಸ್‌ನಲ್ಲಿ ಅನ್ವಿ ಪಿ. 6-2, 6-2ರಿಂದ ಅಗ್ರ ಶ್ರೇಯಾಂಕದ ಶೈವಿ ಗೌರವ್ ದಲಾಳ್ ಅವರಿಗೆ ಆಘಾತ ನೀಡಿದರು. ಮತ್ತೊಂದು ಪಂದ್ಯದಲ್ಲಿ ದೀಪ್ತಿಕಾ ವಿ. ಗೆಲುವು ಸಾಧಿಸಿದರು.

'ಅವರ ಹೊರತು ನಾನು ಈ ಮಟ್ಟಕ್ಕೆ ಬೆಳೆಯುತ್ತಿರಲಿಲ್ಲ....'

ವಿಶಿ ಸರ್‌ಗೆ ಅಭಾರಿ: ಗುಕೇಶ್

ಚೆನ್ನೈ (ಪಿಟಿಐ): ತಮ್ಮ ಚೆಸ್ ಬದುಕು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿರುವ ವಿಶ್ವನಾಥನ್ ಆನಂದ್ ಅವರಿಗೆ ಭಾರತದ ಚೆಸ್ ತಾರೆ ಡಿ.ಗುಕೇಶ್ ಕೃತಜ್ಞತೆ ಸಲ್ಲಿಸಿದ್ದಾರೆ. 'ಅವರಿಲ್ಲದೇ ಇದ್ದರೆ, ನಾನೀಗ ಯಾವ ಮಟ್ಟಕ್ಕೆ ಬೆಳೆದಿದ್ದೇನೆಯೊ, ಅದರ ಹತ್ತಿರವೂ ಇರುತ್ತಿರಲಿಲ್ಲ' ಎಂದು ಹೇಳಿದ್ದಾರೆ.

17 ವರ್ಷದ ಗುಕೇಶ್, ಕಳೆದ ಭಾನುವಾರ ಮುಕ್ತಾಯಗೊಂಡ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯಲ್ಲಿ ಗೆದ್ದು, ಈ ಸಾಧನೆ ಮಾಡಿದ ಅತಿ ಕಿರಿಯ ಆಟಗಾರ ಎನಿಸಿದ್ದಾರೆ. 40 ವರ್ಷಗಳ ಹಿಂದೆ ಗ್ಯಾರಿ ಕ್ಯಾಸ್ಪರೋವ್ ಸ್ಥಾಪಿಸಿದ್ದ ದಾಖಲೆ ಮುರಿದಿದ್ದಾರೆ. ಈ ಗೆಲುವಿನಿಂದ ಅವರು ವಿಶ್ವ ಚಾಂಪಿಯನ್ ಡಿಂಗ್ ಲಿರೆನ್ ಅವರಿಗೆ ವರ್ಷಾಂತ್ಯದಲ್ಲಿ ನಡೆಯುವ ಫೈನಲ್‌ನಲ್ಲಿ ಸವಾಲು ಹಾಕುವ ಅರ್ಹತೆಯನ್ನೂ ಸಂಪಾದಿಸಿದ್ದಾರೆ.

'ವಿಶಿ ಸರ್ ನನ್ನ ಪಾಲಿಗೆ ದೊಡ್ಡ ಸ್ಫೂರ್ತಿ. ಅವರ ಅಕಾಡೆಮಿಯಿಂದ ನಾನು ತುಂಬಾ ಲಾಭ ಪಡೆದೆ. ಅವರಿಗೆ ಕೃತಜ್ಞ. ಅವರಲ್ಲದೇ ಇದ್ದರೆ, ನಾನು ಈಗ ಈ ಹಂತಕ್ಕೆ ಬೆಳೆಯುತ್ತಿರಲಿಲ್ಲ' ಎಂದು ಗುಕೇಶ್ ಗುರುವಾರ ಮಾಧ್ಯಮ ಗೋಷ್ಠಿಯಲ್ಲಿ ತಿಳಿಸಿದರು.

ಬೆಳಗಿನ ಜಾವ ಇಲ್ಲಿ ತಲುಪಿದ ಹದಿಹರೆಯದ ಗ್ರ್ಯಾಂಡ್‌ಮಾಸ್ಟರ್‌ಗೆ ಚೆಸ್ ಅಭಿಮಾನಿಗಳಿಂದ ಭರ್ಜರಿ ಸ್ವಾಗತ ದೊರೆಯಿತು.

ಗುಕೇಶ್, 2020ರಲ್ಲಿ ಆರಂಭವಾದ ವೆಸ್ಟ್‌ಬ್ರಿಜ್–ಆನಂದ್ ಚೆಸ್ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿದ್ದಾರೆ. ವಿಶೇಷ ಎಂದರೆ ಆನಂದ್ ಅವರನ್ನು ಬಿಟ್ಟರೆ ಗುಕೇಶ್ ಮಾತ್ರ ಕ್ಯಾಂಡಿಡೇಟ್ಸ್ ಟೂರ್ನಿ ಗೆದ್ದಿದ್ದಾರೆ. ಕೊನೆಯ ಸಲ ಗೆದ್ದಿದ್ದು 2014ರಲ್ಲಿ.

ಡಿಂಗ್ ಲಿರೆನ್ ವಿರುದ್ಧ ವಿಶ್ವ ಚಾಂಪಿಯನ್ ಪಟ್ಟಕ್ಕೆ ಬಹುನಿರೀಕ್ಷಿತ ಸೆಣಸಾಟದ ಬಗ್ಗೆ ಕೇಳಿದಾಗ, 'ನಾನು ಹೇಗೆ ಅಣಿಗೊಳ್ಳುತ್ತೇನೆ ಎಂಬುದು ಅತಿ ದೊಡ್ಡ ಸವಾಲು. ಜೊತೆಗೆ ಇದು ಅತಿ ಮಹತ್ವದ್ದಾಗಿರುವ ಕಾರಣ ನನ್ನ ಮನಸ್ಥಿತಿ ಉತ್ತಮ ಮಟ್ಟದಲ್ಲಿರುವಂತೆ ನೋಡಿಕೊಳ್ಳುವುದೂ ಸವಾಲು' ಎಂದು ಹೇಳಿದರು.

'ನನ್ನ ಮೇಲೆ ಸಾಕಷ್ಟು ನಿರೀಕ್ಷೆಯ ಭಾರವಿದೆ. ಗೆಲುವೂ ಸಾಕಷ್ಟು ದೊಡ್ಡಾಗಿರುತ್ತದೆ. ನನಗೆ ನನ್ನ ಮೇಲೆ ನಂಬಿಕೆಯಿದೆ. ನನ್ನದೇ ತಂತ್ರಗಾರಿಕೆ ಹೊಂದಿದ್ದೇನೆ. ಅದು ಫಲ ನೀಡುತ್ತದಯೆಂಬ ವಿಶ್ವಾಸವಿದೆ' ಎಂದರು.

ವೇಲಮ್ಮಾಳ್ ವಿದ್ಯಾಲಯದ ನೂರಾರು ವಿದ್ಯಾರ್ಥಿಗಳೂ ವಿಮಾನ ನಿಲ್ದಾಣದಲ್ಲಿ ಅವರನ್ನು ಬರಮಾಡಿಕೊಂಡರು. ಗುಕೇಶ್ ಇಲ್ಲಿ ಕಲಿಯುತ್ತಿದ್ದಾರೆ. ಅವರ ತಾಯಿ ಪದ್ಮಾ ಕೂಡ ಹಾಜರಿದ್ದರು. ಟೂರ್ನಿಗೆ ತೆರಳಿದ್ದ ತಂದೆ ರಜನೀಕಾಂತ್ ಕೂಡ ಬಂದಿಳಿದರು.

ಚೆನ್ನೈ ವಿಮಾನ ನಿಲ್ದಾಣದಲ್ಲಿ ಗುಕೇಶ್ ಅವರಿಗೆ ಆತ್ಮೀಯ ಸ್ವಾಗತ ನೀಡಲಾಯಿತು –ಪಿಟಿಐ ಚಿತ್ರ

'ಎಂ.ಎಸ್. ಧೋನಿ, ಜೊಕೊವಿಚ್‌ರಿಂದ ಪ್ರಭಾವಿತ...'

ಚೆನ್ನೈ: ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಎಂ.ಎಸ್.ಧೋನಿ ಮತ್ತು ಅಗ್ರಮಾನ್ಯ ಟೆನಿಸ್ ತಾರೆ ನೊವಾಕ್ ಜೊಕೊವಿಚ್ ಒತ್ತಡದ ಸಂದರ್ಭವನ್ನು ನಿಭಾಯಿಸುವ ರೀತಿ ಗುಕೇಶ್ ಅವರಿಗೆ ಇಷ್ಟವಾಗಿದೆ. ಈ ಇಬ್ಬರು ದಿಗ್ಗಜ ಆಟಗಾರರಿಂದ ಪ್ರಭಾವಿತನಾಗಿರುವುದಾಗಿ ಅವರು ಹೇಳಿದ್ದಾರೆ.

ಈ ಇಬ್ಬರು ತಾರೆಯರು ಎಂಥ ಒತ್ತಡದ ಸಂದರ್ಭವನ್ನೂ ತಾಳಿಕೊಳ್ಳಬಲ್ಲ ಸಮರ್ಥರು. ಅಗತ್ಯದ ಸಂದರ್ಭದಲ್ಲಿ ತಮ್ಮ ಅತ್ಯುತ್ತಮ ಆಟ ಆಡಬಲ್ಲವರು ಎಂದು ಚೆನ್ನೈನ ಗ್ರ್ಯಾಂಡ್‌ಮಾಸ್ಟರ್ ಹೇಳಿದ್ದಾರೆ.

ವಿಶ್ವದ ಅಗ್ರಮಾನ್ಯ ಆಟಗಾರ ಕಾರ್ಲ್‌ಸನ್ ಹಲವು ಯುವ ಚೆಸ್ ಆಟಗಾರರಿಗೆ ಪ್ರೇರಣೆಯಾಗಿದ್ದಾರೆ. ಇದಕ್ಕೆ ಗುಕೇಶ್ ಅವರೂ ಹೊರತಲ್ಲ. 'ಅವರಿಂದ ಹಲವು ವಿಷಯ ಕಲಿಯಬಹುದು. ಬರೇ ಚೆಸ್ ಅಷ್ಟೇ ಅಲ್ಲ, ಗಟ್ಟಿಮನೋಬಲ ಹೊಂದಿರುವವರು ಅವರು' ಎಂದಿದ್ದಾರೆ.

ALVA'S
ALVA'S ENGLISH MEDIUM HIGHER PRIMARY SCHOOL
A UNIT OF ALVA'S EDUCATION FOUNDATION (R.) MOODUBIDIRE
PUTHIGE, MOODUBIDIRE- 574227
ICSE CURRICULLAM
REQUIRED PRINCIPAL
QUALIFICATION: PG with B.Ed.
• Minimum 5 Years of Experience as Principal in CBSE/ICSE school
• 10 Years of experience in state Board school
PRT & TGT
▸ KANNADA ▸ ENGLISH ▸ HINDI ▸ SOCIAL STUDIES
▸ SCIENCE ▸ MATHS ▸ HISTORY ▸ CIVICS ▸ GEOGRAPHY
▸ BIOLOGY ▸ CHEMISTRY ▸ COMPUTER SCIENCE
QUALIFICATION:
Graduates/Post Graduates with B.Ed
• Excellent English communication and I.T skills
• Experience Preferred
Eligible candidates mail your updated bio-data to
ao-schools@alvas.org | On 30th April 2024.
+91 6366 377 824